ಗುರುವಾರ, ಜೂನ್ 24, 2021 | ಬೆಂಗಳೂರು | ₹ 6.00 | ಸಂಪುಟ 74 | ಸಂಚಿಕೆ 175 | ಪುಟ 14

www.prajavani.net

/prajavani.net @prajavani /prajavani http://bit.ly/Prajavani

# ಪ್ರಜಾವಾಣಿ

ಅತ್ಯಂತ ವಿಶ್ವಾಸಾರ್ಹ ಕನ್ನಡ ದಿನಪತ್ರಿಕೆ

**ಸ್ಪರ್ಧಾ ವಾಣಿ**

ಸ್ಪರ್ಧಾತ್ಮಕ ಪರೀಕ್ಷೆಗಳಲ್ಲಿ 'ಸಾಮಾನ್ಯ ಕನ್ನಡ' ಮತ್ತು 'ಕಡ್ಡಾಯ ಕನ್ನಡ' ಪ್ರಶ್ನೆಪತ್ರಿಕೆಗಳು ಇರಲಿದೆ. ಇವುಗಳಲ್ಲಿ ಪರಿಣತಿ ಸಾಧಿಸಲು ಅಭ್ಯಾಸ ಹೇಗಿರಬೇಕು? ಇಲ್ಲಿದೆ ಮಾಹಿತಿ

ಎಲೆಕ್ಟ್ರಾನಿಕ್ ಸಿಟಿ: ರಸ್ತೆ ಬಳಕೆ ಶುಲ್ಕ ಹೆಚ್ಚಳ 2

ಆಳ-ಅಗಲ ಕೊರೊನಾ ವೈರಾಣುವಿನ ಹೊಸ ರೂಪ ಡೆಲ್ಟಾ ಪ್ಲಸ್

ದಾವಣಗೆರೆ: ಎಎನ್‌ಇಸಿ ಎರಡನೇ ಪ್ರಕರಣ ಪತ್ತೆ 6

| ಸೆನ್ಸೆಕ್ಸ್ | ನಿಫ್ಟಿ | ₹/$ |
|---|---|---|
| 52,306 ▼ | 15,686 ▼ | 74.27 ▲ |

**ಸಂಧಿಲಿನ್**

ಸಂಧಿಲಿನ್ ಹಚ್ಚಿ ನೋವಿಗೆ ವಿದಾಯ ಹೇಳಿ!

ತಯಾರಕರು SDM ಶ್ರೀ ಧರ್ಮಸ್ಥಳ ಮಂಜುನಾಥೇಶ್ವರ ಆಯುರ್ವೇದ ಫಾರ್ಮಸಿ ಕುತ್ಪಾಡಿ–574 118, ಉಡುಪಿ ಜಿಲ್ಲೆ, ಕರ್ನಾಟಕ.

Ph: 0820-2520852, 8970977513

**ಮಿಸಳ್ ಹಾಪ್ಚಾ**

ಚುರುಮುರಿ ತಿಂದಷ್ಟು ಸುಲಭವಲ್ಲ...

ನಿಮ್ಮ Prajavani.net ನಲ್ಲಿ ಮತ್ತೊಂದು ವಿಶೇಷ

ವಿಡಿಯೊ ನೋಡಲು QR ಕೋಡ್ ಸ್ಕ್ಯಾನ್ ಮಾಡಿ

ಪ್ರಜಾವಾಣಿ ನೋಡಿಯೊ

ಭಾರತ, ಅಮೆರಿಕ ಜಂಟಿ ಸಮರಾಭ್ಯಾಸಕ್ಕೆ ಚಾಲನೆ 10

ಐದು ವರ್ಷದಲ್ಲಿ ಲಕ್ಷ ಮರ ನಾಶ: ಆರೋಪ 06

**ಚಿನಕುರಳಿ**

ಪ್ರಕಾಶ್ ಶೆಟ್ಟಿ

ಶೇ 54ರಷ್ಟು ಕೋವಿಡ್ ಸೋಂಕಿತರು 20 – 40ರ ಹರೆಯದವರು

# 2ನೇ ಅಲೆ: ಯುವಜನ ಹೈರಾಣ

• ವರುಣ ಹೆಗಡೆ

ಬೆಂಗಳೂರು: ಕೋವಿಡ್ ಎರಡನೇ ಅಲೆಯು ಅಧಿಕ ರೋಗನಿರೋಧಕ ಶಕ್ತಿಯನ್ನು ಹೊಂದಿರುವ ಯುವಜನರು ಮತ್ತು ಮಧ್ಯಮ ವಯಸ್ಕರನ್ನೇ ಹೆಚ್ಚಾಗಿ ಕಾಡಿದೆ. ಕೇವಲ ಮೂರು ತಿಂಗಳ ಅವಧಿಯಲ್ಲಿ 20 ರಿಂದ 40 ವರ್ಷ ವಯೋಮಾನದೊಳಗಿನ 9.85 ಲಕ್ಷಕ್ಕೂ ಹೆಚ್ಚು ಜನ ಸೋಂಕಿತರಾಗಿದ್ದಾರೆ.

ಕಳೆದ ವರ್ಷ ಕಾಣಿಸಿಕೊಂಡ ಕೋವಿಡ್ ಮೊದಲನೇ ಅಲೆಯಲ್ಲಿ ಹಿರಿಯ ನಾಗರಿಕರು ಸೋಂಕಿನ ತೀವ್ರತೆಗೆ ಹೆಚ್ಚಿನ ಪ್ರಮಾಣದಲ್ಲಿ ಅಸ್ವಸ್ಥರಾಗಿದ್ದರು. ಈ ವರ್ಷದ ಮಾರ್ಚ್ ಬಳಿಕ ಕಾಣಿಸಿಕೊಂಡ ಎರಡನೇ ಅಲೆಯಲ್ಲಿ ವೈರಾಣು ಅತಿವೇಗವಾಗಿ ವ್ಯಾಪಿಸಿಕೊಂಡಿತು. ಮಾರುಕಟ್ಟೆ ಸೇರಿದಂತೆ ಸಾರ್ವಜನಿಕ ಪ್ರದೇಶಗಳಲ್ಲಿ ಹೆಚ್ಚಾಗಿ ಓಡಾಟ, ಕ್ಷೇತ್ರಕಾರ್ಯ, ತಡವಾಗಿ ಪರೀಕ್ಷೆ, ಮನೆ ಆರೈಕೆಗೆ ಒಳಗಾಗಿದ್ದುದೇ ಯುವಜನರು ಮತ್ತು ಮಧ್ಯ ವಯಸ್ಸಿನವರು ಹೆಚ್ಚಿನ ಸಂಖ್ಯೆಯಲ್ಲಿ ಸೋಂಕಿತರಾಗಲು ಪ್ರಮುಖ ಕಾರಣ ಎಂದು ವೈದ್ಯಕೀಯ ತಜ್ಞರು ವಿಶ್ಲೇಷಿಸಿದ್ದಾರೆ.

ರಾಜ್ಯದಲ್ಲಿ ಈವರೆಗೆ ಕೋವಿಡ್ ಪೀಡಿತರಾದವರ ಸಂಖ್ಯೆ 28 ಲಕ್ಷ ದಾಟಿದೆ. ಇದರಲ್ಲಿ ಎರಡನೇ ಅಲೆಯ ಮೂರು ತಿಂಗಳ ಅವಧಿಯಲ್ಲಿ 18 ಲಕ್ಷಕ್ಕೂ ಅಧಿಕ ಮಂದಿ ಸೋಂಕಿತ-ರಾಗಿದ್ದಾರೆ.

ಪ್ರಜಾವಾಣಿ ವಿಶೇಷ

**ಐಸಿಯು ಹಾಸಿಗೆ ಕೊರತೆ ಕೆಲವರ ಜೀವಕ್ಕೆ ಅಪಾಯವನ್ನು ತಂದೊಡ್ಡಿತು. ಬೇಜವಾಬ್ದಾರಿಯಿಂದ ಕೆಲವರು ಸಮಸ್ಯೆ ತಂದುಕೊಂಡರು**

**ಡಾ.ಸಿ.ಎನ್. ಮಂಜುನಾಥ್**
ಜಯದೇವ ಹೃದ್ರೋಗ ಸಂಸ್ಥೆ ನಿರ್ದೇಶಕ

11ನೇ ಪುಟ ನೋಡಿ

## ಡೆಲ್ಟಾ ಪ್ಲಸ್: ರಾಜ್ಯದಲ್ಲಿ ಎರಡನೇ ಪ್ರಕರಣ

ಕೊರೊನಾ ವೈರಾಣುವಿನ ರೂಪಾಂತರಗೊಂಡಿರುವ ಡೆಲ್ಟಾ ಪ್ಲಸ್ ವೈರಾಣು ಸೋಂಕು ಇನ್ನೊಬ್ಬರಿಗೆ ತಗುಲಿದ್ದು, ಇದರಿಂದ ರಾಜ್ಯದಲ್ಲಿ ಇಬ್ಬರು ವ್ಯಕ್ತಿಗಳು ಬಾಧಿತರಾಗಿದ್ದಾರೆ. ಮೊದಲ ಪ್ರಕರಣ ಮೈಸೂರಿನಲ್ಲಿ ವರದಿಯಾಗಿದ್ದರೆ, ಎರಡನೇ ಪ್ರಕರಣ ಬೆಂಗಳೂರು ನಗರದ 86 ವರ್ಷ ವಯಸ್ಸಿನ ವ್ಯಕ್ತಿಯಲ್ಲಿ ಕಂಡು ಬಂದಿದೆ. ಡೆಲ್ಟಾ ಪ್ಲಸ್ ವೈರಾಣುವಿನ ಅನುಕ್ರಮಣಿಕೆಯನ್ನು ನಿಮ್ಹಾನ್ಸ್ ಬುಧವಾರ ಪತ್ತೆ ಮಾಡಿದೆ.

11ನೇ ಪುಟ ನೋಡಿ

## ದೇಶದಲ್ಲಿ 40 ಪ್ರಕರಣ ಪತ್ತೆ

ನವದೆಹಲಿ (ಪಿಟಿಐ): ಕೊರೊನಾದ ರೂಪಾಂತರಿ 'ಡೆಲ್ಟಾ ಪ್ಲಸ್' ತಳಿಯ 40 ಪ್ರಕರಣಗಳು ದೇಶದಲ್ಲಿ ಪತ್ತೆಯಾಗಿವೆ. ಬಹುತೇಕ ಪ್ರಕರಣಗಳು ಮಹಾರಾಷ್ಟ್ರ, ಕೇರಳ ಹಾಗೂ ಮಧ್ಯಪ್ರದೇಶದಲ್ಲೇ ಇವೆ ಎಂದು ಕೇಂದ್ರ ಆರೋಗ್ಯ ಸಚಿವಾಲಯ ಬುಧವಾರ ತಿಳಿಸಿದೆ.

ದೇಶದ ವಿವಿಧ ಭಾಗಗಳಿಂದ ಸಂಗ್ರಹಿಸಿದ 45,000ಕ್ಕೂ ಹೆಚ್ಚು ಮಾದರಿಗಳಲ್ಲಿ, ಡೆಲ್ಟಾ ಪ್ಲಸ್‌ನ 40 ಪ್ರಕರಣಗಳು ಮಾತ್ರ ಕಂಡುಬಂದಿದ್ದು ಭಾರಿ ಪ್ರಮಾಣದಲ್ಲಿ ಅದರ ಪ್ರಸರಣ ಕಾಣಲಿಲ್ಲ ಎಂದು ಸಚಿವಾಲಯ ತಿಳಿಸಿದೆ.

**ಕಟ್ಟೆಚ್ಚರ:** ಮಹಾರಾಷ್ಟ್ರದಲ್ಲಿ ಡೆಲ್ಟಾ ಪ್ಲಸ್ ಸೋಂಕು ಪತ್ತೆಯಾದ ನಂತರ ಗೋವಾ ರಾಜ್ಯವು ಗಡಿಯಲ್ಲಿ ಕಟ್ಟೆಚ್ಚರ ವಹಿಸಿದೆ. ಗಡಿಭಾಗದಲ್ಲಿರುವ ಎಲ್ಲಾ ಆಸ್ಪತ್ರೆಗಳಿಗೂ ಅಗತ್ಯ ಸೂಚನೆ ನೀಡಲಾಗಿದೆ. ಗಡಿಯಲ್ಲಿ ಅಗತ್ಯ ತಪಾಸಣಾ ವ್ಯವಸ್ಥೆಯನ್ನು ಮಾಡಿಕೊಳ್ಳಲು ಖಾಸಗಿ ಸಂಸ್ಥೆಗಳಿಗೂ ಅನುಮತಿ ನೀಡಲಾಗಿದೆ ಎಂದು ಮುಖ್ಯಮಂತ್ರಿ ಪ್ರಮೋದ್ ಸಾವಂತ್ ತಿಳಿಸಿದ್ದಾರೆ.

# ಮಲ್ಯ, ನೀರವ್, ಚೋಕ್ಸಿಯಿಂದ ₹ 9 ಸಾವಿರ ಕೋಟಿ ವಸೂಲು

ನವದೆಹಲಿ (ಪಿಟಿಐ): ದೇಶದಿಂದ ಪರಾರಿ ಆಗಿರುವ ಉದ್ಯಮಿಗಳಾದ ನೀರವ್ ಮೋದಿ, ಮೆಹುಲ್ ಚೋಕ್ಸಿ ಮತ್ತು ವಿಜಯ್ ಮಲ್ಯ ಅವರಿಂದ ಬ್ಯಾಂಕ್‌ಗಳಿಗೆ 'ವಂಚನೆ'ಯಾಗಿದೆ ಎನ್ನಲಾದ ಮೊತ್ತದಲ್ಲಿ ಶೇಕಡ 40ರಷ್ಟನ್ನು ವಸೂಲು ಮಾಡಲಾಗಿದೆ ಎಂದು ಜಾರಿ ನಿರ್ದೇಶನಾಲಯ (ಇ.ಡಿ.) ಹೇಳಿದೆ.

ತಾನು ಮುಟ್ಟುಗೋಲು ಹಾಕಿಕೊಂಡಿದ್ದ ₹ 5,800 ಕೋಟಿ ಮೌಲ್ಯದ ಷೇರುಗಳು ಬುಧವಾರ ಮಾರಾಟವಾದ ನಂತರ ಇ.ಡಿ. ಈ ವಿವರ ನೀಡಿದೆ. ಬುಧವಾರ ಮಾರಾಟ ಆಗಿರುವ ಷೇರುಗಳ ಮೊತ್ತವನ್ನು ಪರಿಗಣಿಸಿದರೆ ಬ್ಯಾಂಕ್‌ಗಳು ವಸೂಲು ಮಾಡಿಕೊಂಡಿರುವ ಒಟ್ಟು ಮೊತ್ತವು ₹ 9,041.5 ಕೋಟಿ ಆಗುತ್ತದೆ. ಈ ಮೂವರು ಉದ್ಯಮಿಗಳಿಂದ ಆಗಿದೆ ಎನ್ನಲಾದ ವಂಚನೆಯ ಮೊತ್ತವು ₹ 22 ಸಾವಿರ ಕೋಟಿಗಿಂತ ಹೆಚ್ಚು.

ದೇಶಬಿಟ್ಟು ಪಲಾಯನ ಮಾಡಿರುವ ಮೆಹುಲ್ ಚೋಕ್ಸಿ, ನೀರವ್ ಮೋದಿ ಮತ್ತು ವಿಜಯ್ ಮಲ್ಯ ವಿರುದ್ಧ ಸಿಬಿಐ ಹಾಗೂ ಇ.ಡಿ. ತನಿಖೆ ನಡೆಸುತ್ತಿವೆ. ದೇಶದ ಬ್ಯಾಂಕಿಂಗ್ ವಲಯದಲ್ಲಿ ನಡೆದ ಅತಿದೊಡ್ಡ ವಂಚನೆ ಪ್ರಕರಣಗ-ಳಲ್ಲಿ ಈ ಮೂವರು ಆರೋಪಿಗಳು.

**ದೇಶ ಬಿಟ್ಟು ಪರಾರಿ ಆಗಿರುವವರು, ಆರ್ಥಿಕ ಅಪರಾಧ ಎಸಗಿದವರನ್ನು ಬೆನ್ನಟ್ಟಲಾಗುತ್ತದೆ. ಬರಬೇಕಿರುವ ಮೊತ್ತ ವಸೂಲು ಮಾಡಲಾಗುತ್ತದೆ**

**ನಿರ್ಮಲಾ ಸೀತಾರಾಮನ್**
ಕೇಂದ್ರ ಹಣಕಾಸು ಸಚಿವೆ

11ನೇ ಪುಟ ನೋಡಿ

## ಎಸ್ಸೆಸ್ಸೆಲ್ಸಿ: ಒಂದು ಕೊಠಡಿಗೆ 12 ಮಕ್ಕಳು

ಬೆಂಗಳೂರು: 'ಜುಲೈ ಮೂರನೇ ವಾರದಲ್ಲಿ ನಡೆಸಲು ಉದ್ದೇಶಿಸಿರುವ ಎಸ್ಸೆಸ್ಸೆಲ್ಸಿ ಪರೀಕ್ಷೆ ಸಂಬಂಧಿಸಿದಂತೆ ಎಸ್‌ಒಪಿ (ಪ್ರಮಾಣಿತ ಕಾರ್ಯಾಚರಣೆ ವಿಧಾನ) ಬಿಡುಗಡೆ ಮಾಡಲಾಗಿದ್ದು, ಅದರ ಆಧಾರದಲ್ಲಿ ಪರೀಕ್ಷಾ ಕೇಂದ್ರಗಳಲ್ಲಿ ಸಿದ್ಧತೆ ಮಾಡಿಕೊಳ್ಳಲಾಗುವುದು' ಎಂದು ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ ಸಚಿವ ಎಸ್. ಸುರೇಶ್ ಕುಮಾರ್ ತಿಳಿಸಿದ್ದಾರೆ.

11ನೇ ಪುಟ ನೋಡಿ

CMR UNIVERSITY
Private University Estd in Karnataka State by Act No.45 of 2013

CELEBRATING 25 YEARS CMR GROUP OF INSTITUTIONS

CMRU | Empowered by UGC to award degrees | Member of Association of Indian Universities

CREATE THE FUTURE — EXPLORE · DISCOVER · CREATE

CMR UNIVERSITY info@cmr.edu.in www.cmr.edu.in

UG Programmes

B.Tech. / B.Tech. (Hons)
• Civil Engineering
• Computer Science and Engineering
• Electronics and Communication Engineering
• Information Technology
• Mechanical Engineering
• Electronics and Computer Engineering
• Computer and Communication Engineering
B.A. (Hons) English/ Journalism /Psychology
B.A. English, Journalism, Psychology/ English, Journalism, Sociology
B.Arch.
B.Des.
BBA
BBA (Hons.)
B.Com.
B.Com. (Hons)
BCA
B.Sc.
LL.B.
B.A., LL.B. (Hons)
B.B.A., LL.B. (Hons)
B.Com., LL.B. (Hons)

PG Programmes

MBA | M.Com. | MA | MSW | M.Sc. | MCA | LL.M. | M.Tech. | Executive MBA

Doctoral and Industry-Compliant Certification Programmes also offered

CMRUAT CMR University Admissions Test to B.Tech./MBA/Law programmes

CMR INSTITUTE OF TECHNOLOGY
Approved by AICTE | Permanently affiliated to VTU | Recognized by Govt. of Karnataka | All B.E. courses accredited by NBA | Ranked 9th in Karnataka and 40th All India, 4th in Bangalore by Education World | Accredited A+ by NAAC

UG Courses
B.E.
• Computer Science and Engineering
• Electronics and Communication Engineering
• Electrical and Electronics Engineering
• Information Science and Engineering
• Mechanical Engineering
• Civil Engineering
• Artificial Intelligence and Machine Learning
• Artificial Intelligence and Data Science

PG Courses
• MBA
• MCA
• M.Tech.
VLSI Design and Embedded Systems

Doctoral Programmes offered

info@cmrit.ac.in www.cmrit.ac.in

CMR CENTRE FOR BUSINESS STUDIES
Affiliated to Bengaluru North University | Approved by AICTE, New Delhi | Recognized by Government of Karnataka
Master of Business Administration (MBA) cbs@cmr.ac.in www.cmrcbs.cmr.ac.in

20+ INSTITUTIONS | 75+ ACADEMIC DEPARTMENTS | 1000+ WORLD CLASS FACULTY | STUDENTS FROM 60+ COUNTRIES | 20,000+ STUDENT STRENGTH 1,00,000+ ALUMNI | CMR SCHOLARSHIPS more than 1 Crore

ADMISSIONS 2021

ADMISSIONS HOTLINE 9342900666

CITY CAMPUS : #2, 3rd C Cross, 6th A Main, HRBR Layout - Bangalore - 560043
T: 91 80 25426977 / 88 | admissions.cmr.edu.in

ಬನ್ನೇರುಘಟ್ಟ ಮುಖ್ಯರಸ್ತೆಯಲ್ಲಿ ಕಾಮಗಾರಿ ಸ್ಥಗಿತ– ಯೋಜನೆ ಮುಂದುವರಿಕೆಗೆ ಬೇರೆ ಕಂಪನಿಗಳು ಉತ್ಸುಕ

# ಗೊಟ್ಟಿಗೆರೆ–ನಾಗವಾರ ಮಾರ್ಗ ವಿಳಂಬ?

ಪ್ರಜಾವಾಣಿ ವಾರ್ತೆ

**ಬೆಂಗಳೂರು:** 'ನಮ್ಮ ಮೆಟ್ರೊ' ಎರಡನೇ ಹಂತದ ಗೊಟ್ಟಿಗೆರೆ–ನಾಗವಾರ ಮಾರ್ಗದಲ್ಲಿನ ಕಾಮಗಾರಿ ಪೈಕಿ ಬನ್ನೇರುಘಟ್ಟ ಮುಖ್ಯರಸ್ತೆಯಲ್ಲಿ ಕಾಮಗಾರಿ ಸ್ಥಗಿತಗೊಂಡಿದ್ದು, ಆರು ತಿಂಗಳುಗಳೇ ಆಗಿವೆ.

ಈ ಕಾಮಗಾರಿ ಮುಂದುವರಿಸಲು ಈಗ ಏಳೆಂಟು ಕಂಪನಿಗಳು ಆಸಕ್ತಿ ತೋರಿಸಿವೆ. ಆದರೆ, ಯಾವುದೇ ಕಂಪನಿಗೆ ಗುತ್ತಿಗೆ ನೀಡಿದರೂ, ಕನಿಷ್ಠ 30 ತಿಂಗಳು ಸಮಯ ನೀಡಬೇಕಾಗುತ್ತದೆ. ಈ ಮುಖ್ಯರಸ್ತೆಯಲ್ಲಿನ ಕಾಮಗಾರಿ ಮುಗಿಯುವವರೆಗೆ ಗೊಟ್ಟಿಗೆರೆ–ನಾಗವಾರ ಮಾರ್ಗದಲ್ಲಿ ಕಾರ್ಯಾಚರಣೆ ಪ್ರಾರಂಭವಾಗುವುದಿಲ್ಲ. ಹೀಗಾಗಿ, ಈ ಮಾರ್ಗವು ಸಾರ್ವಜನಿಕ ಸಂಚಾರಕ್ಕೆ ಮುಕ್ತವಾಗುವುದು ನಿಗದಿಗಿಂತ ಕನಿಷ್ಠ ಎರಡು ವರ್ಷ ವಿಳಂಬವಾಗುವ ಸಾಧ್ಯತೆ ಇದೆ.

ಬನ್ನೇರುಘಟ್ಟ ಮುಖ್ಯರಸ್ತೆಯಲ್ಲಿ ಕಾಮಗಾರಿಯ ಗುತ್ತಿಗೆ ಪಡೆದಿದ್ದ ಸಿಂಪ್ಲೆಕ್ಸ್ ಇನ್‌ಫ್ರಾಸ್ಟ್ರಕ್ಚರ್ ಕಂಪನಿ ಹಣಕಾಸಿನ ತೊಂದರೆಯ ಕಾರಣ ನಿಗದಿತ ಅವಧಿಯಲ್ಲಿ ಮುಗಿಸಬೇಕಾದಷ್ಟು ಕಾಮಗಾರಿ ಮುಗಿಸಿಲ್ಲ. ಕಳಪೆ ಕಾರ್ಯಾಚರಣೆ ನಡೆಸಿದ್ದಕ್ಕೆ ಈ ಟೆಂಡರ್ ಅನ್ನು ಬೆಂಗಳೂರು ಮೆಟ್ರೊ ರೈಲು ನಿಗಮವು (ಬಿಎಂಆರ್‌ಸಿಎಲ್) ರದ್ದು ಮಾಡಿತ್ತು.

21 ಕಿ.ಮೀ. ಉದ್ದದ ಈ ಮಾರ್ಗದಲ್ಲಿ 14 ಕಿ.ಮೀ. ಉದ್ದದ ಸುರಂಗ ಮಾರ್ಗವೂ ಬರುತ್ತದೆ. ಎತ್ತರಿಸಿದ ಮಾರ್ಗದ ನಿರ್ಮಾಣ ಕಾಮಗಾರಿಯ ಗುತ್ತಿಗೆಯನ್ನು ಸಿಂಪ್ಲೆಕ್ಸ್ ಪಡೆದಿತ್ತು.

2019ರ ಡಿಸೆಂಬರ್ ವೇಳೆಗೆ ಶೇ 22ರಷ್ಟು ಸಿವಿಲ್ ಕಾಮಗಾರಿಯನ್ನು ಕಂಪನಿ ಪೂರ್ಣಗೊಳಿಸಿತ್ತು. 2021ರ ಫೆಬ್ರುವರಿಯಾದರೂ ಶೇ 37ರಷ್ಟು ಕಾಮಗಾರಿ ಮಾತ್ರ ಪೂರ್ಣಗೊಂಡಿತ್ತು. ಕಾಮಗಾರಿ ತೀರಾ ವಿಳಂಬವಾದ ಕಾರಣ ನಿಗಮವು ಕಂಪನಿಗೆ ನೋಟಿಸ್ ನೀಡಿತ್ತು. ಅವರಿಗೆ ನೀಡಿದ್ದ ಗುತ್ತಿಗೆ ರದ್ದು ಮಾಡಿ, ಹೊಸ ಟೆಂಡರ್ ಕರೆಯಲಾಗಿತ್ತು.

**ಉತ್ಸುಕ:** ಸ್ಥಗಿತಗೊಂಡಿರುವ ಕಾಮಗಾರಿ ಮುಂದುವರಿಸಲು ಏಳೆಂಟು ಕಂಪನಿಗಳು ಉತ್ಸುಕವಾಗಿವೆ. ಈ ಪೈಕಿ, ಪ್ರಮುಖ ಮೂರು ಕಂಪನಿಗಳು ದಾಖಲೆ ಸಮೇತ ಬೆಂಗಳೂರು ಮೆಟ್ರೊ ರೈಲು ನಿಗಮಕ್ಕೆ (ಬಿಎಂಆರ್‌ಸಿಎಲ್) ಅರ್ಜಿ ಸಲ್ಲಿಸಿವೆ ಎಂದು ನಿಗಮದ ಅಧಿಕಾರಿಯೊಬ್ಬರು ತಿಳಿಸಿದರು.

ಅಫ್ಕಾನ್ಸ್ ಇನ್‌ಫ್ರಾಸ್ಟ್ರಕ್ಚರ್, ಐಟಿಡಿ ಸಿಮೆಂಟೇಷನ್ ಇಂಡಿಯಾ ಲಿಮಿಟೆಡ್ ಹಾಗೂ ಜಿ.ಆರ್. ಇನ್‌ಫ್ರಾ ಪ್ರಾಜೆಕ್ಟ್ಸ್ ಲಿಮಿಟೆಡ್ (ಜಿಆರ್‌ಐಎಲ್) ಕಂಪನಿಗಳು ಆಸಕ್ತಿ ತೋರಿವೆ. ಐಟಿಡಿ ಸಿಮೆಂಟೇಷನ್ ಹಾಗೂ ಅಫ್ಕಾನ್ಸ್ ಕಂಪನಿಗಳು ಈಗಾಗಲೇ ಬೇರೆ ಬೇರೆ ಮಾರ್ಗದ ಗುತ್ತಿಗೆ ಪಡೆದು, ಕೆಲಸ ಪ್ರಾರಂಭಿಸುತ್ತಿವೆ. ಐಟಿಟಿ ಸಿಮೆಂಟೇಷನ್ ಬೊಮ್ಮಸಂದ್ರ–ಬೊಮ್ಮನಹಳ್ಳಿ (ಹಳದಿ ಮಾರ್ಗ) ಮತ್ತು ಬೈಯಪ್ಪನಹಳ್ಳಿ–ವೈಟ್‌ಫೀಲ್ಡ್ (ನೇರಳೆ ಮಾರ್ಗ) ಲೈನ್‌ನ ಗುತ್ತಿಗೆ ಪಡೆದಿದ್ದರೆ, ಅಫ್ಕಾನ್ಸ್ ಕಂಪನಿಯು ಡೇರಿ ವೃತ್ತ ಮತ್ತು ರಾಷ್ಟ್ರೀಯ ಮಿಲಿಟರಿ ಶಾಲೆ (ವೆಲ್ಲಾರ ಜಂಕ್ಷನ್) ಹಾಗೂ ಸೆಂಟ್ರಲ್ ಸಿಲ್ಕ್ ಬೋರ್ಡ್ ಹಾಗೂ ಕಾಡುಬೀಸನಹಳ್ಳಿ ಮಾರ್ಗ ನಿರ್ಮಾಣದ ಗುತ್ತಿಗೆ ಪಡೆದಿದೆ.

ಜಿಆರ್‌ಐಎಲ್ ಇದೇ ಮೊದಲ ಬಾರಿಗೆ 'ನಮ್ಮ ಮೆಟ್ರೊ' ಮಾರ್ಗ ನಿರ್ಮಾಣಕ್ಕೆ ಅರ್ಜಿ ಹಾಕಿದೆ. ಹಲವು ರಸ್ತೆ ಮತ್ತು ಹೆದ್ದಾರಿ ನಿರ್ಮಾಣಗಳಲ್ಲಿ ಅನುಭವ ಹೊಂದಿರುವ ಈ ಕಂಪನಿ, ಈಗ ರೈಲ್ವೆ ನಿರ್ಮಾಣ ವಲಯಕ್ಕೂ ಕಾಲಿಟ್ಟಿದೆ.

ಬನ್ನೇರುಘಟ್ಟ ಮಾರ್ಗದಲ್ಲಿ ಇನ್ನೂ ಶೇ 63ರಷ್ಟು ಕೆಲಸ ಬಾಕಿ ಇದೆ. ತುಂಬಾ ವೇಗವಾಗಿ ಕಾಮಗಾರಿ ಮುಂದುವರಿಸುವ, ಗುಣಮಟ್ಟ ಕಾಪಾಡಿಕೊಳ್ಳುವಂತಹ ಕಂಪನಿಗೆ ಗುತ್ತಿಗೆ ನೀಡಬೇಕು ಎಂದು ರೈಲ್ವೆ ಕಾರ್ಯಕರ್ತರು ಒತ್ತಾಯಿಸಿದರು.

'2017ರಲ್ಲಿಯೇ ಕಾಮಗಾರಿ ಪ್ರಾರಂಭವಾಗಿದ್ದರೂ ಈವರೆಗೆ ಶೇ 50ರಷ್ಟು ಕಾಮಗಾರಿಯೂ ಮುಕ್ತಾಯಗೊಂಡಿಲ್ಲ. ಯಾವುದೇ ಕಂಪನಿಗೂ ಗುತ್ತಿಗೆ ನೀಡಿದರೂ, ಚುರುಕಿನಿಂದ ಕಾಮಗಾರಿ ಮುಗಿಸಲು ಬಿಎಂಆರ್‌ಸಿಎಲ್ ಕ್ರಮ ಕೈಗೊಳ್ಳಬೇಕು. ಬನ್ನೇರುಘಟ್ಟ ಮುಖ್ಯರಸ್ತೆಯಲ್ಲಿ ಕಾಮಗಾರಿ ಬೇಗ ಮುಗಿಯದಿದ್ದರೆ, ಇಡೀ ಈ ಮಾರ್ಗದಲ್ಲಿಯೇ ಸಂಚಾರ ಆರಂಭಿಸಲು ಸಾಧ್ಯವಾಗುವುದಿಲ್ಲ. ಕನಿಷ್ಠ ಎರಡು ವರ್ಷ ನಿಧಾನವಾಗುವ ಸಾಧ್ಯತೆ ಇದೆ' ಎಂದು ರೈಲ್ವೆ ಕಾರ್ಯಕರ್ತ ಸಂಜೀವ್ ದ್ಯಾಮಣ್ಣವರ 'ಪ್ರಜಾವಾಣಿ'ಗೆ ತಿಳಿಸಿದರು.

'ಈಗ ಎತ್ತರಿಸಿದ ಮಾರ್ಗ ಸಹಿತ ಇಡೀ ಮಾರ್ಗ ನಿರ್ಮಾಣಕ್ಕೆ ₹11,500 ಕೋಟಿ ವೆಚ್ಚವಾಗಲಿದೆ. ಕಾಮಗಾರಿ ವಿಳಂಬವಾದಷ್ಟೂ ವೆಚ್ಚವೂ ಹೆಚ್ಚಾಗುವ ಸಾಧ್ಯತೆ ಇದೆ. ಹೀಗಾಗಿ, ಹೆಚ್ಚು ಕಾರ್ಮಿಕರನ್ನು ನಿಯೋಜಿಸಿ, ಬೇಗ ಕಾಮಗಾರಿ ಪೂರ್ಣಗೊಳಿಸುವಂತಹ ಕಂಪನಿಗೆ ಗುತ್ತಿಗೆ ನೀಡಬೇಕು' ಎಂದು ಅವರು ಒತ್ತಾಯಿಸಿದರು.

**2025ಕ್ಕೆ ಮುಂದೂಡಿಕೆ:** ಗೊಟ್ಟಿಗೆರೆಯಿಂದ ಸ್ವಾಗತ್ ಕ್ರಾಸ್‌ವರೆಗೆ ವಯಡಕ್ಟ್ ಮತ್ತು ಐದು ನಿಲ್ದಾಣಗಳ ನಿರ್ಮಾಣ ಹಾಗೂ ಕೊತ್ತನೂರು ಡಿಪೊ ನಿರ್ಮಾಣ ಗುತ್ತಿಗೆಯನ್ನು ಇದು ಹೊಂದಿದೆ. ಗೊಟ್ಟಿಗೆರೆ, ಹುಳಿಮಾವು, ಐಐಎಂಬಿ, ಜೆ.ಪಿ.ನಗರ 4ನೇ ಹಂತ ಹಾಗೂ ಸ್ವಾಗತ್ ಕ್ರಾಸ್ ನಿಲ್ದಾಣಗಳನ್ನು ನಿರ್ಮಿಸಬೇಕಾಗುತ್ತದೆ. 2023ರ ಡಿಸೆಂಬರ್ ವೇಳೆಗೆ ಈ ಕಾಮಗಾರಿ ಮುಗಿಯಬೇಕಿತ್ತು. ಅದು ಈಗ 2025ಕ್ಕೆ ಮುಂದೂಡಿಕೆಯಾಗುವ ಸಾಧ್ಯತೆ ಇದೆ.

## ಕೆಂಗೇರಿ ಮಾರ್ಗ: ಇದೇ 27ಕ್ಕೆ ಪರಿಶೀಲನೆಗೆ ಸಿದ್ಧ

**ಬೆಂಗಳೂರು:** 'ನಮ್ಮ ಮೆಟ್ರೊ' ಎರಡನೇ ಹಂತದಲ್ಲಿ ಮೈಸೂರು ರಸ್ತೆಯ ವಿಸ್ತರಿತ ಮಾರ್ಗದಲ್ಲಿ ಜುಲೈ ಮೊದಲ ವಾರದಿಂದ ಮೆಟ್ರೊ ರೈಲು ಸಂಚಾರ ಆರಂಭವಾಗುವ ಸಾಧ್ಯತೆ ಇದ್ದು, ಈ ಮಾರ್ಗವನ್ನು ಇದೇ 27ಕ್ಕೆ ರೈಲ್ವೆ ಸುರಕ್ಷತಾ ಆಯುಕ್ತರು (ಸಿಆರ್‌ಎಸ್) ಪರಿಶೀಲನೆ ನಡೆಸಲಿದ್ದಾರೆ.

ಮೈಸೂರು ರಸ್ತೆ ನಿಲ್ದಾಣದಿಂದ ಕೆಂಗೇರಿ ನಿಲ್ದಾಣದವರೆಗಿನ 7.53 ಕಿ.ಮೀ. ಉದ್ದದ ಮಾರ್ಗದಲ್ಲಿ ಈಗಾಗಲೇ ಭೌತಿಕ ಕಾಮಗಾರಿ ಪೂರ್ಣಗೊಂಡಿದೆ. ಸಿಗ್ನಲಿಂಗ್, ದೂರಸಂವಹನ ಸಂಬಂಧಿತ ವ್ಯವಸ್ಥೆ ಅಳವಡಿಕೆಯೂ ಬಹುತೇಕ ಪೂರ್ಣಗೊಂಡಿದೆ.

'ಸಿಆರ್‌ಎಸ್‌ಗೆ ಕಾಮಗಾರಿ ಪ್ರಗತಿಯ ಕುರಿತ ಎಲ್ಲ ದಾಖಲೆಗಳನ್ನು ಸಲ್ಲಿಸಲಾಗಿದೆ. ಕೆಲವು ಅಂಶಗಳ ಬಗ್ಗೆ ಸಿಆರ್‌ಎಸ್ ಸ್ಪಷ್ಟನೆ ಕೇಳಿದೆ. ಅದಕ್ಕೆ ನಾವು ಪ್ರತಿಕ್ರಿಯೆ ನೀಡಬೇಕು. ಪ್ರತಿಕ್ರಿಯೆ ನೀಡಿದ ಕೆಲವೇ ದಿನಗಳಲ್ಲಿ ಸಿಆರ್‌ಎಸ್ ಪರಿಶೀಲನೆಯ ದಿನಾಂಕವನ್ನು ತಿಳಿಸಲಿದೆ' ಎಂದು ಬೆಂಗಳೂರು ಮೆಟ್ರೊ ರೈಲು ನಿಗಮದ (ಬಿಎಂಆರ್‌ಸಿಎಲ್) ಅಧಿಕಾರಿಯೊಬ್ಬರು ತಿಳಿಸಿದರು.

'ಇಡೀ ಮಾರ್ಗ ಪರಿಶೀಲನೆಗೆ ಸಿದ್ಧವಾಗಿದೆ. ಉಳಿದ ಸಣ್ಣ–ಪುಟ್ಟ ಕೆಲಸಗಳನ್ನು ಯಾವುದೇ ಕ್ಷಣದಲ್ಲಿ ಬಗೆಹರಿಸಬಹುದಾಗಿದೆ. ಪರಿಶೀಲನೆ ಸಂದರ್ಭದಲ್ಲಿ ಯಾವುದಾದರೂ ಸಲಹೆ ನೀಡಿದರೆ, ಪ್ರಶ್ನೆ ಕೇಳಿದರೆ ಪರಿಹರಿಸಲು ಅಥವಾ ಸಲಹೆ ಪರಿಗಣಿಸುವ ಕೆಲಸ ನಿಗಮ ಮಾಡಲಿದೆ. ಜುಲೈನಲ್ಲಿ ಹಸಿರು ನಿಶಾನೆ ದೊರೆಯುವ ಸಾಧ್ಯತೆ ಇದೆ' ಎಂದು ಅವರು ಹೇಳಿದರು.

ಈ ಮಾರ್ಗವು ಸಾರ್ವಜನಿಕ ಸೇವೆಗೆ ಮುಕ್ತವಾದರೆ ನಿತ್ಯ 75 ಸಾವಿರ ಜನ ಪ್ರಯಾಣಿಸುವ ಸಾಧ್ಯತೆ ಇದೆ. ಈ ವಿಸ್ತರಿತ ಮಾರ್ಗದಲ್ಲಿ ನಾಯಂಡಹಳ್ಳಿ, ರಾಜರಾಜೇಶ್ವರಿ ನಗರ, ಜ್ಞಾನಭಾರತಿ, ಪಟ್ಟಣಗೆರೆ, ಕೆಂಗೇರಿ ಬಸ್ ನಿಲ್ದಾಣ ಹಾಗೂ ಕೆಂಗೇರಿ ಮೆಟ್ರೊ ನಿಲ್ದಾಣ ಬರಲಿವೆ.

ಮೈಸೂರು ರಸ್ತೆ ವಿಸ್ತರಿತ ಮಾರ್ಗದಲ್ಲಿ ಮೆಟ್ರೊ ರೈಲಿನ ಪರೀಕ್ಷಾರ್ಥ ಸಂಚಾರ ನಡೆದ ಕ್ಷಣ –ಪ್ರಜಾವಾಣಿ ಚಿತ್ರ

**21.25** ಕಿ.ಮೀ. ಗೊಟ್ಟಿಗೆರೆ–ನಾಗವಾರ ಮಾರ್ಗದ ಒಟ್ಟು ಉದ್ದ

**13.79** ಕಿ.ಮೀ. ಡೈರಿ ಸರ್ಕಲ್‌ನಿಂದ ನಾಗವಾರದವರೆಗಿನ ಸುರಂಗ ಮಾರ್ಗದ ಉದ್ದ

**₹11,500** ಕೋಟಿ ಗೊಟ್ಟಿಗೆರೆಯಿಂದ ನಾಗವಾರ ಮಾರ್ಗ ನಿರ್ಮಾಣ ವೆಚ್ಚ (ಎಲಿವೇಟೆಡ್ ಸಹಿತ)

**12** ನೆಲದಡಿ ನಿಲ್ದಾಣಗಳು

**6** ಎತ್ತರಿಸಿದ ನಿಲ್ದಾಣಗಳು

**300** ನೆಲದಡಿ ನಿಲ್ದಾಣಗಳ ನಿರ್ಮಾಣಕ್ಕಾಗಿ ಬಿಎಂಆರ್‌ಸಿಎಲ್ ಸ್ವಾಧೀನಪಡಿಸಿಕೊಂಡಿರುವ ಆಸ್ತಿ ಅಥವಾ ಕಟ್ಟಡಗಳು

## ಸುದ್ದಿ 2 ನಿಮಿಷ

### 91 ಮನೆಗಳ ಅನಧಿಕೃತ ನೀರು ಸಂಪರ್ಕ ಕಡಿತ

**ಬೆಂಗಳೂರು:** ಅನಧಿಕೃತವಾಗಿ ನೀರು ಪಡೆಯುತ್ತಿದ್ದ 91 ಮನೆಗಳ ಸಂಪರ್ಕಗಳನ್ನು ಜಲಮಂಡಳಿಯು ಕಡಿತಗೊಳಿಸಿದೆ. ಅಲ್ಲದೆ, ದಂಡವನ್ನೂ ವಿಧಿಸಲಾಗಿದೆ.

ಮಾಪಕದ (ಮೀಟರ್) ನೀರು ಹರಿಯುವಿಕೆಯನ್ನು ತಪ್ಪಿಸಿ, ಅನ್ಯ ಮಾರ್ಗದ ಮೂಲಕ ಸಂಪರ್ಕ ಪಡೆಯಲಾಗಿತ್ತು. ಗ್ರಾಹಕರ ಮಾಸಿಕ ನೀರಿನ ಬೇಡಿಕೆಯನ್ನು ಆಧರಿಸಿ, ಪರಿಶೀಲನೆ ನಡೆಸಿದಾಗ ಬಳಸಿದ ನೀರಿಗೂ, ಮೀಟರ್‌ನಲ್ಲಿ ದಾಖಲಾದ ನೀರಿನ ಪ್ರಮಾಣಕ್ಕೂ ವ್ಯತ್ಯಾಸವಿರುವುದು ಕಂಡುಬಂದಿತ್ತು ಎಂದು ಜಲಮಂಡಳಿ ಹೇಳಿದೆ.

ಪೂರ್ವ ವಲಯದಲ್ಲಿ 41 ಹಾಗೂ ಪಶ್ಚಿಮ ವಲಯದಲ್ಲಿ 50 ಇಂತಹ ಪ್ರಕರಣಗಳು ಪತ್ತೆಯಾಗಿವೆ. ಮಾಪಕದ ಮೂಲಕ ನೀರು ಹರಿಯುವುದನ್ನು ತಪ್ಪಿಸಿ, ಸಂಪರ್ಕ ಪಡೆಯುವುದು ಕಾನೂನುಬಾಹಿರ. ಗ್ರಾಹಕರು ಈ ಪ್ರಯತ್ನ ಮಾಡಬಾರದು ಎಂದೂ ಮಂಡಳಿ ಎಚ್ಚರಿಸಿದೆ.

### ಆಹಾರದ ಕಿಟ್ ವಿತರಣೆ

**ಯಲಹಂಕ:** ಯಲಹಂಕ ಕ್ಷೇತ್ರದ ಕಾಂಗ್ರೆಸ್ ಮುಖಂಡ ಬಿ.ಕೇಶವ ರಾಜಣ್ಣ ಅವರ ವತಿಯಿಂದ ಚೌಡೇಶ್ವರಿ ಕಲ್ಯಾಣಮಂಟಪದ ಆವರಣದಲ್ಲಿ ಆಯೋಜಿಸಿದ್ದ ಕಾರ್ಯಕ್ರಮದಲ್ಲಿ ಕೆಪಿಸಿಸಿ ಅಧ್ಯಕ್ಷ ಡಿ.ಕೆ.ಶಿವಕುಮಾರ್ ಚಾಲಕರಿಗೆ ಹಾಗೂ ಬಡವರಿಗೆ ಆಹಾರದ ಕಿಟ್ ವಿತರಿಸಿದರು.

ನಂತರ ಮಾತನಾಡಿದ ಅವರು, 'ಕೋವಿಡ್‌ನಿಂದ ಸಂಕಷ್ಟಕ್ಕೀಡಾದ ಜನರಿಗೆ ಸರ್ಕಾರ ಸರಿಯಾದ ರೀತಿಯಲ್ಲಿ ಸ್ಪಂದಿಸಿ, ಪರಿಹಾರದ ಹಣವನ್ನು ಸಮರ್ಪಕವಾಗಿ ನೀಡಿದ್ದರೆ, ಕಾಂಗ್ರೆಸ್ ಪಕ್ಷ ಬಡವರಿಗೆ ಸಹಾಯ ಮಾಡಬೇಕಾದ ಅಗತ್ಯವಿರಲಿಲ್ಲ' ಎಂದರು.

'ಪರಿಹಾರ ನೀಡಲು ಆನ್‌ಲೈನ್‌ನಲ್ಲಿ ಅರ್ಜಿ ಸಲ್ಲಿಸಬೇಕು ಎಂದು ತಿಳಿಸಿದ್ದು, ಕೂಲಿಮಾಡುವ ಜನರಿಗೆ ಆನ್‌ಲೈನ್‌ನಲ್ಲಿ ಅರ್ಜಿ ಸಲ್ಲಿಸಲು ತಿಳಿದಿರುತ್ತದೆಯೇ' ಎಂದು ಪ್ರಶ್ನಿಸಿದ ಅವರು, 'ಸರ್ಕಾರಕ್ಕೆ ಸಾಮಾನ್ಯ ಪ್ರಜ್ಞೆಯೂ ಇಲ್ಲದಂತಾಗಿದೆ' ಎಂದು ಟೀಕಿಸಿದರು.

ಶಾಸಕ ಕೃಷ್ಣ ಬೈರೇಗೌಡ, 'ಲಾಕ್‌ಡೌನ್‌ನಿಂದಾಗಿ ಎರಡು ತಿಂಗಳಿಂದ ಜನರು ಉದ್ಯೋಗವಿಲ್ಲದೆ ಜೀವನ ನಿರ್ವಹಣೆಗೂ ತೊಂದರೆಯಾಗಿ ಬೀದಿಗೆ ಬಿದ್ದಿದ್ದಾರೆ. ಆದರೆ ಕೇಂದ್ರ ಮತ್ತು ರಾಜ್ಯದಲ್ಲಿ ಅಧಿಕಾರದಲ್ಲಿರುವ ಬಿಜೆಪಿ ಸರ್ಕಾರಕ್ಕೆ ಜನರ ಕಷ್ಟಗಳೇ ಅರ್ಥವಾಗುತ್ತಿಲ್ಲ' ಎಂದು ಅಸಮಾಧಾನ ವ್ಯಕ್ತಪಡಿಸಿದರು.

ರಾಜ್ಯಸಭಾ ಸದಸ್ಯ ಜಿ.ಸಿ.ಚಂದ್ರಶೇಖರ್, ಜಿಲ್ಲಾ ಪಂಚಾಯ್ತಿ ಸದಸ್ಯ ಸಿ.ವೆಂಕಟೇಶ್, ಕೆಪಿಸಿಸಿ ಕಾರ್ಮಿಕ ವಿಭಾಗದ ಅಧ್ಯಕ್ಷ ಪುಟ್ಟಸ್ವಾಮಿಗೌಡ, ಕೆಪಿಸಿಸಿ ಮಾಧ್ಯಮ ವಕ್ತಾರ ಮಂಜುನಾಥ ಅದ್ದೆ, ಕಾಂಗ್ರೆಸ್ ಮುಖಂಡರಾದ ಪ್ರೇಮಲತಾ, ವೈ.ಆರ್.ರವಿ, ಅಮೋಘವರ್ಷ, ವರುಣ್ ಕುಮಾರ್ ಮತ್ತಿತರರು ಉಪಸ್ಥಿತರಿದ್ದರು.


**PUBLIC NOTICE**

This is to inform the general public that our client intends to enter into a Development Agreement for the development of the property described below with its respective owners, (i) Sri. P. K Raghothama Rao, (ii) Smt. T. S. Anasuya Rao (iii) Smt. Gita R. Rao and (iv) Smt. Jyothi Rao, along-with their respective family members, Bengaluru. Any person/s having any rights, title, interest or claim on the property of any part thereof or objecting to such development transaction in favour of our client, may lodge their objections/claims with documentary evidence within **30 days** from date of this publication, to the undersigned. If no claims or objections are received within the stipulated time, it shall be deemed that the Schedule Property is free from all acts of encumbrances or claims whatsoever of any nature.

**SCHEDULE PROPERTY**

All that piece and parcel of converted lands bearing Sy No.80/2 (earlier portion of Sy No.80, Old Sy No.5), Sy No.80/3 (earlier portion of Sy No.80/1, Old Sy No.5), Sy No.80/4 (earlier portion of Sy No.80/1, Old Sy No.5), in all admeasuring 2 Acres 05 Guntas, all situated Siddapura Village, Varthur Hobli, Bengaluru East Taluk, Bengaluru 560066 together with residential buildings thereon with all rights, appurtenances whatsoever hereunder or underneath or above the surface, and bounded as follows :-

On or towards the East By : Road
On or towards the West By : Property bearing Sy No.75
On or towards the North By : Property bearing Sy No.80/1 belonging to Sri. B.C Prasad
On or towards South By : Road

**HARISH SATHYA**
**Sathya and Co.**
Advocates and Legal Consultants
# 57, 1st floor, 7th Cross, Central Street, Kumara Park West, Bangalore 560020.
Ph : 080-23460262 / 41158500
harish@sathyaandco.com



ಹೊರಗೆ ಹೋಗುವಾಗ ಮುಖಗವಸು ಧರಿಸಿ

**ಕರ್ನಾಟಕ ರಾಜ್ಯ ಉನ್ನತ ಶಿಕ್ಷಣ ಪರಿಷತ್ತು**
ಕಾರ್ಯನಿರ್ವಾಹಕ ನಿರ್ದೇಶಕರ ಕಛೇರಿ, ನಂ.30, ಸೆಂಟ್ರಲ್ ಕಾಲೇಜು ಕ್ಯಾಂಪಸ್, ಪ್ರಸನ್ನ ಕುಮಾರ್ ಬ್ಲಾಕ್, ವೈ. ರಾಮಚಂದ್ರ ರಸ್ತೆ, ಗಾಂಧಿನಗರ, ಬೆಂಗಳೂರು–560009.
ದೂರವಾಣಿ ಸಂಖ್ಯೆ: 080–22341395 ಇ–ಮೇಲ್: ed@kshec.ac.in

ಸಂಖ್ಯೆ: ಕರಾಉಶಿಪ/39/ವಾಹನ ಹರಾಜು/2020–21 ದಿನಾಂಕ: 21–06–2021

**ಬಹಿರಂಗ ಹರಾಜು ಪ್ರಕಟಣೆ**

ಕರ್ನಾಟಕ ರಾಜ್ಯ ಉನ್ನತ ಶಿಕ್ಷಣ ಪರಿಷತ್ತಿನ ಕಾರ್ಯನಿರ್ವಾಹಕ ನಿರ್ದೇಶಕರ ಕಛೇರಿಯಲ್ಲಿ ಅನುಪಯುಕ್ತಗೊಳಿಸಿದ ವಾಹನ ಸಂಖ್ಯೆ: KA-04-MJ-3013 Corolla Altis ಮಾದರಿಯ ವಾಹನವನ್ನು ದಿನಾಂಕ: **08–07–2021 ರಂದು ಪೂರ್ವಾಹ್ನ 11.00 ಗಂಟೆಗೆ** ಬಹಿರಂಗ ಹರಾಜು ಮೂಲಕ ವಿಲೇವಾರಿ ಮಾಡಲಾಗುವುದು. ಆಸಕ್ತಿಯಿರುವ ಬಿಡ್‌ದಾರರು ಹೆಚ್ಚಿನ ಮಾಹಿತಿಗಾಗಿ ಈ ಕಛೇರಿ ವೇಳೆಯಲ್ಲಿ ಮೊಬೈಲ್: **8970885643** ನ್ನು ಸಂಪರ್ಕಿಸಲು ಸೂಚಿಸಿದೆ ಅಥವಾ ಕಛೇರಿಯ ವೆಬ್‌ಸೈಟ್: **www.kshec.ac.in** ನಲ್ಲಿ ವೀಕ್ಷಿಸಿ ಮಾಹಿತಿ / ಷರತ್ತುಗಳನ್ನು ಪಡೆದು ಬಹಿರಂಗ ಹರಾಜಿನಲ್ಲಿ ಭಾಗವಹಿಸಬಹುದಾಗಿದೆ.

ಸಹಿ/–
ಕಾರ್ಯನಿರ್ವಾಹಕ ನಿರ್ದೇಶಕರು

ವಾಸಾಸಂಇ/ಬೆಂ.ನ/ಅಡ್ವರ್ಟೋರ್/621/2021–22

ಕೋವಿಡ್-19. ಆತಂಕ ಬೇಡ; ಮುನ್ನೆಚ್ಚರಿಕೆ ಇರಲಿ.
ಮಾಸ್ಕ್ ಧರಿಸಿ | 6 ಅಡಿ ದೈಹಿಕ ಅಂತರ ಪಾಲಿಸಿ | ಕೈಗಳ ಸ್ವಚ್ಛತೆ ಕಾಪಾಡಿಕೊಳ್ಳಿ



**ಅರಣ್ಯ ಇಲಾಖೆ**
ಉಪ ಅರಣ್ಯ ಸಂರಕ್ಷಣಾಧಿಕಾರಿಗಳ ಕಛೇರಿ, ಬನ್ನೇರುಘಟ್ಟ ರಾಷ್ಟ್ರೀಯ ಉದ್ಯಾನವನ, ಬೆಂಗಳೂರು–560083.
ದೂರವಾಣಿ: 080–28429950, ಇ–ಮೇಲ್: dcfbnp83@gmail.com

**ಸಂಕ್ಷಿಪ್ತ ಅಲ್ಪಾವಧಿ ಟೆಂಡರ್ ಪ್ರಕಟಣೆ**
(ಇ–ಪ್ರೊಕ್ಯೂರ್‌ಮೆಂಟ್ ಪೋರ್ಟಲ್ ಮೂಲಕ ಮಾತ್ರ)

ಸಂಖ್ಯೆ: ಎ3/ಸೋಲಾರ್ ಟೆಂಡರ್/ಸಿಆರ್–04/2021–22 ದಿನಾಂಕ: 19.06.2021

ಈ ಮೂಲಕ ಸಾರ್ವಜನಿಕರಿಗೆ ಹಾಗೂ ಈ ವಿಭಾಗದಲ್ಲಿ ನೋಂದಾಯಿತ ಅರಣ್ಯ ಗುತ್ತಿಗೆದಾರರಿಗೆ ತಿಳಿಯಪಡಿಸುವುದೇನೆಂದರೆ, 2021–22ನೇ ಸಾಲಿಗೆ ಬನ್ನೇರುಘಟ್ಟ ರಾಷ್ಟ್ರೀಯ ಉದ್ಯಾನವನದ ಅರಣ್ಯ ಪ್ರದೇಶದ ಅಂಚಿನಲ್ಲಿ ಬರುವ ಹಳ್ಳಿಗಳ ರೈತರ ಜಮೀನುಗಳಲ್ಲಿ ಕಾಡಾನೆಗಳ ಹಾವಳಿಯನ್ನು ತಪ್ಪಿಸುವುದಕ್ಕಾಗಿ ಅರಣ್ಯ ಪ್ರದೇಶದ ಗಡಿಯಲ್ಲಿ ಅಂಗೀಕೃತ ಸಂಸ್ಥೆಗಳಿಂದ ಅಥವಾ ಸೋಲಾರ್ ತಂತಿ ಬೇಲಿ ಸಾಮಾಗ್ರಿಗಳ ಉತ್ಪಾದಕರಿಂದ ಸೋಲಾರ್ ತಂತಿ ಬೇಲಿ ನಿರ್ವಹಣೆ ಮಾಡುವ ಕಾಮಗಾರಿಗೆ ಟೆಂಡರ್‌ಅನ್ನು ಕರ್ನಾಟಕ ಸರ್ಕಾರದ ಇ–ಪ್ರೊಕ್ ಪೋರ್ಟಲ್ (http://eproc.karnataka.gov.in) ಮೂಲಕ ಟೆಂಡರ್‌ನ್ನು ಆಹ್ವಾನಿಸಲಾಗಿದೆ.

ಸಹಿ/–
ಉಪ ಅರಣ್ಯ ಸಂರಕ್ಷಣಾಧಿಕಾರಿ, ಬನ್ನೇರುಘಟ್ಟ ರಾಷ್ಟ್ರೀಯ ಉದ್ಯಾನವನ, ಬೆಂಗಳೂರು

DIPR/DDU/Zen/R.O:623/2021-22

ಕೋವಿಡ್-19. ಆತಂಕ ಬೇಡ; ಮುನ್ನೆಚ್ಚರಿಕೆ ಇರಲಿ.
ಮಾಸ್ಕ್ ಧರಿಸಿ | 6 ಅಡಿ ದೈಹಿಕ ಅಂತರ ಪಾಲಿಸಿ | ಕೈಗಳ ಸ್ವಚ್ಛತೆ ಕಾಪಾಡಿಕೊಳ್ಳಿ



**ಹಟ್ಟಿ ಚಿನ್ನದ ಗಣಿ ಕಂಪನಿ ನಿಯಮಿತ**
(ಕರ್ನಾಟಕ ಸರ್ಕಾರದ ಅಧೀನ ಉದ್ದಿಮೆ)
ಹಟ್ಟಿ – 584 115, ಲಿಂಗಸುಗೂರು-ತಾ., ರಾಯಚೂರು ಜಿಲ್ಲೆ, ಕರ್ನಾಟಕ. ದೂರವಾಣಿ: 08537–275740/276339/275463 ಇ-ಮೇಲ್: material276339@gmail.com ವೆಬ್‌ಸೈಟ್: www.huttigold.co.in

**ಟೆಂಡರ್ ಪ್ರಕಟಣೆ ನಂ.08/2021–22 ದಿನಾಂಕ: 24.06.2021**
(ಇ-ಪ್ರೊಕ್ಯೂರ್‌ಮೆಂಟ್ ಮುಖಾಂತರ ಮಾತ್ರ)

ಪ್ರಭಾರಿ ಉಪ ಪ್ರಧಾನ ವ್ಯವಸ್ಥಾಪಕರು(ಸರಕು) ಇವರು ಈ ಕೆಳಗಿನ ಟೆಂಡರ್‌ಗಳನ್ನು ಇ–ಪ್ರೊಕ್ಯೂರ್‌ಮೆಂಟ್ ಮುಖಾಂತರ ತಯಾರಕರು ಮತ್ತು ಪರಿಗಣಿಸಲ್ಪಟ್ಟ ವಿತರಕರಿಂದ ಆಹ್ವಾನಿಸಲಾಗಿದೆ.

| ಕ್ರ. ಸಂ. | ಸಾಮಾಗ್ರಿ ವಿವರ | ಪ್ರಮಾಣ | ಅಂದಾಜು ವೆಚ್ಚ (ರೂ.ಗಳಲ್ಲಿ) |
|---|---|---|---|
| 1 | ಮುಖ್ಯ ಉಪಹಾರ ಗೃಹಕ್ಕೆ ಸ್ಟೀಲ್ ವಸ್ತುಗಳು ಮತ್ತು ಇತರೆ ವಸ್ತುಗಳ ಪೂರೈಕೆ **HGML/2021-22/IND3114** | ಪಟ್ಟಿಯ ಪ್ರಕಾರ | 19.48 ಲಕ್ಷ |
| 2 | ಇಮಲ್ಷನ್ ಎಕ್ಸ್‌ಪ್ಲೋಸಿವ್ ಪೂರೈಕೆ. **HGML/2021-22/IND3094** | ಪಟ್ಟಿಯ ಪ್ರಕಾರ | 4.62 ಕೋಟಿ |
| 3 | MS 26 ಲೆವೆಲ್ ರಾಕ್‌ಬ್ರೇಕರ್ ಚೇಂಬರ್ ಗ್ರೀಜಲಿಗಾಗಿ ಸಪೋರ್ಟಿಂಗ್ ಫ್ರೇಮ್ ಪೂರೈಕೆ **HGML/2021-22/IND3110** | 06 ಸಂಖ್ಯೆಗಳು | 34.51 ಲಕ್ಷ |
| 4 | 6ತಿಂಗಳ ಅವಧಿಗಾಗಿ ಕಾಯಿಪಲ್ಯಗಳ ಪೂರೈಕೆ **HGML/2021-22/IND3112** | ಪಟ್ಟಿಯ ಪ್ರಕಾರ | 20.46 ಲಕ್ಷ |
| 5 | PLC, HMI ಮತ್ತು ಸ್ಕಾಡಾಗಾಗಿ AMC **HGML/Service/71/2020-21/Call-2** | --- | 8.61 ಲಕ್ಷ |

(1) ಪೂರ್ವ ಭಾವಿ ಸಭೆ: **01.07.2021 ಬೆಳಿಗ್ಗೆ 11.30 ಗಂಟೆಗೆ. (ಕ್ರ.ಮ.ಸಂ.2ಕ್ಕೆ ಮಾತ್ರ). (2)** ಟೆಂಡರ್ ಸಲ್ಲಿಸಲು ಕೊನೆಯ ದಿನಾಂಕ ಮತ್ತು ಸಮಯ: **08.07.2021 ಸಂಜೆ 4.00 ಗಂಟೆಗೆ. (3)** ತಾಂತ್ರಿಕ ಬಿಡ್ ತೆರೆಯುವ ದಿನಾಂಕ ಮತ್ತು ಸಮಯ: **12.07.2021 ಬೆಳಿಗ್ಗೆ 10.00 ಗಂಟೆಗೆ.** ಟೆಂಡರ್ ನಮೂನೆಗಳನ್ನು ಇ–ಪ್ರೊಕ್ಯೂರ್‌ಮೆಂಟ್ ಪೋರ್ಟಲ್ ವೆಬ್‌ಸೈಟ್ **https://www.eproc.karnataka.gov.in** ನಲ್ಲಿ ನೋಡಬಹುದು ಹಾಗೂ ಡೌನ್‌ಲೋಡ್ ಮಾಡಿಕೊಳ್ಳಬಹುದು. ಟೆಂಡರ್ ಪ್ರೋಸೆಸ್ಸಿಂಗ್ ಫೀ ಇ–ಪ್ರೋಕ್ಯೂರ್‌ಮೆಂಟ್ ಪೋರ್ಟಲ್ ಟೆಂಡರ್ ನಿಯಮದ ಅನುಸಾರ. ಹೆಚ್ಚಿನ ಮಾಹಿತಿಗಾಗಿ ಖರೀದಿ ಕಾರ್ಯಾಲಯದ ಕೆಲಸದ ವೇಳೆಯಲ್ಲಿ ಸಂಪರ್ಕಿಸಬಹುದು.

ಸಹಿ/- ಪ್ರಭಾರಿ ಉಪ ಪ್ರಧಾನ ವ್ಯವಸ್ಥಾಪಕರು (ಸರಕು)

ಭಾರತದ ಅತಿ ಹೆಚ್ಚು ಚಿನ್ನದ ಉತ್ಪಾದಕರು


ಈಜುಕೊಳ ನಿರ್ಮಾಣ: ರೋಹಿಣಿ ಸಿಂಧೂರಿ ಸ್ಪಷ್ಟನೆ

## ಕೋವಿಡ್ ಹಣ ದುರ್ಬಳಕೆ ಆಗಿಲ್ಲ

ಪ್ರಜಾವಾಣಿ ವಾರ್ತೆ

**ಮೈಸೂರು:** 'ಮೈಸೂರು ಜಿಲ್ಲಾಧಿಕಾರಿ ನಿವಾಸದಲ್ಲಿ ಈಜುಕೊಳ ನಿರ್ಮಾಣಕ್ಕೆ ಕೋವಿಡ್ ಹಣದ ಬಳಕೆ ಆಗಿಲ್ಲ' ಎಂದು ಐಎಎಸ್ ಅಧಿಕಾರಿ ರೋಹಿಣಿ ಸಿಂಧೂರಿ ಸ್ಪಷ್ಟಪಡಿಸಿದ್ದಾರೆ.

ರೋಹಿಣಿ ಸಿಂಧೂರಿ

'ಕೋವಿಡ್ ಸಂಕಷ್ಟದ ಸಮಯದಲ್ಲಿ ಈಜುಕೊಳ ನಿರ್ಮಾಣ ಕೆಲಸ ಆಗಿಲ್ಲ. 2020ರ ಡಿಸೆಂಬರ್‌ನಲ್ಲಿ ನಿರ್ಮಾಣ ಕಾರ್ಯ ಆರಂಭವಾಗಿತ್ತು. ಆ ಅವಧಿಯಲ್ಲಿ ಕೋವಿಡ್ ಎರಡನೇ ಅಲೆಯ ಯಾವುದೇ ಮುನ್ಸೂಚನೆ ಇರಲಿಲ್ಲ' ಎಂದು ಮಾಧ್ಯಮಗಳ ವಾಟ್ಸ್‌ಆ್ಯಪ್ ಗ್ರೂಪ್‌ಗೆ ಹೇಳಿಕೆ ಬಿಡುಗಡೆ ಮಾಡಿದ್ದಾರೆ.

ಈಜುಕೊಳ ನಿರ್ಮಾಣ ಕುರಿತ ದೂರಿನ ಸಂಬಂಧ ಪ್ರಾದೇಶಿಕ ಆಯುಕ್ತ ಜಿ.ಸಿ.ಪ್ರಕಾಶ್ ಅವರು ತನಿಖೆ ನಡೆಸಿ ಕಂದಾಯ ಇಲಾಖೆಯ ಪ್ರಧಾನ ಕಾರ್ಯದರ್ಶಿಗೆ ವರದಿ ಸಲ್ಲಿಸಿದ್ದಾರೆ. ಈ ವರದಿ ಮಾಧ್ಯಮಗಳಿಗೆ ಸೋರಿಕೆಯಾಗಿತ್ತು.

ವರದಿಯಲ್ಲಿರುವ ಅಂಶಗಳ ಬಗ್ಗೆಯೂ ಸ್ಪಷ್ಟನೆ ನೀಡಿರುವ ರೋಹಿಣಿ, 'ಈಜುಕೊಳ ನಿರ್ಮಾಣದ ಬಗ್ಗೆ ಕೆಲವರು ಮಾಡಿದ್ದ ಆರೋಪಗಳು ಸುಳ್ಳು ಆಗಿರುವ ಕಾರಣ ತನಿಖಾ ವರದಿಯಲ್ಲಿ ಒಂದಷ್ಟು ತಾಂತ್ರಿಕ ವಿಷಯಗಳನ್ನು ಪ್ರಸ್ತಾಪಿಸಲಾಗಿದೆ. ನಿರ್ಮಿತಿ ಕೇಂದ್ರ ತನ್ನದೇ ಆದ ತಾಂತ್ರಿಕ ವಿಭಾಗವನ್ನು ಹೊಂದಿದ್ದು, ಈ ಯೋಜನೆಗೆ ಅನುಮೋದನೆ ನೀಡಿದೆ. ನಿರ್ಮಿತಿ ಕೇಂದ್ರದ ಕಾರ್ಯಕಾರಿ ಸಮಿತಿ ಆಡಳಿತಾತ್ಮಕ ಒಪ್ಪಿಗೆಯನ್ನೂ ನೀಡಿತ್ತು' ಎಂದು ಹೇಳಿದ್ದಾರೆ.

**ಎಲ್ಲ ಭೂ ಅಕ್ರಮಗಳ ಬಗ್ಗೆ ತನಿಖೆಯಾಗಲಿ:** 'ಮೈಸೂರಿನಲ್ಲಿ ಆಗಿರುವ ಭೂಹಗರಣಗಳ ಕುರಿತು ನಾನು ಮಾಡಿರುವ ಎಲ್ಲ ಆದೇಶಗಳ ಬಗ್ಗೆಯೂ ತನಿಖೆ ಮಾಡಬೇಕು. ರಾಜಕಾಲುವೆ ಒತ್ತುವರಿ ಮಾಡಿ ಸಾ.ರಾ. ಚೌಲ್ಟ್ರಿ ನಿರ್ಮಾಣ ಮಾಡಿದ ವಿಷಯಕ್ಕೆ ಮಾತ್ರ ತನಿಖೆಯನ್ನು ಸೀಮಿತಗೊಳಿಸಬಾರದು. ಇದರಿಂದ ಇತರ ಎಲ್ಲ ಭೂಹಗರಣಗಳು ಮುಚ್ಚಿಹೋಗುವ ಸಾಧ್ಯತೆಯಿದೆ' ಎಂದು ಪ್ರಾದೇಶಿಕ ಆಯುಕ್ತರಿಗೆ ಪತ್ರ ಬರೆದಿದ್ದಾರೆ.

### ರೂಪಾ ಮೌದ್ಗಿಲ್ ಟೀಕೆ

'ಕೊರೊನಾ ಸಂಕಷ್ಟದಿಂದ ಜನರು ತತ್ತರಿಸಿರುವ ಸಂದರ್ಭದಲ್ಲಿ ಸಾರ್ವಜನಿಕರ ಹಣ ಬಳಸಿ ಈಜುಕೊಳ ನಿರ್ಮಿಸಲು ಮುಂದಾಗಿದ್ದು, ಐಎಎಸ್ ಅಧಿಕಾರಿ ರೋಹಿಣಿ ಸಿಂಧೂರಿ ಅವರ ನೈತಿಕ ಪತನವನ್ನು ತೋರಿಸುತ್ತದೆ. ಈಜುಕೊಳ ನಿರ್ಮಾಣ ಕೆಲಸ ಮುಂದೂಡಬಹುದಿತ್ತು' ಎಂದು ಐಪಿಎಸ್ ಅಧಿಕಾರಿ ಡಿ.ರೂಪಾ ಮೌದ್ಗಿಲ್ ತಮ್ಮ ಫೇಸ್‌ಬುಕ್ ಹಾಗೂ ಟ್ವಿಟರ್ ಖಾತೆಯಲ್ಲಿ ಟೀಕಿಸಿದ್ದಾರೆ.

## ಅವಕಾಶ ರದ್ದು: ಸಚಿವಾಲಯ ಸಿಬ್ಬಂದಿ ಪ್ರತಿಭಟನೆ

**ಬೆಂಗಳೂರು:** ಬೇರೆ ಇಲಾಖೆಗಳಿಗೆ ಸಚಿವಾಲಯದಿಂದ ಅಧಿಕಾರಿಗಳ ವರ್ಗಾವಣೆ, ನಿಯೋಜನೆಯ ಅವಕಾಶ ರದ್ದುಪಡಿಸುವ ತೀರ್ಮಾನವನ್ನು ವಿರೋಧಿಸಿ ಸಚಿವಾಲಯ ಸಿಬ್ಬಂದಿ ರಾಜ್ಯ ಸರ್ಕಾರದ ಮುಖ್ಯ ಕಾರ್ಯದರ್ಶಿ ಪಿ. ರವಿಕುಮಾರ್ ಕಚೇರಿ ಎದುರು ಪ್ರತಿಭಟನೆ ನಡೆಸಿದರು. ಸಚಿವಾಲಯದ ಶಾಖಾಧಿಕಾರಿಗಳಿಗೆ ತಹಶೀಲ್ದಾರ್ ಹುದ್ದೆಗೆ ನಿಯೋಜಿಸುವ ಅವಕಾಶ ರದ್ದುಪಡಿಸಿದ್ದನ್ನು ಹಿಂಪಡೆಯಬೇಕು ಎಂದು ಸಿಬ್ಬಂದಿ ಆಗ್ರಹಿಸಿದರು.

ಕರ್ನಾಟಕ ನಾಗರಿಕ ಸೇವಾ (ಸಾಮಾನ್ಯ ನೇಮಕಾತಿ) (ತಿದ್ದುಪಡಿ) ನಿಯಮ 1977ರಂತೆ ಸಚಿವಾಲಯ ಅಧಿಕಾರಿಗಳು ಇಚ್ಛಿಸಿದರೆ ಅವರನ್ನು ಕಂದಾಯ ಇಲಾಖೆಯ ತಹಶೀಲ್ದಾರ್ ಹುದ್ದೆಗೆ, ಸಮಾಜ ಕಲ್ಯಾಣ ಇಲಾಖೆ ಸೇರಿ ಇತರ ಇಲಾಖೆಯ ವಿವಿಧ ಹುದ್ದೆಗಳಿಗೆ 2-3 ವರ್ಷ ಅವಧಿಗೆ ನಿಯೋಜನೆ ಮೇಲೆ ಕಾರ್ಯನಿರ್ವಹಿಸಲು ಅವಕಾಶ ಕಲ್ಪಿಸಲಾಗಿತ್ತು.

ಇದಕ್ಕೆ ತಡೆಯೊಡ್ಡುವ ಕರ್ನಾಟಕ ನಾಗರಿಕ ಸೇವಾ (ಸಾಮಾನ್ಯ ನೇಮಕಾತಿ) (ತಿದ್ದುಪಡಿ) ನಿಯಮ –2021 ಕರಡು ನಿಯಮಕ್ಕೆ ಆಕ್ಷೇಪಣೆ ಸಲ್ಲಿಸಲು ಅಧಿಸೂಚನೆ ಹೊರಡಿಸಿರುವುದು ದುರದೃಷ್ಟಕರ. ಸಚಿವಾಲಯದ ಸೇವೆಯು ಒಂದು ಇಲಾಖೆಗೆ ಸೀಮಿತವಾಗಿರುವುದಿಲ್ಲ ಎಂದು ಸಿಬ್ಬಂದಿ ಹೇಳಿದರು.

## ಎಲೆಕ್ಟ್ರಾನಿಕ್ ಸಿಟಿ: ರಸ್ತೆ ಬಳಕೆ ಶುಲ್ಕ ಹೆಚ್ಚಳ

ಪ್ರಜಾವಾಣಿ ವಾರ್ತೆ

**ಬೆಂಗಳೂರು:** ನಗರದ ಎಲೆಕ್ಟ್ರಾನಿಕ್ ಸಿಟಿ ಮತ್ತು ಅತ್ತಿಬೆಲೆ ನಡುವಣ ರಸ್ತೆ ಬಳಕೆ ಶುಲ್ಕವನ್ನು (ಟೋಲ್) ಹೆಚ್ಚಿಸಲಾಗಿದೆ. ಜುಲೈ 1ರಿಂದ ಪರಿಷ್ಕೃತ ಶುಲ್ಕ ಜಾರಿಗೆ ಬರಲಿದೆ.

ಮಾಸಿಕ ಪಾಸ್ ದರವನ್ನು ₹45 ಹೆಚ್ಚಿಸಲಾಗಿದೆ. ದ್ವಿಚಕ್ರ ವಾಹನ ಸವಾರರು ತಿಂಗಳಿಗೆ ₹625 ಪಾವತಿಸಬೇಕಾಗುತ್ತದೆ. ಕಾರು, ಜೀಪು, ವ್ಯಾನ್ ವಾಹನಗಳ ಬಳಕೆದಾರರು ತಿಂಗಳಿಗೆ ₹115 ಹೆಚ್ಚು ಪಾವತಿಸಬೇಕು. ಅಂದರೆ, ಈ ವಾಹನಗಳ ಬಳಕೆ ಶುಲ್ಕವನ್ನು ₹75ರಿಂದ ₹80ರಷ್ಟು ಹೆಚ್ಚಿಸಲಾಗಿದ್ದು, ಮಾಸಿಕ ಪಾಸ್‌ಗೆ ₹1,570 ಪಾವತಿಸಬೇಕು.

ಲಘು ವಾಣಿಜ್ಯ ವಾಹನಗಳು (ಎಲ್‌ಸಿವಿ) ಒಂದು ಸರದಿಗೆ ₹75 ಪಾವತಿಸಬೇಕು. ಈ ದರದಲ್ಲಿ ₹5 ಹೆಚ್ಚಿಸಲಾಗಿದೆ. ಹಿಂದಿರುಗಲು ₹110 ಪಾವತಿಸಬೇಕಾಗುತ್ತದೆ.ಈ ಮಾರ್ಗದಲ್ಲಿ ಹಲವು ಐಟಿ ಕಂಪನಿಗಳಿದ್ದು, ರಸ್ತೆ ಬಳಕೆದಾರರ ಮೇಲೆ ಮತ್ತಷ್ಟು ಹೊರೆ ಬೀಳಲಿದೆ. ಬೊಮ್ಮಸಂದ್ರದಲ್ಲಿಯೂ ನೂರಾರು ಕಂಪನಿಗಳು ಇವೆ. ಅಲ್ಲದೆ, ಕೆ.ಆರ್. ಮಾರುಕಟ್ಟೆಯನ್ನು ಸಿಂಗಸಂದ್ರಕ್ಕೂ ಸ್ಥಳಾಂತರಿಸಲಾಗಿದ್ದು, ಸಾವಿರಾರು ಜನ ಈ ಮಾರ್ಗದ ಮೂಲಕವೇ ಈ ಮಾರುಕಟ್ಟೆಗೆ ತೆರಳಬೇಕಾಗಿದೆ.

'ಸಿಂಗಸಂದ್ರ ಹೋಗಬೇಕೆಂದರೆ ಈ ರಸ್ತೆಯಲ್ಲಿ ಮೇಲ್ಸೇತುವೆಯನ್ನು ಬಳಸಿಕೊಂಡು ಹೋಗಬೇಕು. ಈಗ ಟೋಲ್ ಹೆಚ್ಚಿಸಿರುವುದು ನಮಗೆ ಮತ್ತಷ್ಟು ಹೊರೆ ಎನಿಸಲಿದೆ. ಮೊದಲಿನಂತೆ, ಕೆ.ಆರ್. ಮಾರುಕಟ್ಟೆಯಲ್ಲಿಯೇ ವ್ಯಾಪಾರಕ್ಕೆ ಅನುಮತಿ ನೀಡಬೇಕು' ಎಂದು ತರಕಾರಿ ವ್ಯಾಪಾರಿ ಗಜೇಂದ್ರ ಹೇಳಿದರು.

'ಕಚೇರಿ ಕೆಲಸಗಳಿಗೆ, ಸರ್ಕಾರಿ ಕಚೇರಿಗಳಿಗೆ ಇದೇ ಮಾರ್ಗದ ಮೂಲಕವೇ ಸಾಗಬೇಕು. ಈಗ ರಸ್ತೆ ಬಳಕೆ ಶುಲ್ಕ ಹೆಚ್ಚಿಸಿರುವುದು ನಮ್ಮ ಸಂಕಷ್ಟವನ್ನು ಹೆಚ್ಚಿಸಿದೆ' ಎಂದು ರಸ್ತೆ ಬಳಕೆದಾರ ವಿಜಯ್ ಅಸಮಾಧಾನ ವ್ಯಕ್ತಪಡಿಸಿದರು.

ಪರಿಷ್ಕೃತ ಶುಲ್ಕದ ವಿವರ

| ವಾಹನ | ಒಮ್ಮೆಗೆ | ಹಿಂದಿರುಗುವ ದರ | ಮಾಸಿಕ ಪಾಸ್ (₹ಗಳಲ್ಲಿ) |
|---|---|---|---|
| ದ್ವಿಚಕ್ರ ವಾಹನಗಳು | 20 | 30 | 625 |
| ಕಾರು, ಜೀಪು, ವ್ಯಾನ್ | 50 | 80 | 1,570 |
| ಲಘುವಾಹನ, ಮಿನಿ ಬಸ್ | 75 | 110 | 2,195 |
| ಟ್ರಕ್, ಬಸ್ | 145 | 220 | 4390 |
| ಭಾರಿ ವಾಹನಗಳು | 295 | 440 | 8,780 |

### ಎಂ.ಟಿ.ಬಿ. ನಾಗರಾಜ್‌ಗೆ ಬೆಂಗಳೂರು ಗ್ರಾಮಾಂತರ ಉಸ್ತುವಾರಿ

**ಬೆಂಗಳೂರು:** ಪೌರಾಡಳಿತ ಸಚಿವ ಎಂ.ಟಿ.ಬಿ.ನಾಗರಾಜ್ ಅವರನ್ನು ಬೆಂಗಳೂರು ಗ್ರಾಮಾಂತರ ಜಿಲ್ಲೆಯ ಉಸ್ತುವಾರಿ ಸಚಿವರನ್ನಾಗಿ ನೇಮಿಸಿ ಆದೇಶ ಹೊರಡಿಸಲಾಗಿದೆ.

ಬೆಂಗಳೂರು ಗ್ರಾಮಾಂತರ ಜಿಲ್ಲಾ ಉಸ್ತುವಾರಿಯನ್ನು ಕಂದಾಯ ಸಚಿವ ಆರ್.ಅಶೋಕ ಅವರಿಗೆ ನೀಡಲಾಗಿತ್ತು. ನಾಗರಾಜ್‌ಗೆ ಕೋಲಾರದ ಉಸ್ತುವಾರಿ ನೀಡಲಾಗಿತ್ತು. ತಮಗೆ ಗ್ರಾಮಾಂತರ ಜಿಲ್ಲೆ ಉಸ್ತುವಾರಿಯನ್ನು ನೀಡಿದರೆ ಉತ್ತಮವಾಗಿ ನಿರ್ವಹಿಸುವುದಾಗಿ ನಾಗರಾಜ್ ಅವರು ಅಶೋಕ ಅವರಲ್ಲಿ ಮನವಿ ಮಾಡಿದ್ದರು. ಈ ವಿಷಯವನ್ನು ಅಶೋಕ ಅವರು ಮುಖ್ಯಮಂತ್ರಿ ಯಡಿಯೂರಪ್ಪ ಅವರ ಗಮನಕ್ಕೆ ತಂದಿದ್ದರು.

ಕೆಂಗೇರಿ ಸರ್ಕಾರಿ ಪ್ರಥಮ ದರ್ಜೆ ಕಾಲೇಜಿನಲ್ಲಿ ಹಮ್ಮಿಕೊಂಡಿದ್ದ ಕಾರ್ಯಕ್ರಮ

## 153 ಮಂದಿ ಪದವಿ ವಿದ್ಯಾರ್ಥಿಗಳಿಗೆ ಟ್ಯಾಬ್ ವಿತರಣೆ

ಪ್ರಜಾವಾಣಿ ವಾರ್ತೆ

**ಕೆಂಗೇರಿ:** ರಾಜ್ಯದ ಪ್ರತಿಯೊಬ್ಬ ವಿದ್ಯಾರ್ಥಿಗೂ ಗುಣಮಟ್ಟದ ಹಾಗೂ ಸಮಾನ ಶಿಕ್ಷಣ ದೊರಕಿಸಿಕೊಡುವ ನಿಟ್ಟಿನಲ್ಲಿ ಕಾಲೇಜು ವಿದ್ಯಾರ್ಥಿಗಳಿಗೆ ಟ್ಯಾಬ್ ವಿತರಣೆ ಮಾಡಲಾಗುತ್ತಿದೆ ಎಂದು ಸಹಕಾರ ಸಚಿವ ಎಸ್.ಟಿ.ಸೋಮಶೇಖರ್ ಹೇಳಿದರು.

ಕೆಂಗೇರಿ ಸರ್ಕಾರಿ ಪ್ರಥಮ ದರ್ಜೆ ಕಾಲೇಜಿನಲ್ಲಿ ಹಮ್ಮಿಕೊಳ್ಳಲಾಗಿದ್ದ ಟ್ಯಾಬ್ ವಿತರಣೆ ಕಾರ್ಯಕ್ರಮದಲ್ಲಿ ಅವರು ಮಾತನಾಡಿದರು.

'ಬಹುತೇಕ ಶಾಲೆಗಳು ಆನ್‌ಲೈನ್ ತರಗತಿಗಳನ್ನು ನಡೆಸುತ್ತಿವೆ. ಕಂಪ್ಯೂಟರ್, ಟ್ಯಾಬ್ ಹೊಂದಿರದ ಅನೇಕ ಬಡ ಹಾಗೂ ಗ್ರಾಮೀಣ ಪ್ರದೇಶದ ವಿದ್ಯಾರ್ಥಿಗಳು ಶಿಕ್ಷಣದಿಂದ ವಂಚಿತರಾಗುತ್ತಿರುವ ಸಂಭವವಿದೆ. ಈ ಹಿನ್ನೆಲೆಯಲ್ಲಿ ರಾಜ್ಯ ಸರ್ಕಾರ ವಿದ್ಯಾರ್ಥಿಗಳಿಗೆ ಟ್ಯಾಬ್ ವಿತರಣೆ ಮಾಡುವ ಯೋಜನೆಗೆ ಚಾಲನೆ ನೀಡಲಾಗಿದೆ' ಎಂದರು.

'1ರಿಂದ 10ನೇ ತರಗತಿಯವರೆಗಿನ ಮಕ್ಕಳಿಗೆ ಹಾಲಿನ ಪೌಡರ್ ನೀಡುವ ಕಾರ್ಯಕ್ರಮವನ್ನು ರೂಪಿಸಲಾಗಿದೆ. ಈ ಯೋಜನೆಯಡಿ ಸುಮಾರು 56 ಲಕ್ಷ ವಿದ್ಯಾರ್ಥಿಗಳಿಗೆ ಅರ್ಧ ಕೆ.ಜಿ ಹಾಲಿನ ಪುಡಿ ವಿತರಿಸಲಾಗುವುದು. ಆಯಾ ಭಾಗದ ಒಕ್ಕೂಟಗಳು ಪುಡಿ ವಿತರಣೆ ಕಾರ್ಯ ಮಾಡಲಿದ್ದು, ₹156 ಕೋಟಿ ವೆಚ್ಚವಾಗಲಿದೆ' ಎಂದು ಹೇಳಿದರು.

ಪ್ರಾಂಶುಪಾಲ ರಾಮಯ್ಯ ಮಾತನಾಡಿ, 'ಸಚಿವ ಎಸ್.ಟಿ.ಸೋಮಶೇಖರ್, ಕಾಲೇಜು ವಿದ್ಯಾರ್ಥಿಗಳಿಗೆ ಸಕಾಲದಲ್ಲಿ ಟ್ಯಾಬ್ ವಿತರಣೆಗೆ ಮುಂದಾಗಿರುವುದರಿಂದ ಮಕ್ಕಳ ಶಿಕ್ಷಣಕ್ಕೆ ಅತ್ಯಂತ ಅನುಕೂಲವಾಗಲಿದೆ' ಎಂದು ಹೇಳಿದರು.

ಸುಮಾರು 153 ಮಂದಿ ಪ್ರಥಮ ವರ್ಷದ ಪದವಿ ವಿದ್ಯಾರ್ಥಿಗಳಿಗೆ ಟ್ಯಾಬ್ ಗಳನ್ನು ವಿತರಣೆ ಮಾಡಲಾಯಿತು. ಕೆಂಗೇರಿ ಹಾಗೂ ಉಲ್ಲಾಳು ವಾರ್ಡ್ ವ್ಯಾಪ್ತಿಯಲ್ಲಿ ಕಾರ್ಯ ನಿರ್ವಹಿಸುವ ಬಿಬಿಎಂಪಿ ಪೌರಕಾರ್ಮಿಕರಿಗೆ ಹಾಗೂ ವಾಟರ್ ಮ್ಯಾನ್ ಗಳಿಗೆ ದಿನಸಿ ಕಿಟ್ ವಿತರಿಸಲಾಯಿತು.

ಕೆಂಗೇರಿ ಸರ್ಕಾರಿ ಪ್ರಥಮ ದರ್ಜೆ ಕಾಲೇಜಿನ 153 ಮಂದಿ ವಿದ್ಯಾರ್ಥಿಗಳಿಗೆ ಟ್ಯಾಬ್ ವಿತರಣೆ ಮಾಡಲಾಯಿತು. ಎಸ್‌ಟಿ.ಸೋಮಶೇಖರ್ , ಮುಖಂಡರಾದ ಕೆ.ಆರ್‌ಮೂರ್ತಿ, ಅನುಪಮಾ ಪಂಚಾಕ್ಷರಿ, ಪಿ.ಪ್ರಭಾಕರ್, ಬಂಡೆಮಠ ಪ್ರಭು, ಲೋಹಿತ್ ಮತ್ತಿತರರು ಇದ್ದಾರೆ

### ಕನ್ನಡ ಕಡೆಗಣನೆ: ಸರ್ಕಾರದ ಮುಖ್ಯ ಕಾರ್ಯದರ್ಶಿಗೆ ಕನ್ನಡ ಅಭಿವೃದ್ಧಿ ಪ್ರಾಧಿಕಾರದ ಪತ್ರ

# ಅಧಿಕಾರಿಗಳ ಮೇಲೆ ಕ್ರಮಕ್ಕೆ ಆಗ್ರಹ

ಪ್ರಜಾವಾಣಿ ವಾರ್ತೆ

**ಬೆಂಗಳೂರು:** ಶಿಕ್ಷಣ, ಆಡಳಿತ, ತಂತ್ರಜ್ಞಾನ, ಉದ್ಯೋಗ ಸೇರಿದಂತೆ ವಿವಿಧ ಕ್ಷೇತ್ರಗಳಲ್ಲಿ ಕನ್ನಡ ಅನುಷ್ಠಾನಕ್ಕೆ ಸಂಬಂಧಿಸಿದಂತೆ ಕಟ್ಟುನಿಟ್ಟಿನ ಕ್ರಮಕೈಗೊಳ್ಳುವಂತೆ ಕನ್ನಡ ಅಭಿವೃದ್ಧಿ ಪ್ರಾಧಿಕಾರದ ಹಾಲಿ ಹಾಗೂ ಮಾಜಿ ಅಧ್ಯಕ್ಷರು ಸರ್ಕಾರವನ್ನು ಆಗ್ರಹಿಸಿದ್ದಾರೆ.

ಕನ್ನಡ ಅನುಷ್ಠಾನಕ್ಕೆ ಸಂಬಂಧಿಸಿದಂತೆ ಕಳೆದ ಸೋಮವಾರ ಪ್ರಾಧಿಕಾರವು ಮಾಜಿ ಅಧ್ಯಕ್ಷರೊಂದಿಗೆ ಸಮಾಲೋಚನೆ ಸಭೆ ನಡೆಸಿತ್ತು. ಪ್ರಾಧಿಕಾರದ ಅಧ್ಯಕ್ಷ ಟಿ.ಎಸ್. ನಾಗಾಭರಣ, ಮಾಜಿ ಅಧ್ಯಕ್ಷರಾದ ಬರಗೂರು ರಾಮಚಂದ್ರಪ್ಪ, ಎಲ್. ಹನುಮಂತಯ್ಯ, 'ಮುಖ್ಯಮಂತ್ರಿ' ಚಂದ್ರು ಹಾಗೂ ಪ್ರೊ.ಎಸ್.ಜಿ. ಸಿದ್ಧರಾಮಯ್ಯ ಅವರು ಚರ್ಚಿಸಿ, ಪ್ರಮುಖವಾಗಿ ಐದು ನಿರ್ಣಯಗಳನ್ನು ಕೈಗೊಂಡಿದ್ದರು.

ಈ ಬಗ್ಗೆ ಪ್ರಾಧಿಕಾರವು ಸರ್ಕಾರದ ಮುಖ್ಯ ಕಾರ್ಯದರ್ಶಿ ಪಿ.ರವಿಕುಮಾರ್ ಅವರಿಗೆ ಪತ್ರ ಬರೆದು, ನಿರ್ಣಯಗಳನ್ನು ಅನುಷ್ಠಾನ ಮಾಡುವಂತೆ ಒತ್ತಾಯಿಸಿದೆ. ಇದಕ್ಕೆ ಮಾಜಿ ಅಧ್ಯಕ್ಷರು ಸಹಮತ ಸೂಚಿಸಿದ್ದಾರೆ.

ಸರ್ಕಾರದ ಮುಖ್ಯ ಕಾರ್ಯದರ್ಶಿ ರವಿಕುಮಾರ್ ಅವರಿಗೆ ಪ್ರಾಧಿಕಾರದ ಅಧ್ಯಕ್ಷ ಟಿ.ಎಸ್.ನಾಗಾಭರಣ ಅವರು ಪತ್ರದ ಪ್ರತಿಯನ್ನು ಹಸ್ತಾಂತರಿಸಿದರು. ಪ್ರಾಧಿಕಾರದ ಕಾರ್ಯದರ್ಶಿ ಸಂತೋಷ ಹಾನಗಲ್ ಇದ್ದರು

'ಪ್ರಸಕ್ತ ವರ್ಷವನ್ನು ಮುಖ್ಯಮಂತ್ರಿ ಬಿ.ಎಸ್. ಯಡಿಯೂರಪ್ಪ ಅವರು ಕನ್ನಡ ಕಾಯಕ ವರ್ಷ ಎಂದು ಘೋಷಿಸಿದ್ದಾರೆ. ಇಲ್ಲಿ ಕನ್ನಡವೇ ಸಾರ್ವಭೌಮ ಭಾಷೆ. ಈ ಭಾಷೆಯನ್ನು ಮತ್ತಷ್ಟು ಸಮೃದ್ಧ ಹಾಗೂ ವಿಸ್ತಾರಗೊಳಿಸಲು ನಾವು ಕಟಿಬದ್ಧರಾಗಬೇಕಿದೆ. ಆದರೆ, ಹಿರಿಯ ಅಧಿಕಾರಿಗಳು ಪದೇ ಪದೇ ಆಂಗ್ಲ ಭಾಷೆಯಲ್ಲಿ ವ್ಯವಹರಿಸುತ್ತಿರುವುದನ್ನು ಪ್ರಾಧಿಕಾರ ಗಮನಿಸುತ್ತಿದೆ. ಈ ಬಗ್ಗೆ ಸಾರ್ವಜನಿಕ ವಲಯದಿಂದ ಕೂಡ ಸಾಕಷ್ಟು ಆಕ್ಷೇಪಣೆಗಳು, ದೂರುಗಳು ಸಲ್ಲಿಕೆಯಾಗಿವೆ' ಎಂದು ಪ್ರಾಧಿಕಾರ ಪತ್ರದಲ್ಲಿ ತಿಳಿಸಿದೆ.

'ಸರ್ಕಾರದ ಕನ್ನಡ ಅನುಷ್ಠಾನದ ಮನಸ್ಥಿತಿಯ ಬಗ್ಗೆ ಋಣಾತ್ಮಕ ಅಭಿಪ್ರಾಯಗಳು ರೂಪುಗೊಳ್ಳುತ್ತಿವೆ. ಅಧಿಕಾರಿಗಳು ಆಡಳಿತದಲ್ಲಿ ಎಸಗುವ ಲೋಪಗಳಿಗೆ ಪ್ರಜಾ ಸರ್ಕಾರಗಳು ಸಾರ್ವಜನಿಕರ ವಿರೋಧಕ್ಕೆ ಗುರಿಯಾಗಬೇಕಾಗುತ್ತದೆ. ಆದ್ದರಿಂದ ರಾಜ್ಯ ಸರ್ಕಾರದ ಭಾಷಾನೀತಿ ಅನ್ವಯ ಕಾಲಕಾಲಕ್ಕೆ ಕೇಂದ್ರ ಮತ್ತು ರಾಜ್ಯ ಸರ್ಕಾರಗಳು ಕನ್ನಡ ಪರ ಆಜ್ಞೆ –ಆದೇಶಗಳನ್ನು ಕಟ್ಟುನಿಟ್ಟಾಗಿ ಜಾರಿಗೊಳಿಸಬೇಕು. ಇವುಗಳನ್ನು ಉಲ್ಲಂಘಿಸುವ ಅಧಿಕಾರಿಗಳು ಹಾಗೂ ನೌಕರರ ವಿರುದ್ಧ ಕ್ರಮ ಕೈಗೊಳ್ಳಬೇಕು' ಎಂದು ಟಿ.ಎಸ್. ನಾಗಾಭರಣ ಹೇಳಿದ್ದಾರೆ.

## ಪ್ರಮುಖ ಬೇಡಿಕೆಗಳು

- ನಾಮಫಲಕಗಳಲ್ಲಿ ಕನ್ನಡ ಭಾಷೆ ಬಳಕೆಯ ಕುರಿತಂತೆ ಕಾಯ್ದೆ ರೂಪಿಸುವ ಕುರಿತು ತುರ್ತು ನಿರ್ದೇಶನ ನೀಡುವುದು
- ರಾಜ್ಯದ ಖಾಸಗಿ ವಲಯದ ಉದ್ಯೋಗಗಳಲ್ಲಿ ಕನ್ನಡಿಗರಿಗೆ ಪ್ರಾತಿನಿಧ್ಯ ಕಲ್ಪಿಸುವ ಮಸೂದೆಯನ್ನು ಜಾರಿಗೆ ತರುವುದು
- ಹೊಸ ಶಿಕ್ಷಣ ನೀತಿಯ ಅನುಷ್ಠಾನದ ಸಂದರ್ಭದಲ್ಲಿ ಪ್ರಾಥಮಿಕ ಹಂತದಿಂದ ಉನ್ನತ ಶಿಕ್ಷಣದವರೆಗೆ ಕನ್ನಡ ಭಾಷೆಯ ಕಲಿಕೆ ಮತ್ತು ಬೋಧನೆಗೆ ತೊಡಕಾಗದಂತೆ ನಿಯಮಗಳನ್ನು ರೂಪಿಸುವುದು
- ಆಡಳಿತಕ್ಕೆ ಸಂಬಂಧಿಸಿದಂತೆ ಕನ್ನಡದಲ್ಲಿ ಲೋಪವೆಸಗುವ ರಾಜ್ಯ ಸರ್ಕಾರದ ಅಧಿಕಾರಿ ಮತ್ತು ನೌಕರರಿಗೆ 2020 ಜೂ.13ರ ಸುತ್ತೋಲೆ ಅನ್ವಯ ವಾಗ್ದಂಡನೆ, ಬಡ್ತಿ ತಡೆ ಸೇರಿದಂತೆ ನಾಲ್ಕು ಶಿಕ್ಷಾ ಕ್ರಮಗಳನ್ನು ಕಟ್ಟುನಿಟ್ಟಾಗಿ ಜಾರಿಗೊಳಿಸುವುದು
- ತಂತ್ರಜ್ಞಾನದಲ್ಲಿ ಕಡ್ಡಾಯವಾಗಿ ಕನ್ನಡ ಅನುಷ್ಠಾನಕ್ಕೆ ಇ-ಆಡಳಿತ ಹಾಗೂ ಖಜಾನೆ ಇಲಾಖೆಗಳಿಗೆ ನಿರ್ದೇಶನ ನೀಡುವುದು

# ಶ್ಯಾಮ್ ಪ್ರಸಾದ್ ಮುಖರ್ಜಿ ಪುಣ್ಯಸ್ಮರಣೆ

ಪ್ರಜಾವಾಣಿ ವಾರ್ತೆ

**ಬೆಂಗಳೂರು:** ಜನಸಂಘದ ಸಂಸ್ಥಾಪಕ ಶ್ಯಾಮ್ ಪ್ರಸಾದ್ ಮುಖರ್ಜಿಯವರ ಪುಣ್ಯಸ್ಮರಣೆಯ ನಿಮಿತ್ತ ಕಂದಾಯ ಸಚಿವ ಆರ್. ಅಶೋಕ ಅವರು ಪದ್ಮನಾಭನಗರ ವಿಧಾನಸಭಾ ಕ್ಷೇತ್ರದ ವಿವಿಧ ವಾರ್ಡ್‌ಗಳಲ್ಲಿ ಸಸಿ ನೆಟ್ಟರು.

ಕ್ಷೇತ್ರದ ಹೊಸಕೆರೆಹಳ್ಳಿ ವಾರ್ಡ್, ಗೌಡನಪಾಳ್ಯ, ಕುಮಾರಸ್ವಾಮಿ ಬಡಾವಣೆ, ಕರಿಸಂದ್ರ ವಾರ್ಡ್ ಹಾಗೂ ದೇವಗಿರಿಯಲ್ಲಿ ವಿವಿಧ ವರ್ಗದ ಜನರಿಗೆ ದಿನಸಿ ಕಿಟ್ ವಿತರಣೆ ಮಾಡಿದರು.

'ಮುಖರ್ಜಿಯವರು ತಮ್ಮ ಬದುಕಿನುದ್ದಕ್ಕೂ ಪ್ರಖರ ರಾಷ್ಟ್ರೀಯತೆಯನ್ನೇ ಪ್ರತಿಪಾದಿಸಿದ್ದರು. ದೇಶ ವಿಭಜನೆಯ ವೇಳೆ ಅದನ್ನ ಪ್ರಬಲವಾಗಿ ವಿರೋಧಿಸಿದ್ದರು. ಅಖಂಡ ಭಾರತದ ಪರಿಕಲ್ಪನೆಯ ಕನಸು ಉಳ್ಳವರಾಗಿದ್ದರು' ಎಂದು ಅಶೋಕ ಸ್ಮರಿಸಿದರು.

ಶ್ಯಾಮ್‌ಪ್ರಸಾದ್ ಮುಖರ್ಜಿಯವರ ಪುಣ್ಯಸ್ಮರಣೆ ನಿಮಿತ್ತ ಅವರ ಭಾವಚಿತ್ರಕ್ಕೆ ಆರ್. ಅಶೋಕ ಅವರು ಪುಷ್ಪನಮನ ಸಲ್ಲಿಸಿದರು. ಬಿಜೆಪಿ ಮುಖಂಡ ಎನ್.ಆರ್.ರಮೇಶ್ ಮತ್ತಿತರರು ಇದ್ದಾರೆ

ಯಡಿಯೂರು ಸರ್ಕಾರಿ ಪ್ರಥಮ ದರ್ಜೆ ಕಾಲೇಜಿನಲ್ಲಿ ಪದವಿ ಪ್ರಥಮ ವರ್ಷದ ವಿದ್ಯಾರ್ಥಿಗಳಿಗೆ ಸರ್ಕಾರದ ವತಿಯಿಂದ ಟ್ಯಾಬ್ ವಿತರಿಸಲಾಯಿತು.

# ಕೆಆರ್‌ಎಸ್ ಜಲಾಶಯ: ಕ್ರೆಸ್ಟ್‌ಗೇಟ್ ಬದಲಿಸಲು ಕೋವಿಡ್ ಅಡ್ಡಿ

ಪ್ರಜಾವಾಣಿ ವಾರ್ತೆ

**ಶ್ರೀರಂಗಪಟ್ಟಣ:** ಕೆಆರ್‌ಎಸ್ ಜಲಾಶಯಕ್ಕೆ ಮೂರು ದಶಕಗಳ ಹಿಂದೆ ಅಳವಡಿಸಿರುವ ಕ್ರೆಸ್ಟ್‌ಗೇಟ್‌ಗಳನ್ನು ಬದಲಿಸುವ ಪ್ರಕ್ರಿಯೆಗೆ ಕೋವಿಡ್ ಅಡ್ಡಿಯಾಗಿದೆ.

ಜಲಾಶಯದ 134 ಗೇಟ್‌ಗಳನ್ನು ವಿಶ್ವಬ್ಯಾಂಕ್ ನೆರವಿನಿಂದ 'ಜಲಾಶಯ ಪುನಶ್ಚೇತನ ಹಾಗೂ ಅಭಿವೃದ್ಧಿ ಯೋಜನೆ'ಯಡಿ (ಡಿಆರ್‌ಐಪಿ) ₹ 59 ಕೋಟಿ ವೆಚ್ಚದಲ್ಲಿ ಬದಲಿಸುವ ಪ್ರಕ್ರಿಯೆಯ ಪ್ರಾಯೋಗಿಕ ಕಾರ್ಯಕ್ಕೆ ಚಾಲನೆ ನೀಡಲಾಗಿತ್ತು. ಫ್ಯಾಬ್ರಿಕೇಟ್ ಪ್ರಕ್ರಿಯೆ ಕೂಡ ಶುರುವಾಗಿತ್ತು. ಇದಕ್ಕೆ ಕೇಂದ್ರ ಜಲ ಆಯೋಗದ ಒಪ್ಪಿಗೆಯೂ ಸಿಕ್ಕಿತ್ತು. ಕ್ರೆಸ್ಟ್ ಗೇಟ್‌ಗಳನ್ನು ಬದಲಿಸುವ ಗುತ್ತಿಗೆಯನ್ನು ಪಡೆದಿರುವ ಗುಜರಾತ್ ಮೂಲದ ಹಾರ್ಡ್‌ವೇರ್ ಟೂಲ್ಸ್ ಕಂಪನಿ ಎರಡು ವರ್ಷಗಳಲ್ಲಿ ಕೆಲಸ ಪೂರ್ಣಗೊಳಿಸುವುದಾಗಿ ಹೇಳಿತ್ತು.

'ಕೋವಿಡ್ ಪ್ರಕರಣ ಕಾಣಿಸಿಕೊಂಡ 2020ರ ಮಾರ್ಚ್‌ನಿಂದ ಉದ್ದೇಶಿತ ಕೆಲಸ ಸ್ಥಗಿತಗೊಂಡಿದೆ. ಗೇಟ್‌ಗಳ ವೆಲ್ಡಿಂಗ್‌ಗೆ ಬೇಕಾದ ಆಮ್ಲಜನಕ ಪೂರೈಕೆ ಸ್ಥಗಿತಗೊಂಡಿದೆ. ಪಶ್ಚಿಮ ಬಂಗಾಳ ಮತ್ತು ರಾಜಸ್ಥಾನದಿಂದ ಬರಬೇಕಿದ್ದ ಪೂರಕ ಸಾಮಗ್ರಿಗಳ ಸರಬರಾಜು ನಿಂತಿದೆ. ಜತೆಗೆ ತಂತ್ರಜ್ಞರೂ ಸೇರಿದಂತೆ ಅಗತ್ಯ ಮಾನವ ಸಂಪನ್ಮೂಲ ಸಿಗದ ಕಾರಣ ಗೇಟ್‌ಗಳ ಬದಲಿಸುವ ಕೆಲಸ ಶುರು ಮಾಡಲು ಆಗಿಲ್ಲ' ಎಂದು ಕಾವೇರಿ ನೀರಾವರಿ ನಿಗಮದ ಅಧಿಕಾರಿಯೊಬ್ಬರು ಹೇಳಿದರು.

'ಸದ್ಯ ಸಿಂಗಲ್ ಕ್ರೇನ್‌ನಿಂದ 40 ಗೇಟ್‌ಗಳನ್ನು ಚಾಲನೆ ಮಾಡಲಾಗುತ್ತಿದೆ. ಜಲಾಶಯ ನಿರ್ಮಾಣ ಆದಾಗ ಅಳವಡಿಸಿರುವ 48 ಸ್ವಯಂ ಚಾಲಿತ ಗೇಟ್‌ಗಳು ಕೆಲಸ ಮಾಡುತ್ತಿಲ್ಲ. 2 ಲಕ್ಷ ಕ್ಯುಸೆಕ್ ಅಥವಾ ಅದಕ್ಕಿಂತ ಹೆಚ್ಚಿನ ನೀರು ಜಲಾಶಯಕ್ಕೆ ಹರಿದು ಬಂದರೆ ಗೇಟ್‌ಗಳನ್ನು ತೆರೆಯುವುದು ತ್ರಾಸದ ಕೆಲಸ. ಗೇಟ್‌ಗಳನ್ನು ಬದಲಿಸುವ ಪ್ರಕ್ರಿಯೆ ಆಗಲೇಬೇಕು. ಆದರೆ, ಈಗಾಗಲೇ ಜಲಾಶಯಕ್ಕೆ ಹೆಚ್ಚಿನ ಪ್ರಮಾಣದ ನೀರು ಹರಿದು ಬರುತ್ತಿರುವುದರಿಂದ ಮುಂದಿನ ಬೇಸಿಗೆವರೆಗೆ ಕೆಲಸ ಆರಂಭಿಸುವುದು ಅಸಾಧ್ಯ' ಎಂದರು.

ಕೆಆರ್‌ಎಸ್ ಜಲಾಶಯದ ಕ್ರೆಸ್ಟ್‌ಗೇಟ್ ಪರಿಶೀಲನೆ ನಡೆಸಿದ ಅಧಿಕಾರಿಗಳು

## ಕೆಪಿಸಿಸಿ ಹಿಂದುಳಿದ ವರ್ಗಗಳ ವಿಭಾಗದ ಅಧ್ಯಕ್ಷ ರಾಜೀನಾಮೆ

ಪ್ರಜಾವಾಣಿ ವಾರ್ತೆ

**ಬೆಂಗಳೂರು:** ಕೆಪಿಸಿಸಿ ಹಿಂದುಳಿದ ವರ್ಗಗಳ ವಿಭಾಗದ ಅಧ್ಯಕ್ಷ ಸ್ಥಾನಕ್ಕೆ ಎಂ.ಡಿ. ಲಕ್ಷ್ಮಿನಾರಾಯಣ (ಅಣ್ಣಯ್ಯ) ರಾಜೀನಾಮೆ ಸಲ್ಲಿಸಿದ್ದಾರೆ.

ಕೆಪಿಸಿಸಿ ಅಧ್ಯಕ್ಷ ಡಿ.ಕೆ. ಶಿವಕುಮಾರ್ ಅವರಿಗೆ ರಾಜೀನಾಮೆ ಪತ್ರ ಸಲ್ಲಿಸಿರುವ ಅವರು, ಕೋವಿಡ್ ಕಾರಣ ರಾಜ್ಯದಾದ್ಯಂತ ಓಡಾಡಿ ಕಾರ್ಯನಿರ್ವಹಿಸುವುದು ಕಷ್ಟ ಸಾಧ್ಯವಾಗಿರುವ ಕಾರಣ ತಮ್ಮ ಮನವಿಯನ್ನು ಪುರಸ್ಕರಿಸುವಂತೆ ಕೇಳಿಕೊಂಡಿದ್ದಾರೆ.

ತಮ್ಮ ಪತ್ರದಲ್ಲಿ, 'ಹಿಂದುಳಿದ ವರ್ಗಗಳ ವಿಭಾಗದ ರಾಜ್ಯ ಅಧ್ಯಕ್ಷನಾಗಿ ಕಳೆದ ಮೂರೂವರೆ ವರ್ಷಗಳ ಕಾಲ ಪಕ್ಷ ಸಂಘಟನೆಯಲ್ಲಿ ತೊಡಗಿಸಿಕೊಂಡಿದ್ದು, ರಾಜ್ಯದಾದ್ಯಂತ ಸಂಚರಿಸಿ ಹಿಂದುಳಿದ ಸಮುದಾಯಗಳ ಸಂಘಟನೆಗೆ ಒತ್ತು ಕೊಡಲಾಗಿತ್ತು. ಕೋವಿಡ್ ಕಾರಣ ರಾಜ್ಯದಾದ್ಯಂತ ಸಂಚರಿಸಲು ಸಾಧ್ಯವಿಲ್ಲದ ಕಾರಣ ಅಧ್ಯಕ್ಷ ಸ್ಥಾನಕ್ಕೆ ರಾಜೀನಾಮೆ ನೀಡಿ ಬೇರೊಬ್ಬರಿಗೆ ಅವಕಾಶ ನೀಡಬೇಕೆಂದು ಕೋರುವೆ' ಎಂದು ವಿವರಿಸಿದ್ದಾರೆ.

ದೆಹಲಿಗೆ ತೆರಳಿ ಪಕ್ಷದ ವರಿಷ್ಠರೊಂದಿಗೆ ಸಮಾಲೋಚಿಸಿ ವಾಪಸಾಗಿರುವ ಡಿ.ಕೆ. ಶಿವಕುಮಾರ್, ಪ್ರದೇಶ ಕಾಂಗ್ರೆಸ್ ಸಮಿತಿ ಪುನರ್‌ರಚನೆಗೆ ಮುಂದಾಗಿದ್ದಾರೆ. ಬಿಜೆಪಿ ತ್ಯಜಿಸಿ ಕಾಂಗ್ರೆಸ್ ಸೇರಿದ ಕಾಲದಿಂದಲೂ ಲಕ್ಷ್ಮಿನಾರಾಯಣ ಅವರು ಸಿದ್ದರಾಮಯ್ಯ ಆಪ್ತವಲಯದಲ್ಲಿ ಗುರುತಿಸಿಕೊಂಡಿದ್ದರು.

### ನಿಧನ ವಾರ್ತೆ

## ಎಂ.ವಿ.ಅನ್ನಪೂರ್ಣ

**ಬೆಂಗಳೂರು:** ತ್ಯಾಗರಾಜನಗರದ ನಿವಾಸಿ ಎಂ.ವಿ. ಅನ್ನಪೂರ್ಣ (72) ಮಂಗಳವಾರ ನಿಧನರಾದರು.

ಅವರಿಗೆ ಪತಿ, ಐವರು ಪುತ್ರಿಯರು ಇದ್ದಾರೆ. ಟಿ.ಆರ್.ಮಿಲ್ ರುದ್ರಭೂಮಿಯಲ್ಲಿ ಅಂತ್ಯಕ್ರಿಯೆ ನೆರವೇರಿತು ಎಂದು ಕುಟುಂಬದ ಮೂಲಗಳು ತಿಳಿಸಿವೆ.

# ಬಸ್ ಪ್ರಯಾಣಿಕರ ಸಂಖ್ಯೆ ಹೆಚ್ಚಳ

ಪ್ರಜಾವಾಣಿ ವಾರ್ತೆ

**ಬೆಂಗಳೂರು:** ಲಾಕ್‌ಡೌನ್ ಸಡಿಲಗೊಂಡ ಬಳಿಕ ಬಸ್‌ಗಳಲ್ಲಿ ಪ್ರಯಾಣಿಕರ ಸಂಚಾರ ದಿನದಿಂದ ದಿನಕ್ಕೆ ಹೆಚ್ಚಳವಾಗುತ್ತಿದೆ. ಎರಡನೇ ದಿನ ಕೆಎಸ್‌ಆರ್‌ಟಿಸಿಗೆ ₹1.27 ಕೋಟಿ ವರಮಾನ ಸಂಗ್ರಹವಾಗಿದೆ.

ಕೆಎಸ್‌ಆರ್‌ಟಿಸಿ ಬಸ್‌ನಲ್ಲಿ ಸೋಮವಾರ (ಜೂ.21) 1.10 ಲಕ್ಷ ಜನ ಪ್ರಯಾಣಿಸಿದ್ದರು. ₹54.05 ಲಕ್ಷ ವರಮಾನ ಸಂಗ್ರಹವಾಗಿತ್ತು. ಮಂಗಳವಾರ 2.25 ಲಕ್ಷ ಪ್ರಯಾಣಿಕರು ಸಂಚರಿಸಿದ್ದು, ₹1.27 ಕೋಟಿ ವರಮಾನ ಸಂಗ್ರಹವಾಗಿದೆ ಎಂದು ಕೆಎಸ್‌ಆರ್‌ಟಿಸಿ ತಿಳಿಸಿದೆ.

ಬುಧವಾರ 2,172 ಬಸ್‌ಗಳು ವಿವಿಧ ಡಿಪೋಗಳಿಂದ ಕಾರ್ಯಾಚರಣೆಯಾಗಿದ್ದು, ಆಂಧ್ರ ಪ್ರದೇಶ ಮತ್ತು ತೆಲಂಗಾಣಕ್ಕೂ 93 ಬಸ್‌ಗಳ ಸಂಚರಿಸಿವೆ ಎಂದು ವಿವರಿಸಿದೆ.

ಬಿಎಂಟಿಸಿ ಬಸ್‌ಗಳಲ್ಲೂ ಪ್ರಯಾಣಿಕರ ಸಂಖ್ಯೆ ಹೆಚ್ಚಳವಾಗಿದ್ದು, ಸೋಮವಾರ 4.74 ಲಕ್ಷ ಪ್ರಯಾಣಿಕರು ಸಂಚರಿಸಿದ್ದು, ₹45 ಲಕ್ಷ ವರಮಾನ ಸಂಗ್ರಹವಾಗಿತ್ತು. ಮಂಗಳವಾರ 8 ಲಕ್ಷ ಜನರು ಪ್ರಯಾಣಿಸಿದ್ದು, ₹91 ಲಕ್ಷ ವರಮಾನ ಸಂಗ್ರಹವಾಗಿದೆ ಎಂದು ಬಿಎಂಟಿಸಿ ತಿಳಿಸಿದೆ.

## ವಿಮಾನ ನಿಲ್ದಾಣಕ್ಕೆ ವಾಯುವಜ್ರ ಬಸ್

ನಗರದ ನಾಲ್ಕು ಬಸ್ ನಿಲ್ದಾಣಗಳಿಂದ ಕೆಂಪೇಗೌಡ ಅಂತರರಾಷ್ಟ್ರೀಯ ವಿಮಾನ ನಿಲ್ದಾಣಕ್ಕೆ ವಾಯುವಜ್ರ ಬಸ್‌ಗಳ ಸೇವೆಯನ್ನು ಬಿಎಂಟಿಸಿ ಆರಂಭಿಸಿದೆ.

ಎಲೆಕ್ಟ್ರಾನಿಕ್ ಸಿಟಿ ಮತ್ತು ಕೆಂಪೇಗೌಡ ಬಸ್ ನಿಲ್ದಾಣದಿಂದ ವಿಮಾನ ನಿಲ್ದಾಣಕ್ಕೆ ಒಟ್ಟು 119 ಟ್ರಿಪ್‌ಗಳಲ್ಲಿ ಬಸ್‌ಗಳು ಸಂಚರಿಸಲಿವೆ. ಹೆಚ್ಚುವರಿಯಾಗಿ ಬನಶಂಕರಿ ಟಿಟಿಎಂಸಿ ಮತ್ತು ಸ್ಯಾಟಲೈಟ್ ಬಸ್ ನಿಲ್ದಾಣದಿಂದಲೂ 60 ಟ್ರಿಪ್‌ಗಳ ಕಾರ್ಯಾಚರಣೆಯನ್ನು ಗುರುವಾರದಿಂದ (ಜೂ.24) ಆರಂಭಿಸಲಾಗುತ್ತಿದೆ ಎಂದು ಬಿಎಂಟಿಸಿ ತಿಳಿಸಿದೆ.

# ಆನ್‌ಲೈನ್ ಕಲಾಶಿಬಿರಕ್ಕೆ ಅರ್ಜಿ ಆಹ್ವಾನ

ಪ್ರಜಾವಾಣಿ ವಾರ್ತೆ

**ಬೆಂಗಳೂರು:** ಕೋವಿಡ್ ಕಾರಣದಿಂದಾಗಿ ಕರ್ನಾಟಕ ಲಲಿತಕಲಾ ಅಕಾಡೆಮಿಯು ಆನ್‌ಲೈನ್ ಮೂಲಕ ಕಲಾಶಿಬಿರ ಹಮ್ಮಿಕೊಂಡಿದ್ದು, ಇದಕ್ಕೆ ಅರ್ಹ ಕಲಾವಿದರಿಂದ ಅರ್ಜಿ ಆಹ್ವಾನಿಸಿದೆ.

ಶಿಬಿರದಲ್ಲಿ ಭಾಗವಹಿಸಲು ಇಚ್ಛಿಸುವ ಕಲಾವಿದರು ಭರ್ತಿ ಮಾಡಿದ ಅರ್ಜಿಯ ಜತೆಗೆ ಇತ್ತೀಚಿನ 4 ಕಲಾಕೃತಿಗಳ ಛಾಯಾಚಿತ್ರವನ್ನು ಲಗತ್ತಿಸಬೇಕಾಗುತ್ತದೆ. ರಿಜಿಸ್ಟ್ರಾರ್, ಕರ್ನಾಟಕ ಲಲಿತಕಲಾ ಅಕಾಡೆಮಿ, ಕನ್ನಡ ಭವನ, 2ನೇ ಮಹಡಿ, ಜೆ.ಸಿ. ರಸ್ತೆ, ಬೆಂಗಳೂರು–560002 ಈ ವಿಳಾಸಕ್ಕೆ ಜು.7ರ ಒಳಗೆ ಅಂಚೆ ಅಥವಾ ಕೋರಿಯರ್ ಮೂಲಕ ಕಳುಹಿಸಬೇಕು ಎಂದು ಅಕಾಡೆಮಿ ಪ್ರಕಟಣೆಯಲ್ಲಿ ತಿಳಿಸಿದೆ.

**ವಿವರಕ್ಕೆ:** www.lalitkalakarnataka.org

### ನಗರದಲ್ಲಿ ಇಂದು

**ಉಚಿತ ಲಸಿಕಾ ಅಭಿಯಾನ:** ಉದ್ಘಾಟನೆ: ಸಚಿವ ಡಾ.ಕೆ. ಸುಧಾಕರ್, ಮುಖ್ಯ ಅತಿಥಿ: ಪ್ರಭುಲಿಂಗ ಕೆ. ನಾವದಗಿ, ಅಧ್ಯಕ್ಷತೆ: ಶ್ರೀನಿವಾಸ ಬಾಬು, ಆಯೋಜನೆ ಹಾಗೂ ಸ್ಥಳ: ಕರ್ನಾಟಕ ರಾಜ್ಯ ಬಾರ್ ಕೌನ್ಸಿಲ್, ಮಧ್ಯಾಹ್ನ 12

**ವಚನ ಗಾನ ಯಾನ ಮಂಗಲ ಸಮಾರೋಪ:** ಆಯೋಜನೆ: ಪ್ರಪುಣ್ಯಾ ಸಂಗೀತ ವಿದ್ಯಾಲಯ, ವಚನಜ್ಯೋತಿ ಬಳಗ, ಸಮಾರೋಪ ನುಡಿ: ಎಸ್. ಪಿನಾಕಪಾಣಿ, ಅಭಿನಂದನಾ ಪತ್ರ ವಿತರಣೆ: ಸಿ.ಎಸ್. ಶಿವಕುಮಾರಸ್ವಾಮಿ, ಅಧ್ಯಕ್ಷತೆ: ಯೋಗಾಚಾರ್ಯ ಅಣ್ಣಪ್ಪ ಬೆಳ್ಳೆ, ಪ್ರಾಸ್ತಾವಿಕ ನುಡಿ: ಪಂ. ಈರಯ್ಯ ಚಿಕ್ಕಮಠ, ಸ್ಥಳ: 584, 4ನೇ ಎ ತಿರುವು, 8ನೇ ಮುಖ್ಯರಸ್ತೆ, ಹಂಪಿನಗರ, ವಿಜಯನಗರ 2ನೇ ಹಂತ, ಸಂಜೆ 4

**ಗಮಕ ಕಾರ್ಯಕ್ರಮ:** ಜಯಲಕ್ಷ್ಮಮ್ಮ–ಬಾಪೂ ರಾಮಣ್ಣ ದತ್ತಿ, ವಿಷಯ: ಹರಿಶ್ಚಂದ್ರ ಕಾವ್ಯದ ಭಾಗ, ಗಮಕ ವಾಚನ: ಮಂಜುಳಾ ಮರಾಠೆ, ವ್ಯಾಖ್ಯಾನ: ಶಾಂತಾ ಗೋಪಾಲ್, ಉಪಸ್ಥಿತಿ: ಆರ್. ಲಕ್ಷ್ಮೀನಾರಾಯಣ, ಬಿ.ಸಿ. ರಾಜಕುಮಾರ್, ಆಯೋಜನೆ: ಬಿ.ಎಂ.ಶ್ರೀ. ಪ್ರತಿಷ್ಠಾನ, ಸಂಜೆ 4.30 (ಆನ್‌ಲೈನ್ ಕಾರ್ಯಕ್ರಮ)

**ವಿಶೇಷ ಉಪನ್ಯಾಸ:** 75ನೇ ಭಾರತ ಸ್ವಾತಂತ್ರ್ಯ ಅಮೃತ ಮಹೋತ್ಸವದ ಅಂಗವಾಗಿ, ವಿಚಾರ ಕಲರವ–25, ವಿಷಯ: 'ಕೊರೊನಾ–19ರ ಸಂದರ್ಭದಲ್ಲಿ ಬೌದ್ಧಿಕಸ್ವಾಮ್ಯ ಹಕ್ಕುಗಳ ಪ್ರಾಮುಖ್ಯತೆ, ಉಪನ್ಯಾಸಕರು: ಪ್ರತಿಭಾ ಎಂ. ಸಿಂಗ್, ಉಪಸ್ಥಿತಿ: ಕೆ.ಆರ್. ವೇಣುಗೋಪಾಲ್, ಆಯೋಜನೆ: ಎನ್‌ಎಸ್‌ಎಸ್ ಘಟಕ, ಬೆಂಗಳೂರು ವಿಶ್ವವಿದ್ಯಾಲಯ, ಸಂಜೆ 5.30 (ಆನ್‌ಲೈನ್ ಕಾರ್ಯಕ್ರಮ)

## ಮೂವರು ಮಕ್ಕಳ ಮೇಲೆ ತಂದೆ ಹಲ್ಲೆ

ಬೆಂಗಳೂರು: ಮೂವರು ಮಕ್ಕಳ ಮೇಲೆ ಹಲ್ಲೆ ನಡೆಸಿರುವ ಆರೋಪದಡಿ ತಮಿಳುನಾಡಿನ ಸೆಲ್ವ (45) ಹಾಗೂ ಪತ್ನಿ ಸತ್ಯಾ (35) ಎಂಬುವರನ್ನು ಜೆ.ಪಿ.ನಗರ ಪೊಲೀಸರು ವಶಕ್ಕೆ ಪಡೆದಿದ್ದಾರೆ.

'ಸೆಲ್ವ ಇಬ್ಬರನ್ನು ವಿವಾಹವಾಗಿದ್ದ. ಮೊದಲ ಪತ್ನಿ ಅಂಜಲಿ ಕೆಲ ತಿಂಗಳ ಹಿಂದಷ್ಟೇ ನಿಧನರಾಗಿದ್ದರು. ಮೂರು ಮಕ್ಕಳನ್ನು ಜೆ.ಪಿ.ನಗರದಲ್ಲಿದ್ದ ಎರಡನೇ ಹೆಂಡತಿ ಸತ್ಯಾ ಮನೆಗೆ ಕರೆದೊಯ್ದಿದ್ದ. ಮಕ್ಕಳು ಸರಿಯಾಗಿ ಮಾತು ಕೇಳುತ್ತಿಲ್ಲ ಎಂದು ಹೆಂಡತಿ ಚಾಡಿ ಹೇಳಿದ್ದಳು'.

ಇದನ್ನು ನಂಬಿದ್ದ ಸೆಲ್ವ, ಅಡುಗೆ ಮನೆಯಲ್ಲಿದ್ದ ವಸ್ತುಗಳಿಂದ ಹೊಡೆದು, ದೇಹದ ಮೇಲೆ ಸುಟ್ಟ ರೀತಿಯ ಗಾಯಗಳನ್ನು ಮಾಡಿದ್ದ. ಬೇರೆಯವರಿಗೆ ವಿಚಾರ ತಿಳಿಸದಂತೆ ಹೆದರಿಸಿದ್ದ. ಮಕ್ಕಳು ನೋವು ತಾಳಲಾರದೆ, ಮನೆಯಿಂದ ಹೊರಬಂದಾಗ ಸ್ಥಳೀಯರು ಅವರನ್ನು ರಕ್ಷಿಸಿ, ದೂರು ನೀಡಿದರು' ಎಂದು ಪೊಲೀಸರು ತಿಳಿಸಿದರು.

### ಜುಲೈ 1ರಿಂದ ಕಸ ನಿರ್ವಹಣೆ ನಿಯಮಿತ ಕಂಪನಿ ಕಾರ್ಯಾರಂಭವಾಗುವ ನಿರೀಕ್ಷೆ

# 'ಕಸ ವಿಲೇವಾರಿ: ಶುಲ್ಕ ಸಂಗ್ರಹ ಪ್ರಸ್ತಾಪವಿಲ್ಲ'

ಪ್ರಜಾವಾಣಿ ವಾರ್ತೆ

ಬೆಂಗಳೂರು: ನಗರದಲ್ಲಿ ಕಸ ನಿರ್ವಹಣೆಗಾಗಿಯೇ ರಚನೆಯಾಗಿರುವ 'ಬೆಂಗಳೂರು ಕಸ ನಿರ್ವಹಣೆ ನಿಯಮಿತ' ಕಂಪನಿ ಜುಲೈ 1ರಿಂದ ಕಾರ್ಯಾರಂಭವಾಗುವ ನಿರೀಕ್ಷೆ ಇದ್ದು, ಕಸ ನಿರ್ವಹಣೆಗೆ ಪ್ರತ್ಯೇಕವಾಗಿ ಬಳಕೆದಾರರ ಶುಲ್ಕ ಸಂಗ್ರಹಿಸುವ ಪ್ರಸ್ತಾವ ಮತ್ತೆ ಚರ್ಚೆಯಾಗುತ್ತಿದೆ. ಆದರೆ, 'ಇಂತಹ ಯಾವುದೇ ಪ್ರಸ್ತಾಪ ಕಂಪನಿಯ ಮುಂದಿಲ್ಲ' ಎಂದು ಕಂಪನಿಯ ಹಂಗಾಮಿ ಕಾರ್ಯನಿರ್ವಾಹಕ ಅಧಿಕಾರಿ (ಸಿಇಒ) ಗೌರವ್ ಗುಪ್ತ ಸ್ಪಷ್ಟಪಡಿಸಿದ್ದಾರೆ.

ಸಾಂದರ್ಭಿಕ ಚಿತ್ರ

ಸುದ್ದಿಗಾರರ ಜೊತೆ ಬುಧವಾರ ಮಾತನಾಡಿದ ಅವರು, 'ಜನರು ಈಗ ಕ್ಲಿಷ್ಟಕರ ಸನ್ನಿವೇಶ ಎದುರಿಸುತ್ತಿದ್ದಾರೆ. ಇಂತಹ ಪರಿಸ್ಥಿತಿಯಲ್ಲಿ ಕಸ ನಿರ್ವಹಣೆಗಾಗಿ ಬಳಕೆದಾರರ ಶುಲ್ಕ ಸಂಗ್ರಹಿಸುವ ಸಾಧ್ಯತೆ ಇಲ್ಲ' ಎಂದರು.

'ಕಂಪನಿಗೆ ಪೂರ್ಣಪ್ರಮಾಣದ ಸಿಇಒ ನೇಮಕ ಮಾಡುವ ಪ್ರಕ್ರಿಯೆ ನಡೆಯುತ್ತಿದೆ. ಅರ್ಹ ಅಭ್ಯರ್ಥಿಯ ಆಯ್ಕೆಗಾಗಿ ಪರಿಶೋಧನಾ ಸಮಿತಿಯನ್ನೂ ರಚಿಸಲಾಗಿದೆ. ಕಂಪನಿಯ ಕಾರ್ಯಾಚರಣೆಗೆ ಅಗತ್ಯವಿರುವ ಸಿಬ್ಬಂದಿಯನ್ನು ಬಿಬಿಎಂಪಿಯಿಂದ ನಿಯೋಜನೆ ಮಾಡಿಕೊಳ್ಳುವ ಪ್ರಕ್ರಿಯೆ ನಡೆಯುತ್ತಿದೆ. ಅಧಿಕಾರಿಗಳು ಹಾಗೂ ಸಿಬ್ಬಂದಿಯ ಪಟ್ಟಿಯೂ ಸಿದ್ಧವಾಗಿದೆ. ಕಾಂಪ್ಯಾಕ್ಟರ್, ಆಟೋಟಿಪ್ಪರ್ ಸೇರಿದಂತೆ ಕಸ ನಿರ್ವಹಣೆಯ ಪರಿಕರಗಳನ್ನು ಬಿಬಿಎಂಪಿಯಿಂದ ಹಸ್ತಾಂತರಿಸುವ ಪ್ರಕ್ರಿಯೆಯೂ ಪ್ರಗತಿಯಲ್ಲಿದೆ' ಎಂದು ಅವರು 'ಪ್ರಜಾವಾಣಿ'ಗೆ ತಿಳಿಸಿದರು.

'ಕಂಪನಿಗೆ ಸಿಇಒ ನೇಮಕಗೊಂಡ ಬಳಿಕ, ಅವರ ನೇತೃತ್ವದ ತಂಡವು ಕಸ ವಿಲೇವಾರಿ ವ್ಯವಸ್ಥೆಯಲ್ಲಿ ತರಬಹುದಾದ ಸುಧಾರಣೆಗಳ ಬಗ್ಗೆ ಪ್ರಸ್ತಾವಗಳನ್ನು ಸಿದ್ಧಪಡಿಸಲಿದೆ. ಕಂಪನಿಯ ಆಡಳಿತ ಮಂಡಳಿಯ ಒಪ್ಪಿಗೆ ಸಿಕ್ಕಿದ ಬಳಿಕ ಆ ಪ್ರಸ್ತಾವಗಳನ್ನು ಜಾರಿಗೊಳಿಸಲಾಗುತ್ತದೆ' ಎಂದು ಮಾಹಿತಿ ನೀಡಿದರು.

ಕಂಪನಿಯು ವಸಂತನಗರದ ತಿಮ್ಮಯ್ಯ ರಸ್ತೆ ಪಕ್ಕದಲ್ಲಿರುವ ಬಿಬಿಎಂಪಿ ಕಟ್ಟಡದ ಎರಡನೇ ಮಹಡಿಯಲ್ಲಿ ಶೀಘ್ರವೇ ತನ್ನ ಕಚೇರಿಯನ್ನು ಆರಂಭಿಸಲಿದೆ.

2019ರ ಜು.30ರಂದು ಪಾಲಿಕೆ ಸಭೆಯಲ್ಲಿ ಅಂಗೀಕಾರಗೊಂಡ ಬಿಬಿಎಂಪಿಯ ಪೌರ ಕಸ ನಿರ್ವಹಣೆ ಉಪನಿಯಮಗಳ ಅಧಿಸೂಚನೆಯು ರಾಜ್ಯಪತ್ರದಲ್ಲಿ 2020ರ ಜೂನ್ 4ರಂದು ಪ್ರಕಟವಾಗಿದೆ. ನಿತ್ಯ 100 ಕೆ.ಜಿಗಿಂತ ಕಡಿಮೆ ಕಸ ಉತ್ಪಾದಿಸುವ ಮನೆಗಳು /ಕಟ್ಟಡ ಸಮುಚ್ಚಯಗಳು ಮತ್ತು 100 ಕೆ.ಜಿ. ಗಿಂತ ಕಡಿಮೆ ಕಸ ಉತ್ಪಾದಿಸುವ ಹಾಗೂ 5000 ಚದರ ಅಡಿಗಿಂತ ಕಡಿಮೆ ವಿಸ್ತೀರ್ಣದ ವಾಣಿಜ್ಯ ಮತ್ತು ಇತರೆ ಕಟ್ಟಡಗಳಿಗೆ ಇದರ ನಿಯಮ 15 ಇ ಮತ್ತು ಜೆಡ್ ಎಫ್ ಪ್ರಕಾರ ಬಳಕೆದಾರರ ಶುಲ್ಕ ನಿಗದಿ ಮಾಡಲಾಗಿದೆ.

ಕಸ ನಿರ್ವಹಣೆಗೆ ಬಳಕೆದಾರರ ಶುಲ್ಕವನ್ನು ವಿದ್ಯುತ್ ಬಿಲ್ ಜೊತೆಗೆ ಸಂಗ್ರಹಿಸುವ ಪ್ರಸ್ತಾವವನ್ನು ಬಿಬಿಎಂಪಿ 2020ರ ಡಿಸೆಂಬರ್‌ನಲ್ಲಿ ಸಿದ್ಧಪಡಿಸಿತ್ತು. ಇದಕ್ಕೆ ತೀವ್ರ ವಿರೋಧ ವ್ಯಕ್ತವಾಗಿದ್ದರಿಂದ ಈ ಪ್ರಸ್ತಾವ ಜಾರಿಯಾಗಿರಲಿಲ್ಲ.

## ಸುದ್ದಿ 2 ನಿಮಿಷ

### ಮಕ್ಕಳ ಸಮೀಕ್ಷೆ: ಸಭೆ ನಡೆಸಲು ಹೈಕೋರ್ಟ್ ನಿರ್ದೇಶನ

ಬೆಂಗಳೂರು: ಶಾಲೆಯಿಂದ ಹೊರಗುಳಿದ ಮಕ್ಕಳ ಬಗ್ಗೆ ಸಮೀಕ್ಷೆ ನಡೆಸಲಾಗಿದೆಯೇ ಎಂಬುದನ್ನು ಖಚಿಪಡಿಸಿಕೊಳ್ಳಲು ಅಮಿಕಸ್ ಕ್ಯೂರಿ ಸೇರಿದಂತೆ ಎಲ್ಲಾ ಸಹಭಾಗಿ ಸಂಸ್ಥೆಗಳ ಸಭೆ ನಡೆಸುವಂತೆ ರಾಜ್ಯ ಸರ್ಕಾರಕ್ಕೆ ಹೈಕೋರ್ಟ್ ನಿರ್ದೇಶನ ನೀಡಿದೆ.

ಆರ್‌ಟಿಇ ಕಾಯ್ದೆ ಸಮರ್ಪಕ ಅನುಷ್ಠಾನದ ಕುರಿತು ಸ್ವಯಂ ಪ್ರೇರಿತ ಅರ್ಜಿ ದಾಖಲಿಸಿಕೊಂಡು ವಿಚಾರಣೆ ನಡೆಸುತ್ತಿರುವ ಮುಖ್ಯ ನ್ಯಾಯಮೂರ್ತಿ ಎ.ಎಸ್. ಓಕಾ ನೇತೃತ್ವದ ವಿಭಾಗೀಯ ಪೀಠ, ಈ ಆದೇಶ ನೀಡಿತು.



'ಬಿಬಿಎಂಪಿ ಮುಖ್ಯ ಆಯುಕ್ತರು ನಗರಾಭಿವೃದ್ಧಿ ಇಲಾಖೆ ಹೆಚ್ಚುವರಿ ಮುಖ್ಯ ಕಾರ್ಯದರ್ಶಿಗೆ ನೀಡಿರುವ ಪತ್ರವನ್ನು ಗಮನಿಸಿದರೆ ಸಮೀಕ್ಷೆಯ ಉದ್ದೇಶವನ್ನು ಪಾಲಿಕೆ ಇನ್ನೂ ಅರ್ಥ ಮಾಡಿಕೊಂಡಿಲ್ಲ' ಎಂದು ಪೀಠ ಅಭಿಪ್ರಾಯಪಟ್ಟಿತು.

'ಸಭೆ ನಡೆಸದಿದ್ದರೆ, ಸಮೀಕ್ಷೆ ಕಾರ್ಯವನ್ನು ಬಿಬಿಎಂಪಿ ನಡೆಸಿದೆಯೇ ಎಂಬುದನ್ನು ಖಚಿತಪಡಿಸಿಕೊಳ್ಳಲು ನಗರಾಭಿವೃದ್ಧಿ ಇಲಾಖೆಗೆ ನಿರ್ದೇಶನ ನೀಡಲು ಮುಂದಾಗಬೇಕಾಗುತ್ತದೆ' ಎಂದು ಪೀಠ ತಿಳಿಸಿತು.

ರಾಜ್ಯ ಸರ್ಕಾರ ಅಥವಾ ಯಾವುದೇ ಸ್ಥಳೀಯ ಪ್ರಾಧಿಕಾರ ನಡೆಸುತ್ತಿರುವ ಸಮೀಕ್ಷೆಯಲ್ಲಿ ದೋಷಗಳು ಕಂಡು ಬಂದರೆ ಮೆಮೊ ಸಲ್ಲಿಸಲು ಅಮಿಕಸ್ ಕ್ಯೂರಿ ಅವರಿಗೆ ಪೀಠ ಅನುಮತಿ ನೀಡಿತು. ವಿಚಾರಣೆಯನ್ನು ಜುಲೈ 19ಕ್ಕೆ ಮುಂದೂಡಿತು.

### ಅರವಿಂದ ಬೆಲ್ಲದ ಕರೆ ಕದ್ದಾಲಿಕೆ ವಿಚಾರಣಾಧಿಕಾರಿ ದಿಢೀರ್ ಬದಲು

ಬೆಂಗಳೂರು: ಶಾಸಕ ಅರವಿಂದ ಬೆಲ್ಲದ ಅವರ ಕರೆ ಕದ್ದಾಲಿಕೆ ಮಾಡಿರುವ ಪ್ರಕರಣದ ವಿಚಾರಣೆ ನಡೆಸುತ್ತಿದ್ದ ಅಧಿಕಾರಿಯನ್ನು ದಿಢೀರ್ ಬದಲಾಯಿಸಲಾಗಿದೆ.

ಪ್ರಕರಣದ ವಿಚಾರಣೆ ನಡೆಸುತ್ತಿದ್ದ ಕಬ್ಬನ್ ಪಾರ್ಕ್ ಠಾಣೆಯ ಎಸಿಪಿ ಯತಿರಾಜ್ ಅವರ ಸ್ಥಾನಕ್ಕೆ ಶೇಷಾದ್ರಿಪುರ ಉಪವಿಭಾಗದ ಎಸಿಪಿ ಎಂ.ಜೆ. ಪೃಥ್ವಿ ಅವರನ್ನು ನಿಯೋಜಿಸಿ, ವಿಚಾರಣೆಯ ಹೊಣೆಗಾರಿಕೆ ನೀಡಲಾಗಿದೆ. ಎಚ್.ಡಿ.ಕುಮಾರಸ್ವಾಮಿ ಮುಖ್ಯಮಂತ್ರಿಯಾಗಿದ್ದ ಸಂದರ್ಭದಲ್ಲಿ ನಡೆದಿದ್ದ ಕರೆಗಳ ಕದ್ದಾಲಿಕೆ ಪ್ರಕರಣದಲ್ಲಿ ಯತಿರಾಜ್ ಅವರನ್ನು ಸಿಬಿಐ ವಿಚಾರಣೆ ನಡೆಸಿತ್ತು. ಕರೆ ಕದ್ದಾಲಿಕೆಗೆ ಸಹಕರಿಸಿದ್ದ ಆರೋಪವೂ ಯತಿರಾಜ್ ಅವರ ಮೇಲಿತ್ತು. ಈ ಕಾರಣದಿಂದಲೇ ವಿಚಾರಣಾಧಿಕಾರಿಯನ್ನು ಬದಲಿಸಲಾಗಿದೆ ಎನ್ನಲಾಗಿದೆ.

**ಬೆಲ್ಲದಗೆ ನೋಟಿಸ್:** 'ವಿಚಾರಣೆಗೆ ಬರುವಂತೆ ಬೆಲ್ಲದ ಅವರಿಗೆ ನೋಟಿಸ್ ಜಾರಿ ಮಾಡಲಾಗಿದೆ' ಎಂದೂ ಮೂಲಗಳು ತಿಳಿಸಿವೆ.

**ಸಹಕಾರ:** 'ಕರೆ ಕದ್ದಾಲಿಕೆ ಆಗಿರುವ ಬಗ್ಗೆ ಗೃಹ ಇಲಾಖೆಗೆ ಸಲ್ಲಿಸಿದ್ದ ದೂರಿನನ್ವಯ ತನಿಖೆ ನಡೆಯುತ್ತಿದ್ದು, ಇದಕ್ಕೆ ಸಂಪೂರ್ಣ ಸಹಕಾರ ನೀಡುತ್ತಿದ್ದೇನೆ. ಆದರೆ, ನಾನು ದೂರು ಹಿಂಪಡೆಯುತ್ತಿದ್ದೇನೆ ಎಂಬ ವದಂತಿ ಹರಿದಾಡುತ್ತಿರುವುದು ನನ್ನ ಗಮನಕ್ಕೆ ಬಂದಿದೆ. ಅದು ಸತ್ಯಕ್ಕೆ ದೂರ. ಸಂಪೂರ್ಣ ತನಿಖೆಯಾಗಿ ಸತ್ಯ ಹೊರಬರಬೇಕಿದೆ' ಎಂದು ಬೆಲ್ಲದ ಟ್ವೀಟ್ ಮಾಡಿದ್ದಾರೆ.

## ಅಗ್ರಿ ಗೋಲ್ಡ್ ಹಗರಣ ಸುಪ್ರೀಂ ಕೋರ್ಟ್‌ಗೆ ಅರ್ಜಿ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಹಲವು ರಾಜ್ಯಗಳಿಗೆ ವ್ಯಾಪಿಸಿರುವ ಅಗ್ರಿ ಗೋಲ್ಡ್ ಬಹುಕೋಟಿ ಹಗರಣದ ಸಂಬಂಧ ಕೆಲ ನಿರ್ದೇಶನಗಳನ್ನು ಕೋರಿ ಸುಪ್ರೀಂ ಕೋರ್ಟ್‌ಗೆ ಅರ್ಜಿ ಸಲ್ಲಿಸಲಾಗುವುದು ಎಂದು ಹೈಕೋರ್ಟ್‌ಗೆ ರಾಜ್ಯ ಸರ್ಕಾರ ಮಾಹಿತಿ ನೀಡಿದೆ.

ಠೇವಣಿದಾರರ ಪರವಾಗಿ ಗ್ರಾಹಕರು ಮತ್ತು ಏಜೆಂಟರ ಕಲ್ಯಾಣ ಸಂಘ ಸಲ್ಲಿಸಿದ್ದ ಸಾರ್ವಜನಿಕ ಹಿತಾಸಕ್ತಿ ಅರ್ಜಿಯನ್ನು ಮುಖ್ಯ ನ್ಯಾಯಮೂರ್ತಿ ಎ.ಎಸ್. ಓಕಾ ನೇತೃತ್ವದ ವಿಭಾಗೀಯ ಪೀಠ ವಿಚಾರಣೆ ನಡೆಸುತ್ತಿದೆ.

ಠೇವಣಿದಾರರ ಹಿತಾಸಕ್ತಿ ಸಂರಕ್ಷಣೆ (ಕೆಪಿಐಡಿ) ಕಾಯ್ದೆಯಡಿ ರಚನೆಯಾಗಿರುವ ಸಕ್ಷಮ ಪ್ರಾಧಿಕಾರದ ಮುಖ್ಯಸ್ಥ ಹರ್ಷಗುಪ್ತ ಅವರು ವಿಡಿಯೊ ಕಾನ್ಫರೆನ್ಸ್ ಮೂಲಕ ಬುಧವಾರ ವಿಚಾರಣೆಗೆ ಹಾಜರಾಗಿದ್ದರು.

'ಐದು ರಾಜ್ಯಗಳಲ್ಲಿ ಈ ಕಂಪನಿಯ ಹೂಡಿಕೆದಾರರಿದ್ದಾರೆ. ಆಯಾ ರಾಜ್ಯ ಸರ್ಕಾರಗಳು ಮತ್ತು ಅಲ್ಲಿನ ನ್ಯಾಯಾಲಯಗಳು ವಿಭಿನ್ನ ರೀತಿಯಲ್ಲಿ ಆದೇಶ ಹೊರಡಿಸುತ್ತಿವೆ. ಕರ್ನಾಟಕದಲ್ಲಿದ್ದ ಅಗ್ರಿ ಗೋಲ್ಡ್ ಕಂಪನಿಗೆ ಸೇರಿದ ಆಸ್ತಿಯನ್ನು ಮುಟ್ಟುಗೋಲು ಹಾಕಿಕೊಳ್ಳಲು ತೆಲಂಗಾಣ ಸರ್ಕಾರ ಆದೇಶ ಹೊರಡಿಸಿದೆ' ಎಂದು ಅವರು ವಿವರಿಸಿದರು.

'ಹೀಗಾಗಿ, ಪ್ರಕರಣದಲ್ಲಿ ಒಮ್ಮತದ ತನಿಖೆ ನಡೆಸಲು ಯಾವುದಾದರೊಂದು ಸರ್ಕಾರವನ್ನು ನೋಡಲ್ ಆಗಿ ನೇಮಿಸುವ ಅಗತ್ಯವಿದೆ. ಈ ಸಂಬಂಧ ನಿರ್ದೇಶನ ನೀಡಲು ಕೋರಿ ಸುಪ್ರೀಂ ಕೋರ್ಟ್‌ಗೆ ಅರ್ಜಿ ಸಲ್ಲಿಸಲು ನಿರ್ಧರಿಸಲಾಗಿದೆ' ಎಂದು ಹೇಳಿದರು.

ತೆಲಂಗಾಣ ಮತ್ತು ಆಂಧ್ರ ಪ್ರದೇಶ ಸರ್ಕಾರಗಳು ಹೊರಡಿಸಿರುವ ಆದೇಶಗಳ ಪ್ರತಿಗಳನ್ನು ಸಲ್ಲಿಸುವಂತೆ ನಿರ್ದೇಶನ ನೀಡಿದ ನ್ಯಾಯಪೀಠವು, ವಿಚಾರಣೆಯನ್ನು ಜುಲೈ 6ಕ್ಕೆ ಮುಂದೂಡಿತು.

ಅಗ್ರಿ ಗೋಲ್ಡ್ ಕಂಪನಿಯ ಒಟ್ಟು 32 ಲಕ್ಷ ಹೂಡಿಕೆದಾರರಲ್ಲಿ 8.50 ಲಕ್ಷ ಮಂದಿ ಕರ್ನಾಟಕದ ವಿವಿಧ ಶಾಖೆಗಳಲ್ಲಿ ಹೂಡಿಕೆ ಮಾಡಿದವರಾಗಿದ್ದಾರೆ.

## ಕಳಪೆ ದಿನಸಿ ವಿತರಣೆ: ಕಾರ್ಮಿಕರ ಅಸಮಾಧಾನ

ಪ್ರಜಾವಾಣಿ ವಾರ್ತೆ

ಬೊಮ್ಮನಹಳ್ಳಿ: ಲಾಕ್‌ಡೌನ್ ಕಾರಣ, ರಾಜ್ಯ ಕಟ್ಟಡ ಮತ್ತು ಇತರೆ ನಿರ್ಮಾಣ ಕಾರ್ಮಿಕರ ಕಲ್ಯಾಣ ಮಂಡಳಿಯಿಂದ ನೋಂದಾಯಿತ ಕಟ್ಟಡ ನಿರ್ಮಾಣ ಕಾರ್ಮಿಕರಿಗೆ ನೀಡುತ್ತಿರುವ ದಿನಸಿ ಕಿಟ್ ಕಳಪೆಯಾಗಿದೆ ಎಂದು ಕಾರ್ಮಿಕರು ಅಸಮಾಧಾನ ವ್ಯಕ್ತಪಡಿಸಿದ್ದಾರೆ.

ಬೊಮ್ಮನಹಳ್ಳಿ ಭಾಗದಲ್ಲಿ ಕಾರ್ಮಿಕರಿಗೆ ನೀಡಲಾಗುತ್ತಿರುವ ದಿನಸಿ ಪದಾರ್ಥ ಬಳಕೆಗೆ ಯೋಗ್ಯವಾಗಿಲ್ಲ ಎಂಬ ದೂರು ಕೇಳಿ ಬಂದಿದೆ.

5 ಕೆಜಿ ಅಕ್ಕಿ, 2 ಕೆಜಿ ಗೋದಿ ಹಿಟ್ಟು, ಬೇಳೆ, ರವೆ, ಅವಲಕ್ಕಿ, ಉಪ್ಪು, ಸಕ್ಕರೆ ತಲಾ ಕೆಜಿ, 1 ಲೀಟರ್ ಅಡುಗೆ ಎಣ್ಣೆ, 200 ಗ್ರಾಂ ಸಾಂಬಾರ್ ಪುಡಿ, 100 ಗ್ರಾಂ ಖಾರದ ಪುಡಿ ಸೇರಿದಂತೆ ಒಟ್ಟು ಹತ್ತು ಪದಾರ್ಥಗಳ ಕಿಟ್ ನೀಡಲಾಗುತ್ತಿದೆ. ಇದರಲ್ಲಿ ಅಕ್ಕಿಯನ್ನು ಮಂಡಳಿಯು ಸರ್ಕಾರದಿಂದ ಖರೀದಿಸಿ ನೀಡಲಾಗುತ್ತಿದೆ ಎಂದು ಕಾರ್ಮಿಕರು ಹೇಳಿದ್ದಾರೆ.

ಕಟ್ಟಡ ಕಾರ್ಮಿಕರಿಗೆ ನೀಡಲಾಗಿರುವ ಕಳಪೆ ಗುಣಮಟ್ಟದ ತೊಗರಿ ಬೇಳೆ

ದಿನಸಿ ಕಿಟ್ ತಯಾರಿಸಲು ವಿವಿಧ ಸಂಸ್ಥೆಗಳಿಗೆ ಆರು ಸಂಸ್ಥೆಗಳಿಗೆ ಟೆಂಡರ್ ನೀಡಲಾಗಿದೆ. 'ವೈಟ್ ಪೆಟಲ್ಸ್' ಎಂಬ ಸಂಸ್ಥೆಯಿಂದ ಬಂದ ದಿನಸಿಯನ್ನು ವಿತರಿಸುವಾಗ ಇದು ಬೆಳಕಿಗೆ ಬಂದಿದೆ.

'ಕಲ್ಯಾಣ ಮಂಡಳಿಯಿಂದ ನೀಡಲಾಗಿರುವ ದಿನಸಿ ಪದಾರ್ಥ ಬಳಸಲು ಸಾಧ್ಯವೇ ಇಲ್ಲ, ಇದನ್ನು ಕೊಟ್ಟಿದ್ದಾದರೂ ಯಾಕೆ? ಎಂದು ಕಟ್ಟಡ ಕಾರ್ಮಿಕ ಕೃಷ್ಣಮೂರ್ತಿ ಅಸಮಾಧಾನ ವ್ಯಕ್ತಪಡಿಸಿದರು.

'ಅನ್ನ ಮಾಡಲು ಅಕ್ಕಿಯನ್ನು ತೊಳೆಯುತ್ತಿದ್ದಂತೆ ಅಕ್ಕಿ ಪೂರ್ತಿ ನುಚ್ಚಾಯಿತು, ಬೇಳೆಕಾಳು ಎಷ್ಟು ಬೇಯಿಸಿದರೂ ಬೇಯುವುದಿಲ್ಲ, ರವೆಯಲ್ಲಿ ಹುಳುಗಳು ಇವೆ. ಇದನ್ನು ತಿನ್ನುವುದಾದರೂ ಹೇಗೆ?' ಎಂದು ಕಟ್ಟಡ ಕಾರ್ಮಿಕ ಮಾಧು ಪ್ರಶ್ನಿಸಿದರು.

ಕಟ್ಟಡ ನಿರ್ಮಾಣ ಕಾರ್ಮಿಕರ ಸಂಘಟನೆಗಳ ಸಮನ್ವಯ ಸಮಿತಿ ಸಂಚಾಲಕ ಕೆ.ಮಹಾಂತೇಶ್ ಪ್ರತಿಕ್ರಿಯಿಸಿ 'ಕಟ್ಟಡ ಕಾರ್ಮಿಕ ಸಂಘಟನೆಗಳ ಪರವಾಗಿ ನಾವು, ರೇಷನ್ ಕಿಟ್ ಬದಲು ನಗದು ವರ್ಗಾವಣೆ ಮಾಡಬೇಕೆಂದು ಬೇಡಿಕೆ ಸಲ್ಲಿಸಿದ್ದೆವು. ಇದರಿಂದ ಕಾರ್ಮಿಕರು ತಮಗೆ ಬೇಕಾದ ಆಹಾರ ಪದಾರ್ಥಗಳನ್ನು ಕೊಂಡುಕೊಳ್ಳುತ್ತಾರೆ, ಜತೆಗೆ ರಾಜ್ಯದ ಆರ್ಥಿಕತೆಯೂ ಪುನಶ್ಚೇತನಗೊಳ್ಳುತ್ತದೆ. ಆದ್ದರಿಂದ ತಲಾ ₹10 ಸಾವಿರ ನೇರ ನಗದು ವರ್ಗಾವಣೆ ಮಾಡಬೇಕೆಂಬ ನಮ್ಮ ಅಹವಾಲನ್ನು ಪರಿಗಣಿಸದೇ, ಈ ರೀತಿಯಾಗಿ ಕಳಪೆಯಾದ ದಿನಸಿ ನೀಡಿದ್ದಾರೆ. ನಾವು ಇದನ್ನು ಸಚಿವರ ಮನೆಗೆ ವಾಪಸ್ ನೀಡುವ ಮೂಲಕ ಪ್ರತಿಭಟಿಸುತ್ತೇವೆ' ಎಂದರು.

'ಒಂದು ದಿನಸಿ ಕಿಟ್‌ಗೆ ₹880ನಂತೆ ಎಪಿಎಂಸಿ ಮಾರುಕಟ್ಟೆಯಲ್ಲಿ ಸಗಟು ದರದಲ್ಲಿ ಖರೀದಿ ಮಾಡಲಾಗಿದೆ ಎಂಬ ಮಾಹಿತಿ ಇದೆ. ಇದೇ ಮೊತ್ತಕ್ಕೆ ಗುಣಮಟ್ಟದ ಹಾಗೂ ಹೆಚ್ಚಿನ ಮೌಲ್ಯದ ಪದಾರ್ಥ ಸಿಗುತ್ತದೆ. ಇದರ ಒಟ್ಟು ವ್ಯವಹಾರ ಪಾರದರ್ಶಕವಾಗಿ ನಡೆದಿಲ್ಲ ಎಂಬುದು ಮೇಲ್ನೋಟಕ್ಕೆ ಕಾಣುತ್ತಿದೆ. ಇದು ತನಿಖೆಯಾಗಬೇಕು' ಎಂದು ಸಿಐಟಿಯು ಜಿಲ್ಲಾಧ್ಯಕ್ಷ ಡಾ.ಕೆ. ಪ್ರಕಾಶ್ ಒತ್ತಾಯಿಸಿದರು.

## ರಾಜಕಾಲುವೆ ಒತ್ತುವರಿ: ದೇಗುಲ ಬಳಿಯ ಕಟ್ಟಡ ತೆರವು

ಪ್ರಜಾವಾಣಿ ವಾರ್ತೆ

ಬೆಂಗಳೂರು: ಇಲ್ಲಿನ ಬನಶಂಕರಿ ಎರಡನೇ ಹಂತದ ಕಾವೇರಿ ನಗರದಲ್ಲಿರುವ ಗಣಪತಿ ದೇವಸ್ಥಾನವನ್ನು ರಾಜಕಾಲುವೆ ಮೇಲೆ ನಿರ್ಮಿಸಲಾಗಿದ್ದು, ಇದನ್ನು ತೆರವುಗೊಳಿಸುವ ಕಾರ್ಯಕ್ಕೆ ಬಿಬಿಎಂಪಿ ಮುಂದಾಗಿದೆ.

ದೇವಸ್ಥಾನಕ್ಕೆ ಹೊಂದಿಕೊಂಡಂತೆ ನಿರ್ಮಿಸಲಾಗಿದ್ದ ಭವನವನ್ನು ಈಗಾಗಲೇ ಧ್ವಂಸಗೊಳಿಸಲಾಗಿದೆ.

'40 ವರ್ಷಗಳ ಹಿಂದೆ ಈ ದೇವಸ್ಥಾನ ನಿರ್ಮಿಸಲಾಗಿದೆ. ಈಗ ಬಿಬಿಎಂಪಿಯು ದೇವಸ್ಥಾನ ಧ್ವಂಸಗೊಳಿಸಲು ಮುಂದಾಗಿದೆ. ಪಕ್ಕದ ಅಪಾರ್ಟ್‌ಮೆಂಟ್ ಸಮುಚ್ಚಯದವರಿಗೆ ಅನುಕೂಲ ಮಾಡಿಕೊಡುವ ಉದ್ದೇಶದಿಂದ ಹೀಗೆ ಮಾಡಲಾಗುತ್ತಿದೆ. ದೇವಸ್ಥಾನದ ಇನ್ನೊಂದು ಬದಿಯಲ್ಲಿನ ರಾಜಕಾಲುವೆ ಸ್ವಚ್ಛಗೊಳಿಸುವ ಮೂಲಕ ನೀರು ಹೋಗುವ ವ್ಯವಸ್ಥೆ ಮಾಡಬಹುದಾಗಿದೆ' ಎಂದು ಸ್ಥಳೀಯ ನಿವಾಸಿ ವೆಂಕಟೇಶ್ ಹೇಳಿದರು.

'ದೇವಸ್ಥಾನವನ್ನು ಧ್ವಂಸಗೊಳಿಸುತ್ತಿಲ್ಲ. ಮಳೆ ನೀರುಗಾಲುವೆ ಮೇಲೆಯೇ ಕಟ್ಟಡ ನಿರ್ಮಿಸಲಾಗಿದೆ. ಕಾಲುವೆ ಕೆಳಗೆ ನೀರು ನಿಂತು ಕಟ್ಟಡವೂ ಕೂಡ ಕುಸಿಯುವ ಹಂತದಲ್ಲಿದೆ. ಅಲ್ಲದೆ, ಮಳೆ ಬಂದಾಗ ಈ ಸ್ಥಳದಲ್ಲಿ ಒಂದೆರಡು ಬಾರಿ ಪ್ರವಾಹ ಪರಿಸ್ಥಿತಿ ನಿರ್ಮಾಣವಾಗಿತ್ತು. ಈ ಕಾರಣದಿಂದ ದೇವಸ್ಥಾನಕ್ಕೆ ಹೊಂದಿಕೊಂಡಂತಿರುವ ಭವನವನ್ನು ಧ್ವಂಸಗೊಳಿಸಲಾಗುತ್ತಿದೆ' ಎಂದು ಬಿಬಿಎಂಪಿ ಅಧಿಕಾರಿಯೊಬ್ಬರು ಹೇಳಿದರು.

**ಕಟ್ಟಡ ಕುಸಿಯುವ ಅಪಾಯ:** 'ಮರದ ಬೇರು ಕೂಡ ಹರಡಿಕೊಂಡು ಕಾಲುವೆ ಕೆಳಗೆ ಸೇರಿದೆ. ಹಾಗೆಯೇ ಬಿಟ್ಟರೆ ಕಟ್ಟಡ ಕುಸಿಯುವ ಅಪಾಯವಿದೆ. ಮಳೆ ಬಂದಾಗ ಅಕ್ಕ-ಪಕ್ಕದ ಮನೆಗಳಿಗೂ ನೀರು ನುಗ್ಗುವ ಅಪಾಯವಿದೆ. ಮಳೆನೀರುಗಾಲುವೆ ಮತ್ತು ರಾಜಕಾಲುವೆಯನ್ನು ಈ ರೀತಿ ಒತ್ತುವರಿ ಮಾಡಿಕೊಳ್ಳುವಂತಿಲ್ಲ' ಎಂದೂ ಅವರು ಹೇಳಿದರು.

**ಆರೋಪ ಸುಳ್ಳು:** 'ಯಾವುದೇ ಅಪಾರ್ಟ್‌ಮೆಂಟ್ ನವರಿಗೆ ಅನುಕೂಲ ಮಾಡಿಕೊಡಲಾಗುತ್ತಿದೆ ಎಂಬ ಆರೋಪ ಸುಳ್ಳು. 10 ಅಡಿ ಅಗಲದ ಕಾಲುವೆಯ ಸ್ಥಳವನ್ನು ಒತ್ತುವರಿ ಮಾಡಿಕೊಳ್ಳಲಾಗಿದೆ. ಇದನ್ನು ತೆರವುಗೊಳಿಸದಿದ್ದರೆ ಅಕ್ಕ-ಪಕ್ಕದ ನಿವಾಸಿಗಳಿಗೇ ಅಪಾಯವಾಗಲಿದೆ. ರಾಜಕಾಲುವೆ ಒತ್ತುವರಿ ಮಾಡಿಕೊಳ್ಳುವುದು ನಿಯಮಕ್ಕೆ ವಿರುದ್ಧ. ಕಾನೂನಿನ ಪ್ರಕಾರ ಏನು ಕ್ರಮ ಕೈಗೊಳ್ಳಬೇಕೋ ಅದನ್ನು ಮಾಡುತ್ತಿದ್ದೇವೆ' ಎಂದು ಅವರು ಸ್ಪಷ್ಟಪಡಿಸಿದರು.

## ದಿಗ್ವಿಜಯ್ ವಿರುದ್ಧ ಬಿಜೆಪಿ ಟೀಕೆ

ಭೋಪಾಲ್(ಪಿಟಿಐ): ತಾಲಿಬಾನ್ ನಾಯಕರು ಮತ್ತು ಭಾರತದ ಅಧಿಕಾರಿಗಳ ನಡುವೆ ನಡೆದಿದೆ ಎನ್ನಲಾದ ಸಭೆ ಕುರಿತು ರಾಜ್ಯಸಭೆಯ ಕಾಂಗ್ರೆಸ್ ಸದಸ್ಯ ದಿಗ್ವಿಜಯ್ ಸಿಂಗ್ ಅವರ ಟ್ವೀಟ್‌ಗೆ ಬಿಜೆಪಿ ಕಟುವಾಗಿ ಪ್ರತಿಕ್ರಿಯಿಸಿದೆ.

'ದಿಗ್ವಿಜಯ್ ಸಿಂಗ್ ತಾಲಿಬಾನಿ ಮನಸ್ಥಿತಿ ಹೊಂದಿದ್ದಾರೆ' ಎಂದು ಮಧ್ಯ ಪ್ರದೇಶ ಮುಖ್ಯಮಂತ್ರಿ ಶಿವರಾಜ್ ಸಿಂಗ್ ಚೌಹಾಣ್ ಟೀಕಿಸಿದ್ದಾರೆ.

ಬಿಜೆಪಿ ಪ್ರಧಾನ ಕಾರ್ಯದರ್ಶಿ ಕೈಲಾಷ್ ವಿಜಯ್‌ವರ್ಗಿಯಾ ಪ್ರತಿಕ್ರಿಯಿಸಿ, 'ದಿಗ್ವಿಜಯ್ ಸಿಂಗ್ ಅವರು ಸಂಪರ್ಕ ಹೊಂದಿರುವವರ ವ್ಯಕ್ತಿಗಳ ಕುರಿತು ತನಿಖೆ ನಡೆಸಲಾಗುತ್ತಿದೆ' ಎಂದು ಹೇಳಿದ್ದಾರೆ.

'ತಾಲಿಬಾನ್ ನಾಯಕರು ಮತ್ತು ಭಾರತದ ಅಧಿಕಾರಿಗಳ ನಡುವೆ ಸಭೆ ನಡೆದಿದೆ ಎನ್ನುವ ಬಗ್ಗೆ ಕೇಂದ್ರ ಸರ್ಕಾರ ಸ್ಪಷ್ಟನೆ ನೀಡಬೇಕು?' ಎಂದು ದಿಗ್ವಿಜಯ್ ಸಿಂಗ್ ಟ್ವೀಟ್ ಮಾಡಿದ್ದರು.

## ರೈಲ್ವೆ ಸಲಹಾ ಮಂಡಳಿಗೆ ನೇಮಕ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಕನ್ನಡಿಗ ಜಗದೀಶ್ ಕಾಟೀಹಳ್ಳಿ ಸಿಂಗ್ರಿಗೌಡ ಅವರು ಭಾರತೀಯ ರೈಲ್ವೆ ಮಂಡಳಿಯ ನೈರುತ್ಯ ವಲಯದ ಸಲಹಾ ಮಂಡಳಿಯ ಸದಸ್ಯರಾಗಿ ನೇಮಕಗೊಂಡಿದ್ದಾರೆ.

ಮಾಹಿತಿ ತಂತ್ರಜ್ಞಾನ ಕ್ಷೇತ್ರದ ಪರಿಣಿತರಾಗಿರುವ ಜಗದೀಶ್,

ಜಗದೀಶ

ಉದ್ಯಮಿಯೂ ಹೌದು. ಮುಂದಿನ ಎರಡು ವರ್ಷ ಅವಧಿಗೆ ಜಗದೀಶ್ ಕಾಟೀಹಳ್ಳಿ ಸಿಂಗ್ರಿಗೌಡ ಅವರನ್ನು ನೇಮಕ ಮಾಡಿ ಭಾರತೀಯ ರೈಲ್ವೆ ಮಂಡಳಿ ಆದೇಶ ಹೊರಡಿಸಿದೆ.

ಪ್ರಜಾವಾಣಿ
# ಕ್ಲಾಸಿಫೈಡ್ಸ್
ಪ್ರತಿಯೊಬ್ಬರಿಗೂ ಉಪಯುಕ್ತ
email: dhclassifieds@deccanherald.co.in
ಜಾಹೀರಾತುಗಳಿಗಾಗಿ ಸಂಪರ್ಕಿಸಿ:
080 - 45557160 /161/ 162/ 163/ 164
9845114560 / 9731810277/ 9886213331

PUBLIC NOTICE

**PUBLIC NOTICE**

The Public are hereby notified that my client, **MR. AJIT SALDANHA,** S/o. Late Mr. Aloysius Saldanha, Aged About 60 Years, Residing At B-2, Swapnalok Apartments, Ulsoor Road, Bangalore 560042., is the absolute owner of the schedule property hereunder and that originals of the Title Deed bearing Document No. 4455/1997-98 dated 31/7/1997 in respect of the said property have been misplaced and therefore the public are hereby notified that they are not to transact in respect of the schedule property with any person other than my client and if they were to do so, they will be doing so at their own risk, the same would be not binding upon them in any way. In the event the said documents are found the undersigned may be contacted.

SCHEDULE-A PROPERTY

All that piece and parcel of land together with the residential premises thereof known as Khata No.353, old No.282, New No.34, known as 'Flower Mead' Inner Circle, Whitefield, Bangalore and bounded on the: East by: Property belonging to Mr Suresh Mathew West by: Property belonging to Mrs Jones North by: Premises known as Castlet South by: Inner Circle Road

SCHEDULE-B PROPERTY

A one-half undivided share in the schedule 'A' property bearing Khatha No.353 old No.282, known as "Flower Mead" Inner Circle, Whitefield, Bangalore.

For any further details, the undersigned may be contacted:

**Siddharth B. Muchandi,**
Advocate
G-1, Tasker Park Apts.,
10, Park Road, Tasker Town,
Bangalore-51
P: 080-41713335
M: 9883345555
E: sbmuchandi@gmail.com

**PUBLIC NOTICE**

The Public are hereby notified that my client, **MR. AJIT SALDANHA,** S/o. Late Mr. Aloysius Saldanha, Aged About 60 Years, Residing At B-2, Swapnalok Apartments, Ulsoor Road, Bangalore 560042., is the absolute owner of the schedule property hereunder and that originals of the title deeds in respect of the said property have been misplaced and therefore the public are hereby notified that they are not to transact in respect of the schedule property with any person other than my client and if they were to do so, they will be doing so at their own risk, the same would be not binding upon them in any way. In the event the said documents are found the undersigned may be contacted.

SCHEDULE

All that piece and parcel of the Property bearing No. 117, Khatha No. 546/117, having e-khatha No. 150200200600300494, formed on the converted lands bearing No. 52/1, 52/2, 53/2, 56/4, 56/6, 57/2, 58/3, 58/4, 58/5, 60/1, 60/2, 61/5 and 61/6, in the layout known as "Prestige North West County", situated at Adde Vishwanathapura, Hesaraghatta Hobli, Bangalore North Taluk, and the Property is measuring East to West – 125 Feet and North to South – 80 Feet, in all measuring about 10000 Sq ft and the Property is bounded on : East by: Property bearing 116, in Prestige North West County West by: Property bearing 169, in Prestige North West County North by: Property bearing 120, in Prestige North West County South by: 40ft Road in Prestige North West County

For any further details, the undersigned may be contacted:

**Siddharth B. Muchandi,**
Advocate
G-1, Tasker Park Apts.,
10, Park Road, Tasker Town,
Bangalore-51
P: 080-41713335
M: 9883345555
E: sbmuchandi@gmail.com

CAUTION NOTICE
Readers are advised to make appropriate thorough enquiries before acting upon any advertisement. This newspaper does not vouch or subscribe to the claims and representations made by advertisers.
GM-Advertisement

JOB OPPORTUNITIES

Part-Time Jobs

**PANDEMIC SITUATION** Lost Job. MNC Provide Work From Home 30 to 35K Call: 7019215243/ 9886641282

BUSINESS

Business Offers

Finance

NRI'S INVESTMENT And Finance AvailableOn LowInterest AgainstProperties, Land & Building,Sites,Flats, Converted& AgricultureLandsCall: 7411265189

Business For Sale

**HOSPITAL FOR** SALE- 20 Bedded, four decades old reputed hospital with good clientale, situated 55 kms away from Bangalore in Kanakapura town with 6000 sq-feet built-in area is for Sale. This Hospital has Major OT, Minor OT, Labour Room, Laboratory, Pharmacy, Two X-Ray Machines, with Generator backup and ramp to the first floor. Contact: 9845078726/ 9845078724/ 0807522326.

PERSONAL

Change of Name

**I ALLAN** TORRES, R/@ #252, Don Bosco 2nd Main, 4th Cross, Srinivasa Nagar, Kithiganur, Krishnarajapuram, Bangalore-36, Have Changed My Name To DON ALAN TORRES. Holder of Passport No.A5328559. Vide Affidavit Dated: 23/06/2021 sworn before Notary L. Gopalakrishna Bangalore.

**WE, RAJA.P** & DIVYA KUMARIT, R/at No. 62, 4th Cross, Lakshmaiah Layout, Subbannapalya, MS Nagar Post, Bangalore- 560033, have changed our son's name from R. THARUN to VIHAAN .R vide affidavit dated 23-06-2021 sworn before notary Uday Kumar .K, Bengaluru

**I, SABRINA.S.JITHURI** alias SABRINA. E.UTTANGI residing at No.06, BEL Jaladarshini Layout, New BEL Road, MSRIT Post, Bengaluru-560054 have changed my name to SABRINA. S.JITHURI vide affidavit dated 23/06/2021 sworn before notary B.V.Nagabhushana, Bengaluru

**I,ANUSHA MANJUNATH** W/o Sri Naveen Kumar.S, R/at #G1, SR Brindavan Apartments, Lake View Road, Doddanekundi, Rama Temple Road, Bengaluru-560037, have changed my name to Anusha Naveen, Vide Affidavit dated 23/06/2021, before Notary Devikakumari.A.,Banagalore

**I, RAVI** Kiran.R, Residing at No.298, 2nd Floor,2nd Main,Ambabhavani Temple Road, Shamrajpura, Bangalore-560097. Have Changed my Name as R. CHIRAG GARRIX vide affidavit Dated:22/06/2021 before Notary Jalandhara, Bangalore

**SHOBHA BANDU** PATIL M/o 9516180N- HAV- PATIL GANESH BANDU R/a Waiphale, Tasgaon, Sangli, Maharastra changed name from SHOBHA BANDU PATIL to SHOBHA BANDU NALAWADE notary Harisha G Bangalore.

**BANDU KERU** PATIL F/o 9516180N- HAV- PATIL GANESH BANDU R/a Waiphale, Tasgaon, Sangli, Maharastra changed name from BANDU KERU PATIL to BANDU KERU NALAWADE notary Harisha G Bangalore.

**I, SAUMYA** RAJ D/o. Ram Chandra Sharma, aged about 24 years, R/at No.534, Sri Manjunatha Jewelers, 3rd Main Road, Mathikere Extension, Bangalore-560054, have changed my name to MOMINA Vide affidavit dated 23-06-2021 sworn before Notary Mohammed Hussain .K, Bangalore

REAL ESTATE BUYING

Sites

Banashankari

BDA-SITES WANTED @ Anjanapura Banashankari 6th Stage, Sir.M Vishweshwraiah Layout 20x30, 30x40, 40x60 Immediate Settlement Call:9741072999

REAL ESTATE SELLING

Flat

Jakkur

**3 BHK,** 3 Bathrooms, 3 Balconies, Utility Area, 2 Covered Car Parking, A/C, Furnished, 1635 sqft, 87L. Contact: 9845171036

EDUCATION SPECIAL
We are coming out with special offer for Admission Notice, Education Success Congratulation Ads
For details contact: Jerry: 9731810277
Vishal: 9845114560 Tanveer: 9886213331
E-mail: dhclassifieds@deccanherald.co.in

## ಮಾದಕ ವಸ್ತು ಮಾರಾಟ: ಐದು ಮಂದಿ ಬಂಧನ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಡಾರ್ಕ್‌ವೆಬ್ ಹಾಗೂ ಇನ್ನಿತರ ವೆಬ್‌ಸೈಟ್‌ಗಳಿಂದ ಭಾರಿ ಪ್ರಮಾಣದ ಮಾದಕ ವಸ್ತುಗಳನ್ನು ತರಿಸಿಕೊಂಡು, ನಗರದಲ್ಲಿ ಮಾರಾಟ ಮಾಡುತ್ತಿದ್ದ ಇಬ್ಬರು ಟೆಕಿಗಳು, ಕಾನೂನು ವಿದ್ಯಾರ್ಥಿ ಸೇರಿದಂತೆ ಐದು ಮಂದಿ ಆರೋಪಿಗಳನ್ನು ಸಿಸಿಬಿ ಮಾದಕದ್ರವ್ಯ ನಿಗ್ರಹ ದಳದ ಅಧಿಕಾರಿಗಳು ಬಂಧಿಸಿದ್ದಾರೆ.

ಆರೋಪಿಗಳು ಬ್ಯಾಡರಹಳ್ಳಿ ಠಾಣಾ ವ್ಯಾಪ್ತಿಯ ಭಾರತ್‌ನಗರದ ಪಿ.ಜಿ ಕಟ್ಟಡದಲ್ಲಿ ವಾಸವಿದ್ದರು. ನಿಷೇಧಿತ ಮಾದಕ ವಸ್ತುಗಳಾದ ಗಾಂಜಾ, ಎಕ್ಸ್‌ಟೆಸಿ ಮಾತ್ರೆಗಳು, ಹ್ಯಾಶಿಷ್ ಉಂಡೆಗಳು ಹಾಗೂ ಎಲ್‌ಎಸ್‌ಡಿ ಸ್ಟ್ರಿಪ್ಸ್‌ಗಳನ್ನು ಮಾರುತ್ತಿದ್ದರು. ಈ ಕುರಿತು ಮಾಹಿತಿ ಆಧರಿಸಿ ದಾಳಿ ನಡೆಸಿದಾಗ ಆರೋಪಿಗಳು ಸಿಕ್ಕಿಬಿದ್ದಿದ್ದಾರೆ. ಆರೋಪಿಗಳ ಪೂರ್ಣ ವಿವರಗಳನ್ನು ಅಧಿಕಾರಿಗಳು ಬಹಿರಂಗಪಡಿಸಿಲ್ಲ.

ಪೊಲೀಸರು ಜಪ್ತಿ ಮಾಡಿರುವ ಮಾದಕ ವಸ್ತುಗಳು.

'ಬಂಧಿತರಿಂದ ₹30 ಲಕ್ಷ ಮೌಲ್ಯದ 300 ಎಂಡಿಎಂಎ ಎಕ್ಸ್‌ಟೆಸಿ ಮಾತ್ರೆಗಳು, 150 ಎಲ್‌ಎಸ್‌ಡಿ ಸ್ಟ್ರಿಪ್ಸ್, ಒಂದು ಕೆ.ಜಿ.ಗಾಂಜಾ, ಐದು ಮೊಬೈಲ್‌ಗಳು, ತೂಕದ ಯಂತ್ರ ಹಾಗೂ ಒಂದು ಬೈಕ್ ಜಪ್ತಿ ಮಾಡಲಾಗಿದೆ. ಈ ಸಂಬಂಧ ಬ್ಯಾಡರಹಳ್ಳಿ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ' ಎಂದು ಸಿಸಿಬಿ ಜಂಟಿ ಪೊಲೀಸ್ ಕಮಿಷನರ್ ಸಂದೀಪ್ ಪಾಟೀಲ ತಿಳಿಸಿದರು.

'ಬಂಧಿತರ ಪೈಕಿ ಇಬ್ಬರು ನಗರದ ಐಟಿ ಕಂಪನಿಯ ಉದ್ಯೋಗಿಗಳು. ಹೆಚ್ಚು ಗ್ರಾಹಕರನ್ನು ಸೆಳೆಯುವ ಉದ್ದೇಶದಿಂದ ತಮ್ಮ ಸಹೋದ್ಯೋಗಿಗಳಿಗೆ,'ಮಾದಕ ವಸ್ತುಗಳ ಸೇವನೆಯಿಂದ ಚೆನ್ನಾಗಿ ಕೆಲಸ ಮಾಡಬಹುದು' ಎಂದು ಉತ್ತೇಜಿಸುತ್ತಿದ್ದರು. ಮತ್ತೊಬ್ಬ ಆರೋಪಿ ನಗರದ ಕಾಲೇಜಿನಲ್ಲಿ ಕಾನೂನು ಪದವಿ ವ್ಯಾಸಂಗ ಮಾಡುತ್ತಿದ್ದು, ಈ ಜಾಲದಲ್ಲಿ ಸಕ್ರಿಯನಾಗಿದ್ದ' ಎಂದು ಪೊಲೀಸರು ಮಾಹಿತಿ ನೀಡಿದರು.

'ಡಾರ್ಕ್‌ವೆಬ್ ಹಾಗೂ ಇತರ ವೆಬ್‌ಸೈಟ್‌ಗಳಿಂದ ಮಾದಕ ವಸ್ತುಗಳನ್ನು ಮಾರಾಟ ಮಾಡುವ ವ್ಯಕ್ತಿಗಳನ್ನು ಸಂಪರ್ಕಿಸುತ್ತಿದ್ದರು. ಅವರಿಗೆ ಬಿಟ್‌ಕಾಯಿನ್ ಪಾವತಿಸಿ, ವಿದೇಶಗಳಿಂದ ಭಾರಿ ಪ್ರಮಾಣದ ಮಾದಕ ವಸ್ತುಗಳನ್ನು ಕಡಿಮೆ ಬೆಲೆಗೆ ಖರೀದಿಸುತ್ತಿದ್ದರು'.

'ಅಧಿಕಾರಿಗಳಿಗೆ ತಿಳಿಯದಂತೆ ಮಾದಕ ವಸ್ತುಗಳನ್ನು ಅಮೆಜಾನ್ ಪ್ಯಾಕ್‌ಗಳಲ್ಲಿ ತುಂಬಿ, ಸೀಲ್‌ನೊಂದಿಗೆ ಪ್ಯಾಕ್ ಮಾಡುತ್ತಿದ್ದರು. 'ಡುನ್‌ಝೋ' ಮುಖಾಂತರ ಡೆಲಿವರಿ ಸಿಬ್ಬಂದಿಯ ಸೋಗಿನಲ್ಲಿ ತೆರಳಿ, ಗ್ರಾಹಕರಿಗೆ ಡ್ರಗ್ಸ್ ಪೂರೈಸುತ್ತಿದ್ದರು. ಬಳಿಕ ಗ್ರಾಹಕರಿಗೆ ತಲುಪಿಸಿ, ಆನ್‌ಲೈನ್ ಪಾವತಿ ಮಾಡಿಸಿಕೊಳ್ಳುತ್ತಿದ್ದರು' ಎಂದು ಅಧಿಕಾರಿಗಳು ತಿಳಿಸಿದರು.

## ಚಿನ್ನಾಭರಣ ಕದ್ದವನ ಬಂಧನ

ಬೆಂಗಳೂರು: ಪರಿಚಯಸ್ಥರು ಊರಿಗೆ ತೆರಳಿದ್ದ ವೇಳೆ ಮನೆಯಲ್ಲಿದ್ದ ಚಿನ್ನಾಭರಣ ಕದ್ದಿದ್ದ ಆರೋಪಿಯನ್ನು ಬ್ಯಾಡರಹಳ್ಳಿ ಪೊಲೀಸರು ಬಂಧಿಸಿದ್ದಾರೆ.

ಅಂದ್ರಹಳ್ಳಿ ನಿವಾಸಿ ಲಕ್ಷ್ಮೀನಾರಾಯಣ (25) ಬಂಧಿತ ಆರೋಪಿ.

'ದೂರುದಾರರಿಗೆ ಪರಿಚಿತನಾಗಿದ್ದ ಲಕ್ಷ್ಮೀನಾರಾಯಣ ಆಗಾಗ ಮನೆಗೆ ಬಂದು ಹೋಗುತ್ತಿದ್ದ. ಕಳೆದ ಡಿಸೆಂಬರ್‌ನಲ್ಲಿ ದೂರುದಾರರು ಊರಿಗೆ ತೆರಳಿದ್ದಾಗ ಮನೆಯಲ್ಲಿದ್ದ ₹1.25 ಲಕ್ಷ ಬೆಲೆ ಬಾಳುವ ಚಿನ್ನದ ಸರ ಹಾಗೂ ಚಿನ್ನದ ಉಂಗುರ ಕಳವಾಗಿತ್ತು'.

ಲಕ್ಷ್ಮೀನಾರಾಯಣ

'ಈ ಸಂಬಂಧ ಮನೆಯವರು ಬ್ಯಾಡರಹಳ್ಳಿ ಠಾಣೆಗೆ ದೂರು ನೀಡಿದ್ದರು. ಲಕ್ಷ್ಮೀನಾರಾಯಣನ ಮೇಲೆ ಸಂಶಯ ಇರುವುದಾಗಿಯೂ ತಿಳಿಸಿದ್ದರು. ಈ ಮಾಹಿತಿ ಆಧರಿಸಿ ಲಕ್ಷ್ಮೀನಾರಾಯಣನನ್ನು ವಶಕ್ಕೆ ಪಡೆದು, ವಿಚಾರಣೆ ನಡೆಸಿದಾಗ ಕೃತ್ಯ ಬೆಳಕಿಗೆ ಬಂದಿದೆ. ಆರೋಪಿಯನ್ನು ಬಂಧಿಸಿ, ಕಳವಾಗಿದ್ದ ಚಿನ್ನದ ಸರ ಹಾಗೂ ಉಂಗುರ ಜಪ್ತಿ ಮಾಡಲಾಗಿದೆ' ಎಂದು ಪೊಲೀಸರು ತಿಳಿಸಿದರು.

## 'ರೋಡ್ ರೋಲರ್' ಕದ್ದು ಗುಜರಿಗೆ ಮಾರಾಟ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಮೈದಾನದಲ್ಲಿ ನಿಲ್ಲಿಸಿದ್ದ 'ರೋಡ್ ರೋಲರ್' ಕದ್ದು ಗುಜರಿ ವ್ಯಾಪಾರಿಗೆ ಮಾರಾಟ ಮಾಡಿದ್ದ ಇಬ್ಬರು ಆರೋಪಿಗಳ ಪೈಕಿ ಒಬ್ಬನನ್ನು ಚಂದ್ರಾ ಬಡಾವಣೆಯ ಪೊಲೀಸರು ಬಂಧಿಸಿದ್ದಾರೆ.

ನಾಗರಬಾವಿ ನಿವಾಸಿ ಪವನ್ ಕುಮಾರ್ (22) ಬಂಧಿತ ಆರೋಪಿ. ಕೃತ್ಯದಲ್ಲಿ ಭಾಗಿಯಾಗಿದ್ದ ವಿನಯ್ ಎಂಬ ಮತ್ತೊಬ್ಬ ಆರೋಪಿ ತಲೆಮರೆಸಿಕೊಂಡಿದ್ದಾನೆ.

ತಮಿಳುನಾಡಿನವರಾದ ವಾಹನದ ಮಾಲೀಕ ಲಾಕ್‌ಡೌನ್ ಇದ್ದಿದ್ದರಿಂದ ನಾಗರಬಾವಿಯ ಖಾಲಿ ಮೈದಾನದಲ್ಲಿ ವಾಹನ ನಿಲ್ಲಿಸಿ, ಊರಿಗೆ ತೆರಳಿದ್ದರು. ಮತ್ತೆ ಬಂದು ನೋಡಿದಾಗ ವಾಹನ ಆ ಜಾಗದಲ್ಲಿ ಅಲ್ಲಿರಲಿಲ್ಲ. ಮಾಲೀಕ ಕೂಡಲೇ ಪೊಲೀಸರಿಗೆ ದೂರು ನೀಡಿದ್ದರು.

'ಆರೋಪಿ ಪವನ್ ಹಾಗೂ ವಿನಯ್ ವಾಹನ ಕದ್ದೊಯ್ದು, ಮಾಗಡಿ ರಸ್ತೆಯ ಸೀಗೆಹಳ್ಳಿಯ ಗುಜರಿ ವ್ಯಾಪಾರಿ ಇಸ್ಮಾಯಿಲ್‌ಗೆ ಮಾರಿದ್ದರು. ವಾಹನ ಪೂರ್ಣ ಕಬ್ಬಿಣದಲ್ಲೇ ಇದ್ದಿದ್ದರಿಂದ ತೂಕದ ಲೆಕ್ಕದಲ್ಲಿ ಮಾರಾಟ ಮಾಡಿ ಹಣ ಪಡೆದಿದ್ದರು' ಎಂದು ಪೊಲೀಸರು ತಿಳಿಸಿದರು.

'ಖರೀದಿಸಿದ ನಂತರ ಗುಜರಿಗೆ ಹಾಕಲು ವಾಹನದ ಬಿಡಿಭಾಗಗಳನ್ನು ತೆಗೆದು ತೂಕ ಹಾಕಲಾಗಿತ್ತು. ಸದ್ಯ ವಾಹನವನ್ನು ಜಪ್ತಿ ಮಾಡಲಾಗಿದ್ದು, ತಲೆಮರೆಸಿಕೊಡಿರುವ ಆರೋಪಿಯನ್ನು ಪತ್ತೆ ಮಾಡಲಾಗುತ್ತಿದೆ' ಎಂದೂ ಹೇಳಿದರು.

## ಚಿತ್ರಾವಳಿ

ಪದವಿ, ಸ್ನಾತಕೋತ್ತರ ಪದವಿ, ಎಂಜಿನಿಯರಿಂಗ್ ಮತ್ತು ಡಿಪ್ಲೊಮಾದ ಬೆಸ ಸಂಖ್ಯೆಯ ಸೆಮಿಸ್ಟರ್‌ಗಳಿಗೆ ಪರೀಕ್ಷೆ ನಡೆಸಬಾರದು ಎಂದು ಕೋರಿ ಆಲ್ ಇಂಡಿಯಾ ಡೆಮಾಕ್ರಟಿಕ್ ಸ್ಟೂಡೆಂಟ್ಸ್ ಆರ್ಗನೈಸೇಷನ್‌ನ ಸದಸ್ಯರು ಉಪಮುಖ್ಯಮಂತ್ರಿ, ಉನ್ನತ ಶಿಕ್ಷಣ ಸಚಿವ ಡಾ.ಸಿ.ಎನ್ ಅಶ್ವತ್ಥನಾರಾಯಣ ಅವರಿಗೆ ಬುಧವಾರ ಮನವಿ ಸಲ್ಲಿಸಿದರು

ಗೋಪಾಲಪುರ ಗ್ರಾಮದಲ್ಲಿರುವ ವಾತ್ಸಲ್ಯ ಮಹಿಳಾ ಸೇವಾ ಸಂಸ್ಥೆಯು ತೋಟಗೆರೆ ಗ್ರಾಮದಲ್ಲಿ ಪತ್ರಿಕಾ ವಿತರಕರಿಗೆ ಆಹಾರ ಸಾಮಗ್ರಿಗಳ ಕಿಟ್ ವಿತರಿಸಿತು. ಸಂಸ್ಥೆಯ ಅಧ್ಯಕ್ಷರಾದ ವೀಣಾ ರಮೇಶ್, ವೈದ್ಯ ಡಾ.ವಿನಯ್ ಕುಮಾರ್, ಬಿಜೆಪಿ ಮುಖಂಡ ಬಸವೇಗೌಡ ,ಸಿದ್ದಗಂಗಾ ಪ್ರೌಢಶಾಲೆ ಮುಖ್ಯ ಶಿಕ್ಷಕ ಸಂಗಪ್ಪ ಇದ್ದರು.




## ಕೋವಿಡ್ ಲಸಿಕಾ ಅಭಿಯಾನವನ್ನು ಇನ್ನಷ್ಟು ಚುರುಕುಗೊಳಿಸಲು ಬಿಬಿಎಂಪಿ ಸಿದ್ಧತೆ

# ಜುಲೈ ಅಂತ್ಯದೊಳಗೆ ಶೇ 70ರಷ್ಟು ಮಂದಿಗೆ ಲಸಿಕೆ

ಪ್ರಜಾವಾಣಿ ವಾರ್ತೆ

**ಬೆಂಗಳೂರು:** ಕೋವಿಡ್ ಲಸಿಕಾ ಅಭಿಯಾನವನ್ನು ಬಿಬಿಎಂಪಿ ಇನ್ನಷ್ಟು ಚುರುಕುಗೊಳಿಸಲು ಮುಂದಾಗಿದೆ. ನಗರದಲ್ಲಿ ಕೋವಿಡ್ ಲಸಿಕೆ ಪಡೆಯಲು ಅರ್ಹರಾಗಿರುವ ಶೇ 70ರಷ್ಟು ಮಂದಿಗೆ ಜುಲೈ ತಿಂಗಳ ಅಂತ್ಯದೊಳಗೆ ಲಸಿಕೆ ಹಾಕಲು ಪಾಲಿಕೆ ಸಿದ್ಧತೆ ನಡೆಸಿದೆ.

'ನಗರದ ನಿವಾಸಿಗಳಲ್ಲಿ ಕೋವಿಡ್ ಲಸಿಕೆ ಪಡೆಯಲು ಅರ್ಹರಾದ ಶೇ 40ರಷ್ಟು ಮಂದಿ ಈಗಾಗಲೇ ಮೊದಲನೇ ಡೋಸ್ ಪಡೆದಿದ್ದಾರೆ. ಅವರು ಎರಡನೇ ಡೋಸ್ ಪಡೆಯಲು ಇನ್ನಷ್ಟು ಸಮಯಾವಕಾಶ ಇದೆ. ಲಸಿಕೆ ಪಡೆದವರ ಪ್ರಮಾಣವನ್ನು ಈ ತಿಂಗಳ ಅಂತ್ಯದೊಳಗೆ ಶೇ 50ಕ್ಕೆ ಹಾಗೂ ಜುಲೈ ತಿಂಗಳ ಅಂತ್ಯದೊಳಗೆ ಶೇ 70ಕ್ಕೆ ಹೆಚ್ಚಿಸುವುದು ನಮ್ಮ ಗುರಿ. ಇದಕ್ಕೆ ಅಗತ್ಯ ಸಿದ್ಧತೆ ಮಾಡಿಕೊಂಡಿದ್ದೇವೆ' ಎಂದು ಬಿಬಿಎಂಪಿ ಮುಖ್ಯ ಆಯುಕ್ತ ಗೌರವ್ ಗುಪ್ತ 'ಪ್ರಜಾವಾಣಿ'ಗೆ ತಿಳಿಸಿದರು.

ಕೊರೊನಾ ವೈರಾಣುವಿನ ಡೆಲ್ಟಾ ಪ್ಲಸ್ ರೂಪಾಂತರ ತಳಿ ಹರಡದಂತೆ ಎಚ್ಚರವಹಿಸುವಂತೆ ಕೇಂದ್ರ ಸರ್ಕಾರ ಸೂಚಿಸಿದೆ. ಹಾಗಾಗಿ ನಗರದಲ್ಲಿ ಈ ತಳಿಯ ಹರಡುವಿಕೆ ನಿಯಂತ್ರಿಸುವ ಸಲುವಾಗಿ ಬಿಬಿಎಂಪಿ ಎಚ್ಚರಿಕೆಯ ಹೆಜ್ಜೆ ಇಟ್ಟಿದೆ.

'ಮಹಾರಾಷ್ಟ್ರ, ಕೇರಳ ಹಾಗೂ ಮಧ್ಯಪ್ರದೇಶಗಳಲ್ಲಿ ಕೊರೊನಾ ವೈರಾಣುವಿನ ಡೆಲ್ಟಾ ಪ್ಲಸ್ ತಳಿಗಳು ಪತ್ತೆಯಾಗಿವೆ. ಇದರಿಂದ ಏನೆಲ್ಲ ಹಾನಿ ಉಂಟಾಗುತ್ತದೆ ಎಂಬ ಬಗ್ಗೆ ತಜ್ಞರು ಅಧ್ಯಯನ ನಡೆಸುತ್ತಿದ್ದಾರೆ. ಆದರೆ, ಈ ತಳಿಯ ವೈರಾಣು ಹರಡುವಿಕೆ ತಡೆಯುವ ಉದ್ದೇಶದಿಂದ ಬಿಬಿಎಂಪಿ ವತಿಯಿಂದಲೂ ಜೀನೋಮ್ ಸೀಕ್ವೆನ್ಸಿಂಗ್ (ಡಿಎನ್‌ಎ ಜೋಡಣಾ ಕ್ರಮ) ಪತ್ತೆ ಪರೀಕ್ಷೆ ನಡೆಸಲು ಕ್ರಮ ಕೈಗೊಂಡಿದ್ದೇವೆ. ಸೋಂಕು ಪತ್ತೆಯಾದ ಪ್ರಕರಣಗಳಲ್ಲಿ ಶೇ 5ರಷ್ಟು ಗಂಟಲ ದ್ರವಗಳ ಮಾದರಿಗಳನ್ನು ಜೀನೋಮ್ ಸೀಕ್ವೆನ್ಸಿಂಗ್ ಪರೀಕ್ಷೆಗೆ ಒಳಪಡಿಸಲಾಗುತ್ತದೆ' ಎಂದರು.

'ಕೊರೋನಾ ಸೋಂಕಿತ ವ್ಯಕ್ತಿಯಲ್ಲಿ ಡೆಲ್ಟಾ ಪ್ಲಸ್ ವೈರಾಣು ಪತ್ತೆಯಾದರೆ, ಅವರ ಸಂಪರ್ಕಕ್ಕೆ ಬಂದವರನ್ನು ಪತ್ತೆಹಚ್ಚಿ ಈ ವೈರಾಣು ಹರಡದಂತೆ ಕ್ರಮಕೈಗೊಳ್ಳುತ್ತೇವೆ. ಅಗತ್ಯಬಿದ್ದರೆ ಈ ಜೀನೋಮ್ ಸೀಕ್ವನ್ಸಿಂಗ್ ಪರೀಕ್ಷೆಗೆ ಹೆಚ್ಚಿನ ಸೌಕರ್ಯ ಕಲ್ಪಿಸಲಿದ್ದೇವೆ' ಎಂದು ಅವರು ಮಾಹಿತಿ ನೀಡಿದರು.

'ಸದ್ಯಕ್ಕೆ ಡೆಲ್ಟಾ ಪ್ಲಸ್ ವೈರಸ್ ಹರಡದಂತೆ ತಡೆಯಲು ಜನರು ಮಾಸ್ಕ್ ಧರಿಸುವಿಕೆ, ಅಂತರ ಕಾಪಾಡುವುದು ಹಾಗೂ ಇತರ ಕೋವಿಡ್ ನಿಯಂತ್ರಣ ಮಾರ್ಗಸೂಚಿಗಳನ್ನು ಅನುಸರಿಸಿದರೆ ಸಾಕು. ಈ ರೂಪಾಂತರಿ ತಳಿಯ ಬಗ್ಗೆ ತಜ್ಞರು ಆಳವಾಗಿ ಅಧ್ಯಯನ ನಡೆಸುತ್ತಿದ್ದಾರೆ. ಅವರ ಸಲಹೆ ಆಧರಿಸಿ ಅಗತ್ಯ ಬಿದ್ದರೆ ಸಾರ್ವಜನಿಕರು ಪಾಲಿಸಬೇಕಾದ ಹೊಸ ಮಾರ್ಗಸೂಚಿಗಳನ್ನು ಬಿಡುಗಡೆ ಮಾಡುತ್ತೇವೆ' ಎಂದು ಅವರು ತಿಳಿಸಿದರು.

### ಕೋವಿಡ್: 4,436 ಹೊಸ ಪ್ರಕರಣ

ರಾಜ್ಯದಲ್ಲಿ ಹೊಸದಾಗಿ 4,436 ಮಂದಿಯಲ್ಲಿ ಕೊರೊನಾ ಸೋಂಕಿರುವುದು ಬುಧವಾರ ದೃಢಪಟ್ಟಿದೆ.

ಒಂದು ದಿನ ಅವಧಿಯಲ್ಲಿ 1.70 ಲಕ್ಷ ಪರೀಕ್ಷೆಗಳನ್ನು ನಡೆಸಲಾಗಿದೆ. ಸೋಂಕು ದೃಢ ಪ್ರಮಾಣವು ಶೇ 2.59ರಷ್ಟು ವರದಿಯಾಗಿದೆ. ಬೆಂಗಳೂರಿನಲ್ಲಿ 1,008 ಮಂದಿ, ದಕ್ಷಿಣ ಕನ್ನಡದಲ್ಲಿ 538 ಮಂದಿ ಕೋವಿಡ್ ಪೀಡಿತರಾಗಿದ್ದಾರೆ. ಉಳಿದ ಜಿಲ್ಲೆಗಳಲ್ಲಿ ಹೊಸ ಪ್ರಕರಣಗಳು 500ರ ಗಡಿಯೊಳಗೆ ವರದಿಯಾಗಿವೆ. ಈವರೆಗೆ ಕೋವಿಡ್ ಪೀಡಿತರಾದವರ ಒಟ್ಟು ಸಂಖ್ಯೆ 28.19 ಲಕ್ಷ ದಾಟಿದೆ.

ಡೆಲ್ಟಾ ಪ್ಲಸ್ ಮಾತ್ರವಲ್ಲದೇ, ವಿಶ್ವ ಆರೋಗ್ಯ ಸಂಸ್ಥೆಯು ಗುರುತಿಸಿರುವ ಹೊಸ ತಳಿಯ ಕೊರೊನಾ ವೈರಾಣುಗಳು ರಾಜ್ಯದಲ್ಲಿ ಈಗಾಗಲೇ ಕೆಲವರಲ್ಲಿ ಕಾಣಿಸಿಕೊಂಡಿದೆ. ಅಮೆರಿಕ ಮೂಲದ ಆಲ್ಫಾ/ಬಿ.1.1.7 ವೈರಾಣು ಈವರೆಗೆ 127 ಮಂದಿಯಲ್ಲಿ ಪತ್ತೆಯಾಗಿದೆ. ಅದೇ ರೀತಿ, ದಕ್ಷಿಣ ಆಫ್ರಿಕಾ ಮೂಲದ ಬೀಟಾ/ಬಿ.1.351 ವೈರಾಣು ಆರು ಮಂದಿಯಲ್ಲಿ, ಭಾರತದ ಡೆಲ್ಟಾ/ಬಿ.1.617.2 ವೈರಾಣು 318 ಮಂದಿಯಲ್ಲಿ ಹಾಗೂ ಕಪ್ಪಾ/ಬಿ.1.617.1 ವೈರಾಣು 112 ಮಂದಿಯಲ್ಲಿ ಕಾಣಿಸಿಕೊಂಡಿರುವುದು ಜಿನೋಮಿಕ್ ಸಿಕ್ವೆನ್ಸಿಸ್ ಪರೀಕ್ಷೆಯಿಂದ ದೃಢಪಟ್ಟಿದೆ.

ಕೊರೊನಾ ಸೋಂಕಿತರಲ್ಲಿ 123 ಮಂದಿ ಮೃತಪಟ್ಟಿರುವುದು ದೃಢಪಟ್ಟಿದೆ. ಮರಣ ಪ್ರಮಾಣ ದರವು ಶೇ 2.77ರಷ್ಟು ವರದಿಯಾಗಿದೆ. ರಾಜ್ಯದ 21 ಜಿಲ್ಲೆಗಳಲ್ಲಿ ಹೊಸದಾಗಿ ಮರಣ ಪ್ರಕರಣಗಳು ವರದಿಯಾಗಿವೆ. ಬೆಂಗಳೂರಿನಲ್ಲಿ 24 ಮಂದಿ ಮೃತಪಟ್ಟಿರುವುದು ದೃಢಪಟ್ಟಿದೆ.

ಮೈಸೂರಿನಲ್ಲಿ 18 ಮಂದಿ, ಬಳ್ಳಾರಿಯಲ್ಲಿ 10 ಮಂದಿ ಸಾವಿಗೀಡಾಗಿದ್ದಾರೆ. ಉಳಿದ ಜಿಲ್ಲೆಗಳಲ್ಲಿ 10 ಕ್ಕಿಂತ ಕಡಿಮೆ ಸಂಖ್ಯೆಯಲ್ಲಿ ಮರಣ ಪ್ರಕರಣಗಳು ವರದಿಯಾಗಿವೆ. ಈವರೆಗೆ ಕೋವಿಡ್‌ನಿಂದ ಮೃತಪಟ್ಟವರ ಒಟ್ಟು ಸಂಖ್ಯೆ 34,287ಕ್ಕೆ ತಲುಪಿದೆ. .



ಕೋವಿಡ್‌ನಿಂದ ಸಂಕಷ್ಟಕ್ಕೆ ಸಿಲುಕಿದ ಕುಟುಂಬಗಳಿಗೆ ರಾಮಲಿಂಗಾರೆಡ್ಡಿ ಅವರು ದಿನಸಿ ಕಿಟ್‌ಗಳನ್ನು ವಿತರಿಸಿದರು. ಆರ್‌.ಕೆ. ರಮೇಶ್ ಇದ್ದರು.

# 'ಜನರನ್ನು ತಲುಪದ ಸರ್ಕಾರದ ಪ್ಯಾಕೇಜ್'

ಪ್ರಜಾವಾಣಿ ವಾರ್ತೆ

**ಬೆಂಗಳೂರು:** 'ಕೋವಿಡ್ ಹಾಗೂ ಲಾಕ್‌ಡೌನ್‌ನಿಂದ ಕಾರ್ಮಿಕರು ಸೇರಿದಂತೆ ವಿವಿಧ ವರ್ಗದವರು ಸಂಕಷ್ಟಕ್ಕೆ ಸಿಲುಕಿದ್ದಾರೆ. ಅವರಿಗೆ ಘೋಷಿಸಿದ್ದ ಪ್ಯಾಕೇಜ್ ಹಣವು ತಿಂಗಳು ಕಳೆದರೂ ತಲುಪಿಲ್ಲ' ಎಂದು ಕೆಪಿಸಿಸಿ ಕಾರ್ಯಾಧ್ಯಕ್ಷ ರಾಮಲಿಂಗಾರೆಡ್ಡಿ ಆರೋಪಿಸಿದರು.

ಬೆಂಗಳೂರು ದಕ್ಷಿಣ ವಿಧಾನಸಭಾ ಕ್ಷೇತ್ರ ವ್ಯಾಪ್ತಿಯ ಯಲಚೇನಹಳ್ಳಿ, ಕೋಣನಕುಂಟೆ, ಅಂಜನಾಪುರ, ಗಣಪತಿಪುರ ಹಾಗೂ ಉತ್ತರಹಳ್ಳಿಯಲ್ಲಿ ಕಾಂಗ್ರೆಸ್ ಮುಖಂಡ ಆರ್‌.ಕೆ. ರಮೇಶ್ ವತಿಯಿಂದ ಮೂವತ್ತು ಸಾವಿರ ದಿನಸಿ ಕಿಟ್‌ಗಳನ್ನು ಬುಧವಾರ ವಿತರಣೆ ಮಾಡಿ ಮಾತನಾಡಿದರು.

'ಕೋವಿಡ್ ನಿಯಂತ್ರಣಕ್ಕಾಗಿ ಲಾಕ್‌ಡೌನ್ ಜಾರಿಮಾಡಿದ್ದ ಬಿಜೆಪಿ ಸರ್ಕಾರ, ಬರಿ ಸುಳ್ಳು ಘೋಷಣೆಗಳ ಜಾಹೀರಾತು ನೀಡುತ್ತಿದೆ. ಕೂಲಿ ಕಾರ್ಮಿಕರು, ಟ್ಯಾಕ್ಸಿ ಚಾಲಕರು ಸೇರಿದಂತೆ ಸಂಕಷ್ಟಕ್ಕೆ ಸಿಲುಕಿದ ವಿವಿಧ ವರ್ಗದವರಿಗೆ ಈವರೆಗೂ ಪ್ಯಾಕೇಜ್ ಹಣ ಕೈಸೇರಿಲ್ಲ. ಕೇಂದ್ರ ಮತ್ತು ರಾಜ್ಯ ಸರ್ಕಾರವು ಅಗತ್ಯ ವಸ್ತುಗಳ ಬೆಲೆ ಏರಿಕೆ ಮಾಡುವ ಮೂಲಕ ಜನರ ಜೀವನದ ಜತೆಗೆ ಆಟವಾಡುತ್ತಿದೆ' ಎಂದರು.

ಸಂಸದ ಡಿ.ಕೆ. ಸುರೇಶ್, 'ಯುಪಿಎ ಸರ್ಕಾರದ ಅವಧಿಯಲ್ಲಿ ಪೆಟ್ರೋಲ್ ಬೆಲೆ ಒಂದು ರೂಪಾಯಿ ಏರಿಕೆಯಾದಾಗ ರಾಜ್ಯದ ಬಿಜೆಪಿ ನಾಯಕರು ಬೀದಿಗಿಳಿದು ಬೊಬ್ಬೆ ಹಾಕುತ್ತಿದ್ದರು. ಕೊರೊನಾ ಸಂಕಷ್ಟದಲ್ಲೂ ಅಗತ್ಯ ವಸ್ತುಗಳ ಬೆಲೆಯು ನಿತ್ಯ ಏರಿಕೆಯಾಗುತ್ತಿದೆ. ಕೋವಿಡ್ ಹೆಸರಿನಲ್ಲಿ ಸರ್ಕಾರವು ಲಕ್ಷಾಂತರ ಕೋಟಿ ರೂಪಾಯಿ ಹಣ ಲೂಟಿ ಮಾಡಿದೆ' ಎಂದು ಆಕ್ರೋಶ ವ್ಯಕ್ತಪಡಿಸಿದರು.

# ಬಿಬಿಎಂಪಿ: 55 ಸೂಕ್ಷ್ಮ ಕಂಟೈನ್‌ಮೆಂಟ್ ವಲಯ

ಪ್ರಜಾವಾಣಿ ವಾರ್ತೆ

**ಬೆಂಗಳೂರು:** ಬಿಬಿಎಂಪಿ ವ್ಯಾಪ್ತಿಯಲ್ಲಿ ಕೋವಿಡ್ ಎರಡನೇ ಅಲೆಯ ಸಂದರ್ಭದಲ್ಲಿ ಸೋಂಕು ಹರಡುವಿಕೆ ನಿಯಂತ್ರಿಸಲು ಗುರುತಿಸಿರುವ ಸೂಕ್ಷ್ಮ ಕಂಟೈನ್‌ಮೆಂಟ್ ವಲಯಗಳಲ್ಲಿ 55 ವಲಯಗಳು ಈಗಲೂ ಸಕ್ರಿಯವಾಗಿವೆ.

ಕೋವಿಡ್ ಎರಡನೇ ಅಲೆಯ ಸಂದರ್ಭದಲ್ಲಿ ಪಾಲಿಕೆ ವ್ಯಾಪ್ತಿಯಲ್ಲಿ ಒಂದೇ ಪ್ರದೇಶದಲ್ಲಿ ಐದಕ್ಕಿಂತ ಹೆಚ್ಚು ಸೋಂಕಿತರು ಪತ್ತೆಯಾದ ಪ್ರದೇಶಗಳಲ್ಲಿ ಒಟ್ಟು 549 ಸೂಕ್ಷ್ಮ ಕಂಟೈನ್‌ಮೆಂಟ್ ವಲಯಗಳನ್ನು ಗುರುತಿಸಲಾಗಿತ್ತು. ಅವುಗಳಲ್ಲಿ 494 ವಲಯಗಳು ಈಗ ಸಕ್ರಿಯವಾಗಿಲ್ಲ. ಮಹದೇವಪುರ ವಲಯದಲ್ಲಿ ಅತಿ ಹೆಚ್ಚು ಸಂಖ್ಯೆಯ (19) ಸೂಕ್ಷ್ಮ ಕಂಟೈನ್‌ಮೆಂಟ್ ವಲಯಗಳು ಸಕ್ರಿಯವಾಗಿವೆ. ದಾಸರಹಳ್ಳಿ ಹಾಗೂ ಪಶ್ಚಿಮ ವಲಯಗಳಲ್ಲಿ ಯಾವುದೇ ಕಂಟೈನ್‌ಮೆಂಟ್ ವಲಯಗಳಿಲ್ಲ.

ಬೆಳ್ಳಂದೂರು, ಹೊರಮಾವು, ಹಗದೂರು, ಶಾಂತಲಾನಗರ, ವರ್ತೂರು, ದೊಡ್ಡನೆಕ್ಕುಂದಿ, ರಾಮಮೂರ್ತಿನಗರ, ಹೆಮ್ಮಿಗೆಪುರ, ಹೂಡಿ ಹಾಗೂ ಅರಕೆರೆ ವಾರ್ಡ್‌ಗಳಲ್ಲಿ 10 ದಿನಗಳಲ್ಲಿ ಅತಿ ಹೆಚ್ಚು ಸಂಖ್ಯೆಯಲ್ಲಿ ಕೋವಿಡ್ ಪ್ರಕರಣಗಳು ಪತ್ತೆಯಾಗಿವೆ.

'ಎರಡನೇ ಅಲೆಯಲ್ಲಿ ಸೂಕ್ಷ್ಮ ಕಂಟೈನ್‌ಮೆಂಟ್ ವಲಯಗಳನ್ನು ಗುರುತಿಸಿ ಸೋಂಕು ನಿಯಂತ್ರಿಸಲಾಗುತ್ತಿದೆ. ರೋಗ ಹರಡುವುದನ್ನು ನಿಯಂತ್ರಿಸಲು ಸೋಂಕಿತರನ್ನು ಪ್ರತ್ಯೇಕಪಡಿಸುವ ಕಾರ್ಯವೂ ಪ್ರಗತಿಯಲ್ಲಿದೆ. ಪಾಲಿಕೆ ಸಿಬ್ಬಂದಿ ಮನೆ ಮನೆಗೆ ಭೇಟಿ ನೀಡಿ ರೋಗ ನಿಯಂತ್ರಣಕ್ಕಾಗಿ ವಹಿಸಬೇಕಾದ ಮುನ್ನೆಚ್ಚರಿಕಾ ಕ್ರಮಗಳ ಬಗ್ಗೆ ಜಾಗೃತಿ ಮೂಡಿಸುತ್ತಿದ್ದಾರೆ' ಎಂದು ಬಿಬಿಎಂಪಿ ಮುಖ್ಯ ಆಯುಕ್ತ ಗೌರವ್ ಗುಪ್ತ ತಿಳಿಸಿದರು.

'ಬಿಬಿಎಂಪಿಯ ವೈದ್ಯರು ಸೋಂಕಿನ ಲಕ್ಷಣಗಳಿರುವ ವ್ಯಕ್ತಿಗಳ ಮನೆಗೇ ಭೇಟಿ ನೀಡಿ ಚಿಕಿತ್ಸೆಯ ಅಗತ್ಯತೆ ನಿರ್ಧರಿಸಲು (ಟ್ರಯಾಜಿಂಗ್) ನೆರವಾಗುತ್ತಿದ್ದಾರೆ. ಪ್ರಸ್ತುತ ಕೋವಿಡ್ ಚಿಕಿತ್ಸೆಗೆ ಆಸ್ಪತ್ರೆಗಳಲ್ಲಿ ಕಾಯ್ದಿರಿಸುವ ಹಾಸಿಗೆಗಳಲ್ಲಿ ಅರ್ಧಕ್ಕಿಂತಲೂ ಹೆಚ್ಚಿನ ರೋಗಿಗಳು ಈ ವಿಧಾನವ ಮೂಲಕವೇ ಹಾಸಿಗೆ ಪಡೆದಿದ್ದಾರೆ' ಎಂದು ತಿಳಿಸಿದರು.

'ಮುಂಬರುವ ದಿನಗಳಲ್ಲಿ ಕೋವಿಡ್ ಸೋಂಕು ಹರಡುವಿಕೆ ನಿಯಂತ್ರಣಕ್ಕೆ ಇನ್ನಷ್ಟು ಕಠಿಣ ಕ್ರಮಗಳನ್ನು ಕೈಗೊಳ್ಳಲಿದ್ದೇವೆ. ಮನೆ ಮನೆ ಭೇಟಿಗೆ ಹಾಗೂ ಸೂಕ್ಷ್ಮ ಕಂಟೈನ್‌ಮೆಂಟ್ ವಲಯಗಳನ್ನು ಗುರುತಿಸಿ ಸೋಂಕು ಹರಡುವಿಕೆ ನಿಯಂತ್ರಿಸುವುದಕ್ಕೆ ಇನ್ನಷ್ಟು ಆದ್ಯತೆ ನೀಡಲಿದ್ದೇವೆ. ಜನ ದಟ್ಟಣೆ ಹೆಚ್ಚು ಇರುವ ಪ್ರದೇಶದಲ್ಲಿ ಕೋವಿಡ್ ಪರೀಕ್ಷೆ ಹೆಚ್ಚಿಸುತ್ತೇವೆ. ಆಸ್ಪತ್ರೆಗಳ ಮೂಲಸೌಕರ್ಯವನ್ನು ಮೇಲ್ದರ್ಜೆಗೇರಿಸಲಿದ್ದೇವೆ' ಎಂದರು.

# ಹಂಪಿ ಸ್ಮಾರಕ ಇಂದಿನಿಂದ ಜನರ ವೀಕ್ಷಣೆಗೆ ಮುಕ್ತ

ಪ್ರಜಾವಾಣಿ ವಾರ್ತೆ

**ಹೊಸಪೇಟೆ (ವಿಜಯನಗರ):** ಇಲ್ಲಿನ ವಿಶ್ವಪ್ರಸಿದ್ಧ ಹಂಪಿ ಸ್ಮಾರಕಗಳು ಗುರುವಾರದಿಂದ (ಜೂ.24) ಸಾರ್ವಜನಿಕರ ವೀಕ್ಷಣೆಗೆ ಮುಕ್ತಗೊಳ್ಳಲಿವೆ.

ಆದರೆ, ಹಿಂದೂ ಧಾರ್ಮಿಕ ದತ್ತಿ ಇಲಾಖೆಯ ವ್ಯಾಪ್ತಿಗೆ ಬರುವ ವಿರೂಪಾಕ್ಷೇಶ್ವರ ದೇವಸ್ಥಾನದಲ್ಲಿ ಎಂದಿನಂತೆ ಪೂಜೆ ನೆರವೇರಲಿದೆ. ಆದರೆ, ಸಾರ್ವಜನಿಕರ ದರ್ಶನಕ್ಕೆ ನಿರ್ಬಂಧ ಮುಂದುವರಿಸಲಾಗಿದೆ.

'ಹಂಪಿಯ ಎಲ್ಲ ಸ್ಮಾರಕಗಳು, ಕಮಲಾಪುರದಲ್ಲಿನ ವಸ್ತು ಸಂಗ್ರಹಾಲಯ ಗುರುವಾರದಿಂದ ಸಾರ್ವಜನಿಕರ ವೀಕ್ಷಣೆಗೆ ಮುಕ್ತಗೊಳಿಸಲಾಗುವುದು. ಸಾರ್ವಜನಿಕರು ಆನ್‌ಲೈನ್ ಮತ್ತು ನಾಲ್ಕು ಕೌಂಟರ್‌ಗಳಲ್ಲಿ ನಗದು ಪಾವತಿಸಿ ಟಿಕೆಟ್ ಪಡೆಯಬಹುದು. ವಿರೂಪಾಕ್ಷೇಶ್ವರ ದೇವಸ್ಥಾನ ಹಿಂದೂ ಧಾರ್ಮಿಕ ದತ್ತಿ ಇಲಾಖೆಯ ವ್ಯಾಪ್ತಿಗೆ ಬರಲಿದ್ದು, ಎಂದಿನಂತೆ ನಿರ್ಬಂಧ ಮುಂದುವರಿಯಲಿದೆ' ಎಂದು ಭಾರತೀಯ ಪುರಾತತ್ವ ಸರ್ವೇಕ್ಷಣ ಇಲಾಖೆ ಹಂಪಿ ವೃತ್ತದ ಡೆಪ್ಯುಟಿ ಸೂಪರಿಟೆಂಡೆಂಟ್ ಪಿ. ಕಾಳಿಮುತ್ತು ತಿಳಿಸಿದ್ದಾರೆ.

# ಮೃಗಾಲಯ ಪ್ರವೇಶ: ಕೋವಿಡ್ ಪರೀಕ್ಷೆಗೆ ಚಿಂತನೆ

**ಮೈಸೂರು:** ರಾಜ್ಯದ ಎಲ್ಲ 9 ಮೃಗಾಲಯಗಳಲ್ಲಿ ಪ್ರವಾಸಿಗರನ್ನು ಕೋವಿಡ್ ಪರೀಕ್ಷೆಗೆ (ರ್‍ಯಾಪಿಡ್ ಆ್ಯಂಟಿಜೆನ್ ಟೆಸ್ಟ್) ಒಳಪಡಿಸಿದ ಬಳಿಕವಷ್ಟೇ ಪ್ರವೇಶ ನೀಡಲು ಚಿಂತಿಸಲಾಗಿದೆ ಎಂದು ಕರ್ನಾಟಕ ಮೃಗಾಲಯ ಪ್ರಾಧಿಕಾರದ ಅಧ್ಯಕ್ಷ ಎಲ್‌.ಆರ್‌.ಮಹದೇವಸ್ವಾಮಿ ಬುಧವಾರ ತಿಳಿಸಿದರು.

'ಕೋವಿಡ್ ಪರೀಕ್ಷೆ ನಡೆಸುವ ಸಂಬಂಧ ಆರೋಗ್ಯ ಇಲಾಖೆಯೊಂದಿಗೆ ಚರ್ಚಿಸಲಾಗುವುದು. ಈಗಾಗಲೇ ಹಂಪಿ, ಬೆಳಗಾವಿ ಹಾಗೂ ಗದಗ ಕಿರು ಮೃಗಾಲಯಗಳನ್ನು ಸಾರ್ವಜನಿಕರ ವೀಕ್ಷಣೆಗೆ ತೆರೆಯಲಾಗಿದೆ' ಎಂದು ಸುದ್ದಿಗೋಷ್ಠಿಯಲ್ಲಿ ತಿಳಿಸಿದರು.

'2020ರ ಜುಲೈ 29ರಿಂದ 2021ರ ಜೂನ್ 21ರವರೆಗೆ ಪ್ರಾಧಿಕಾರಕ್ಕೆ ಒಟ್ಟು ₹ 2.92 ಕೋಟಿ ದೇಣಿಗೆ ಬಂದಿದೆ. ಪ್ರಾಣಿಗಳ ನೆರವಿಗೆ ಬರುವಂತೆ ನಟ ದರ್ಶನ್ ಈ ತಿಂಗಳ 5ರಂದು ಕರೆ ನೀಡಿದ ನಂತರವೇ ₹ 1.76 ಕೋಟಿ ದೇಣಿಗೆ ಸಾರ್ವಜನಿಕರಿಂದ ಬಂದಿದೆ. ಪ್ರಾಣಿಗಳನ್ನು ದತ್ತು ಪಡೆದ ಎಲ್ಲರಿಗೂ ದರ್ಶನ ಅವರಿಂದಲೇ ಪ್ರಮಾಣಪತ್ರ ಕೊಡಿಸಲಾಗುವುದು' ಎಂದರು.

# ಮುಂದಿನ ಸಿ.ಎಂ ಚರ್ಚೆ ಅನಗತ್ಯ: ಯತೀಂದ್ರ

**ಮೈಸೂರು:** 'ಮುಂದಿನ ಮುಖ್ಯಮಂತ್ರಿ ತಾವೇ ಎಂದು ಸಿದ್ದರಾಮಯ್ಯ ಎಲ್ಲೂ ಹೇಳಿಲ್ಲ. ಕೆಲ ಶಾಸಕರಷ್ಟೇ ತಮ್ಮ ವೈಯಕ್ತಿಕ ಅಭಿಪ್ರಾಯ ಹೇಳಿದ್ದಾರೆ. ಹೀಗಾಗಿ, ಈ ಕುರಿತು ಮಾತನಾಡುವುದು ಅನಗತ್ಯ' ಎಂದು ಶಾಸಕ ಡಾ.ಯತೀಂದ್ರ ಸಿದ್ದರಾಮಯ್ಯ ಬುಧವಾರ ತಿಳಿಸಿದರು.

'ಶಾಸಕರ ವೈಯಕ್ತಿಕ ಅಭಿಪ್ರಾಯದ ಆಧಾರದ ಮೇಲೆ ವಿರೋಧ ಪಕ್ಷದ ನಾಯಕರು ಮತ್ತು ಕೆಪಿಸಿಸಿ ಅಧ್ಯಕ್ಷರ ನಡುವೆ ಒಡಕು ಉಂಟಾಗಿದೆ ಎಂದು ಬಿಂಬಿಸುವುದು ಸರಿಯಲ್ಲ' ಎಂದರು.

ಶಾಸಕ ಬೈರತಿ ಸುರೇಶ್ ನೇತೃತ್ವದಲ್ಲಿ ಮಹದೇವಪುರ ಕ್ಷೇತ್ರ ವ್ಯಾಪ್ತಿಯ ಬೈರತಿ ಹಾಗೂ ಕಣ್ಣೂರಿನಲ್ಲಿ ಆಯೋಜಿಸಿದ್ದ ಬಡವರಿಗೆ ದಿನಸಿ ಕಿಟ್ ವಿತರಿಸುವ ಕಾರ್ಯಕ್ರಮಕ್ಕೆ ವಿರೋಧ ಪಕ್ಷದ ನಾಯಕ ಸಿದ್ದರಾಮಯ್ಯ ಚಾಲನೆ ನೀಡಿದರು. ಶಾಸಕರಾದ ಶರತ್ ಬಚ್ಚೇಗೌಡ, ರಿಜ್ವಾನ್ ಅರ್ಷದ್, ಕಾಂಗ್ರೆಸ್ ಮುಖಂಡರು ಹಾಗೂ ಕಾರ್ಯಕರ್ತರು ಇದ್ದರು.

ಪ್ರಜಾವಾಣಿ facebook LIVE
FB.com/prajavani.net
ಸರಣಿ ಚಿಂತನೆ
ಕೊರೊನಾ ಕಾಡಿದ ಸಮಯ ಆಗಿದ್ದು - ಆಗಬೇಕಾದ್ದು
ವಿಷಯ: ಸಾಮಾಜಿಕ ತಲ್ಲಣಗಳು

ಪ್ರೊ.ಚಂದನ್ ಗೌಡ, ಪ್ರಾಧ್ಯಾಪಕರು
ಶ್ರೀ ರಾಮಕೃಷ್ಣ ಹೆಗಡೆ ಪೀಠ, ISEC, ಬೆಂಗಳೂರು.
ಇಂದು ಸಂಜೆ 6.30 ರಿಂದ
ನಾಳೆ 6.30 ರಿಂದ
ಶುಕ್ರವಾರ, 25ನೇ ಜೂನ್
ಡಾ. ನಿರಂಜನಾರಾಧ್ಯ ವಿ.ಪಿ. ಅವರಿಂದ ಚಿಂತನೆ
ನತದೃಷ್ಟ ಶಾಲಾ ಮಕ್ಕಳು

‘ರಾಜ್ಯದಲ್ಲಿ ಕಾಂಗ್ರೆಸ್ ಪಕ್ಷವನ್ನು ಮತ್ತೆ ಅಧಿಕಾರಕ್ಕೆ ತರುವುದಷ್ಟೇ ನನ್ನ ಮೊದಲ ಗುರಿಯಾಗಿದೆ’

# ಸಿ.ಎಂ ಆಗುವ ಆತುರವಿಲ್ಲ: ಡಿಕೆಶಿ

ಪ್ರಜಾವಾಣಿ ವಾರ್ತೆ

ಬೆಂಗಳೂರು: ‘ಮುಖ್ಯಮಂತ್ರಿ ಆಗುವ ಆತುರದಲ್ಲಿ ನಾನಿಲ್ಲ. ಪಕ್ಷವನ್ನು ಅಧಿಕಾರಕ್ಕೆ ತರುವುದಷ್ಟೇ ನನ್ನ ಗುರಿ’ ಎಂದು ಪುನರುಚ್ಚರಿಸಿರುವ ಕೆಪಿಸಿಸಿ ಅಧ್ಯಕ್ಷ ಡಿ.ಕೆ. ಶಿವಕುಮಾರ್, ‘ವಿಧಾನಸೌಧದಲ್ಲಿ ಅಧಿಕಾರ ಹಿಡಿಯಲು ನನ್ನನ್ನು ಚಪ್ಪಡಿ ಕಲ್ಲಿನ ಮೆಟ್ಟಿಲು ಮಾಡಿಕೊಳ್ಳಿ ಎಂದು ನಾನೇ ಹೇಳಿದ್ದೇನೆ’ ಎಂದರು.

ಶಾಸಕ ರಾಮಪ್ಪ ಅವರ ಹೇಳಿಕೆಗೆ ಪ್ರತಿಕ್ರಿಯಿಸಿದ ಶಿವಕುಮಾರ್, ‘ಮುಖ್ಯಮಂತ್ರಿ ಆಗಬೇಕೆಂದು ನಾನು ಯಾವತ್ತಾದರೂ ಹೇಳಿದ್ದೀನಾ? ಯಾರ್‍ಯಾರು ಏನೇನು ಸಲಹೆ ಕೊಡುತ್ತಾರೊ ಕೊಡಲಿ. ಅದನ್ನು ಸ್ವೀಕರಿಸೋಣ’ ಎಂದರು.

ಸುದ್ದಿಗಾರರ ಜೊತೆ ಬುಧವಾರ ಮಾತನಾಡಿದ ಅವರು, ‘ಬಿಜೆಪಿ ಸಮಸ್ಯೆಗೂ, ಕಾಂಗ್ರೆಸ್ ವಿಚಾರಕ್ಕೂ ಬಹಳಷ್ಟು ವ್ಯತ್ಯಾಸವಿದೆ. ನಮ್ಮಲ್ಲಿ ಯಾವ ಕುರ್ಚಿಯೂ ಖಾಲಿ ಇಲ್ಲ. ನಮ್ಮ ಪೈಪೋಟಿ ಏನಿದ್ದರೂ ಬಿಜೆಪಿಯನ್ನು ಅಧಿಕಾರದಿಂದ ಇಳಿಸಿ, ಕಾಂಗ್ರೆಸ್ ಪಕ್ಷವನ್ನು ಅಧಿಕಾರಕ್ಕೆ ತರುವುದು. ಅದಕ್ಕೆ ನಾವು ಸಮಯ ನೀಡಬೇಕು. ಅದನ್ನು ಬಿಟ್ಟು ಬೇರೆ ವಿಚಾರಕ್ಕೆ ಸಮಯ ನೀಡುವುದು ವ್ಯರ್ಥ’ ಎಂದರು.

> ಡಿ.ಕೆ. ಶಿವಕುಮಾರ್ ಅವರಿಗೆ ವಯಸ್ಸಿದೆ. ಹಿಂದೆ ಅತ್ಯುತ್ತಮವಾಗಿ ಕೆಲಸ ಮಾಡಿದ್ದ ಸಿದ್ದರಾಮಯ್ಯನವರು 2023ಕ್ಕೆ ಮುಖ್ಯಮಂತ್ರಿ ಆಗಲಿ. ನಂತರ ಶಿವಕುಮಾರ್ ಆಗಲಿ
> **ರಾಮಪ್ಪ,** ಹರಿಹರ ಕ್ಷೇತ್ರದ ಶಾಸಕ

ಸಿದ್ದರಾಮಯ್ಯ ಅವರ ನೇತೃತ್ವದಲ್ಲಿ ಚುನಾವಣೆಗೆ ಹೋದರೆ ಮಾತ್ರ ಗೆಲುವು ಸಾಧ್ಯ ಎಂದು ಅಖಂಡ ಶ್ರೀನಿವಾಸಮೂರ್ತಿ ಹೇಳಿದ್ದಾರಲ್ಲ ಎಂಬ ಪ್ರಶ್ನೆಗೆ, ‘ಹೌದಾ..? ಬಹಳ ಸಂತೋಷ’ ಎಂದಷ್ಟೆ ಪ್ರತಿಕ್ರಿಯಿಸಿದರು.

‘ಶಾಸಕರ ಇಂಥ ಹೇಳಿಕೆಗಳಿಂದ ಗೊಂದಲ ಸೃಷ್ಟಿ ಆಗುವುದಿಲ್ಲವೇ’ ಎಂಬ ಪ್ರಶ್ನೆಗೆ, ‘ಈ ವಿಚಾರವಾಗಿ ಪಕ್ಷದ ಹೈಕಮಾಂಡ್‌ಗೆ ಏನು ಹೇಳಬೇಕೊ ಅದನ್ನು ಹೇಳಿದ್ದೇನೆ. ಶಾಸಕರ ಹೇಳಿಕೆಗಳನ್ನು ಶಾಸಕಾಂಗ ಪಕ್ಷದ ನಾಯಕರು ನೋಡಿಕೊಳ್ಳುತ್ತಾರೆ. ಅವರು ನೋಡಿಕೊಳ್ಳದಿದ್ದರೆ, ಆ ಬಗ್ಗೆ ಗಮನಹರಿಸಲು ಕಾಂಗ್ರೆಸ್ ಪಕ್ಷ ಬದುಕಿದೆ’ ಎಂದರು.

## ಸಿದ್ದರಾಮಯ್ಯ ಪರ ಹೈಕಮಾಂಡ್ ಭೇಟಿ: ಅಖಂಡ ಶ್ರೀನಿವಾಸ ಮೂರ್ತಿ

ಬೆಂಗಳೂರು: ‘ಸಿದ್ದರಾಮಯ್ಯ ಮುಂದಿನ ಮುಖ್ಯಮಂತ್ರಿ ಅಭ್ಯರ್ಥಿ ಎಂದು ಘೋಷಿಸಿ ಚುನಾವಣೆ ಎದುರಿಸಿದರೆ ಕಾಂಗ್ರೆಸ್ 130ರಿಂದ 150 ಸೀಟುಗಳನ್ನು ಗೆಲ್ಲುವುದು ಖಚಿತ. ಸಿದ್ದರಾಮಯ್ಯ ಅವರ ಪರವಿರುವ ಕಾಂಗ್ರೆಸ್ ನಾಯಕರೆಲ್ಲ ಹೈಕಮಾಂಡ್ ನಾಯಕರನ್ನು ಭೇಟಿಯಾಗಿ ಒತ್ತಡ ಹೇರುತ್ತೇವೆ’ ಎಂದು ಪುಲಕೇಶಿನಗರ ಕ್ಷೇತ್ರದ ಕಾಂಗ್ರೆಸ್ ಶಾಸಕ ಅಖಂಡ ಶ್ರೀನಿವಾಸ ಮೂರ್ತಿ ಹೇಳಿದರು.

‘ಯಾರೂ ಗೊಂದಲ ಸೃಷ್ಟಿಬೇಡಿ’ ಎಂದು ಹೈಕಮಾಂಡ್ ಎಚ್ಚರಿಕೆ ನೀಡಿದ ಬಳಿಕವೂ ಧ್ವನಿ ಎತ್ತಿದ ಶ್ರೀನಿವಾಸ ಮೂರ್ತಿ, ‘ಜನರು ಕೂಡ ಸಿದ್ದರಾಮಯ್ಯ ಮುಂದಿನ ಮುಖ್ಯಮಂತ್ರಿ ಆಗಬೇಕು ಎನ್ನುತ್ತಿದ್ದಾರೆ. ನನ್ನ ಅಭಿಪ್ರಾಯ ಕೂಡ ಅದೇ’ ಎಂದರು.

‘ಸಿದ್ದರಾಮಯ್ಯ ಮುಖ್ಯಮಂತ್ರಿಯಾದರೆ ರಾಜ್ಯಕ್ಕೆ ಒಳ್ಳೆಯದಾಗುತ್ತದೆ. ಸಿದ್ದರಾಮಯ್ಯ, ಡಿ.ಕೆ. ಶಿವಕುಮಾರ್ ಪಕ್ಷದ ನಾಯಕರು’ ಎಂದರು. ನನ್ನ ಮನೆಯನ್ನು ಬೆಂಕಿ ಹಚ್ಚಿ ಸುಟ್ಟು ಹಾಕಿದ ಪ್ರಕರಣದ ಬಗ್ಗೆ ಪಕ್ಷದ ಉಸ್ತುವಾರಿಯನ್ನು ಭೇಟಿ ಮಾಡಿ ವಿವರಿಸಿದ್ದೇನೆ. ಮಾಜಿ ಮೇಯರ್ ಸಂಪತ್ ರಾಜ್ ವಿರುದ್ಧ ದೂರು ಕೊಟ್ಟಿದ್ದೇನೆ. ನಮ್ಮ ವಿರೋಧಿಗಳನ್ನು ಜೊತೆ ಸೇರಿಸಿಕೊಂಡು ಡಿ.ಕೆ. ಶಿವವಕುಮಾರ್ ಓಡಾಡುತ್ತಿದ್ದಾರೆ. ಸಿದ್ದರಾಮಯ್ಯ, ಜಮೀರ್ ನನ್ನ ಪರ ಇದ್ದಾರೆ’ ಎಂದರು.

## ‘ಅಧಿಕಾರಕ್ಕೆ ಜೋತು ಬಿದ್ದವರಿಂದ ಗೊಂದಲ’

ಡಿ.ಕೆ. ಸುರೇಶ್

ಬೆಂಗಳೂರು: ‘ನಿಜವಾದ ಕಾಂಗ್ರೆಸ್ಸಿಗರು ಪಕ್ಷ ಸಂಘಟನೆಯತ್ತ ಗಮನಹರಿಸುತ್ತಾರೆ. ಅಧಿಕಾರಕ್ಕಾಗಿಯೇ ಪಕ್ಷಕ್ಕೆ ಬಂದಿರುವವರು, ಅಧಿಕಾರಕ್ಕೆ ಜೋತು ಬಿದ್ದಿರುವವರು ಗೊಂದಲ ಸೃಷ್ಟಿಸುತ್ತಾರೆ’ ಎಂದು ಬೆಂಗಳೂರು ಗ್ರಾಮಾಂತರ ಲೋಕಸಭಾ ಕ್ಷೇತ್ರದ ಸದಸ್ಯ ಡಿ.ಕೆ. ಸುರೇಶ್ ಹೇಳಿದರು.

‘ಗೊಂದಲ ಸೃಷ್ಟಿಸುತ್ತಿರುವವರ ವಿರುದ್ಧ ಶಿಸ್ತು, ಅಶಿಸ್ತು ಕ್ರಮ ಕೈಗೊಳ್ಳುವ ವಿಚಾರ ಪಕ್ಷದ ಹೈಕಮಾಂಡ್‌ಗೆ ಬಿಟ್ಟದ್ದು. ವರಿಷ್ಠರು ಅದನ್ನು ನೋಡಿಕೊಳ್ಳುತ್ತಾರೆ’ ಎಂದರು.

‘ಸದ್ಯಕ್ಕೆ ಕಾಂಗ್ರೆಸ್ ಪಕ್ಷ ಅಧಿಕಾರದಲ್ಲಿಲ್ಲ. ಮುಖ್ಯಮಂತ್ರಿ ಸ್ಥಾನ ಖಾಲಿಯೂ ಇಲ್ಲ. ಕಾಂಗ್ರೆಸ್‌ನ ಈಗಿನ ಶಾಸಕರು ಮುಂದಿನ ಶಾಸಕಾಂಗ ಪಕ್ಷದ ಸದಸ್ಯರಲ್ಲ. 2023ರ ಚುನಾವಣೆ ಗೆಲ್ಲುವ ಬಗ್ಗೆ ಶಾಸಕರು ಕೆಲಸ ಮಾಡಬೇಕಿದೆ. ಪಕ್ಷ ಸಂಘಟನೆಗೆ ಆದ್ಯತೆ ನೀಡಬೇಕು. ಕೆಲವರು ಈಗಲೇ ಮುಖ್ಯಮಂತ್ರಿ ಆಗುವುದಾದರೆ ದೇವರು ಅವರಿಗೆ ಒಳ್ಳೆಯದು ಮಾಡಲಿ’ ಎಂದರು.

## ಶೇ 50 ತೆರಿಗೆ ವಿನಾಯ್ತಿ: ಸವದಿ

ಬೆಂಗಳೂರು: ಕೋವಿಡ್ ಕಾರಣ ರಾಜ್ಯದಲ್ಲಿ ನೋಂದಾಯಿಸಿದ ಎಲ್ಲ ಪ್ರಯಾಣಿಕ ವಾಹನಗಳಿಗೆ ಅನ್ವಯಿಸುವಂತೆ ಜೂನ್ ತಿಂಗಳ ಮೋಟಾರು ವಾಹನ ತೆರಿಗೆ ಪಾವತಿಯಲ್ಲಿ ಶೇ 50 ವಿನಾಯ್ತಿ ಪ್ರಕಟಿಸಲಾಗಿದೆ.

ಸಾರಿಗೆ ಸಚಿವರೂ ಆಗಿರುವ ಉಪಮುಖ್ಯಮಂತ್ರಿ ಲಕ್ಷ್ಮಣ ಸವದಿಯವರು ಪತ್ರಿಕಾ ಪ್ರಕಟಣೆಯಲ್ಲಿ ಈ ವಿಷಯ ತಿಳಿಸಿದ್ದಾರೆ.

ಕೋವಿಡ್ ಲಾಕ್‌ಡೌನ್ ಇದ್ದ ಕಾರಣ ಪ್ರಯಾಣಿಕ ವಾಹನ ಸಂಚಾರಕ್ಕೆ ನಿರ್ಬಂಧಗಳನ್ನು ವಿಧಿಸಲಾಗಿತ್ತು. ಆದ್ದರಿಂದ ಇದನ್ನು ವಿಶೇಷ ಪ್ರಕರಣವೆಂದು ಪರಿಗಣಿಸಿ ಮೋಟಾರು ವಾಹನ ತೆರಿಗೆ ಕಾಯ್ದೆ 1957 ರ ಕಲಂ 16 (1)ರ ಅನ್ವಯ ಈ ರಿಯಾಯ್ತಿ ನೀಡಲಾಗಿದೆ ಎಂದು ತಿಳಿಸಿದ್ದಾರೆ.

### ಜಲಾಶಯದ ನೀರಿನ ಮಟ್ಟ (ಸಮುದ್ರ ಮಟ್ಟದಿಂದ)

| ಜಲಾಶಯ | ಗರಿಷ್ಠ ಮಟ್ಟ (ಅಡಿಗಳಲ್ಲಿ) | ಇಂದಿನ ಮಟ್ಟ | ಒಳಹರಿವು (ಕ್ಯುಸೆಕ್‌ಗಳಲ್ಲಿ) | ಹೊರಹರಿವು (ಕ್ಯುಸೆಕ್‌ಗಳಲ್ಲಿ) |
|---|---|---|---|---|
| ಕೆ ಆರ್ ಎಸ್* | 124.80 | 95.25 | 7,798 | 1,618 |
| ಹಾರಂಗಿ | 2,859 | 2,838.42 | 940 | 80 |
| ಕಬಿನಿ | 2,284 | 2,276.92 | 6,080 | 3,000 |
| ಹೇಮಾವತಿ | 2,922 | 2,894.10 | 3,634 | 200 |
| ಲಿಂಗನಮಕ್ಕಿ | 1,819 | 1,785.65 | 6,580 | ಶೂನ್ಯ |
| ಸೂಪಾ (ಮೀ) | 564 | 539.16 | 4,052 | 5,219 |
| ಮಾಣಿ | 594.36 | 573.94 | 655 | ಶೂನ್ಯ |
| ತುಂಗಭದ್ರಾ | 1,633 | 1,604.60 | 32,343 | 254 |
| ಮಲಪ್ರಭಾ | 2,079.50 | 2,061.80 | 7,011 | 194 |
| ಘಟಪ್ರಭಾ | 2,175 | 2,128.43 | 12,972 | 117 |
| ಭದ್ರಾ | 186 | 153 | 4,872 | 80 |
| ಆಲಮಟ್ಟಿ (ಮೀ) | 519.60 | 517.200 | 1,17,197 | 867 |
| ನಾರಾಯಣಪುರ (ಮೀ) | 492.25 | 489.12 | 43,000 | 46,500 |

* ನೆಲಮಟ್ಟದಿಂದ

# ‘ವಿಲ ವಿಲ ಒದ್ದಾಡುತ್ತಿರುವ ಕಾಂಗ್ರೆಸ್ಸಿಗರು’

## ಬಿಜೆಪಿ ರಾಜ್ಯ ಮಟ್ಟದ ‘ಇ ಪ್ರಶಿಕ್ಷಣ’ ಚಿಂತನ ವರ್ಗದಲ್ಲಿ ಪ್ರಲ್ಹಾದ ಜೋಶಿ ಹೇಳಿಕೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಪ್ರಧಾನಿ ನರೇಂದ್ರ ಮೋದಿಯವರು ಜನ್‌ಧನ್ ಯೋಜನೆಯಡಿ ದೇಶದ 46 ಕೋಟಿ ಜನರ ಬ್ಯಾಂಕ್ ಖಾತೆಗಳನ್ನು ತೆರೆಸಿ ನೇರ ನಗದು ವರ್ಗಾವಣೆ (ಡಿಬಿಟಿ) ಜಾರಿ ಮಾಡಿದ್ದಾರೆ. ಇದು ಒಂದು ರೂಪಾಯಿ ಭ್ರಷ್ಟಾಚಾರವಿಲ್ಲದ ಯೋಜನೆ ಎಂದು ಕೇಂದ್ರ ಕಲ್ಲಿದ್ದಲು, ಗಣಿ ಮತ್ತು ಸಂಸದೀಯ ವ್ಯವಹಾರ ಸಚಿವ ಪ್ರಲ್ಹಾದ ಜೋಶಿ ಹೇಳಿದರು.

ಬಿಜೆಪಿ ರಾಜ್ಯ ಮಟ್ಟದ ‘ಇ ಪ್ರಶಿಕ್ಷಣ’ ಚಿಂತನವರ್ಗದಲ್ಲಿ ವೆಬೆಕ್ಸ್ ಮೂಲಕ ಅವರು ಮಾತನಾಡಿದರು.

‘ಯುಪಿಎ ಅವಧಿಯಲ್ಲಿ ಭ್ರಷ್ಟಾಚಾರದಲ್ಲಿ ಮುಳುಗಿದ್ದ ಕಾಂಗ್ರೆಸ್ ಮುಖಂಡರಿಗೆ ಈಗ ಅಧಿಕಾರವಿಲ್ಲದೇ ವಿಲವಿಲ ಒದ್ದಾಡುವಂತಾಗಿದೆ’ ಎಂದರು.

ಬ್ಯಾಂಕ್‌ಗಳ ರಾಷ್ಟ್ರೀಕರಣ ಮಾಡಿದರೂ ದೇಶದ ಬಡ ಜನರಿಗೆ ಅದರ ಪ್ರಯೋಜನ ಸಿಗಲಿಲ್ಲ. ಪ್ರಧಾನಿ ಮೋದಿಯವರ ಒಂದು ನಿರ್ಧಾರ ಬಡವರ ಬಾಳಿಗೆ ಬೆಳಕಾಯಿತು. ಕಾಂಗ್ರೆಸ್‌ನವರ ಗರೀಬಿ ಹಟಾವೋ ಒಂದು ಘೋಷಣೆಯಾಗಿತ್ತೇ ವಿನಾ ಅದರಿಂದ ಬಡವರ ಏಳಿಗೆ ಆಗಲಿಲ್ಲ. ಅವರ ಅವಧಿಯಲ್ಲಿ ಭ್ರಷ್ಟಾಚಾರ ತಾರಕಕ್ಕೆ ಏರಿತ್ತು ಎಂದು ಅವರು ಟೀಕಿಸಿದರು.

ಒಂದು ದೇಶದಲ್ಲಿ ಎರಡು ಕಾಯ್ದೆ ಇರಬಾರದು ಎಂಬ ಚಿಂತನೆ ಭಾರತೀಯ ಜನಸಂಘದ ಸ್ಥಾಪಕರಾದ ಡಾ.ಶ್ಯಾಮಪ್ರಸಾದ್ ಮುಖರ್ಜಿ ಅವರದಾಗಿತ್ತು. ಅದನ್ನು ಮೋದಿ ಅವರು, ಜಮ್ಮು ಮತ್ತು ಕಾಶ್ಮೀರಕ್ಕೆ 370 ನೇ ವಿಧಿಯಡಿ ನೀಡಿದ್ದ ವಿಶೇಷ ಸ್ಥಾನಮಾನವನ್ನು ರದ್ದುಪಡಿಸುವ ಮೂಲಕ ಈಡೇರಿಸಿದ್ದಾರೆ ಎಂದು ಪ್ರಲ್ಹಾದ ಜೋಶಿ ಅವರು ವಿವರಿಸಿದರು.

ಈ ಹಿಂದೆ ರಾಜ್ಯದಲ್ಲಿ ಬೆಂಗಳೂರು ಮತ್ತು ಮಂಗಳೂರಿನಲ್ಲಿ ಮಾತ್ರ ವಿಮಾನ ನಿಲ್ದಾಣಗಳಿದ್ದವು. ಈಗ ಉಡಾನ್ ಯೋಜನೆಯಡಿ ಹುಬ್ಬಳ್ಳಿ, ಬೆಳಗಾವಿ, ತೋರಣಗಲ್, ಬೀದರ್ ಮತ್ತು ಕಲಬುರ್ಗಿ ಜಿಲ್ಲೆಗಳಲ್ಲೂ ವಿಮಾನ ನಿಲ್ದಾಣ ಅಭಿವೃದ್ಧಿಪಡಿಸಲಾಗಿದೆ ಎಂದು ತಿಳಿಸಿದರು.

ಕಾರ್ಯಕ್ರಮದಲ್ಲಿ ರಾಜ್ಯ ಬಿಜೆಪಿ ಅಧ್ಯಕ್ಷ ನಳಿನ್ ಕುಮಾರ್ ಕಟೀಲ್ ಭಾಗವಹಿಸಿದ್ದರು.

ರಾಜ್ಯದಲ್ಲಿ 300 ಕಡೆಗಳಲ್ಲಿ ವೆಬೆಕ್ಸ್ ಮೂಲಕ ಚಿಂತನ ವರ್ಗ ನಡೆಯಿತು.

# ಇನಾಂ ಜಮೀನು ಕಾಯ್ದೆಗೆ ತಿದ್ದುಪಡಿ ಚಿಂತನೆ: ಅಶೋಕ

ಪ್ರಜಾವಾಣಿ ವಾರ್ತೆ

ಬೆಂಗಳೂರು: ರೈತರಿಗೆ ನೆರವಾಗುವ ಉದ್ದೇಶದಿಂದ ಇನಾಂ ಜಮೀನು ಕಾಯ್ದೆಗೆ ತಿದ್ದುಪಡಿ ತರಲು ಚಿಂತನೆ ನಡೆಸಲಾಗಿದೆ ಎಂದು ಕಂದಾಯ ಸಚಿವ ಆರ್.ಅಶೋಕ ಹೇಳಿದ್ದಾರೆ.

ಬುಧವಾರ ಸುದ್ದಿಗಾರರ ಜತೆ ಮಾತನಾಡಿದ ಅವರು, ರಾಜ್ಯದಲ್ಲಿ 70 ಸಾವಿರ ಎಕರೆಗಿಂತಲೂ ಹೆಚ್ಚಿನ ಭೂಮಿ ಇನಾಂ ವ್ಯಾಪ್ತಿಯಲ್ಲಿದೆ. ರಾಜ–ಮಹಾರಾಜರು, ಬ್ರಿಟಿಷ್ ಕಾಲದಲ್ಲಿ 500 ರಿಂದ 1000 ಎಕರೆಯಷ್ಟು ಇನಾಂ ಜಮೀನುಗಳನ್ನು ನೀಡಲಾಗಿತ್ತು ಎಂದರು.

ರೈತರು ಅಲ್ಲಿ ಉಳುಮೆ ಮಾಡಿಕೊಂಡಿದ್ದರು. ಇನಾಂ ಜಮೀನಿನಲ್ಲಿ ಸಾಗುವಳಿ ಮಾಡುತ್ತಿದ್ದ ರೈತರಿಗೆ ಪಹಣಿ ಕೊಡುವ ಕೆಲಸ ಕೂಡಾ ಆಗುತ್ತಿತ್ತು. ಇನಾಂ ಕಾಯ್ದೆ ರದ್ದಾದಾಗ ತಿಳಿವಳಿಕೆಯ ಕೊರತೆಯಿಂದ ಲಕ್ಷಾಂತರ ರೈತರು ಅರ್ಜಿಯನ್ನೇ ಸಲ್ಲಿಸಿರಲಿಲ್ಲ. ಈಗ ಅವರಿಗೊಂದು ಅವಕಾಶ ನೀಡುವ ನಿಟ್ಟಿನಲ್ಲಿ ಇನಾಂ ಜಮೀನು ಕಾಯ್ದೆಗೆ ತಿದ್ದುಪಡಿ ತರಲು ನಿರ್ಧರಿಸಲಾಗಿದೆ ಎಂದು ಹೇಳಿದರು.

ರಾಜ್ಯದ ಬೇರೆ ಬೇರೆ ಭಾಗಗಳಲ್ಲಿದ್ದ 70 ಸಾವಿರ ಎಕರೆ ಇನಾಂ ಜಮೀನು ಕುರಿತು ಪರಿಶೀಲನೆ ನಡೆಸಿ ವರದಿ ನೀಡಲು ನಿವೃತ್ತ ಅಧಿಕಾರಿ ಪಿ.ಎಸ್.ವಸ್ತ್ರದ ನೇತೃತ್ವದಲ್ಲಿ ಸಮಿತಿ ರಚಿಸಲಾಗಿತ್ತು. ಆ ಸಮಿತಿಯು ರೈತರಿಗೆ ಅರ್ಜಿ ಸಲ್ಲಿಸಲು ಒಂದಿಷ್ಟು ಕಾಲಾವಕಾಶ ನೀಡಬೇಕು ಎಂದು ಶಿಫಾರಸು ಮಾಡಿತ್ತು. ಈ ಕಾರಣದಿಂದ ಕಾಲಾವಕಾಶ ನೀಡಲು ನಿರ್ಧರಿಸಲಾಗಿದೆ ಎಂದರು.

**ಸತೀಶ್ ರೆಡ್ಡಿ ಪಾತ್ರ ಇಲ್ಲ:** ಬೆಡ್ ಬ್ಲಾಕಿಂಗ್ ದಂಧೆಯಲ್ಲಿ ಶಾಸಕ ಸತೀಶ್ ರೆಡ್ಡಿಯವರ ಪಾತ್ರ ಇಲ್ಲ ಎಂದು ತಿಳಿದು ಬಂದಿದೆ. ಅವರ ವಿರುದ್ಧ ಆಧಾರ ರಹಿತ ಆರೋಪ ಮಾಡುತ್ತಿರುವುದರಿಂದ ಅವರಿಗೂ ಬೇಸರವಾಗಿದೆ ಎಂದು ಅಶೋಕ ಪ್ರಶ್ನೆಯೊಂದಕ್ಕೆ ಉತ್ತರಿಸಿದರು.

# ಅಬಕಾರಿ ಇಲಾಖೆ ಭ್ರಷ್ಟಾಚಾರ: ಎಸಿಬಿಗೆ ಕೆಆರ್‌ಎಸ್ ದೂರು

ಬೆಂಗಳೂರು: ಅಬಕಾರಿ ಸಚಿವ ಕೆ. ಗೋಪಾಲಯ್ಯ ಅವರಿಗೆ ನೀಡುವುದಕ್ಕಾಗಿ ಪ್ರತಿ ಜಿಲ್ಲೆಯಿಂದ ₹ 5 ಲಕ್ಷ ಸಂಗ್ರಹಿಸಲಾಗಿದೆ ಎಂಬ ಅಧಿಕಾರಿಗಳ ದೂರವಾಣಿ ಸಂಭಾಷಣೆಯ ರೆಕಾರ್ಡಿಂಗ್ ಕುರಿತು ತನಿಖೆ ನಡೆಸುವಂತೆ ಭ್ರಷ್ಟಾಚಾರ ನಿಗ್ರಹ ದಳಕ್ಕೆ(ಎಸಿಬಿ) ಕರ್ನಾಟಕ ರಾಷ್ಟ್ರ ಸಮಿತಿ(ಕೆಆರ್‌ಎಸ್) ಪಕ್ಷ ದೂರು ನೀಡಿದೆ.

ಕೊಪ್ಪಳ ಜಿಲ್ಲೆಯ ಅಬಕಾರಿ ಇಲಾಖೆ ಉಪ ಆಯುಕ್ತೆ ಸಿ. ಸೆಲೆನಾ ಮತ್ತು ಅಬಕಾರಿ ನಿರೀಕ್ಷಕ ಅಜಯ್ ಅವರು ಮೊಬೈಲ್ ದೂರವಾಣಿಯಲ್ಲಿ ನಡೆಸಿರುವ ಸಂಭಾಷಣೆ ಗಮನಿಸಿದರೆ ₹5 ಲಕ್ಷ ಸಂಗ್ರಹಿಸಲಾಗುತ್ತಿದೆ ಎಂಬ ಅಂಶ ತಿಳಿಯುತ್ತದೆ. ಸಂಭಾಷಣೆಯಲ್ಲಿ ಕುಮಾರ್, ಮಂಜುನಾಥ್, ರಮೇಶ್, ನಾಗರಾಜ್, ಪಾಷ, ಶಿವಪ್ರಸಾದ್, ಸುಮತಿ, ನಾಗರಾಜಪ್ಪ ಹಾಗೂ ಕೆಲ ಅಧಿಕಾರಿಗಳ ಪದನಾಮ ಮತ್ತು ಊರುಗಳನ್ನು ಉಲ್ಲೇಖಿಸಲಾಗಿದೆ.

‘ಸಂಭಾಷಣೆ ಗಮನಿಸಿದರೆ ಅಬಕಾರಿ ಇಲಾಖೆಯಲ್ಲಿ ಭ್ರಷ್ಟಾಚಾರ ನಡೆದಿರುವುದು ಕಂಡು ಬರುತ್ತದೆ. ಕೆಲ ಅಧಿಕಾರಿಗಳನ್ನು ಅಮಾನತು ಮಾಡಲಾಗಿದೆ. ಸಂಭಾಷಣೆಯ ಸಿಡಿಯನ್ನು ಸಾಕ್ಷ್ಯವಾಗಿ ನೀಡಲಾಗುತ್ತಿದೆ. ಭ್ರಷ್ಟಾಚಾರ ನಿಗ್ರಹ ಕಾಯ್ದೆಯಡಿ ಪ್ರಕರಣ ದಾಖಲಿಸಿ ಸಂಬಂಧಿಸಿದ ಅಧಿಕಾರಿಗಳನ್ನು ಮಂಪರು ಪರೀಕ್ಷೆಗೆ ಒಳಪಡಿಸಬೇಕು. ಹಣ ಸಂಗ್ರಹಣೆ ಮತ್ತು ವರ್ಗಾವಣೆ ಜಾಲವನ್ನು ಭೇದಿಸಬೇಕು’ ಎಂದು ಕೆಆರ್‌ಎಸ್ ಪಕ್ಷದ ಬೆಂಗಳೂರು ನಗರ ಘಟಕದ ಅಧ್ಯಕ್ಷ ಎಸ್.ಮಂಜುನಾಥ್, ರಾಜ್ಯ ಜಂಟಿ ಕಾರ್ಯದರ್ಶಿ ರಘುಪತಿ ಭಟ್ ದೂರಿನಲ್ಲಿ ಆಗ್ರಹಿಸಿದ್ದಾರೆ.

ನಿಧನವಾರ್ತೆ

## ಆದರ್ಶ ರೈತ ಮಹಿಳೆ ಸುಮಂಗಲಮ್ಮ

ಮೊಳಕಾಲ್ಮುರು (ಚಿತ್ರದುರ್ಗ): ಟ್ರ್ಯಾಕ್ಟರ್ ಚಾಲನಾ ಪರವಾನಗಿ ಪಡೆದು ಜಮೀನು ಉಳುಮೆ ಮಾಡಿದ ರಾಜ್ಯದ ಮೊದಲ ಮಹಿಳೆ ಎಂಬ ಹೆಗ್ಗಳಿಕೆಗೆ ಪಾತ್ರವಾಗಿದ್ದ ಕೃಷಿ ಮಹಿಳೆ ಎಸ್.ವಿ. ಸುಮಂಗಲಮ್ಮ (69) ಅವರು ಬುಧವಾರ ಹೃದಯಾಘಾತದಿಂದ ನಿಧನರಾದರು.

ಅವರಿಗೆ ಪತಿ ವೀರಭದ್ರಪ್ಪ, ಪುತ್ರ ಹಾಗೂ ಪುತ್ರಿ ಇದ್ದಾರೆ. ಸಸ್ಯಕ್ಷೇತ್ರದಲ್ಲಿ ಬುಧವಾರ ಅಂತ್ಯಸಂಸ್ಕಾರ ನಡೆಯಿತು.

ಮೊಳಕಾಲ್ಮುರು ತಾಲ್ಲೂಕಿನ ಬಿ.ಜಿ. ಕೆರೆ ಗ್ರಾಮದ ಸುಮಂಗಲಮ್ಮ ಮತ್ತು ವೀರಭದ್ರಪ್ಪ ದಂಪತಿ ಕೃಷಿಯಲ್ಲಿ ಅತ್ಯುತ್ತಮ ಸಾಧನೆ ಮಾಡಿದ್ದಾರೆ. 70 ಎಕರೆ ಒಣ ಭೂಮಿಯಲ್ಲಿ ತೆಂಗಿನ ತೋಟ ನಿರ್ಮಿಸಿ ಮಾದರಿಯಾಗಿದ್ದಾರೆ. ರಾಜ್ಯ ಸರ್ಕಾರ 2020-21ನೇ ಸಾಲಿನ ರಾಜ್ಯೋತ್ಸವ ಪ್ರಶಸ್ತಿ ನೀಡಿ ಗೌರವಿಸಿತ್ತು.

ತೆಂಗಿನ ನೀರಾ ಇಳಿಸಿ ಇದಕ್ಕೆ ಬ್ರಾಂಡ್ ಸ್ವರೂಪ ನೀಡಿದ್ದರು. ರೇಷ್ಮೆ ಕೃಷಿಯ ಮಾದರಿಗಳನ್ನು ರೈತರ ಮುಂದೆ ಇಟ್ಟಿದ್ದರು. ಅವರು ಕೃಷಿಯಲ್ಲಿ ತಾಂತ್ರಿಕತೆ ಅಳವಡಿಸಿಕೊಂಡ ಪರಿ ಅಪರೂಪ. ಹಲವು ಜಿಲ್ಲೆಗಳಿಂದ ಜನರು ಇವರ ‘ವಸುಂಧರ ಸಸ್ಯಕ್ಷೇತ್ರ’ ನೋಡಲು ಬರುತ್ತಾರೆ.

ಕರ್ನಾಟಕ ಸರ್ಕಾರ ಜಿಲ್ಲಾ ಪಂಚಾಯತ್
ಗ್ರಾಮೀಣ ನೀರು ಸರಬರಾಜು ಮತ್ತು ನೈರ್ಮಲ್ಯ ವಿಭಾಗ, ಚಿತ್ರದುರ್ಗ.
Ph: 08194-234488, E-mail: eerdwsd.chd@gmail.com
ಸಂಖ್ಯೆ: ಗ್ರಾ.ನೀ.ಸ.&ನೈ.ವಿ./ಚಿ/ಇಇ/ವಾಹನ/ಟೆಂಡರ್/2021–22/248
ದಿನಾಂಕ: 21.06.2021
ಅಲ್ಪಾವಧಿ ಟೆಂಡರ್ ಪ್ರಕಟಣೆ
(ಇ–ಪ್ರೊಕ್ಯೂರ್‌ಮೆಂಟ್ ಪೋರ್ಟಲ್)
ಕರ್ನಾಟಕ ಸರ್ಕಾರದ ಮಾನ್ಯ ರಾಜ್ಯಪಾಲರ ಪರವಾಗಿ ಸ್ಟ್ಯಾಂಡರ್ಡ್ ಟೆಂಡರ್ ಡಾಕ್ಯೂಮೆಂಟ್ ನಿಬಂಧನೆಗೊಳಪಟ್ಟಂತೆ ನೊಂದಾಯಿತ ಟ್ರಾವೆಲ್ ಏಜೆನ್ಸೀಸ್‌ರವರಿಂದ ಇ–ಪ್ರೊಕ್ಯೂರ್‌ಮೆಂಟ್ ಪೋರ್ಟಲ್‌ನಲ್ಲಿ ಗ್ರಾಮೀಣ ಕುಡಿಯುವ ನೀರು ನೈರ್ಮಲ್ಯ ವಿಭಾಗ ವ್ಯಾಪ್ತಿಯ ಚಿತ್ರದುರ್ಗ, ಹಿರಿಯೂರು, ಹೊಳಲ್ಕೆರೆ ಮತ್ತು ಹೊಸದುರ್ಗ ಉಪ ವಿಭಾಗಗಳಿಗೆ ಬಾಡಿಗೆ ವಾಹನ ಸರಬರಾಜು ಮಾಡಲು ಅಲ್ಪಾವಧಿ ಟೆಂಡರ್ ಕರೆಯಲಾಗಿದೆ. ಇ–ಪ್ರೊಕ್ಯೂರ್‌ಮೆಂಟ್‌ನಲ್ಲಿ ಟೆಂಡರ್‌ದಾರರಿಗೆ ಭಾಗವಹಿಸಲು ಮಾತ್ರ ಅವಕಾಶವಿರುತ್ತದೆ. ಅರ್ಹ ಸರಬರಾಜುದಾರರಿಗೆ ಟೆಂಡರ್‌ಅನ್ನು ಸಲ್ಲಿಸಲು ಕೊನೆಯ ದಿನಾಂಕ: 30.06.2021ರ ಸಂಜೆ 04:00 ಗಂಟೆಗೆ ಹಾಗೂ ಟೆಂಡರ್ ತೆರೆಯುವ ದಿನಾಂಕ: 02.07.2021ರ ಸಂಜೆ 05:00 ಗಂಟೆಗೆ ನಿಗದಿಪಡಿಸಲಾಗಿರುತ್ತದೆ. ಹೆಚ್ಚಿನ ವಿವರಗಳಿಗೆ (https://eproc.karnataka.gov.in) OR E-proc Help Desk Phone No.: 080–25501216, 080–25501227 ಸಂಪರ್ಕಿಸಲು ಅಥವಾ ಕಾರ್ಯಪಾಲಕ ಅಭಿಯಂತರರು, ಗ್ರಾ.ನೀ.ಸ&ನೈ. ವಿಭಾಗ, ಚಿತ್ರದುರ್ಗರವರನ್ನು ಕಛೇರಿಯ ಕೆಲಸದ ವೇಳೆಯಲ್ಲಿ ಸಂಪರ್ಕಿಸಲು ಕೋರಿದೆ.
ಸಹಿ/– ಕಾರ್ಯಪಾಲಕ ಅಭಿಯಂತರರು, ಗ್ರಾ.ನೀ.ಸ&ನೈರ್ಮಲ್ಯ ವಿಭಾಗ, ಚಿತ್ರದುರ್ಗ.
RO No. 211: DIPR/CTA/MCA/2021-22

ಈಶಾನ್ಯ ಕರ್ನಾಟಕ ರಸ್ತೆ ಸಾರಿಗೆ ಸಂಸ್ಥೆ
ವಿಜಯಪುರ ವಿಭಾಗ, ವಿಜಯಪುರ
ಸಂಖ್ಯೆ:ಈಕರಸಾ/ವಿವಿ/ಸಂಚಾರ/ವಾಣಿಜ್ಯ/603/2021–22 ದಿನಾಂಕ:23.06.2021
ಬಹಿರಂಗ ಹರಾಜು ಪ್ರಕಟಣೆ ಸಂಖ್ಯೆ : 170/21/ಎಚ್–3
ಸಂಸ್ಥೆಯ ಹೊಸ ಸಾಮಾನ್ಯ ಸ್ಥಾಯಿ ಆದೇಶ ಸಂಖ್ಯೆ : 150/17, 170/20 & 172/21 ರನ್ವಯ ವಿಜಯಪುರ ವಿಭಾಗದ ವ್ಯಾಪ್ತಿಯಲ್ಲಿ ಬರುವ ಬಸ್ ನಿಲ್ದಾಣಗಳಲ್ಲಿ ಖಾಲಿ ಇರುವ ಹಾಗೂ ಖಾಲಿಯಾಗಲಿರುವ ವಾಣಿಜ್ಯ ಮಳಿಗೆಗಳು / ತೆರೆದ ಸ್ಥಳಗಳು / ಉಪಹಾರ ಗೃಹಗಳಿಗಾಗಿ ಬಹಿರಂಗ ಹರಾಜ್ ಆಹ್ವಾನಿಸಲಾಗಿದ್ದು, ಬಹಿರಂಗ ಹರಾಜಿಗೆ ಸಂಬಂಧಿಸಿದ ದಿನಾಂಕಗಳ ವಿವರ ಈ ಕೆಳಗಿನಂತೆ ಇರುತ್ತದೆ.

| ಕ್ರ.ಸಂ. | ಬಸ್ ನಿಲ್ದಾಣದ ಹೆಸರು | ಹರಾಜಿಗೆ ನಿಗದಿಪಡಿಸಿದ ದಿನಾಂಕ |
|---|---|---|
| 1 | ಕೇಂದ್ರ ಬಸ್ ನಿಲ್ದಾಣ ವಿಜಯಪುರ, ಸ್ಯಾಟಲೈಟ್ ಬಸ್ ನಿಲ್ದಾಣ , ತಿಕೋಟಾ | 30.06.2021 |
| 2 | ಇಂಡಿ, ಚಡಚಣ | 02.07.2021 |
| 3 | ದೇವರ ಹಿಪ್ಪರಗಿ, ಸಿಂದಗಿ, ಕಲಕೇರಿ, ಕೋರವಾರ | 05.07.2021 |
| 4 | ಮನಗೂಳಿ, ಬ.ಬಾಗೇವಾಡಿ & ಹೂವಿನ ಹಿಪ್ಪರಗಿ | 07.07.2021 |
| 5 | ಕೊಲ್ಹಾರ, ನಿಡಗುಂದಿ, ಮುದ್ದೇಬಿಹಾಳ | 09.07.2021 |

ಎಲ್ಲಾ ಕಾರ್ಯಕ್ರಮದ ಸಮಯ: ಬೆಳಿಗ್ಗೆ 10.00 ಗಂಟೆಯ ನಂತರ
ಸೂಚನೆ: ಆಡಳಿತಾತ್ಮಕ ಕಾರಣಗಳಿಂದ ಮೇಲ್ಕಾಣಿಸಿದ ಬಹಿರಂಗ ಹರಾಜ್ ದಿನಾಂಕಗಳಲ್ಲಿ ಬದಲಾವಣೆ ಮಾಡುವ ಅಧಿಕಾರ ಸಂಸ್ಥೆಯು ಹೊಂದಿರುತ್ತದೆ, ಈ ಕುರಿತು ಸಮೀಪದ ಘಟಕ / ಬಸ್ ನಿಲ್ದಾಣಗಳಲ್ಲಿ ವಿಚಾರಿಸುವುದು.
ಬಹಿರಂಗ ಹರಾಜಿಗೆ ಸಂಬಂಧಿಸಿದಂತೆ ಹೆಚ್ಚಿನ ಮಾಹಿತಿಗಾಗಿ ವಿಭಾಗೀಯ ಸಾರಿಗೆ ಅಧಿಕಾರಿಯವರ ದೂರವಾಣಿ ಸಂಖ್ಯೆ : 7760992252 ಗೆ ಕರೆಮಾಡಿ ಪಡೆಯಬಹುದಾಗಿದೆ ಅಥವಾ ವಿಭಾಗೀಯ ಕಚೇರಿ (ಕಚೇರಿ ವೇಳೆ) ಯಲ್ಲಿ ಬಂದು ವಿಚಾರಿಸಬಹುದಾಗಿದೆ.
ಸಹಿ/– ವಿಭಾಗೀಯ ನಿಯಂತ್ರಣಾಧಿಕಾರಿ, ಈ.ಕ.ರ.ಸಾ.ಸಂಸ್ಥೆ, ವಿಜಯಪುರ ವಿಭಾಗ.
ವಾಸಾಸಂಇ/ವಿಜಯಪುರ/125/ಜಿಎ/2021–22

ಕರ್ನಾಟಕ ಸರ್ಕಾರ
ಲೋಕೋಪಯೋಗಿ, ಬಂದರು–ಒಳನಾಡು ಜಲಸಾರಿಗೆ ಇಲಾಖೆ, ವಿಭಾಗ, ಚಿತ್ರದುರ್ಗ.
ಸಂಖ್ಯೆ: ಕಾಇಂ:ಲೋವಿಚಿ:ಎಇ–2:ಟೆಂಡರ್–12:2021–22 ದಿನಾಂಕ: 21.06.2021
ಇ–ಟೆಂಡರ್ ಪ್ರಕಟಣೆ
ಕರ್ನಾಟಕ ಸಾರ್ವಜನಿಕ ಸಂಗ್ರಹಣೆಗಳಲ್ಲಿ ಪಾರದರ್ಶಕತೆ ಅಧ್ಯಾದೇಶ 2000 ಹಾಗೂ ಆಕ್ಟ್ 2000ರ ಪ್ರಕಾರ ಸ್ಟ್ಯಾಂಡರ್ಡ್ ಟೆಂಡರ್ ಡಾಕ್ಯುಮೆಂಟ್‌ಗಳ ನಿಯಮಗಳನ್ವಯ ಕರ್ನಾಟಕ ರಾಜ್ಯ ಸರ್ಕಾರದ ರಾಜ್ಯಪಾಲರ ಪರವಾಗಿ ಕಾರ್ಯಪಾಲಕ ಇಂಜಿನಿಯರು, ಲೋಕೋಪಯೋಗಿ ಬಂದರು ಮತ್ತು ಒಳನಾಡು ಜಲಸಾರಿಗೆ ಇಲಾಖೆ ವಿಭಾಗ, ಚಿತ್ರದುರ್ಗ ಇವರಿಂದ ಕರ್ನಾಟಕ ಲೋಕೋಪಯೋಗಿ ಇಲಾಖೆಯಲ್ಲಿ ನೊಂದಾಯಿತರಾದ ಅರ್ಹ ಗುತ್ತಿಗೆದಾರರಿಂದ ಇ–ಪ್ರೊಕ್ಯೂರಮೆಂಟ್ ಪೋರ್ಟಲ್ ಮುಖಾಂತರ ಈ ಕೆಳಕಂಡ ಕಾಮಗಾರಿಗಳಿಗೆ ದ್ವಿ–ಲಕೋಟೆ ಪದ್ಧತಿಯಲ್ಲಿ ಟೆಂಡರ್‌ಗಳನ್ನು ಆಹ್ವಾನಿಸಲಾಗಿದೆ. ಅರ್ಹ ಗುತ್ತಿಗೆದಾರರು ವೆಬ್‌ಸೈಟ್ www.eproc.Karnataka.gov.in/eportal/index.seamನಲ್ಲಿ ಟೆಂಡರ್‌ಗಾಗಿ ವಿವರಗಳನ್ನು ಪಡೆದು ಭಾಗವಹಿಸಬಹುದು.
ಕಾಮಗಾರಿಗಳ ವಿವರ: ಇ–ಪ್ರೊಕ್ಯೂರ್‌ಮೆಂಟ್ ಮೂಲಕ– ದ್ವಿ ಲಕೋಟೆ ಪದ್ಧತಿ: 5054–03–337–0–17–160 ರಾಜ್ಯ ಹೆದ್ದಾರಿ ರಸ್ತೆ ಕಾಮಗಾರಿಗಳ ನವೀಕರಣ: (1) ಚಿತ್ರದುರ್ಗ ಜಿಲ್ಲೆ ಹೊಳಲ್ಕೆರೆ ತಾಲ್ಲೂಕು ರಾಜ್ಯ ಹೆದ್ದಾರಿ–47ರ ಮಂಡ್ಯ–ಹಡಗಲಿ ರಸ್ತೆ ಕಿ.ಮೀ.239ರಿಂದ 240.20ರ ವರೆಗೆ ರಸ್ತೆ ಅಭಿವೃದ್ಧಿ ಕಾಮಗಾರಿಯಡಿ ರಸ್ತೆ ಬದಿಯಲ್ಲಿ ಚರಂಡಿ ಮತ್ತು ಅಡ್ಡಮೋರಿಗಳ ನಿರ್ಮಾಣ. (ವ.ಇಂ. 120048). ಅಂದಾಜು ಮೊತ್ತ: ರೂ. 140.00 ಲಕ್ಷಗಳು.
ಕಾಮಗಾರಿ ಟೆಂಡರ್ ದಿನಾಂಕಗಳು ಈ ಕೆಳಕಂಡಂತಿವೆ: (1) ಟೆಂಡರ್ ಬಗ್ಗೆ ವಿಚಾರಿಸಲು/ಮಾಹಿತಿ ಪಡೆಯಲು ಕೊನೆಯ ದಿನಾಂಕ: 01.07.2021 ಸಮಯ 17:30. (2) ಟೆಂಡರ್ ಸಲ್ಲಿಸುವ ಅಂತಿಮ ದಿನಾಂಕ ಮತ್ತು ವೇಳೆ: 02.07.2021 ಸಮಯ 16:00. (3) ತಾಂತ್ರಿಕ ಬಿಡ್ ತೆರೆಯುವ ದಿನಾಂಕ ಮತ್ತು ವೇಳೆ: 03.07.2021 ಸಮಯ 16:01. (4) ಆರ್ಥಿಕ ಬಿಡ್ ತೆರೆಯುವ ದಿನಾಂಕ ಮತ್ತು ವೇಳೆ: 05.07.2021 ಸಮಯ 11:00. ಹೆಚ್ಚಿನ ವಿವರಗಳಿಗೆ ಸದರಿ ಕಛೇರಿಯಿಂದ (ದೂರವಾಣಿ ಸಂಖ್ಯೆ 08194 222446) ಹಾಗೂ ಹೆಚ್.ಪಿ. ಕಂಪನಿಯ ಸಹಾಯಕ ದೂರವಾಣಿ ಸಂಖ್ಯೆ 080 25501216 ಮತ್ತು 080 25501227 ರಿಂದ ಮಾಹಿತಿ ಪಡೆಯಬಹುದು.
ಸಹಿ/– ಕಾರ್ಯಪಾಲಕ ಅಭಿಯಂತರರು
RO No. 206: DIPR/CTA/MCA/2021-22

ಕರ್ನಾಟಕ ರಾಜ್ಯ ಪಾನೀಯ ನಿಗಮ ನಿಯಮಿತ
4ನೇ ಮಹಡಿ, ಟಿಟಿಎಂಸಿ ಬಿಲ್ಡಿಂಗ್, ‘ಎ’ ಬ್ಲಾಕ್, ಬಿಎಂಟಿಸಿ, ಶಾಂತಿನಗರ, ಬೆಂಗಳೂರು–27
ಇ–ಟೆಂಡರ್ ಪ್ರಕಟಣೆ
Notification: NO. KSBCL/ ED/M (T)/ ADM11-64 /2020-21 Date: 23.06.2021
ಕರ್ನಾಟಕ ರಾಜ್ಯ ಪಾನೀಯ ನಿಗಮ ನಿಯಮಿತವು (ಕೆಎಸ್‌ಬಿಸಿಎಲ್), ಇ–ಪ್ರೊಕ್ ಪೋರ್ಟಲ್ ಮೂಲಕ ಕರ್ನಾಟಕದಲ್ಲಿ ಗೋದಾಮುಗಳ ನಿರ್ಮಾಣಕ್ಕಾಗಿ ವಿನ್ಯಾಸ ಮತ್ತು ನಿರ್ಮಾಣ ಮೇಲ್ವಿಚಾರಣಾ ಸಲಹೆಗಾರರ ನೇಮಕಾತಿಗಾಗಿ ಪ್ರಸ್ತಾವನೆಗಳನ್ನು ಆಹ್ವಾನಿಸಿದೆ.
ವೇಳಾಪಟ್ಟಿ ಈ ಕೆಳಗಿನಂತಿದೆ: ಕನ್ಸಲ್ಟೆನ್ಸಿ ಅವಧಿ: 36 ತಿಂಗಳುಗಳು. ಯೋಜನೆಯ ಅವಧಿ: 36 ತಿಂಗಳುಗಳು. ಪೂರ್ವ ಪ್ರಸ್ತಾವನೆ ಸಮಾಲೋಚನೆ: 16/07/2021 ರಂದು 15.00 ಗಂಟೆಗೆ. ಪ್ರಸ್ತಾವನೆಯನ್ನು ಸಲ್ಲಿಸಲು ಕೊನೆಯ ದಿನಾಂಕ (ಆನ್‌ಲೈನ್): 30/07/2021, 17.30 ಗಂಟೆಗೆ. ಟೆಂಡರ್ ತೆರೆಯುವಿಕೆ: 03/08/2021, 16.30 ಗಂಟೆಗೆ. [ಸರ್ಕಾರದ ಆದೇಶದ ಪ್ರಕಾರ ಇಎಂಡಿ ಘೋಷಣೆ ನಮೂನೆಗೆ ಸಹಿ ಮಾಡಿ ಇ–ಪ್ರೊಕ್ ಪೋರ್ಟಲ್‌ನಲ್ಲಿ ಅಪ್‌ಲೋಡ್ ಮಾಡಬೇಕು]
ಸಹಿ/– ಕಾರ್ಯನಿರ್ವಾಹಕ ನಿರ್ದೇಶಕರು (ಎಫ್ & ಎ)
ಕರ್ನಾಟಕ ರಾಜ್ಯ ಪಾನೀಯ ನಿಗಮ ನಿಯಮಿತ
DIPR/DDU/641/G.FMC/2021-22
ಕೋವಿಡ್-19. ಆತಂಕ ಬೇಡ; ಮುನ್ನೆಚ್ಚರಿಕೆ ಇರಲಿ.
ಮಾಸ್ಕ್ ಧರಿಸಿ | 6 ಅಡಿ ದೈಹಿಕ ಅಂತರ ಪಾಲಿಸಿ | ಕೈಗಳ ಸ್ವಚ್ಛತೆ ಕಾಪಾಡಿಕೊಳ್ಳಿ

ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ
ಕಾರ್ಯಪಾಲಕ ಅಭಿಯಂತರರ ಕಛೇರಿ, ವಿಜಯನಗರ ವಿಭಾಗ, 3ನೇ ಮುಖ್ಯರಸ್ತೆ, 1ನೇ ಮಹಡಿ, ಶಾಸಕರ ಭವನ, ವಿಜಯನಗರ, ಬೆಂಗಳೂರು–560 040
ನಂ. : ಕಾಪಾಅ(ವಿಜಯನಗರ)/ಸಅ/ಟೆಂಡರ್/04/2021–22 ದಿನಾಂಕ: 23.06.2021
ಅಲ್ಪಾವಧಿ ಟೆಂಡರ್ ಪ್ರಕಟಣೆ
(ದ್ವಿ ಲಕೋಟೆ & ಏಕ ಲಕೋಟೆ)
(ಜಿಓಕೆ ಇ–ಪ್ರೊಕ್ಯೂರ್‌ಮೆಂಟ್ ಪೋರ್ಟಲ್ ಮೂಲಕ ಮಾತ್ರ)
ಕಾರ್ಯಪಾಲಕ ಅಭಿಯಂತರರು (ವಿಜಯನಗರ), ಬಿಬಿಎಂಪಿ, ಬೆಂಗಳೂರು ಇವರು ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ ಅಥವಾ ತತ್ಸಮಾನ ಸಿಪಿಡಬ್ಲ್ಯುಡಿ / ಕೆಪಿಡಬ್ಲ್ಯುಡಿ / ರೈಲ್ವೇಸ್ / ಎಂಇಎಸ್ ಅಥವಾ ಯಾವುದೇ ರಾಜ್ಯ ಸರ್ಕಾರಿ ಸಂಸ್ಥೆಗಳಲ್ಲಿ ನೋಂದಾಯಿತ ಅರ್ಹ ಗುತ್ತಿಗೆದಾರರಿಂದ ಈ ಕೆಳಗಿನ ನಿರ್ಮಾಣ ಕಾಮಗಾರಿಗಳಿಗೆ ಟೆಂಡರ್‌ಗಳನ್ನು ಆಹ್ವಾನಿಸಿದ್ದಾರೆ.

| ಕ್ರ. ಸಂ. | ಕಾಮಗಾರಿಯ ಹೆಸರು | ಕಾಮಗಾರಿಯ ಅಂದಾಜು ಮೊತ್ತ (ರೂ. ಲಕ್ಷಗಳಲ್ಲಿ) |
|---|---|---|
| | (ದ್ವಿ ಲಕೋಟೆ ಪದ್ಧತಿ) (ಕೆಡಬ್ಲ್ಯು–3) | |
| 1 | ವಾರ್ಡ್ ನಂ. 123ರ ವಿಜಯನಗರ ಸರ್ವೀಸ್ ರಸ್ತೆ (2ನೇ ಫೇಸ್)ಯಲ್ಲಿ ಹವಾನಿಯಂತ್ರಿತ ಪಾಲಿಕೆ ಬಜಾರ್ ನಿರ್ಮಾಣ. ಅನೆಕ್ಸರ್–6 Sl 8. | 800.00 |
| 2 | ವಾರ್ಡ್ ನಂ. 132ರ ಅತ್ತಿಗುಪ್ಪೆಯಲ್ಲಿ ಬಹುಉದ್ದೇಶಿತ ಕಟ್ಟಡ ನಿರ್ಮಾಣ. | 250.00 |
| 3 | ವಾರ್ಡ್ ನಂ. 132ರ ವಿಜಯನಗರ 2ನೇ ಹಂತದಲ್ಲಿ ವಾಣಿಜ್ಯ ಸಂಕೀರ್ಣ ನಿರ್ಮಾಣ. | 100.00 |
| 4 | ವಾರ್ಡ್ ನಂ. 134ರ ವಾರ್ಡ್ ವ್ಯಾಪ್ತಿಯಲ್ಲಿ ಎಲ್ಲಾ ರಸ್ತೆ ಬದಿ ಚರಂಡಿಗಳನ್ನು ಸ್ವಚ್ಛಗೊಳಿಸುವುದು ಸಿಸಿ ರಸ್ತೆಗಳನ್ನು ಹಾಕುವುದು ಮತ್ತು ಪಾದಚಾರಿ ಮಾರ್ಗಗಳ ನಿರ್ವಹಣೆ. | 80.00 |
| 5 | ವಾರ್ಡ್ ನಂ. 157ರ ಟೆಲಿಕಾಂ ಲೇಔಟ್ ಉದ್ಯಾನವನಕ್ಕೆ ಗ್ರಿಲ್ ಕಾಮಗಾರಿಗಳನ್ನು ಒದಗಿಸುವುದು ಮತ್ತು ಇತರ ಸಂಬಂಧಿತ ಕಾಮಗಾರಿಗಳು. (2ನೇ ಕರೆ) | 65.00 |
| | (ಏಕ ಲಕೋಟೆ ಪದ್ಧತಿ) (ಕೆಡಬ್ಲ್ಯು–1 & 2) | |
| 6 | ವಿಜಯನಗರ, ವಾರ್ಡ್ ನಂ. 123ರಲ್ಲಿ ತುರ್ತು ಕಾಮಗಾರಿಗಳು. (2ನೇ ಕರೆ) | 4.85 |
| 7 | ವಾರ್ಡ್ ನಂ. 133ರಲ್ಲಿ ಪ್ರಾಥಮಿಕ ಆರೋಗ್ಯ ಕೇಂದ್ರ – ಡಯಾಲಿಸಿಸ್ ಸೆಂಟರ್ ನಿರ್ಮಾಣ. | 45.00 |
| 8 | ಬಾಪೂಜಿನಗರ, ವಾರ್ಡ್ ನಂ. 134ರಲ್ಲಿ ಕುಡಿಯುವ ನೀರಿನ ನಿರ್ಮಾಣ. | 20.00 |
| 9 | ಬಾಪೂಜಿನಗರ, ವಾರ್ಡ್ ನಂ. 134ರಲ್ಲಿ ಚಿತಾಗಾರ, ರುದ್ರಭೂಮಿ ಮತ್ತು ಕಛೇರಿಯ ನಿರ್ವಹಣೆ. | 5.00 |

ಇಎಂಡಿ ಘೋಷಣೆ: ಸರ್ಕಾರದ ಆದೇಶ ಸಂಖ್ಯೆ: ಆಇ 675 ವೆಚ್ಚ– 12/2020, ಬೆಂಗಳೂರು, ದಿ: 22.12.2020
(1) ಟೆಂಡರ್ ದಸ್ತಾವೇಜುಗಳನ್ನು ಕರ್ನಾಟಕ ಸರ್ಕಾರದ ಇ–ಪ್ರೊಕ್ಯೂರ್‌ಮೆಂಟ್ ಪೋರ್ಟಲ್ ಮೂಲಕ 02.07.2021 ರಿಂದ ಡೌನ್‌ಲೋಡ್ ಮಾಡಿಕೊಳ್ಳಬಹುದು. (2) ಪೂರ್ವಭಾವಿ ಸಭೆಯು 06.07.2021ರ ಮಧ್ಯಾಹ್ನ 3:00 ಗಂಟೆಗೆ ಕಾರ್ಯಪಾಲಕ ಅಭಿಯಂತರರ ಕಛೇರಿ (ವಿಜಯನಗರ), ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ, 1ನೇ ಮಹಡಿ, ಶಾಸಕರ ಭವನ, 3ನೇ ಮುಖ್ಯರಸ್ತೆ, ವಿಜಯನಗರ, ಬೆಂಗಳೂರು–560040ರಲ್ಲಿ ನಡೆಯಲಿದೆ. (3) ಟೆಂಡರ್‌ಗಳನ್ನು ಆನ್‌ಲೈನ್ ಇ–ಪ್ರೊಕ್ಯೂರ್‌ಮೆಂಟ್ ಪೋರ್ಟಲ್ ಮೂಲಕ ದಿನಾಂಕ 12.07.2021ರ ಸಂಜೆ 4:00 ಗಂಟೆ ಮುಂಚಿತವಾಗಿ ಸಲ್ಲಿಸತಕ್ಕದ್ದು ಹಾಗೂ ಟೆಂಡರ್‌ಗಳನ್ನು ಇ–ಪ್ರೊಕ್ಯೂರ್‌ಮೆಂಟ್ ಮಾರ್ಗದರ್ಶನದಂತೆ ತೆರೆಯಲಾಗುವುದು. (4) ದ್ವಿ ಲಕೋಟೆ ಪದ್ಧತಿ ತಾಂತ್ರಿಕ ಬಿಡ್‌ಗಳು ಹಾಗೂ ಏಕ ಲಕೋಟೆ ಪದ್ಧತಿ ಆರ್ಥಿಕ ಬಿಡ್‌ಗಳನ್ನು ಕಾರ್ಯಪಾಲಕ ಅಭಿಯಂತರರ ಕಚೇರಿ (ವಿಜಯನಗರ)ಯಲ್ಲಿ ವೆಬ್‌ಸೈಟ್ https://eproc.karnataka.gov.in ಮೂಲಕ ದಿನಾಂಕ 13.07.2021ರ ಸಂಜೆ 4:30 ಗಂಟೆಗೆ ಅಥವಾ ನಂತರ ತೆರೆಯಲಾಗುವುದು. ಹೆಚ್ಚಿನ ಮಾಹಿತಿಯನ್ನು ಮೇಲಿನ ಕಚೇರಿಯಿಂದ ಕೆಲಸದ ವೇಳೆಯಲ್ಲಿ ಅಥವಾ ವೆಬ್‌ಸೈಟ್ https://eproc.karnataka.gov.in ನಿಂದ ಪಡೆದುಕೊಳ್ಳಬಹುದು.
ಸಹಿ/– ಕಾರ್ಯಪಾಲಕ ಅಭಿಯಂತರರು, ವಿಜಯನಗರ ವಿಭಾಗ, ಬಿಬಿಎಂಪಿ
ಕೋವಿಡ್-19 - ಗಾಳಿಸುದ್ದಿ ಹರಡಬೇಡಿ, ಜವಾಬ್ದಾರಿಯಿಂದ ವರ್ತಿಸಿ, ಸೋಂಕನ್ನು ದೂರವಿಡಿ-ಸೋಂಕಿತರನ್ನಲ್ಲ.
ಮಾಸ್ಕ್ ಧರಿಸಿ | 6 ಅಡಿ ದೈಹಿಕ ಅಂತರ ಪಾಲಿಸಿ | ಕೈಗಳ ಸ್ವಚ್ಛತೆ ಕಾಪಾಡಿಕೊಳ್ಳಿ

ಕರ್ನಾಟಕ ಸರಕಾರ
(ಪಂಚಾಯತ್ ರಾಜ್ ಇಂಜಿನೀಯರಿಂಗ್ ಇಲಾಖೆ)
ಕಾರ್ಯನಿರ್ವಾಹಕ ಅಭಿಯಂತರರವರ ಕಾರ್ಯಾಲಯ
ಪಂಚಾಯತ್ ರಾಜ್ ಇಂಜಿನೀಯರಿಂಗ್ ವಿಭಾಗ, ವಿಜಯಪುರ
ಫೋನ್: 08352–277816, ಫ್ಯಾಕ್ಸ್: 08352–277817
ಇ–ಮೇಲ್: zpebjp9@yahoo.co.in
ಸಂ:ಕಾಇಂ/ಪಂ.ರಾ.ಇ.ವಿ/ವಿಜಾ/ಇಪ್ರಾ/ಟೆಂಡರ್/2021–22/364 ದಿನಾಂಕ: 15.06.2021
ಇ–ಪ್ರೊಕ್ಯೂರ್‌ಮೆಂಟ್ ಟೆಂಡರ್ ಪ್ರಕಟಣೆ (ದ್ವಿ ಲಕೋಟಿ ಪದ್ಧತಿ)
ಕಾರ್ಯನಿರ್ವಾಹಕ ಇಂಜಿನೀಯರರು, ಪಂ.ರಾ.ಇಂ. ವಿಭಾಗ, ವಿಜಯಪುರ ಇವರು 2020–21ನೇ ಸಾಲಿನ 3054 ನಿರ್ವಹಣಾ ಅನುದಾನ ಯೋಜನೆ ಅನುದಾನ ಲೆಕ್ಕ ಶೀರ್ಷಿಕೆ ಯೋಜನೆಯಡಿಯಲ್ಲಿ (1) ಸಿಂದಗಿ ತಾಲೂಕಿನ ಇಂಗಳಗಿ, ಚಿಕ್ಕರೂಗಿ, ನಿವಳಖೇಡ, ಮುಳಸಾವಳಗಿ, ಬೆಕಿನಾಳ, ಸಲಾದಹಳ್ಳಿ, ಕುದರಗೊಂಡ, ತಿಳಗೂಳ, ಜಲಪೂರ ಮತ್ತು ಕಲಕೇರಿ ಗ್ರಾಮಗಳಲ್ಲಿ ಸಿ.ಸಿ. ರಸ್ತೆ ನಿರ್ಮಾಣ ರೂ. 500.00 ಲಕ್ಷಗಳು (Indent No. 83824)(KW-4) ಕಾಮಗಾರಿಯನ್ನು ಇ–ಟೆಂಡರ್‌ನ್ನು ದ್ವಿ ಲಕೋಟಿ ಪದ್ಧತಿಯಲ್ಲಿ ಅಹ್ವಾನಿಸಿದ್ದು. ಹೆಚ್ಚಿನ ಮಾಹಿತಿಗಾಗಿ ವೆಬ್‌ಸೈಟ್ www.eproc.karnataka.gov.in ನಲ್ಲಿ ಅಥವಾ ಕಛೇರಿ ಸಮಯದಲ್ಲಿ ಸದರಿ ವಿಭಾಗ ಕಾರ್ಯಾಲಯಕ್ಕೆ ಭೇಟಿ ನೀಡಿ ಮಾಹಿತಿ ಸಂಗ್ರಹಿಸಬಹುದು.
ಸಹಿ/– ಕಾರ್ಯನಿರ್ವಾಹಕ ಇಂಜಿನೀಯರರು, ಪಂ.ರಾ.ಇಂ. ವಿಭಾಗ, ವಿಜಯಪುರ
ವಾಸಾಸಂಇ/ವಿಜಯಪುರ/136/ಜಿಎ/2021–22

ಕರ್ನಾಟಕ ಸರ್ಕಾರ
ಕಾರ್ಯನಿರ್ವಾಹಕ ಇಂಜಿನೀಯರರು, ಲೋಕೋಪಯೋಗಿ ಇಲಾಖೆ, ಕಾರವಾರ ವಿಭಾಗ, ಕಾರವಾರ
ಸಂ: ಕಾ.ನಿ.ಇಂ./ಲೋ.ಇ.ವಿ.ಕಾ/ಪಿ.ಬಿ–4/2ನೇ ಕರೆ ಟೆಂಡರ.ಪ್ರ–16/2021–22/620 ದಿನಾಂಕ: 19.06.2021
2ನೇ ಕರೆ ಟೆಂಡರ್ ಪ್ರಕಟಣೆ (ಇ–ಪ್ರೊಕ್ಯೂರ್‌ಮೆಂಟ್ ಪದ್ಧತಿಯಲ್ಲಿ ಮಾತ್ರ)
3054–ರಾಜ್ಯ ಹೆದ್ದಾರಿ ರಸ್ತೆ ನಿರ್ವಹಣೆ ಅತೀವೃಷ್ಟಿ ಹಾಗೂ ನೆರೆಹಾವಳಿಯಿಂದ ಹಾನಿಗೊಳಗಾದ ಕಾಮಗಾರಿಗಳು ಯೋಜನೆ ಅಡಿಯಲ್ಲಿ ಕರೆಯಲಾಗಿದ್ದ PACKAGE-(1) Resurfacing to Aurad sadashivgad SH-34 Road from Km 691.00 to 694.00 (2) Resurfacing to Aurad sadashivgad SH-34 Road from Km 717.00 to 725.34 (3) Resurfacing to Karwar Kaiga Ilkal SH-06 from Km 7.00 to 10.00 and Km 20.00 to 40.00 (Proposad Km 8.25 to 10.00 & KM 20.00 to 27.35) in Karwar Taluka Uttara Kannada District. (KPWD/2020-21/RD/WORK_INDENT 135716) ರೂ. 792.01 ಲಕ್ಷದ ಕಾಮಗಾರಿಯ ಟೆಂಡರಿನ 2ನೇ ಕರೆಯ ದಿನಾಂಕದ ವಿವರ ಈ ಕೆಳಗಿನಂತಿದೆ.
(1) ಗುತ್ತಿಗೆಗೆ ಸಂಬಂಧಿಸಿದ ವಿಚಾರಣೆಗೆ ಕೊನೆಯ ದಿನಾಂಕ: 01.07.2021, 16.30 ಗಂಟೆವರೆಗೆ. (2) ಟೆಂಡರನ್ನು ಸ್ವೀಕರಿಸುವ ಕೊನೆಯ ದಿನಾಂಕ: 02.07.2021, 16.30 ಗಂಟೆವರೆಗೆ. (3) ಟೆಂಡರಿನ ತಾಂತ್ರಿಕ ಬಿಡ್ ತೆರೆಯುವ ದಿನಾಂಕ: 03.07.2021, 17.00 ಗಂಟೆವರೆಗೆ. (4) ಟೆಂಡರ್‌ನ ಆರ್ಥಿಕ ಬಿಡ್ ತೆರೆಯುವ ದಿನಾಂಕ: 05.07.2021, 17.00 ಗಂಟೆವರೆಗೆ.
ಹೆಚ್ಚಿನ ವಿವರಗಳಿಗಾಗಿ ಕಾರ್ಯನಿರ್ವಾಹಕ ಇಂಜಿನೀಯರರು ಲೋಕೋಪಯೋಗಿ ಇಲಾಖೆ, ವಿಭಾಗ ಕಾರವಾರ ಇವರ ಕಛೇರಿಗೆ ಕೆಲಸದ ವೇಳೆಯಲ್ಲಿ ಪಡೆಯಬಹುದಾಗಿದೆ.
ಸಹಿ/– ಕಾರ್ಯನಿರ್ವಾಹಕ ಅಭಿಯಂತರರು, ಲೋಕೋಪಯೋಗಿ ಇಲಾಖೆ, ಕಾರವಾರ ವಿಭಾಗ, ಕಾರವಾರ
DIPR/ADK/MCA/211/21-22 dt.21.6.2021

ಕರ್ನಾಟಕ ಕೈಗಾರಿಕಾ ಪ್ರದೇಶಾಭಿವೃದ್ಧಿ ಮಂಡಳಿ
(ಕರ್ನಾಟಕ ಸರ್ಕಾರದ ಅಧೀನ ಸಂಸ್ಥೆ)
ನಂ. 49, ಈಸ್ಟ್ ವಿಂಗ್, 4ನೇ ಮತ್ತು 5ನೇ ಮಹಡಿ, ಖನಿಜ ಭವನ, ರೇಸ್ ಕೋರ್ಸ್ ರಸ್ತೆ, ಬೆಂಗಳೂರು – 560 001.
website: www.kiadb.in
ನಂ. ಐಎಡಿಬಿ/ಇಎನ್‌ಜಿಜಿ/ಇಟಿಎನ್‌ಡಿ–ಇಪಿ–09/2625/2021–22 ದಿನಾಂಕ: 21.06.2021
ಅಲ್ಪಾವಧಿ ಟೆಂಡರ್ ಆಹ್ವಾನ ಪ್ರಕಟಣೆ
(ಜಿ.ಓ.ಕೆ ಇ–ಪ್ರೊಕ್ಯೂರ್‌ಮೆಂಟ್ ಪೋರ್ಟಲ್ ಮೂಲಕ ಮಾತ್ರ)
ಕೆ.ಐ.ಎ.ಡಿ.ಬಿ ಯು ಈ ಕೆಳಕಂಡ ಕಾಮಗಾರಿಗೆ ಸಾಕಷ್ಟು ಆರ್ಥಿಕ ಸಂಪನ್ಮೂಲ ಹಾಗೂ ಇದೇ ರೀತಿಯ ಕಾಮಗಾರಿಯಲ್ಲಿ ಸಾಕಷ್ಟು ಅನುಭವ ಹೊಂದಿರುವ ಕೆಪಿಡಬ್ಲ್ಯೂಡಿ ದರ್ಜೆ–1 (ಸಿವಿಲ್) ಗುತ್ತಿಗೆದಾರರಿಂದ ದ್ವಿ ಲಕೋಟೆ ಪದ್ಧತಿಯಡಿಯಲ್ಲಿ ಕರ್ನಾಟಕ ಸಾರ್ವಜನಿಕ ಸಂಗ್ರಹಣೆಗಳಲ್ಲಿ ಪಾರದರ್ಶಕತೆ ಕಾಯ್ದೆ 1999 ಹಾಗೂ ನಿಯಮ 2000 ರನ್ವಯ ಟೆಂಡರ್‌ಗಳನ್ನು ಆಹ್ವಾನಿಸಲಾಗಿದೆ.
ಕಾಮಗಾರಿಯ ಹೆಸರು: (1) ಬೀದರ್ ಜಿಲ್ಲೆ, ಕೊಲ್ಹಾರ್ 2ನೇ ಹಂತ ಕೈಗಾರಿಕಾ ಪ್ರದೇಶದ ಆಟೋನಗರದಲ್ಲಿ ಆರ್.ಸಿ.ಸಿ ರಸ್ತೆ ಬದಿ ಚರಂಡಿ, ಆರ್.ಸಿ.ಸಿ ಸ್ಪರ್ ಕಲ್ವರ್ಟ್ಸ್ ಹಾಗೂ ಹೆಚ್.ಡಿ.ಪಿ.ಇ ನೀರು ಸರಬರಾಜು ಕೊಳವೆ ಮಾರ್ಗ ಮತ್ತು ಡಾಂಬರೀಕರಣ ರಸ್ತೆಯೊಂದಿಗೆ ಕೈಗಾರಿಕಾ ಉಪ ಬಡಾವಣೆ ರಚನೆ ಮಾಡುವ ಕಾಮಗಾರಿ (2) ಬೀದರ್ ಜಿಲ್ಲೆ, ಕೊಲ್ಹಾರ್ 2ನೇ ಹಂತ ಕೈಗಾರಿಕಾ ಪ್ರದೇಶದಲ್ಲಿ ಆರ್.ಸಿ.ಸಿ ರಸ್ತೆ ಬದಿ ಚರಂಡಿ, ಕಲ್ವರ್ಟ್ಸ್ ಹಾಗೂ ಹೆಚ್.ಡಿ.ಪಿ.ಇ ನೀರು ಸರಬರಾಜು ಕೊಳವೆ ಮಾರ್ಗ ಮತ್ತು ಡಾಂಬರೀಕರಣ ರಸ್ತೆಯೊಂದಿಗೆ ಮಹಿಳಾ ಉದ್ದಿಮೆದಾರರ ಪಾರ್ಕ್ ರಚನೆ ಮಾಡುವ ಕಾಮಗಾರಿ.
ಟೆಂಡರ್ ಸಲ್ಲಿಸಲು ಕೊನೆಯ ದಿನಾಂಕ: 12.07.2021, ಸಂಜೆ 4.00 ಗಂಟೆವರೆಗೆ.
ಅರ್ಜಿದಾರರು ಬಿಡ್ಡಿಂಗ್ ದಸ್ತಾವೇಜುಗಳನ್ನು ಇ–ಪ್ರೊಕ್ಯೂರ್‌ಮೆಂಟ್ ಪೋರ್ಟಲ್ https://eproc.karnataka.gov.in ಮೂಲಕ ಡೌನ್‌ಲೋಡ್ ಮಾಡಿಕೊಳ್ಳಬಹುದು.
ಸಹಿ/– ಮುಖ್ಯ ಅಭಿಯಂತರರು–2, ಕೆಐಎಡಿಬಿ, ಬೆಂಗಳೂರು
DIPR/DDU/R.O: 619/2021-22
ಕೋವಿಡ್-19. ಆತಂಕ ಬೇಡ; ಮುನ್ನೆಚ್ಚರಿಕೆ ಇರಲಿ.
ಮಾಸ್ಕ್ ಧರಿಸಿ | 6 ಅಡಿ ದೈಹಿಕ ಅಂತರ ಪಾಲಿಸಿ | ಕೈಗಳ ಸ್ವಚ್ಛತೆ ಕಾಪಾಡಿಕೊಳ್ಳಿ

ಎಲ್ಲಾ ಶೈಕ್ಷಣಿಕ ಸಂಸ್ಥೆಗಳಿಗೂ ಸೂಕ್ತವಾದ ಒಂದು ಮಾಧ್ಯಮ

ಪ್ರಜಾವಾಣಿ ಶಿಕ್ಷಣ
ಜಾಹೀರಾತಿಗಾಗಿ ಸಂಪರ್ಕಿಸಿ :
Mr. Dinesh Nayak - 9986006598
E-mail: dineshnayak@deccanherald.co.in

# ಕೋವಿಡ್ ನಡುವೆಯೇ ಲೋಕೋಪಯೋಗಿ ಇಲಾಖೆಯ ಸಾಧನೆ

**ಬೆಂಗಳೂರು:** ಕೊರೊನಾ ವೈರಾಣು ಸೋಂಕು ಸತತವಾಗಿ ಮೂರು ಆರ್ಥಿಕ ವರ್ಷಗಳಿಂದ ರಾಜ್ಯವನ್ನು ಕಾಡುತ್ತಿದೆ. 2019-20ನೇ ಆರ್ಥಿಕ ವರ್ಷದ ಅಂತ್ಯದಲ್ಲಿ ಸೋಂಕು ರಾಜ್ಯ ಪ್ರವೇಶಿಸಿತ್ತು. ಈಗ ಕೋವಿಡ್ ಎರಡನೇ ಅಲೆ ಅರ್ಭಟಿಸುತ್ತಿದೆ. ಈ ಬಿಕ್ಕಟ್ಟನ್ನು ಎದುರಿಸುತ್ತಲೇ ರಾಜ್ಯದಲ್ಲಿ ಮೂಲಸೌಕರ್ಯ ಅಭಿವೃದ್ಧಿಗೆ ಚುರುಕು ಮುಟ್ಟಿಸಿರುವ ಲೋಕೋಪಯೋಗಿ ಇಲಾಖೆ, ರಾಜ್ಯದ ಚಹರೆಯನ್ನೇ ಬದಲಿಸಬಲ್ಲ ಹಲವು ಯೋಜನೆಗಳನ್ನು ಸಾಕಾರಗೊಳಿಸಿದೆ.

2019-20ರಲ್ಲಿ ಲೋಕೋಪಯೋಗಿ ಇಲಾಖೆಗೆ ₹ 9,033 ಕೋಟಿ ಅನುದಾನ ಲಭಿಸಿತ್ತು. ₹ 8,788 ಕೋಟಿ ವೆಚ್ಚದೊಂದಿಗೆ ಶೇಕಡ 97ರಷ್ಟು ಆರ್ಥಿಕ ಪ್ರಗತಿ ಸಾಧಿಸಿದೆ. 2020-21ರಲ್ಲಿ ₹ 10,893 ಕೋಟಿ ಅನುದಾನದಲ್ಲಿ ₹ 10,743 ಕೋಟಿ ಬಳಕೆಯೊಂದಿಗೆ ಶೇ 99 ಪ್ರಗತಿ ದಾಖಲಿಸಿದೆ.

ರಾಜ್ಯದ ಉಪ ಮುಖ್ಯಮಂತ್ರಿಯೂ ಆಗಿ ಲೋಕೋಪಯೋಗಿ ಖಾತೆಯ ಚುಕ್ಕಾಣಿ ಹಿಡಿದಿರುವ ಗೋವಿಂದ ಎಂ. ಕಾರಜೋಳ ಎರಡು ವರ್ಷಗಳ ಅವಧಿಯಲ್ಲಿ ಇಲಾಖೆಯ ಕಾರ್ಯವೈಖರಿಗೆ ಚುರುಕು ಮುಟ್ಟಿಸಿದ್ದಾರೆ. ಅವರ ದೂರದೃಷ್ಟಿಯ ಫಲವಾಗಿ ರಸ್ತೆಗಳ ನಿರ್ಮಾಣ, ಸುಧಾರಣೆ ಕಾಮಗಾರಿಗಳಿಗೆ ವೇಗ ದೊರಕಿದೆ. ರಾಜ್ಯದ ಉದ್ದಗಲಕ್ಕೆ ಹೊಸದಾಗಿ ಸರ್ಕಾರಿ ಕಟ್ಟಡಗಳ ನಿರ್ಮಾಣ ಕಾರ್ಯ ಭರದಿಂದ ಸಾಗಿದೆ. ವರ್ಷಗಳ ಕಾಲದಿಂದ ನನೆಗುದಿಗೆ ಬಿದ್ದಿದ್ದ ಸೇತುವೆ ಕಾಮಗಾರಿಗಳು ಪೂರ್ಣಗೊಂಡು, ಸಂಪರ್ಕ ಜಾಲದ ಸುಧಾರಣೆ ಆಗಿದೆ.

ರಾಜ್ಯದಲ್ಲಿ 7,652 ಕಿ.ಮೀ. ರಾಷ್ಟ್ರೀಯ ಹೆದ್ದಾರಿ, 28,985 ಕಿ.ಮೀ. ರಾಜ್ಯ ಹೆದ್ದಾರಿ ಮತ್ತು 55,474 ಕಿ.ಮೀ. ಉದ್ದದ ಜಿಲ್ಲಾ ಮುಖ್ಯ ರಸ್ತೆಗಳಿವೆ. ಈ ಪೈಕಿ 12,125 ಕಿ.ಮೀ. ಉದ್ದದ ರಸ್ತೆಗಳ ನಿರ್ಮಾಣ, ಸುಧಾರಣೆ ಎರಡೇ ವರ್ಷಗಳ ಅವಧಿಯಲ್ಲಿ ಕಾಮಗಾರಿಗಳನ್ನು ಪೂರ್ಣಗೊಳಿಸಲಾಗಿದೆ. ಇದಕ್ಕಾಗಿ ₹ 12,122 ಕೋಟಿ ವೆಚ್ಚ ಮಾಡಲಾಗಿದೆ.

ರಾಜ್ಯ ಹೆದ್ದಾರಿ ಅಭಿವೃದ್ಧಿ ಯೋಜನೆ (ಎಸ್‌ಎಚ್‌ಡಿಪಿ), ಅಪೆಂಡಿಕ್ಸ್-ಇ, ಕೇಂದ್ರೀಯ ರಸ್ತೆ ನಿಧಿ (ಸಿಆರ್‌ಎಫ್), ನಬಾರ್ಡ್, ಕರ್ನಾಟಕ ರಸ್ತೆ ಅಭಿವೃದ್ಧಿ ನಿಗಮ ಮತ್ತು ಕರ್ನಾಟಕ ರಾಜ್ಯ ಹೆದ್ದಾರಿ ಸುಧಾರಣಾ ಯೋಜನೆ (ಕೆಶಿಪ್) ಅಡಿಯಲ್ಲಿ 2,961 ಕಿ.ಮೀ. ಉದ್ದದ ರಾಜ್ಯ ಹೆದ್ದಾರಿಗಳು ಮತ್ತು 9,164 ಕಿ.ಮೀ. ಉದ್ದದ ಜಿಲ್ಲಾ ಮುಖ್ಯ ರಸ್ತೆಗಳ ನಿರ್ಮಾಣ ಕಾಮಗಾರಿಗಳನ್ನು ಪೂರ್ಣಗೊಳಿಸಲಾಗಿದೆ. ಎರಡು ವರ್ಷಗಳ ಅವಧಿಯಲ್ಲಿ 621 ಸೇತುವೆಗಳ ನಿರ್ಮಾಣವನ್ನು ಪೂರ್ಣಗೊಳಿಸಿರುವುದು ಲೋಕೋಪಯೋಗಿ ಇಲಾಖೆಯ ಚುರುಕಿನ ಕಾರ್ಯವೈಖರಿಗೆ ಸಾಕ್ಷಿ.

ಇದೇ ಅವಧಿಯಲ್ಲಿ ರಾಜ್ಯ ಸರ್ಕಾರದ ಅನುದಾನದಿಂದ ಅಪೆಂಡಿಕ್ಸ್ ಈ ಕ್ರಿಯಾಯೋಜನೆಯಲ್ಲಿ ₹ 5,521 ಕೋಟಿ ವೆಚ್ಚದಲ್ಲಿ 1,045 ಕಿ.ಮೀ. ಉದ್ದದ ರಾಜ್ಯ ಹೆದ್ದಾರಿ ಮತ್ತು 7,341 ಕಿ.ಮೀ. ಉದ್ದದ ಜಿಲ್ಲಾ ಮುಖ್ಯ ರಸ್ತೆಗಳ ನವೀಕರಣ ಕಾಮಗಾರಿಯನ್ನೂ ಪೂರ್ಣಗೊಳಿಸಲಾಗಿದೆ. 340 ಸೇತುವೆಗಳನ್ನೂ ನಿರ್ಮಾಣ-ಮರುನಿರ್ಮಾಣ ಮಾಡಲಾಗಿದೆ.

ಶಿವಮೊಗ್ಗ ವಿಮಾನ ನಿಲ್ದಾಣದ ಭೂಮಿ ಪೂಜೆ

ರಾಜ್ಯ ಹೆದ್ದಾರಿ ಅಭಿವೃದ್ಧಿ ಯೋಜನೆ (ಎಸ್‌ಎಚ್‌ಡಿಪಿ) ನಾಲ್ಕನೇ ಹಂತದಲ್ಲಿ 1,412 ಕಿ.ಮೀ. ಉದ್ದದ ರಾಜ್ಯ ಹೆದ್ದಾರಿಗಳು ಮತ್ತು 2,096 ಕಿ.ಮೀ. ಉದ್ದದ ಜಿಲ್ಲಾ ಮುಖ್ಯ ರಸ್ತೆಗಳು ಸೇರಿದಂತೆ ₹ 4,500 ಕೋಟಿ ವೆಚ್ಚದಲ್ಲಿ 3,508 ಕಿ.ಮೀ. ಉದ್ದದ ರಸ್ತೆಗಳನ್ನು ಅಭಿವೃದ್ಧಿಪಡಿಸಲಾಗುತ್ತಿದೆ. ಈ ಪೈಕಿ ₹ 2,140 ಕೋಟಿ ಮೊತ್ತದ ಕಾಮಗಾರಿಗಳು ಪೂರ್ಣಗೊಂಡಿದ್ದು, 1,739 ಕಿ.ಮೀ. ಉದ್ದದ ರಸ್ತೆಗಳ ಅಭಿವೃದ್ಧಿಯಾಗಿದೆ.

ಕೆಶಿಪ್-3ರ ಅಡಿಯಲ್ಲಿ ಏಷ್ಯಾ ಅಭಿವೃದ್ಧಿ ಬ್ಯಾಂಕ್ ನೆರವಿನಲ್ಲಿ ₹ 5,334 ಕೋಟಿ ವೆಚ್ಚದಲ್ಲಿ 418 ಕಿ.ಮೀ. ಉದ್ದದ ರಾಜ್ಯ ಹೆದ್ದಾರಿಗಳನ್ನು ನಿರ್ಮಿಸಲಾಗುತ್ತಿದೆ. 126 ಕಿ.ಮೀ ಉದ್ದದ ರಸ್ತೆ ಅಭಿವೃದ್ಧಿ ಪೂರ್ಣಗೊಂಡಿದೆ. ನಬಾರ್ಡ್ ಸಾಲದ ನೆರವಿನಲ್ಲಿ ಗ್ರಾಮೀಣ ಪ್ರದೇಶದಲ್ಲಿ ಮೂಲಸೌಕರ್ಯ ಅಭಿವೃದ್ಧಿ ಕಾಮಗಾರಿಗಳನ್ನೂ ಲೋಕೋಪಯೋಗಿ ಇಲಾಖೆ ಚುರುಕುಗೊಳಿಸಿದೆ. ಎರಡು ವರ್ಷಗಳ ಅವಧಿಯಲ್ಲಿ ₹ 394 ಕೋಟಿ ವೆಚ್ಚದಲ್ಲಿ 469 ಕಿ.ಮೀ. ರಸ್ತೆಗಳ ಅಭಿವೃದ್ಧಿ ಮತ್ತು 158 ಸೇತುವೆಗಳ ನಿರ್ಮಾಣ ಮಾಡಲಾಗಿದೆ.

**ಪ್ರವಾಹ ಪರಿಹಾರ ಕಾಮಗಾರಿಗಳಿಗೂ ವೇಗ:** ಪ್ರವಾಹ ಪೀಡಿತ ಪ್ರದೇಶಗಳಲ್ಲಿ ಹಾನಿಗೀಡಾದ ರಸ್ತೆ, ಸೇತುವೆ ಮತ್ತು ಕಟ್ಟಡಗಳ ಮರು ನಿರ್ಮಾಣ ಕಾಮಗಾರಿಗಳಿಗೂ ಎರಡು ವರ್ಷಗಳಿಂದ ವೇಗ ದೊರಕಿದೆ. 2019ರ ಆಗಸ್ಟ್‌ನಲ್ಲಿ ಪ್ರವಾಹದಿಂದ ಹಾನಿಗೀಡಾಗಿದ್ದ ಪ್ರದೇಶಗಳಲ್ಲಿ ಲೋಕೋಪಯೋಗಿ ಇಲಾಖೆ ₹ 500 ಕೋಟಿ ವೆಚ್ಚದಲ್ಲಿ 1,850 ಕಾಮಗಾರಿಗಳನ್ನು ಪೂರ್ಣಗೊಳಿಸಿದೆ.

2020ರಲ್ಲಿ ಪ್ರವಾಹದಿಂದ ಹಾನಿಯಾದ ಪ್ರದೇಶಗಳಲ್ಲಿ ₹ 615 ಕೋಟಿ ವೆಚ್ಚದಲ್ಲಿ 1,553 ಕಾಮಗಾರಿಗಳನ್ನು ಕೈಗೆತ್ತಿಕೊಳ್ಳಲಾಗಿದೆ. ಈ ಪೈಕಿ 384 ಕಾಮಗಾರಿಗಳನ್ನು ವರ್ಷದೊಳಗೆ ಪೂರ್ಣಗೊಳಿಸಲಾಗಿದೆ.

ಡಾ.ಡಿ.ಎಂ. ನಂಜುಂಡಪ್ಪ ಸಮಿತಿಯ ವರದಿಯಲ್ಲಿ ಗುರುತಿಸಿರುವ 114 ಹಿಂದುಳಿದ ಮತ್ತು ಅತಿ ಹಿಂದುಳಿದ ತಾಲ್ಲೂಕುಗಳಲ್ಲಿ ರಸ್ತೆ ಅಭಿವೃದ್ಧಿಗೆ ಇಲಾಖೆಗೆ ಪ್ರತ್ಯೇಕವಾಗಿ ಅನುದಾನ ನೀಡಲಾಗುತ್ತಿದೆ. ಈ ಪ್ರದೇಶಗಳಲ್ಲಿ ವಿಶೇಷ ಅಭಿವೃದ್ಧಿ ಯೋಜನೆಯಡಿ ₹ 302 ಕೋಟಿ ವೆಚ್ಚದಲ್ಲಿ 609 ಕಿ.ಮೀ. ರಸ್ತೆ ಅಭಿವೃದ್ಧಿಪಡಿಸಿದ್ದರೆ, ಮುಖ್ಯಮಂತ್ರಿಯವರ ಗ್ರಾಮೀಣ ರಸ್ತೆ ಅಭಿವೃದ್ಧಿ ಯೋಜನೆಯಡಿ ₹ 582 ಕೋಟಿ ವೆಚ್ಚದಲ್ಲಿ 933 ಕಿ.ಮೀ. ರಸ್ತೆ ನಿರ್ಮಾಣ ಪೂರ್ಣಗೊಳಿಸಲಾಗಿದೆ.

**ವೈಜ್ಞಾನಿಕ ನಿರ್ವಹಣೆಗೆ ಒತ್ತು:** ರಸ್ತೆ ಮತ್ತು ಸೇತುವೆಗಳ ನಿರ್ಮಾಣಕ್ಕೆ ಆದ್ಯತೆ ನೀಡಿರುವುದು ಮಾತ್ರವಲ್ಲ, ಅವುಗಳ ವೈಜ್ಞಾನಿಕ ನಿರ್ವಹಣೆಗೂ ಒತ್ತು ನೀಡಲಾಗಿದೆ. ಗೋವಿಂದ ಕಾರಜೋಳ ಅವರ ಒತ್ತಾಸೆಯೇ ಇದಕ್ಕೆ ಕಾರಣ. ಎರಡು ವರ್ಷಗಳ ಅವಧಿಯಲ್ಲಿ ರಾಜ್ಯ ಹೆದ್ದಾರಿ, ಜಿಲ್ಲಾ ಮುಖ್ಯ ರಸ್ತೆ ಮತ್ತು ಸೇತುವೆಗಳ ನಿರ್ಮಾಣಕ್ಕೆ ₹ 1,542 ಕೋಟಿ ವೆಚ್ಚ ಮಾಡಲಾಗಿದೆ. ಇದರಿಂದ ರಾಜ್ಯದಲ್ಲಿ ಗುಂಡಿಮುಕ್ತ ರಸ್ತೆಗಳ ಜಾಲವನ್ನು ಕಾಣುವುದು ಸಾಧ್ಯವಾಗಿದೆ. ❖

### 101 ಕಟ್ಟಡ ನಿರ್ಮಾಣ ಪೂರ್ಣ

ಎರಡು ವರ್ಷಗಳ ಅವಧಿಯಲ್ಲಿ ಲೋಕೋಪಯೋಗಿ ಇಲಾಖೆಯು 73 ಕಟ್ಟಡಗಳು ಹಾಗೂ 28 ವಸತಿ ಗೃಹಗಳ ಕಾಮಗಾರಿಗಳನ್ನು ಪೂರ್ಣಗೊಳಿಸಲಾಗಿದೆ. ₹ 277 ಕೋಟಿ ವೆಚ್ಚದಲ್ಲಿ ಈ ಎಲ್ಲ ಕಾಮಗಾರಿಗಳನ್ನು ಕೈಗೊಳ್ಳಲಾಗಿದೆ.

48 ನ್ಯಾಯಾಲಯಗಳು ಹಾಗೂ ನ್ಯಾಯಾಧೀಶರ ವಸತಿಗೃಹಗಳ ನಿರ್ಮಾಣ ಪೂರ್ಣಗೊಂಡಿದೆ. ಪೋಕ್ಸೊ ಪ್ರಕರಣಗಳ ವಿಶೇಷ ನ್ಯಾಯಾಲಯಗಳಿಗಾಗಿ 15 ಹೊಸ ಕಟ್ಟಡಗಳನ್ನು ನಿರ್ಮಿಸಲಾಗಿದೆ. ಇದಕ್ಕಾಗಿ ಒಟ್ಟು ₹ 255 ಕೋಟಿ ವೆಚ್ಚ ಮಾಡಲಾಗಿದೆ.

**ಶಾಲೆ, ಅಂಗನವಾಡಿಗಳಿಗೆ ಸೂರು:** 2019ರಲ್ಲಿ ಪ್ರವಾಹದಿಂದ ಹಾನಿಗೊಳಗಾದ ಶಾಲೆ ಮತ್ತು ಅಂಗನವಾಡಿಗಳ ಕಟ್ಟಡಗಳನ್ನು ಶಿಕ್ಷಣ ಹಾಗೂ ಮಹಿಳಾ ಮತ್ತು ಮಕ್ಕಳ ಕಲ್ಯಾಣ ಅಭಿವೃದ್ಧಿ ಇಲಾಖೆಗಳ ಸಹಯೋಗದೊಂದಿಗೆ ನಬಾರ್ಡ್ ನೆರವಿನಲ್ಲಿ ಮರುನಿರ್ಮಿಸುವ ಹೊಣೆಯನ್ನೂ ಲೋಕೋಪಯೋಗಿ ಇಲಾಖೆಯೇ ನಿರ್ವಹಿಸುತ್ತಿದೆ.

3,243 ಶಾಲಾ ಕೊಠಡಿಗಳ ಮರು ನಿರ್ಮಾಣ ಕಾಮಗಾರಿಗಳನ್ನು ₹ 718.65 ಕೋಟಿ ವೆಚ್ಚದಲ್ಲಿ ಕೈಗೆತ್ತಿಕೊಳ್ಳಲಾಗಿದೆ. ಈವರೆಗೆ ₹ 350 ಕೋಟಿ ವೆಚ್ಚದಲ್ಲಿ 1,692 ಕೊಠಡಿಗಳ ನಿರ್ಮಾಣ ಪೂರ್ಣಗೊಂಡಿದೆ. ₹ 137.78 ಕೋಟಿ ವೆಚ್ಚದಲ್ಲಿ 842 ಅಂಗನವಾಡಿ ಕಟ್ಟಡಗಳ ಮರು ನಿರ್ಮಾಣ ಆರಂಭಿಸಲಾಗಿತ್ತು. ₹ 36 ಕೋಟಿ ವೆಚ್ಚದಲ್ಲಿ 189 ಕಾಮಗಾರಿಗಳನ್ನು ಪೂರ್ಣಗೊಳಿಸಲಾಗಿದೆ.

### ವೈಜ್ಞಾನಿಕವಾಗಿ ರಸ್ತೆಗಳ ಉನ್ನತೀಕರಣ

ಉಪ ಮುಖ್ಯಮಂತ್ರಿ ಗೋವಿಂದ ಎಂ. ಕಾರಜೋಳ ಅವರ ಆಸಕ್ತಿಯ ಫಲವಾಗಿ 15 ವರ್ಷಗಳ ನಂತರ ರಾಜ್ಯದಲ್ಲಿ ವೈಜ್ಞಾನಿಕವಾಗಿ ರಸ್ತೆಗಳ ಉನ್ನತೀಕರಣಕ್ಕೆ ನಿರ್ಧಾರ ಕೈಗೊಳ್ಳಲಾಗಿದೆ. ರಾಜ್ಯದ ಎಲ್ಲ ಜಿಲ್ಲೆಗಳಲ್ಲೂ ಪ್ರಮುಖ ರಸ್ತೆಗಳನ್ನು ಮೇಲ್ದರ್ಜೆಗೇರಿಸಲು ತೀರ್ಮಾನಿಸಲಾಗಿದೆ.

9,601 ಕಿ.ಮೀ. ಉದ್ದದ ರಾಜ್ಯ ಹೆದ್ದಾರಿ ಮತ್ತು 15,510 ಕಿ.ಮೀ. ಉದ್ದದ ಜಿಲ್ಲಾ ಮುಖ್ಯ ರಸ್ತೆಗಳ ಉನ್ನತೀಕರಣಕ್ಕೆ 2020ರ ಸೆಪ್ಟೆಂಬರ್ 1ರಂದು ಲೋಕೋಪಯೋಗಿ ಇಲಾಖೆ ಅಧಿಸೂಚನೆ ಹೊರಡಿಸಿದೆ. ಹಂತ ಹಂತವಾಗಿ ಈ ರಸ್ತೆಗಳ ಅಭಿವೃದ್ಧಿ ಕಾಮಗಾರಿಗಳು ನಡೆಯಲಿವೆ.

### ಹೊಸ ಯೋಜನೆಗಳು

ಪ್ರಸಕ್ತ (2021-22) ಆರ್ಥಿಕ ವರ್ಷದಲ್ಲಿ ಕೋವಿಡ್ ಸಂಕಷ್ಟದ ನಡುವೆಯೇ ಲೋಕೋಪಯೋಗಿ ಇಲಾಖೆ ಹಲವು ಹೊಸ ಯೋಜನೆಗಳನ್ನು ಕೈಗೆತ್ತಿಕೊಂಡಿದೆ. ರಸ್ತೆ, ಸೇತುವೆ, ಕಟ್ಟಡಗಳ ನಿರ್ಮಾಣದ ಮೂಲಕ ರಾಜ್ಯದಲ್ಲಿ ಮೂಲಸೌಕರ್ಯನ ಅಭಿವೃದ್ಧಿಯಲ್ಲಿ ಹೊಸ ದಾಖಲೆ ಬರೆಯುವತ್ತ ಇಲಾಖೆ ಹೆಜ್ಜೆ ಇಟ್ಟಿದೆ.

ರಾಜ್ಯ ಹೆದ್ದಾರಿ ಅಭಿವೃದ್ಧಿ ಯೋಜನೆ (ಎಸ್‌ಎಚ್‌ಡಿಪಿ) ನಾಲ್ಕನೇ ಹಂತದಲ್ಲಿ ₹ 3,500 ಕೋಟಿ ವೆಚ್ಚದಲ್ಲಿ 2,770 ಕಿ.ಮೀ. ಉದ್ದದ ರಸ್ತೆಗಳನ್ನು ಅಭಿವೃದ್ಧಿಪಡಿಸಲು ಯೋಜನೆ ರೂಪಿಸಲಾಗಿದೆ. ಕೆಶಿಪ್ ಅಡಿಯಲ್ಲಿ ಪ್ರಗತಿಯಲ್ಲಿರುವ 418 ಕಿ.ಮೀ. ಉದ್ದದ ರಸ್ತೆಗಳ ನಿರ್ಮಾಣವನ್ನು ಪೂರ್ಣಗೊಳಿಸುವ ಗುರಿ ಹೊಂದಲಾಗಿದೆ.

ಬೆಂಗಳೂರಿನಲ್ಲಿ ನಗರಾಭಿವೃದ್ಧಿ ಇಲಾಖೆಯ ಸಹಯೋಗದಲ್ಲಿ 12 ಅತಿ ದಟ್ಟಣೆಯ ಪಥಗಳಲ್ಲಿ ₹ 788 ಕೋಟಿ ವೆಚ್ಚದಲ್ಲಿ 191 ಕಿ.ಮೀ. ಉದ್ದದ ವಿಸ್ತಾರವಾದ ರಸ್ತೆಗಳ ನಿರ್ಮಾಣ ಕಾಮಗಾರಿ ಪ್ರಸಕ್ತ ವರ್ಷ ಅನುಷ್ಠಾನಕ್ಕೆ ಬರಲಿದೆ. ಬೆಳಗಾವಿ ನಗರದಲ್ಲಿ 69 ಕಿ.ಮೀ. ಮತ್ತು ರಾಯಚೂರು ನಗರದಲ್ಲಿ 14.50 ಕಿ.ಮೀ. ಉದ್ದದ ವರ್ತುಲ ರಸ್ತೆಗಳ ನಿರ್ಮಾಣ ಕಾಮಗಾರಿಗಳನ್ನು ಎನ್.ಎಚ್.ಎ.ಐ ಸಹಯೋಗದಲ್ಲಿ ಕೈಗೊಳ್ಳಲು ಲೋಕೋಪಯೋಗಿ ಇಲಾಖೆ ಸಿದ್ಧತೆ ನಡೆಸಿದೆ.

ಬೆಂಗಳೂರಿನ ವಸಂತನಗರದಲ್ಲಿ ಇರುವ ಹಳೆಯ ವಸತಿ ಗೃಹಗಳ ಕಟ್ಟಡಗಳನ್ನು ನೆಲಸಮಗೊಳಿಸಿ ₹ 117 ಕೋಟಿ ವೆಚ್ಚದಲ್ಲಿ 77 ಹೊಸ ವಸತಿ ಗೃಹಗಳ ನಿರ್ಮಾಣ ಕಾಮಗಾರಿ ಆರಂಭಕ್ಕೆ ಯೋಜನೆ ಸಿದ್ಧವಾಗಿದೆ. ಶಿವಮೊಗ್ಗ-ಸವಳಂಗ-ಶಿಕಾರಿಪುರ-ಶಿರಾಳಕೊಪ್ಪ ಮತ್ತು ಹಾಸನ-ರಾಮನಾಥಪುರ-ಪಿರಿಯಾಪಟ್ಟಣ ಮಾರ್ಗಗಳಲ್ಲಿ PRAMC ಮೂಲಕ ₹ 18 ಕೋಟಿ ವೆಚ್ಚದಲ್ಲಿ ಅತ್ಯಾಧುನಿಕ ರಸ್ತೆ ಸುರಕ್ಷತೆ ಮತ್ತು ವೈಜ್ಞಾನಿಕ ನಿರ್ವಹಣೆ ಯೋಜನೆಯನ್ನು ಪ್ರಾಯೋಗಿಕವಾಗಿ ಜಾರಿಗೊಳಿಸಲಾಗುತ್ತಿದೆ.

ದಾಬಸ್‌ಪೇಟೆ- ದೇವನಹಳ್ಳಿ- ಹೊಸಕೋಟೆ-ತಮಿಳುನಾಡು ಉಪನಗರ ವರ್ತುಲ ರಸ್ತೆ ಯೋಜನೆಯ 101 ಕಿ.ಮೀ. ಉದ್ದದ ಕಾಮಗಾರಿ 'ಭಾರತ್ ಮಾಲಾ' ಯೋಜನೆಯಡಿ ಪೂರ್ಣಗೊಂಡಿದೆ. ಹೊಸೂರು ಗಡಿ- ಕನಕಪುರ- ರಾಮನಗರ- ಮಾಗಡಿ- ಡಾಬಸ್‌ಪೇಟೆ ಮಾರ್ಗದಲ್ಲಿ ಬಾಕಿ ಇರುವ ಕಾಮಗಾರಿಗೆ ಅಗತ್ಯವಿರುವ ಜಮೀನುಗಳ ಸ್ವಾಧೀನಕ್ಕೆ ₹ 1,60 ಕೋಟಿ ಬೇಕಿದೆ. ಅದರಲ್ಲಿ ಶೇಕಡ 30ರಷ್ಟನ್ನು ರಾಜ್ಯ ಸರ್ಕಾರದಿಂದ ಭರಿಸಲು ನಿರ್ಧಾರ ಕೈಗೊಳ್ಳಲಾಗಿದೆ.

# ಸರ್ಕಾರಿ ಕಚೇರಿಗಳಿಗಾಗಿ ಬರಲಿದೆ ಭವ್ಯ ಕಟ್ಟಡ 'ಅವಳಿಗೋಪುರ'

**ಬೆಂಗಳೂರು:** ರಾಜ್ಯ ರಾಜಧಾನಿಯಲ್ಲಿ ಸರ್ಕಾರಿ ಕಚೇರಿಗಳ ಕಾರ್ಯನಿರ್ವಹಣೆಗಾಗಿ ಮಾಡುತ್ತಿರುವ ದುಬಾರಿ ಬಾಡಿಗೆ ವೆಚ್ಚಕ್ಕೆ ಕಡಿವಾಣ ಹಾಕುವುದಕ್ಕಾಗಿ ನಗರದ ಆನಂದರಾವ್ ವೃತ್ತದಲ್ಲಿ 50 ಮಹಡಿಗಳ ಸುಸಜ್ಜಿತವಾದ ಅವಳಿ ಗೋಪುರ ತಲೆ ಎತ್ತಲಿದೆ. ಇದಕ್ಕಾಗಿ ₹1,251 ಕೋಟಿ ವೆಚ್ಚದ ಯೋಜನೆ ರೂಪುಗೊಂಡಿದೆ.

ಉಪಮುಖ್ಯಮಂತ್ರಿ ಗೋವಿಂದ ಎಂ. ಕಾರಜೋಳ ಅವರ ಸೂಚನೆಯಂತೆ ಸುದೀರ್ಘ ಕಾಲ ಅಧ್ಯಯನ ನಡೆಸಿದ ಇಲಾಖೆಯ ಅಧಿಕಾರಿಗಳ ತಂಡ, ಅವಳಿ ಗೋಪುರ ನಿರ್ಮಿಸುವ ಯೋಜನೆಯನ್ನು ಸಿದ್ಧಪಡಿಸಿದೆ. ಸರ್ಕಾರಿ- ಖಾಸಗಿ ಸಹಭಾಗಿತ್ವದಲ್ಲಿ (ಪಿಪಿಪಿ) ಈ ಕಟ್ಟಡ ತಲೆ ಎತ್ತಲಿದೆ. 8.5 ಎಕರೆ ವಿಸ್ತೀರ್ಣದ ನಿವೇಶನದಲ್ಲಿ ನಿರ್ಮಾಣಗೊಳ್ಳಲಿರುವ ಅವಳಿ ಗೋಪುರಗಳ ಕಟ್ಟಡ, 23.94 ಲಕ್ಷ ಚದರ ಅಡಿಗಳಷ್ಟು ವಿಸ್ತೀರ್ಣ ಹೊಂದಿರಲಿದೆ.

'ವಿಧಾನಸೌಧ, ವಿಕಾಸಸೌಧ, ಮೆಜೆಸ್ಟಿಕ್, ಬಸ್ ನಿಲ್ದಾಣ, ರೈಲು ನಿಲ್ದಾಣ, ಮೆಟ್ರೊ ರೈಲು ನಿಲ್ದಾಂಕ್ಕೆ ಸಮೀಪದಲ್ಲಿ ಅವಳಿ ಗೋಪುರ ನಿರ್ಮಿಸಲಾಗುತ್ತಿದೆ. ಇದರಿಂದ ಸರ್ಕಾರಿ ನೌಕರರು ಮತ್ತು ಸಾರ್ವಜನಿಕರು ಇಬ್ಬರಿಗೂ ಅನುಕೂಲವಾಗುತ್ತದೆ' ಎಂದು ಗೋವಿಂದ ಕಾರಜೋಳ ಅವರು ಯೋಜನೆಯ ಲಾಭವನ್ನು ವಿವರಿಸುತ್ತಾರೆ.

ದೆಹಲಿಯಲ್ಲಿ ಕರ್ನಾಟಕ ಭವನದ ಮತ್ತೊಂದು ಕಟ್ಟಡ ನಿರ್ಮಿಸಲಾಗುತ್ತಿದೆ. ₹ 120 ಕೋಟಿ ವೆಚ್ಚದಲ್ಲಿ ಕರ್ನಾಟಕ ಭವನ-1ರ ಕಾಮಗಾರಿ ನಡೆಯುತ್ತಿದೆ.

ಬೆಂಗಳೂರಿನ ಆನಂದರಾವ್ ಸರ್ಕಲ್‌ನಲ್ಲಿ ಲೋಕೋಪಯೋಗಿ ಇಲಾಖೆ ನಿರ್ಮಿಸಲಿರುವ ಅವಳಿ ಗೋಪುರದ ವಿನ್ಯಾಸದ ಮಾದರಿ

### ವಿಮಾನ ನಿಲ್ದಾಣ ಕಾಮಗಾರಿಗಳಿಗೂ ವೇಗ

ಲೋಕೋಪಯೋಗಿ ಇಲಾಖೆಯು ಮೂಲಸೌಕರ್ಯ ಅಭಿವೃದ್ಧಿ ಇಲಾಖೆ ಸಹಯೋಗದಲ್ಲಿ ಕೈಗೆತ್ತಿಕೊಂಡಿರುವ ಬೀದರ್, ಶಿವಮೊಗ್ಗ ಮತ್ತು ವಿಜಯಪುರ ವಿಮಾನ ನಿಲ್ದಾಣಗಳ ನಿರ್ಮಾಣ ಕಾಮಗಾರಿಗಳಿಗೂ ವೇಗ ದೊರಕಿದೆ.

ಶಿವಮೊಗ್ಗ ನಗರದ ಹೊರ ವಲಯದ ಸೀಗಾನೆ ಗ್ರಾಮದಲ್ಲಿ 700 ಎಕರೆ ವಿಸ್ತೀರ್ಣದಲ್ಲಿ ₹ 384 ಕೋಟಿ ವೆಚ್ಚದಲ್ಲಿ ವಿಮಾನ ನಿಲ್ದಾಣ ನಿರ್ಮಾಣ ಪ್ರಗತಿಯಲ್ಲಿದೆ. ಏರ್‌ಬಸ್-320 ವಿಮಾನಗಳ ಹಾರಾಟಕ್ಕೆ ಅವಕಾಶ ಕಲ್ಪಿಸಲಿರುವ ನಿಲ್ದಾಣದ ಮೊದಲ ಹಂತದ ಕಾಮಗಾರಿ ಪ್ರಗತಿಯಲ್ಲಿದೆ. ಎರಡನೇ ಹಂತದ ಕಾಮಗಾರಿಗೆ ಗುತ್ತಿಗೆದಾರರ ನೇಮಕಾತಿಯೂ ಆಗಿದೆ.

ವಿಜಯಪುರದಲ್ಲಿ ₹ 220 ಕೋಟಿ ವೆಚ್ಚದಲ್ಲಿ ವಿಮಾನ ನಿಲ್ದಾಣ ನಿರ್ಮಿಸಲಾಗುತ್ತಿದೆ. ₹ 85 ಕೋಟಿ ವೆಚ್ಚದ ಮೊದಲ ಹಂತದ ಕಾಮಗಾರಿ ಪ್ರಗತಿಯಲ್ಲಿದೆ. ಎರಡನೇ ಹಂತದಲ್ಲಿ ₹ 120 ಕೋಟಿ ವೆಚ್ಚದಲ್ಲಿ ಟರ್ಮಿನಲ್ ಕಟ್ಟಡ ನಿರ್ಮಿಸಲು ವಿಸ್ತೃತ ಯೋಜನಾ ವರದಿ ಸಿದ್ಧಪಡಿಸಿದ್ದು, ಅನುಮೋದನೆಗೆ ಸಲ್ಲಿಸಲಾಗಿದೆ. ❖



ವಿಜಯಪುರ ವಿಮಾನ ನಿಲ್ದಾಣ ಕಾಮಗಾರಿ ಪರಿವೀಕ್ಷಣೆ

ಪ್ರಸ್ತುತಿ:
ಪಿ.ವಿ.
ಬ್ರ್ಯಾಂಡ್ ಸ್ಪಾಟ್

## ಕಾಲೊನಿಗಳಲ್ಲಿ ಶುದ್ಧ ಪರಿಸರಕ್ಕಾಗಿ ಮೂಲ ಸೌಕರ್ಯ

### ಪರಿಶಿಷ್ಟರ ಕಾಲೊನಿಗಳಲ್ಲಿ 'ಶುಚಿತ್ವ'ಕ್ಕೆ ಆದ್ಯತೆ

ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡದವರು ವಾಸಿಸುವ ಕಾಲೊನಿಗಳಲ್ಲಿ, ಬಡಾವಣೆಗಳಲ್ಲಿ ಶುಚಿತ್ವಕ್ಕೆ ಆದ್ಯತೆ ನೀಡುವ ದೃಷ್ಟಿಯಿಂದ ರಾಜ್ಯ ಸರ್ಕಾರ ಕಾಲೊನಿಗಳಲ್ಲಿ ಕಾಂಕ್ರೀಟ್ ರಸ್ತೆ ಮತ್ತು ಸಿಮೆಂಟ್ ಬಾಕ್ಸ್ ಚರಂಡಿಗಳನ್ನು ನಿರ್ಮಾಣ ಮಾಡುತ್ತಿದೆ.

ತಳ ಸಮುದಾಯವರ ಏಳಿಗೆಗಾಗಿ ಪರಿಶಿಷ್ಟ ಜಾತಿಗಳ ಉಪ ಯೋಜನೆ (ಎಸ್‌ಸಿಎಸ್‌ಪಿ) ಮತ್ತು ಬುಡಕಟ್ಟು ಉಪ ಯೋಜನೆ (ಟಿಎಸ್‌ಪಿ) ಅಡಿಯಲ್ಲಿ ಮೀಸಲಿಟ್ಟಿರುವ ಅನುದಾನದಲ್ಲಿ ಈ ಕಾಮಗಾರಿಗಳನ್ನು ಕೈಗೊಂಡಿದೆ. ₹2,779 ಕೋಟಿ ವೆಚ್ಚದಲ್ಲಿ, 3,668 ಕಿ.ಮೀ ಉದ್ದದ ಕಾಂಕ್ರೀಟ್ ರಸ್ತೆಯನ್ನು ಲೋಕೋಪಯೋಗಿ ಇಲಾಖೆ ನಿರ್ಮಾಣ ಮಾಡಿದೆ.

### ಅಪಘಾತ ತಡೆಗೆ ರಸ್ತೆ ಸುರಕ್ಷತಾ ಯೋಜನೆ

ರಸ್ತೆ, ಯೋಜನೆ ಮತ್ತು ಆಸ್ತಿ ನಿರ್ವಹಣಾ ಕೇಂದ್ರ (ಪಿಆರ್‌ಎಎಂಸಿ) ಅಪಘಾತ ವಲಯ (ಕಪ್ಪು ಸ್ಥಳಗಳು)ಗಳನ್ನು ಅಭಿವೃದ್ಧಿಪಡಿಸಿ, ಅಪಘಾತಗಳನ್ನು ತಪ್ಪಿಸುವಲ್ಲಿ ಕಾರ್ಯಪ್ರವೃತ್ತವಾಗಿದೆ. ಈ ವರೆಗೆ ₹433 ಕೋಟಿ ವೆಚ್ಚದಲ್ಲಿ ಪಿಆರ್‌ಎಎಂಸಿ ಮೂಲಕ 419 ರಸ್ತೆ ಸುರಕ್ಷತಾ ಮತ್ತು ಕಪ್ಪು ಸ್ಥಳಗಳ ಅಭಿವೃದ್ಧಿಗಾಗಿ ಕಾಮಗಾರಿಗಳನ್ನು ಪೂರ್ಣಗೊಳಿಸಲಾಗಿದೆ. ❖

## ಸಿಲಿಕಾನ್ ಸಿಟಿಯ ಸುತ್ತ 'ಹೆದ್ದಾರಿ'ಗಳ ಹಾರ !

# ಸಂಚಾರ ದಟ್ಟಣೆ ನಿಯಂತ್ರಣ; ಸಿಲಿಕಾನ್ ಸಿಟಿ ಸುತ್ತ 'ಹೆದ್ದಾರಿ'ಗಳ ಅಭಿವೃದ್ಧಿ

**ಬೆಂಗಳೂರು:** 'ಸಿಲಿಕಾನ್ ವ್ಯಾಲಿ', ಉದ್ಯಾನ ನಗರಿ ಬೆಂಗಳೂರು ತನ್ನ ಹಲವು ವೈಶಿಷ್ಟ್ಯಗಳಿಂದ ವಿಶ್ವಖ್ಯಾತಿ ಪಡೆದಿರುವ ನಗರ. ವಿಶಿಷ್ಟ 'ಬ್ರ್ಯಾಂಡ್ ಇಮೇಜ್' ಇರುವ ಈ ಮಹಾನಗರ ದೇಶದ ಅಭಿವೃದ್ಧಿಗೆ ದೊಡ್ಡ ಪ್ರಮಾಣದಲ್ಲಿ ಕೊಡುಗೆ ನೀಡುತ್ತಿದೆ. ಇಂಥ ಮಹಾನಗರದ ಮೂಲ ಸೌಕರ್ಯದ ಅಭಿವೃದ್ಧಿಯ ಜತೆಗೆ, ಇಲ್ಲಿನ 'ಸಂಚಾರ ದಟ್ಟಣೆ' ನಿವಾರಣೆಗೆ ಸೂಕ್ತ ಪರಿಹಾರ ಕಲ್ಪಿಸಲು ಮುಖ್ಯಮಂತ್ರಿ ಬಿ.ಎಸ್. ಯಡಿಯೂರಪ್ಪ ನೇತೃತ್ವದ ಸರ್ಕಾರ ಸಂಕಲ್ಪ ಮಾಡಿದೆ.

ನಗರದ ಒಳಗೆ ಮೇಲುಸೇತುವೆಗಳು, ಕೆಳಸೇತುವೆಗಳ ನಿರ್ಮಾಣ, ಮೆಟ್ರೊ ರೈಲು ಸೌಲಭ್ಯ ಕಲ್ಪಿಸುವ ಮೂಲಕ ಮೂಲಕ ಸಂಚಾರ ದಟ್ಟಣೆ ಕಡಿಮೆಗೊಳಿಸುವ ಪ್ರಯತ್ನಕ್ಕೆ ಮುಂದಾಗಿರುವ ಸರ್ಕಾರ, ಈಗ ನಗರದ ಹೊರ ವಲಯದದಲ್ಲಿ ಪರ್ಯಾಯ ಸಂಪರ್ಕ ರಸ್ತೆಗಳ ಅಭಿವೃದ್ಧಿಯನ್ನು ಕೈಗೆತ್ತಿಕೊಂಡಿದೆ. ಈ ಯೋಜನೆಯಲ್ಲಿ ಬೆಂಗಳೂರಿನ ಹೊರ ವಲಯದಲ್ಲಿನ ಗ್ರಾಮಗಳು, ಹೋಬಳಿ, ತಾಲ್ಲೂಕು ಕೇಂದ್ರಗಳನ್ನು ಹಾದು ಹೋಗಿರುವ ರಾಜ್ಯ ಹೆದ್ದಾರಿ(ಎಸ್‌ಎಚ್) ರಾಷ್ಟ್ರೀಯ ಹೆದ್ದಾರಿಗಳೂ(ಎನ್‌ಎಚ್) ಅಭಿವೃದ್ಧಿಯಾಗುತ್ತಿವೆ. ಈ ಪರ್ಯಾಯ ಮಾರ್ಗಗಳ ಅಭಿವೃದ್ಧಿಯಿಂದ ಬೆಂಗಳೂರು ನಗರದೊಳಗೆ ಹೆಚ್ಚಿರುವ 'ಸಂಚಾರ ದಟ್ಟಣೆ'ಗೆ ಪರಿಹಾರ ದೊರೆತಂತಾಗುತ್ತದೆ.



ಕೇಂದ್ರ ಭೂಸಾರಿಗೆ ಸಚಿವರೊಂದಿಗೆ ಪ್ರಗತಿ ಪರಿಶೀಲನಾ ಸಭೆ

ರಾಜ್ಯ ಸರ್ಕಾರ, ಪ್ರಸ್ತುತ ಕರ್ನಾಟಕ ರಾಜ್ಯ ರಸ್ತೆ ಅಭಿವೃದ್ಧಿ ನಿಗಮದ(ಕೆಆರ್‌ಡಿಸಿಎಲ್) ಮೂಲಕ ಅಂದಾಜು ₹2,095 ಕೋಟಿ ವೆಚ್ಚದಲ್ಲಿ ಬೆಂಗಳೂರು ಸುತ್ತ 155 ಕಿ.ಮೀ ಉದ್ದದ ರಸ್ತೆ ನಿರ್ಮಾಣ ಮಾಡುತ್ತಿದೆ. ವಾಹನ ಸಂಚಾರ ದಟ್ಟಣೆ ತಪ್ಪಿಸುವ ಜೊತೆಗೆ, ಬೆಂಗಳೂರು ಪ್ರವೇಶಿಸದೆಯೇ ದೇವನಹಳ್ಳಿ ಅಂತರರಾಷ್ಟ್ರೀಯ ವಿಮಾನ ನಿಲ್ದಾಣವನ್ನು ಸುಲಭವಾಗಿ ತಲುಪುವುದು ಈ ರಸ್ತೆ ನಿರ್ಮಾಣದ ಹಿಂದಿನ ಉದ್ದೇಶವಾಗಿದೆ. ಸದ್ಯ ಈ ರಸ್ತೆ ಕಾಮಗಾರಿ ಪ್ರಗತಿಯಲ್ಲಿದೆ.

### ರಸ್ತೆ ಅಭಿವೃದ್ಧಿ – ಎಲ್ಲಿಂದ ಎಲ್ಲಿಗೆ ?

ಹೈದರಾಬಾದ್-ಕೋಲಾರದ ಭಾಗದಿಂದ ದೇವನಹಳ್ಳಿಯ ಕೆಂಪೇಗೌಡ ಅಂತರರಾಷ್ಟ್ರೀಯ ವಿಮಾನ ನಿಲ್ದಾಣವನ್ನು ಸುಲಭವಾಗಿ ತಲುಪಲು ಅನುಕೂಲವಾಗುವಂತೆ ಹೊಸಕೋಟೆ-ವಿಮಾನ ನಿಲ್ದಾಣ ಸಂಪರ್ಕಿಸುವ 20.11 ಕಿ.ಮೀ ಉದ್ದದ ರಸ್ತೆ ಅಭಿವೃದ್ಧಿಪಡಿಸಲಾಗುತ್ತಿದೆ. ಇದು ಹೊಸಕೋಟೆ - ಬೂದಿಗೆರೆ ಕ್ರಾಸ್‌ನಿಂದ(ಎನ್‌ಎಚ್-4) ಬೂದಿಗೆರೆ, ಸಿಂಗಹಳ್ಳಿ ಮತ್ತು ಮೈಲನಹಳ್ಳಿ ಮಾರ್ಗವಾಗಿ ಕೆಂಪೇಗೌಡ ಅಂತರರಾಷ್ಟ್ರೀಯ ವಿಮಾನ ನಿಲ್ದಾಣಕ್ಕೆ ತಲುಪುತ್ತದೆ.

ತುಮಕೂರು ಕಡೆಯಿಂದ ಅಂತರರಾಷ್ಟ್ರೀಯ ವಿಮಾನ ನಿಲ್ದಾಣ ತಲುಪುವವರಿಗೆ ಅನುಕೂಲ ಕಲ್ಪಿಸಲು, ನೆಲಮಂಗಲದಿಂದ(ಎನ್‌ಎಚ್- 4) ಚಿಕ್ಕಮಧುರೆ ಮಾರ್ಗವಾಗಿ ಮಧುರೆ (ಎಸ್‌ಎಚ್-74) ರಾಜಾನುಕುಂಟೆ ಮತ್ತು ತಿಮ್ಮಸಂದ್ರ ಮಾರ್ಗವಾಗಿ ದೇವನಹಳ್ಳಿರಸ್ತೆವರೆಗಿನ (ಎಮ್.ವಿ. ಸೋಲರ್ಸ್) (ಎನ್‌ಎಚ್-7) 39.24 ಕಿ.ಮೀ ರಸ್ತೆಯನ್ನು ಅಭಿವೃದ್ಧಿಪಡಿಸಲಾಗುತ್ತಿದೆ.

ಬಿಡದಿಯಿಂದ ಕಂಚುಗಾರನಹಳ್ಳಿ, ಹಾರೋಹಳ್ಳಿ ಮತ್ತು ಉರಗನದೊಡ್ಡಿ ಮೂಲಕ ಜಿಗಣಿಯವರೆಗೆ, ಮತ್ತು ಬನ್ನೇರುಘಟ್ಟದಿಂದ (ಎಸ್‌ಎಚ್-87) ಜಿಗಣಿ ಹಾರಗದ್ದೆ ಮತ್ತು ಇಂಡ್ಲವಾಡಿ ಮೂಲಕ ಎಸ್‌ಎಚ್-35ರ ಆನೇಕಲ್ (ಬೆಸ್ತನಮಹಳ್ಳಿ)ವರೆಗಿನ 56.18 ಕಿ.ಮೀ ರಸ್ತೆಯನ್ನು ಅಭಿವೃದ್ಧಿಪಡಿಸಲಾಗುತ್ತಿದೆ.

ಆನೇಕಲ್(ಬೆಸ್ತಮನಹಳ್ಳಿ)- ಅತ್ತಿಬೆಲೆ, ಸರ್ಜಾಪುರ ಹಾಗೂ ವೈಟ್‌ಫೀಲ್ಡ್ ಮೂಲಕ ಹೊಸಕೋಟೆ ತಲಪುವ 39.28 ಕಿ.ಮೀ ರಸ್ತೆ ಹಾಗೂ ವರ್ತೂರು ವ್ಯಾಪ್ತಿಯಲ್ಲಿ 1.30 ಕಿ.ಮೀ ಉದ್ದದ ಎಲಿವೇಟೆಡ್ ಕಾರಿಡಾರ್ ಅನ್ನೂ ಅಭಿವೃದ್ಧಿಪಡಿಸಲಾಗುತ್ತಿದೆ.

# ರಾಜ್ಯದಲ್ಲೀಗ 'ಚತುಷ್ಪಥ', 'ಷಟ್ಪಥ' ಹೆದ್ದಾರಿಗಳ ಪರ್ವ!

**ಬೆಂಗಳೂರು:** ಕೊರೊನಾ ಸಾಂಕ್ರಾಮಿಕ ರೋಗದಿಂದಾಗಿ ರಾಜ್ಯದ ಆರ್ಥಿಕ ಪರಿಸ್ಥಿತಿಯಲ್ಲಿ ಏರುಪೇರು ಉಂಟಾಗಿದ್ದರೂ ಮುಖ್ಯಮಂತ್ರಿ ಬಿ.ಎಸ್. ಯಡಿಯೂರಪ್ಪ ನೇತೃತ್ವದ ರಾಜ್ಯ ಸರ್ಕಾರ, ಲೋಕೋಪಯೋಗಿ ಇಲಾಖೆಯ ಕಾಮಗಾರಿಗಳಲ್ಲಿ ಕೊಂಚವೂ ಕುಂಠಿತವಾಗದಂತೆ ಎಚ್ಚರ ವಹಿಸುತ್ತಾ ಬಂದಿದೆ.

ಲೋಕೋಪಯೋಗಿ ಇಲಾಖೆ ಕಳೆದ ಎರಡು ವರ್ಷಗಳಲ್ಲಿ ರಾಜ್ಯದ ಎಲ್ಲಾ ಭಾಗಗಳಲ್ಲಿ ಸಾಕಷ್ಟು ರಾಜ್ಯ ಹೆದ್ದಾರಿ ಅಭಿವೃದ್ಧಿ ಕಾಮಗಾರಿಗಳನ್ನು ಯಶಸ್ವಿಯಾಗಿ ಪೂರ್ಣಗೊಳಿಸಿದೆ. ಜಿಲ್ಲೆ- ಜಿಲ್ಲೆಗಳ ನಡುವಿನ ರಸ್ತೆಗಳನ್ನೂ ಚತುಷ್ಪಥ, ಷಟ್ಪಥವಾಗಿಸುವ ಜತೆಗೆ, ಕೇಂದ್ರ ಸರ್ಕಾರದ ಸಹಯೋಗದೊಂದಿಗೆ ರಾಷ್ಟ್ರೀಯ ಹೆದ್ದಾರಿಗಳನ್ನೂ ಅಭಿವೃದ್ಧಿಪಡಿಸುತ್ತಿದೆ. ಹೆದ್ದಾರಿಗಳ ಅಭಿವೃದ್ಧಿ ಕೈಗಾರಿಕೆ, ಪ್ರವಾಸೋದ್ಯಮ, ಕೃಷಿ ಸೇರಿದಂತೆ ವಿವಿಧ ಕ್ಷೇತ್ರಗಳ ಬೆಳವಣಿಗೆಗೆ ಪೂರಕವಾಗುತ್ತದೆ.

ರಾಜ್ಯದಲ್ಲಿ ಸುಮಾರು ₹4,762 ಕೋಟಿ ಮೊತ್ತದಲ್ಲಿ ರಾಷ್ಟ್ರೀಯ ಹೆದ್ದಾರಿ ಕಾಮಗಾರಿಗಳನ್ನು ಅನುಷ್ಠಾನಗೊಳಿಸಲಾಗುತ್ತಿದೆ. ಕಳೆದ ಎರಡು ವರ್ಷಗಳಲ್ಲಿ ರಾಜ್ಯದಲ್ಲಿ ₹2,484 ಕೋಟಿ ವೆಚ್ಚದಲ್ಲಿ 399 ಕಿ.ಮೀ ಉದ್ದದಷ್ಟು ರಾಷ್ಟ್ರೀಯ ಹೆದ್ದಾರಿಗಳ ಅಭಿವೃದ್ಧಿಕಾರ್ಯ ಪೂರ್ಣಗೊಂಡಿದ್ದು, ಉಳಿದ ನಿರ್ಮಾಣ ಕಾಮಗಾರಿ ಭರದಿಂದ ಸಾಗಿದೆ.

ಮಾನ್ವಿ ಕೋರ್ಟ್‌ನ ನಿರ್ಮಾಣ ಹಂತದ ಕಟ್ಟಡ (ಮೊದಲ ಚಿತ್ರ)

ದಿವಂಗತ ಅಟಲ್‌ಬಿಹಾರಿ ವಾಜಪೇಯಿ ಪ್ರಧಾನಿಯಾಗಿದ್ದ ಅವಧಿಯಲ್ಲಿ ರಾಜ್ಯದ ಪ್ರಮುಖ ರಾಷ್ಟ್ರೀಯ ಹೆದ್ದಾರಿ -4 ಅನ್ನು ಚತುಷ್ಪಥ ರಸ್ತೆಯಾಗಿ ಅಭಿವೃದ್ಧಿಪಡಿಸಲಾಗಿತ್ತು. ಅಷ್ಟೇ ಅಲ್ಲ, 'ಗ್ರಾಮ ಸಡಕ್' ಯೋಜನೆಯಡಿ ಹಳ್ಳಿ ಹಳ್ಳಿಗಳ ರಸ್ತೆಗಳೂ ಡಾಂಬರು ಕಂಡವು. ಈಗ ಯಡಿಯೂರಪ್ಪ ನೇತೃತ್ವದ ರಾಜ್ಯ ಸರ್ಕಾರ, ರಾಷ್ಟ್ರೀಯ ಹೆದ್ದಾರಿ ಪ್ರಾಧಿಕಾರದ ಮೂಲಕ ರಾಜ್ಯದ ಪ್ರಮುಖ ರಾಷ್ಟ್ರೀಯ ಹೆದ್ದಾರಿಗಳನ್ನು ನಾಲ್ಕು ಪಥ (ಚತುಷ್ಪಥ) ಅಥವಾ ಆರು ಪಥಗಳ (ಷಟ್ಪಥ) ಹೆದ್ದಾರಿಗಳನ್ನಾಗಿ ಅಭಿವೃದ್ಧಿಪಡಿಸಲು ಯೋಜನೆ ರೂಪಿಸಿದೆ.

ರಾಷ್ಟ್ರೀಯ ಹೆದ್ದಾರಿ ಪ್ರಾಧಿಕಾರದ(ಎನ್‌ಎಚ್‌ಎಐ) ವತಿಯಿಂದ ರಾಜ್ಯ ಸರ್ಕಾರ ₹35,280 ಕೋಟಿ ವೆಚ್ಚದಲ್ಲಿ ರಾಜ್ಯದಲ್ಲಿ 1,980ಕಿಲೋ ಮೀಟರ್‌ನಷ್ಟು ಉದ್ದದ ರಾಷ್ಟ್ರೀಯ ಹೆದ್ದಾರಿ ಅಭಿವೃದ್ಧಿಗಾಗಿ ಯೋಜನೆ ರೂಪಿಸಿದೆ. ಕೇಂದ್ರ ರಸ್ತೆ ನಿಧಿ (ಸಿಆರ್‌ಎಫ್) ಅಡಿಯಲ್ಲಿ ₹774 ಕೋಟಿ ವೆಚ್ಚದಲ್ಲಿ ರಾಜ್ಯದಲ್ಲಿ 421 ರಸ್ತೆಗಳ ಅಭಿವೃದ್ಧಿ ಕಾರ್ಯವನ್ನು ಪೂರ್ಣಗೊಳಿಸಲಾಗಿದೆ.

ರಾಜ್ಯದ ಪ್ರಮುಖ ನಗರಗಳಾದ ಬೆಂಗಳೂರು - ಮೈಸೂರು, ತುಮಕೂರು - ಶಿವಮೊಗ್ಗ ಮತ್ತು ಬಳ್ಳಾರಿ - ಹಿರಿಯೂರು ನಡುವೆ ಪ್ರಸ್ತುತ ಚತುಷ್ಪಥ ಹೆದ್ದಾರಿಗಳ ಅಭಿವೃದ್ಧಿ ಕಾಮಗಾರಿಗಳಿಗೆ ಚಾಲನೆ ನೀಡಲಾಗಿದ್ದು, ಕಾಮಗಾರಿ ಪ್ರಗತಿಯಲ್ಲಿದೆ. ಇದೇ ರೀತಿ ಬೆಂಗಳೂರು - ಚೆನ್ನೈ ಎಕ್ಸ್‌ಪ್ರೆಸ್ ವೇ ಹೆದ್ದಾರಿ ಕಾಮಗಾರಿಗೂ ಕೇಂದ್ರ ಸರ್ಕಾರ ಚಾಲನೆ ನೀಡಿದೆ.

ಅಂತರ ರಾಜ್ಯದ ನಡುವಿನ ಹೆದ್ದಾರಿಗಳು ಅಭಿವೃದ್ಧಿಯಾದರೆ, ರಾಜ್ಯ ರಾಜ್ಯಗಳ ನಡುವೆ ವ್ಯಾಪಾರ ವಹಿವಾಟು ವೃದ್ಧಿಯಾಗುತ್ತದೆ ಎಂಬುದು ಸರ್ಕಾರದ ದೂರದೃಷ್ಟಿಯಾಗಿದೆ. ಅಷ್ಟೇ ಅಲ್ಲ, ಅಂತರರಾಜ್ಯಗಳ ನಡುವೆ ಸುಗಮ ಹಾಗೂ ಸುರಕ್ಷಿತ ವಾಹನ ಸಂಚಾರಕ್ಕೆ ಅನುಕೂಲವಾಗುತ್ತದೆ. ಕೃಷಿ, ಕೈಗಾರಿಕೆ ಅಭಿವೃದ್ಧಿ, ಪ್ರವಾಸೋದ್ಯಮ, ಎಲ್ಲದಕ್ಕಿಂತ ಹೆಚ್ಚಾಗಿ ಪ್ರಯಾಣದ ಅವಧಿ ಗಣನೀಯವಾಗಿ ಕಡಿಮೆಯಾಗುತ್ತದೆ. ಈ ದೂರದೃಷ್ಟಿಯಿಂದಾಗಿ ಕೇಂದ್ರದ ಸಹಯೋಗದಿಂದ ರಾಜ್ಯ ಸರ್ಕಾರ ರಾಷ್ಟ್ರೀಯ ಹೆದ್ದಾರಿಗಳ ಅಭಿವೃದ್ಧಿಗೆ ಮುಂದಾಗಿದೆ.

ಕೊರೊನಾ ಬಂದು ಗುಣಮುಖರಾದ ಮಕ್ಕಳಲ್ಲಿ ಕಂಡುಬರುವ ರೋಗ ● ದೆಹಲಿಯಲ್ಲಿ ಕಾಣಿಸಿಕೊಂಡಿತ್ತು ಮೊದಲ ಪ್ರಕರಣ

# ದಾವಣಗೆರೆ: ಎಎನ್‌ಇಸಿ ಎರಡನೇ ಪ್ರಕರಣ ಪತ್ತೆ

● ಬಾಲಕೃಷ್ಣ ಪಿ.ಎಚ್.

ದಾವಣಗೆರೆ: ಕೊರೊನಾ ಸೋಂಕು ಬಂದು ಹೋಗಿರುವ ಮಕ್ಕಳ ಪೈಕಿ ಕೆಲವೇ ಕೆಲವರಲ್ಲಿ 'ಮಿಸ್–ಸಿ' (ಎಂಐಎಸ್–ಸಿ) ಕಾಣಿಸಿಕೊಂಡಿದೆ. ಅದನ್ನೂ ಮೀರಿದ ರೋಗ 'ಎಎನ್‌ಇಸಿ', ದೇಶದಲ್ಲೇ ಎರಡನೇ ಪ್ರಕರಣ ದಾವಣಗೆರೆಯಲ್ಲಿ ಪತ್ತೆಯಾಗಿದೆ. ಇದು ಮಿದುಳಿಗೇ ತೊಂದರೆ ನೀಡುವಂತಹ ರೋಗವಾಗಿದೆ.

ವಿಜಯನಗರ ಜಿಲ್ಲೆಯ ಹೂವಿನಹಡಗಲಿಯ 13 ವರ್ಷದ ಬಾಲಕನಲ್ಲಿ ಈ ರೋಗ ಕಾಣಿಸಿಕೊಂಡಿದೆ. 8 ದಿನಗಳ ಹಿಂದೆ ಎಸ್.ಎಸ್. ಹೈಟೆಕ್ ಆಸ್ಪತ್ರೆಗೆ ಈ ಮಗುವನ್ನು ದಾಖಲಿಸಲಾಗಿತ್ತು. ಮಗುವನ್ನು ಪರೀಕ್ಷೆ ಮಾಡಿದಾಗ ಮಿದುಳು ನಿಷ್ಕ್ರಿಯ ಹಂತದಲ್ಲಿತ್ತು. ವೆಂಟಲೇಟರ್‌ನಲ್ಲಿ ಮೂರು ದಿನ ಚಿಕಿತ್ಸೆ ಕೊಡಲಾಯಿತು. ಸ್ವಲ್ಪ ಚೇತರಿಕೆ ಕಂಡಿದ್ದು, ಐಸಿಯುನಲ್ಲಿ ಇಡಲಾಗಿದೆ. ಆಮ್ಲಜನಕ ನೀಡುವುದನ್ನು ಕೂಡ ನಿಲ್ಲಿಸಲಾಗಿದೆ ಎಂದು ಎಸ್.ಎಸ್. ಹೈಟೆಕ್ ಆಸ್ಪತ್ರೆಯ ವೈದ್ಯಕೀಯ ನಿರ್ದೇಶಕರೂ ಆಗಿರುವ ಮಕ್ಕಳ ತಜ್ಞ ಡಾ.ಎನ್.ಕೆ. ಕಾಳಪ್ಪನವರ್ 'ಪ್ರಜಾವಾಣಿ'ಗೆ ತಿಳಿಸಿದ್ದಾರೆ.

> **ಮಕ್ಕಳ ರೋಗ ನಿರೋಧಕ ಶಕ್ತಿ ಪೂರ್ತಿ ಕುಂದಿಹೋಗುವ ಕ್ಲಾಸಿಕಲ್ ಮಿಸ್–ಸಿ ಗಿಂತಲೂ ಭಿನ್ನವಾದ, ದೇಹದ ಅಂಗಾಂಗಗಳ ಜತೆಗೆ ಮಿದುಳಿಗೂ ದಾಳಿ ಮಾಡುವ ರೋಗ ಎಎನ್‌ಇಸಿ**
> **ಡಾ.ಎನ್.ಕೆ. ಕಾಳಪ್ಪನವರ್**
> ಎಸ್.ಎಸ್. ಹೈಟೆಕ್ ಆಸ್ಪತ್ರೆಯ ವೈದ್ಯಕೀಯ ನಿರ್ದೇಶಕ, ದಾವಣಗೆರೆ

ಡಾ.ಎನ್.ಕೆ. ಕಾಳಪ್ಪನವರ್

'ಮಕ್ಕಳಿಗೆ ಕೊರೊನಾ ಬಂದು ಹೋಗಿರುತ್ತದೆ. ಇದಾಗಿ ಎರಡು–ಮೂರು ವಾರಗಳ ಬಳಿಕ ಇದ್ದಕ್ಕಿದ್ದಂತೆ ಮಗುವಿಗೆ ಉಸಿರಾಟದ ಸಮಸ್ಯೆ ಉಂಟಾಗುತ್ತದೆ. ಅಂಥ ಮಕ್ಕಳನ್ನು ಆಸ್ಪತ್ರೆಯಲ್ಲಿ ಪರೀಕ್ಷಿಸಿದಾಗ ಶ್ವಾಸಕೋಶದಲ್ಲಿ ನೀರು ತುಂಬಿರುತ್ತದೆ. ಮೂತ್ರಪಿಂಡ, ಲಿವರ್ ಸಹಿತ ದೇಹದ ಅಂಗಾಗಗಳೆಲ್ಲ ವೈಫಲ್ಯ ಆಗಿರುತ್ತದೆ. ಇದನ್ನು ಮಲ್ಟಿ ಆರ್ಗನ್ ಇನ್‌ಫ್ಲಮೇಟರಿ ಸಿಂಡ್ರೋಮ್ ಇನ್ ಚಿಲ್ಡ್ರನ್ (ಮಿಸ್–ಸಿ) ಎಂದು ಕರೆಯಲಾಗುತ್ತದೆ. ಆ ಮಕ್ಕಳನ್ನು ಪರೀಕ್ಷಿಸಿದಾಗ ದೇಹದಲ್ಲಿ ಕೋವಿಡ್ ರೋಗ ನಿರೋಧಕ ಶಕ್ತಿ ಬೆಳೆದಿರುತ್ತದೆ. ಅಂದರೆ ಕೊರೊನಾ ಬಂದಿರುವುದು ಮನೆಯವರಿಗೆ ಗೊತ್ತಾಗದೇ ಇದ್ದರೂ ಮಗುವಿಗೆ ಬಂದು ಹೋಗಿರುವುದು ಇದು ಖಚಿತಗೊಳಿಸುತ್ತದೆ. ಇಂಥ ಆರು ಪ್ರಕರಣಗಳು ನಮ್ಮಲ್ಲಿ ಪತ್ತೆಯಾಗಿವೆ. ಈ ಎಲ್ಲ ಆರು ಮಕ್ಕಳು ಈಗ ಚೇತರಿಸಿಕೊಂಡಿದ್ದಾರೆ' ಎಂದು ಮಾಹಿತಿ ನೀಡಿದರು.

ಇದೇ ರೀತಿ ಹೂವಿನಹಡಗಲಿಯ ಮಗುವಿನ ಸ್ಥಿತಿ ಇತ್ತು. ಪರೀಕ್ಷೆ ಮಾಡಿಸಿದಾಗ ಉಳಿದ ಮಕ್ಕಳಿಗಿಂತ ಭಿನ್ನವಾಗಿ ಮಿದುಳಿಗೆ ದಾಳಿಯಾಗಿತ್ತು. ಈ ಪ್ರಕರಣವನ್ನು ಅಧ್ಯಯನ ಮಾಡಿದಾಗ ಅಕ್ಯೂಟ್ ನೆಕ್ರೋಟೈಸಿಂಗ್ ಮೆನಿಂಗೋ ಎನ್‌ಕೆಫೆಲೋಪಥಿ ಇನ್ ಚಿಲ್ಡ್ರನ್ (ಎನೆಕ್) ಎಂಬುದು ಗೊತ್ತಾಯಿತು. ದೆಹಲಿಯ ಅಖಿಲ ಭಾರತ ವೈದ್ಯಕೀಯ ವಿಜ್ಞಾನ ಸಂಸ್ಥೆಯಲ್ಲಿ (ಏಮ್ಸ್) ಮೊದಲ ಪ್ರಕರಣ ಪತ್ತೆಯಾಗಿತ್ತು ಎಂದು ವಿವರಿಸಿದರು.

ಮಗುವಿನ ಬಗ್ಗೆ ಯಾವ ಭರವಸೆಯೂ ಉಳಿದಿರಲಿಲ್ಲ. ಈಗ ಚಿಕಿತ್ಸೆಗೆ ಸ್ಪಂದಿಸುವುದು ನೋಡಿದಾಗ ಹುಷಾರಾಗುವುದರಲ್ಲಿ ಅನುಮಾನ ಇಲ್ಲ. 5 ಗ್ರಾಂಗೆ ₹ 14 ಸಾವಿರ ದರ ಇರುವ ಇಮ್ಯೊಗ್ಲೊಬಿಹಿನ್ ಇಂಜೆಕ್ಷನ್ ಅನ್ನು ನೀಡಲಾಗುತ್ತಿದೆ. ಮಗುವಿನ ದೇಹದ ತೂಕಕ್ಕೆ ಅನುಗುಣವಾಗಿ ಒಂದು ಕೆ.ಜಿ.ಗೆ 2 ಗ್ರಾಂನಂತೆ ನೀಡಬೇಕಾಗುತ್ತದೆ ಎಂದು ತಿಳಿಸಿದರು.

## ಮರೆಯಾದ ಸುರಕ್ಷಿತ ಅಂತರ

ಲಾಕ್‌ಡೌನ್ ಸಡಿಲಿಕೆ ಬಳಿಕ ಬುಧವಾರ ಹುಬ್ಬಳ್ಳಿಯ ಅಮರಗೋಳದ ಎಪಿಎಂಸಿ ಮಾರುಕಟ್ಟೆಯಲ್ಲಿ ಕೋವಿಡ್ ಆತಂಕವನ್ನೂ ಲೆಕ್ಕಿಸದೆ ಜನ ತರಕಾರಿ ಖರೀದಿಗೆ ಮುಗಿಬಿದ್ದಿದ್ದರು
ಪ್ರಜಾವಾಣಿ ಚಿತ್ರ: ತಾಜುದ್ದೀನ್ ಆಜಾದ್

# ಹೋಟೆಲ್ ಕ್ಷೇತ್ರಕ್ಕೆ ನೆರವು ಕೊಡಿ: ಸಿದ್ದರಾಮಯ್ಯ ಪತ್ರ

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ಹೋಟೆಲ್, ರೆಸಾರ್ಟ್, ವಸತಿಗೃಹಗಳ ಕೋವಿಡ್ ಕಾಲದ ವಿದ್ಯುತ್, ನೀರಿನ ಶುಲ್ಕ ಮನ್ನಾ ಮಾಡುವುದು ಸೇರಿದಂತೆ ಈ ಉದ್ಯಮ ನೆಲಕಚ್ಚದಂತೆ ನೆರವು ನೀಡಬೇಕು' ಎಂದು ಆಗ್ರಹಿಸಿ ಮುಖ್ಯಮಂತ್ರಿ ಯಡಿಯೂರಪ್ಪ ಅವರಿಗೆ ವಿಧಾನಸಭೆಯ ವಿರೋಧ ಪಕ್ಷದ ನಾಯಕ ಸಿದ್ದರಾಮಯ್ಯ ಪತ್ರ ಬರೆದಿದ್ದಾರೆ.

'ಎಲ್ಲ ಬಿಪಿಎಲ್ ಕುಟುಂಬಗಳಿಗೆ ತಲಾ ₹ 10 ಸಾವಿರ ಘೋಷಿಸಬೇಕು. ತೀವ್ರ ಸಂಕಷ್ಟದಲ್ಲಿರುವ ಹೋಟೆಲ್, ವಸತಿ ಗೃಹ, ಫೋಟೋಗ್ರಾಫರ್‌ಗಳು, ಅಲಂಕಾರಿಕ ವೃತ್ತಿಯಲ್ಲಿ ತೊಡಗಿರುವವರಿಗೆ ತಕ್ಷಣ ಪ್ಯಾಕೇಜ್ ಘೋಷಿಸಬೇಕು. ಹೋಟೆಲ್, ಕ್ಯಾಂಟೀನ್ ಮಾಲೀಕರ ಬ್ಯಾಂಕ್ ಸಾಲ ವಸೂಲಾತಿ ಮುಂದೂಡಬೇಕು. ಸಾಲದ ಮೇಲಿನ ಬಡ್ಡಿ ಮನ್ನಾ ಮಾಡಬೇಕು. ಜೊತೆಗೆ, ಎಲ್ಲಾ ಉತ್ಪಾದಕ ಮತ್ತು ಸೇವಾ ವಲಯಗಳ ಜನರು ಮಾಡಿರುವ ಸಾಲದ ಮೇಲಿನ ಬಡ್ಡಿಯನ್ನೂ ಮನ್ನಾ ಮಾಡಬೇಕು' ಎಂದು ಪತ್ರದಲ್ಲಿ ಆಗ್ರಹಿಸಿದ್ದಾರೆ.

ಸಿದ್ದರಾಮಯ್ಯ

'ಬೆಂಗಳೂರು ಸೇರಿ ರಾಜ್ಯದ ವಿವಿಧ ಭಾಗಗಳಲ್ಲಿ ಸಾವಿರಾರು ಹೋಟೆಲ್‌ಗಳು ಬಂದ್ ಆಗಿವೆ. ಹೋಟೆಲ್, ಕ್ಯಾಂಟೀನ್ ಕಟ್ಟಡಗಳ ಬಾಡಿಗೆ ಕಟ್ಟಲಾಗದೆ ಮಾಲೀಕರು ಪರಿತಪಿಸುತ್ತಿದ್ದಾರೆ. ಬೆಂಗಳೂರು ನಗರ ಮತ್ತು ಅಕ್ಕಪಕ್ಕದ ನಾಲ್ಕೈದು ಜಿಲ್ಲೆಗಳಲ್ಲೇ 20 ಸಾವಿರಕ್ಕೂ ಹೆಚ್ಚು ಹೋಟೆಲ್ ಕಾರ್ಮಿಕರು ಕೆಲಸ ಕಳೆದುಕೊಂಡಿದ್ದಾರೆ. ಅವರು ಕುಟುಂಬ ನಿರ್ವಹಿಸಲಾಗದೆ ಸಂಕಷ್ಟದಲ್ಲಿದ್ದಾರೆ. ಈ ಕಾರ್ಮಿಕರ ಮಕ್ಕಳು ಶಿಕ್ಷಣ ತೊರೆಯಬೇಕಾದ ಸ್ಥಿತಿ ಬಂದೊದಗಿದೆ. ಸೇವಾ ವಲಯ ಸ್ಥಗಿತಗೊಂಡಿರುವುದರಿಂದ ಪ್ರವಾಸೋದ್ಯಮವನ್ನು ನೆಚ್ಚಿಕೊಂಡಿದ್ದ ವಸತಿಗೃಹಗಳ ಮಾಲೀಕರು ಮತ್ತು ಕೆಲಸಗಾರರು ದುಡಿಮೆ ಇಲ್ಲದೆ ಕಂಗಾಲಾಗಿದ್ದಾರೆ' ಎಂದೂ ಉಲ್ಲೇಖಿಸಿದ್ದಾರೆ.

ಪ್ರಜಾವಾಣಿ DH DECCAN HERALD
ಕೋವಿಡ್ ಪರಿಹಾರ ನಿಧಿ

## ದೇಣಿಗೆ ಕೊಟ್ಟವರ ವಿವರ

| ಸಂ | ಹೆಸರು, ವಿಳಾಸ | ದೇಣಿಗೆ ₹ಗಳಲ್ಲಿ |
|---|---|---|
| 1. | **ಮಂಜುನಾಥ್ ಎಸ್.ಎಂ.**, ನಂ. 628, 'ದೀಕ್ಷಾ', 10ನೇ ಕ್ರಾಸ್, 4ನೇ ಮೇನ್, ಇ ಅಂಡ್ ಎಫ್ ಬ್ಲಾಕ್, ರಾಮಕೃಷ್ಣನಗರ, ಮೈಸೂರು | 25,000 |
| 2. | **ಜಿ. ವೀರರಾಘವನ್**, 2–ಡಿ, ವಾತ್ಸಲ್ಯ ಅಪಾರ್ಟ್‌ಮೆಂಟ್ಸ್, 1ನೇ ಎ ಕ್ರಾಸ್, 17ನೇ ಎ ಮೇನ್, ಜೆ.ಪಿ.ನಗರ 2ನೇ ಹಂತ, ಬೆಂಗಳೂರು | 10,000 |
| 3. | **ಡಾ.ರಮಾ ಜನಾರ್ದನ**, ನೆಲಮಹಡಿ, ನಂ.5, ಲಿಯೊ ಪೂಜಿತಾ ಅಪಾರ್ಟ್‌ಮೆಂಟ್ಸ್, 2982, 3ನೇ ಮೇನ್, ವಿ.ವಿ. ಮೊಹಲ್ಲಾ, ಮೈಸೂರು | 10,000 |
| 4. | **ಅನುಪಮಾ ಜಿ.** ನಂ. 532, 9ನೇ ಕ್ರಾಸ್, 2ನೇ ಹಂತ, ಸಿದ್ಧಾರ್ಥ ನಗರ, ಮೈಸೂರು | 10,000 |
| 5. | **ಛಾಯಾ ಪಾಂಡುರಂಗ ಕಾಮತ್**, ಜಯಶ್ರೀ ಬಿಲ್ಡಿಂಗ್, ನ್ಯೂ ಗೂಡ್ಸ್ ಶೆಡ್ ರಸ್ತೆ, ಬೆಳಗಾವಿ | 5.000 |
| 6. | **ಡಾ.ಎಸ್.ಜಿ. ಕಾಶಿ**, ನಂ. 35, ಪೊಲೀಸ್ ಠಾಣೆ ರಸ್ತೆ, ಬಸವನಗುಡಿ, ಬೆಂಗಳೂರು | 5,000 |
| 7. | **ದಾಮೋದರ್ ಶೆಣೈ**, ನಂ. 1, ದಯಾಮಾರ್ಗ, ಸಿದ್ಧಾರ್ಥನಗರ, ಮೈಸೂರು | 5,000 |
| 8. | **ಸುಮಿತ್ರಾ**, ನಂ. 532, 9ನೇ ಕ್ರಾಸ್, 2ನೇ ಹಂತ, ಸಿದ್ಧಾರ್ಥನಗರ, ಮೈಸೂರು | 5,000 |
| 9. | **ಲಕ್ಷ್ಮಿ ಎನ್.** ಬೆಂಗಳೂರು | 5,000 |
| 10. | **ಎಂ. ಪಂಚಾಕ್ಷರಿ**, ನಂ. 48, ನೆಲಮಹಡಿ, 25ನೇ ಎ ಕ್ರಾಸ್, 5ನೇ ಮೇನ್, ಕರಿಸಂದ್ರ, ಬನಶಂಕರಿ 2ನೇ ಹಂತ, ಬೆಂಗಳೂರು | 5,000 |
| 11. | **ಕೇಶವದಾಸ್ ಜಯಸಿಂಹ**, ನಂ. 3, ಆಶೀರ್ವಾದ, 33ನೇ ಕ್ರಾಸ್, 4ನೇ ಟಿ ಬ್ಲಾಕ್, ಜಯನಗರ ಎಚ್‌ಪಿಒ, ಬೆಂಗಳೂರು | 5,000 |
| 12. | **ಗೀತಾ ಬಾಯಿ ಆರ್.**, ನಂ.394, 5ನೇ ಮೇನ್, 7ನೇ ಕ್ರಾಸ್, ಎನ್‌ಜಿಇಎಫ್ ಲೇಔಟ್, ಮಲ್ಲತ್ತಹಳ್ಳಿ, ಬೆಂಗಳೂರು | 5,000 |
| 13. | **ಮಂಜುನಾಥ ಕೆ.ಆರ್**, ಶುಭೋದಯ ಟಿಂಬರ್ಸ್, ಪ್ಲೈವುಡ್ ಅಂಡ್ ಕನ್‌ಸ್ಟ್ರಕ್ಷನ್ಸ್, ನಾಗರಬಾವಿ, ಬೆಂಗಳೂರು | 3,006 |
| 14. | **ರೋಷನ್ ಮೊಹಮ್ಮದ್**, ನಂ. 509, ಎಚ್‌ಎಂಟಿ ಲೇಔಟ್, 2ನೇ ಬ್ಲಾಕ್, 8ನೇ ಮೇನ್, ವಿದ್ಯಾರಣ್ಯಪುರ, ಬೆಂಗಳೂರು | 2,500 |
| 15. | **ಜ್ಞಾನೇಶ್ವರ್ ಬಿ.** ಬೆಂಗಳೂರು | 2,001 |
| 16. | **ಡ್ಯಾಂಗೋ ಬಾಬು**, ನಂ. 292, 2ನೇ ಕ್ರಾಸ್, 2ನೇ ಬ್ಲಾಕ್, 3ನೇ ಹಂತ, ಬನಶಂಕರಿ 3ನೇ ಹಂತ, ಬೆಂಗಳೂರು | 2,001 |
| 17. | **ಮಂಜುನಾಥ ಅಕ್ಕಿ**, ತಾವರಗೇರಾ, ಕುಷ್ಟಗಿ ತಾ. ಕೊಪ್ಪಳ | 2,000 |
| 18. | **ಎಚ್.ಎನ್. ವೆಂಕಟೇಶ್**, ನಂ. 609/ಎ, 1ನೇ ಮೇನ್, ಇ ಬ್ಲಾಕ್, ರಾಜಾಜಿನಗರ 2ನೇ ಹಂತ, ಬೆಂಗಳೂರು | 2,000 |
| 19. | **ಶಂಕರ ಗುಬ್ಬಣ್ಣವರ**, ಎಸ್‌ಬಿಐ ಹತ್ತಿರ, ಮುನ್ಸಿಪಲ್ ಹೈಸ್ಕೂಲ್ ರಸ್ತೆ, ರಾಜೇಂದ್ರನಗರ, ಹಾವೇರಿ | 2,000 |
| 20. | **ಲಕ್ಷ್ಮೀ ನರಸಿಂಹ ರಾಯಚೂರು**, ನಂ. 54, ವಿವೇಕಾನಂದ ನಗರ, 3ನೇ ಕ್ರಾಸ್ ರಸ್ತೆ, ಗೋಕುಲ ರಸ್ತೆ, ಹುಬ್ಬಳ್ಳಿ | 2,000 |
| 21. | **ಎನ್.ಎಸ್. ಉಮೇಶ್‌ಕುಮಾರ್**, ಬಸವನಹಳ್ಳಿ ಮುಖ್ಯರಸ್ತೆ, ಚಿಕ್ಕಮಗಳೂರು | 1,100 |
| 22. | **ಜ್ಯೋತಿ ಉಮೇಶ್**, ಶ್ರೀನಿವಾಸ ಎಲೆಕ್ಟ್ರಿಕಲ್ಸ್, ಬಸವನಹಳ್ಳಿ ಮುಖ್ಯರಸ್ತೆ, ಚಿಕ್ಕಮಗಳೂರು | 1,100 |
| 23. | **ಮನೋಹರ್ ಎಚ್. ಬಡಿಗೇರ್**, ಗೌರವ್ ಆರ್ಕೆಡ್, 4, 1ನೇ ಎ ಕ್ರಾಸ್, ಮನೋರಾಯನ ಪಾಳ್ಯ, ಆರ್.ಟಿ.ನಗರ, ಬೆಂಗಳೂರು | 1,011 |
| 24. | **ತುಷಾರ್ ರಾವ್ ಎಸ್.ವಿ.**, ನಂ. 842, 1ನೇ ಕ್ರಾಸ್, ಮನುಜಪಥ ರಸ್ತೆ, ಇ ಅಂಡ್ ಎಫ್ ಬ್ಲಾಕ್, ಕುವೆಂಪುನಗರ, ಮೈಸೂರು | 1,001 |
| 25. | **ನವೀನ್ ಐ.ಜಿ.** ನಂ. 327, 8ನೇ ಮುಖ್ಯರಸ್ತೆ, ಎಂ.ಎಸ್. ರಾಮಯ್ಯ **ಎನ್‌ಕ್ಲೇವ್**, 8ನೇ ಮೈಲಿ, ತುಮಕೂರು ರಸ್ತೆ, ನಾಗಸಂದ್ರ ಪೋಸ್ಟ್ | 1,001 |
| 26. | **ಮಂಜುನಾಥ ಕವಳಿಕಾಯಿ**, ಹೆಬ್ಬಾಳ್ ಪೋಸ್ಟ್, ನವಲಗುಂದ ತಾ. ಧಾರವಾಡ | 1,000 |
| | ಇದುವರೆಗೆ ಸಂಗ್ರಹವಾದ ಒಟ್ಟು ಮೊತ್ತ : 1,20,19,795 | |

# 'ರೂಪಾಂತರ ವೈರಾಣು: ತೀವ್ರತೆ ಜಾಸ್ತಿ'

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ಡೆಲ್ಟಾ ಪ್ಲಸ್ ರೂಪಾಂತರ ತಳಿಯಾಗಿದ್ದು, ವೇಗವಾಗಿ ಹರಡಲಿದೆ. ಹೀಗಾಗಿ, ಅದರ ತೀವ್ರತೆ ಜಾಸ್ತಿ ಇರುತ್ತದೆ' ಎಂದು ಜಯದೇವ ಹೃದ್ರೋಗ ಸಂಸ್ಥೆ ನಿರ್ದೇಶಕ, ಕೋವಿಡ್ ತಾಂತ್ರಿಕ ಸಲಹಾ ಸಮಿತಿ ಸದಸ್ಯರೂ ಆಗಿರುವ ಡಾ.ಸಿ.ಎನ್. ಮಂಜುನಾಥ್ ಹೇಳಿದರು.

ಡೆಲ್ಟಾ ಪ್ಲಸ್ ಇದರ ಬಗ್ಗೆ ಹೆಚ್ಚಿನ ಅಧ್ಯಯನ ನಡೆಯಬೇಕಿದೆ. ಎರಡನೇ ಅಲೆಯಲ್ಲಿ ಡೆಲ್ಟಾ ತಳಿಯ ವೈರಾಣುವಿನಿಂದ ಹೆಚ್ಚಿನ ಸಂಖ್ಯೆಯಲ್ಲಿ ಕೋವಿಡ್ ಪ್ರಕರಣಗಳು ವರದಿಯಾಗಿವೆ. ನಾಲ್ಕರಿಂದ ಐದು ತಿಂಗಳ ಅವಧಿಯಲ್ಲಿ ವೈರಾಣು ರೂಪಾಂತರಗೊಳ್ಳುವುದು ಸಾಮಾನ್ಯವಾಗಿದ್ದು, ಅನಗತ್ಯವಾಗಿ ಆತಂಕ ಪಡಬೇಕಾಗಿಲ್ಲ. ಆದರೆ, ಈ ವರ್ಷ ಪೂರ್ತಿ ಮುನ್ನೆಚ್ಚರಿಕೆ ಕ್ರಮಗಳನ್ನು ಪಾಲಿಸಬೇಕು ಎಂದರು.

ಕರ್ನಾಟಕದಲ್ಲಿ ಎರಡನೇ ಅಲೆ ಇನ್ನೂ ಪೂರ್ಣಗೊಂಡಿಲ್ಲ. ವಿದೇಶಗಳಲ್ಲಿ ಈಗಾಗಲೇ ಮೂರನೇ ಅಲೆ ಕಾಣಿಸಿಕೊಂಡಿದೆ. ದೇಶದಲ್ಲಿ ಮಹಾರಾಷ್ಟ್ರ ಹಾಗೂ ದೆಹಲಿಯಲ್ಲಿ ಎರಡನೇ ಅಲೆ ಮೊದಲು ಕಾಣಿಸಿಕೊಂಡಿತ್ತು. ಹೀಗಾಗಿ, ಮೂರನೇ ಅಲೆ ಕೂಡ ಅಲ್ಲಿಯೇ ಮೊದಲು ಕಾಣಿಸಿಕೊಳ್ಳುವ ಸಾಧ್ಯತೆಯಿದೆ. ಆ ರಾಜ್ಯಗಳಲ್ಲಿ ಪ್ರಕರಣಗಳ ಸಂಖ್ಯೆ ಏರುಗತಿ ಪಡೆಯುವ ಮುನ್ಸೂಚನೆ ದೊರೆಯುತ್ತಿದ್ದಂತೆ ಪರಿಸ್ಥಿತಿಯನ್ನು ಎದುರಿಸಲು ಸಕಲ ರೀತಿಯಲ್ಲಿಯೂ ಸನ್ನದರಾಗಬೇಕು. ಈಗಾಗಲೇ ಮಾರುಕಟ್ಟೆಯಲ್ಲಿರುವ ಲಸಿಕೆಗಳು ರೂಪಾಂತರಗೊಂಡಿರುವ ವೈರಾಣುವಿನ ವಿರುದ್ಧ ಕೂಡ ಕಾರ್ಯನಿರ್ವಹಿಸಲು ಸಮರ್ಥವಾಗಿವೆ. ಹಾಗಾಗಿ, ಆದಷ್ಟು ಬೇಗ ಎಲ್ಲರೂ ಲಸಿಕೆ ಪಡೆದುಕೊಳ್ಳಬೇಕು. ಈ ವರ್ಷದ ಅಂತ್ಯದವರೆಗೂ ಸಭೆ–ಸಮಾರಂಭಗಳನ್ನು ನಡೆಸಬಾರದು' ಎಂದರು.

# 'ಮರಳಿ ಕಾಲೇಜಿಗೆ ಘೋಷವಾಕ್ಯದಡಿ ಕಾಲೇಜು'

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ಮರಳಿ ಕಾಲೇಜಿಗೆ' ಎನ್ನುವ ಘೋಷವಾಕ್ಯದಡಿ ಕಾಲೇಜುಗಳನ್ನು ಆರಂಭಿಸಲು ಚಿಂತನೆ ನಡೆದಿದೆ. ಹೀಗಾಗಿ, ಪದವಿ ವಿದ್ಯಾರ್ಥಿಗಳಿಗೆ ಲಸಿಕೆ ಕೊಡಲು ತೀರ್ಮಾನಿಸಲಾಗಿದೆ' ಎಂದು ಉನ್ನತ ಶಿಕ್ಷಣ ಸಚಿವರೂ ಆಗಿರುವ ಉಪ ಮುಖ್ಯಮಂತ್ರಿ ಡಾ.ಸಿ.ಎನ್.ಅಶ್ವತ್ಥನಾರಾಯಣ ತಿಳಿಸಿದರು.

ಸುದ್ದಿಗಾರರ ಜೊತೆ ಬುಧವಾರ ಮಾತನಾಡಿದ ಅವರು, 'ಕೋವಿಡ್ ಮೂರನೇ ಅಲೆಯ ಮುನ್ನೆಚ್ಚರಿಕೆಯೂ ಸೇರಿ ಎಲ್ಲ ಅಂಶಗಳನ್ನು ಒಳಗೊಂಡ ವರದಿಯನ್ನು ಡಾ. ದೇವಿಶೆಟ್ಟಿ ನೇತೃತ್ವದ ಸಮಿತಿ ನೀಡಿದೆ. ಮೊದಲು ಕಾಲೇಜುಗಳನ್ನು ತೆರೆಯುವಂತೆ ಸಮಿತಿ ಶಿಫಾರಸು ಮಾಡಿದೆ. ಜುಲೈ ಮೊದಲ ವಾರ ಅಥವಾ ಎರಡನೇ ವಾರದಲ್ಲಿ ವಿದ್ಯಾರ್ಥಿಗಳಿಗೆ ಲಸಿಕೆ ನೀಡುವ ಉದ್ದೇಶವಿದೆ ಎಂದರು.

ಅಶ್ವತ್ಥ ನಾರಾಯಣ

'ಕೇಂದ್ರ ಸರ್ಕಾರ ನೀಡುವ ಮಾರ್ಗಸೂಚಿಗೆ ಕಾಯುತ್ತಿದ್ದೇವೆ. ಈಗಾಗಲೇ 18 ವರ್ಷ ದಾಟಿದ ಎಲ್ಲರಿಗೂ ಲಸಿಕೆ ನೀಡುವ ಕೆಲಸ ಮುಂದುವರಿದಿದೆ. ಅದರಲ್ಲೂ ವಿದ್ಯಾರ್ಥಿಗಳನ್ನು ಆದ್ಯತಾ ಗುಂಪಿಗೆ ಸೇರಿಸಿ ಲಸಿಕೆ ನೀಡಲಾಗುವುದು' ಎಂದರು.

ಲಸಿಕೆ ಮಾತ್ರ ಪರಿಹಾರ: 'ಕೋವಿಡ್ ಡೆಲ್ಟಾ ಪ್ಲಸ್ ಸೋಂಕು ರಾಜ್ಯಕ್ಕೆ ಕಾಲಿಟ್ಟಿರುವ ಬಗ್ಗೆ ಮಾಹಿತಿ ಬಂದಿದೆ. ಲಸಿಕೆ ಪಡೆದಿದ್ದರೆ ಯಾವುದೇ ರೂಪಾಂತರ ವೈರಾಣು ಬಂದರೂ ತೊಂದರೆ ಆಗುವುದಿಲ್ಲ. ಎಲ್ಲರೂ ಲಸಿಕೆ ಪಡೆಯುವುದೊಂದೇ ಪರಿಹಾರ' ಎಂದೂ ಅವರು ಹೇಳಿದರು.

ಪ್ರಜಾವಾಣಿ LIVE
Prajavani.net Prajavani Prajavani
ಫೇಸ್‌ಬುಕ್, ಯೂಟ್ಯೂಬ್, ಟ್ವಿಟರ್‌ನಲ್ಲಿ ಏಕಕಾಲಕ್ಕೆ ನೇರ ಪ್ರಸಾರ
ಸಂವಾದ
ತುರ್ತುಪರಿಸ್ಥಿತಿ: ಹಿಂದೆ- ಮುಂದೆ
ಸಂವಾದದಲ್ಲಿ ಭಾಗವಹಿಸುವವರು

ಡಿ.ಎಚ್.ಶಂಕರಮೂರ್ತಿ
ವಿಧಾನ ಪರಿಷತ್ ಮಾಜಿ ಸಭಾಪತಿ, ಬಿಜೆಪಿ ಮುಖಂಡ

ಬರಗೂರು ರಾಮಚಂದ್ರಪ್ಪ
ಸಂಸ್ಕೃತಿ ಚಿಂತಕ, ಲೇಖಕ

ಎಲ್. ಹನುಮಂತಯ್ಯ
ರಾಜ್ಯಸಭಾ ಸದಸ್ಯ, ಕಾಂಗ್ರೆಸ್

ಶನಿವಾರ, 26- 6-2021 ಸಮಯ- ಮಧ್ಯಾಹ್ನ 12 ರಿಂದ 1

# ಪಶು ಸಂಗೋಪನೆಗೆ ದೇಶದಲ್ಲೇ ಪ್ರಥಮ ವಾರ್‌ರೂಂ

# ಪ್ರಾಣಿ ಕಲ್ಯಾಣ ಸಹಾಯವಾಣಿಗೆ ಚಾಲನೆ

ಪ್ರಜಾವಾಣಿ ವಾರ್ತೆ

ಬೆಂಗಳೂರು:ಜಾನುವಾರು ಸಾಕಾಣಿಕೆದಾರರಿಗೆ ಕಾಲಕಾಲಕ್ಕೆ ಮಹತ್ವದ ಮಾಹಿತಿಗಳನ್ನು ನೀಡಲು ಪಶುಸಂಗೋಪನಾ ಇಲಾಖೆ 'ಪ್ರಾಣಿ ಕಲ್ಯಾಣ ಸಹಾಯವಾಣಿ'ಯನ್ನು ಆರಂಭಿಸಿದ್ದು, ಮುಖ್ಯಮಂತ್ರಿ ಬಿ.ಎಸ್. ಯಡಿಯೂರಪ್ಪ ಬುಧವಾರ ಚಾಲನೆ ನೀಡಿದರು.

ಈ ಸಂದರ್ಭದಲ್ಲಿ ಮಾತನಾಡಿದ ಅವರು, ಈ ಸಹಾಯವಾಣಿಯ ಮೂಲಕ ಪಶುಪಾಲನೆಯಲ್ಲಿ ತೊಡಗಿರುವ ರೈತರು ಮತ್ತು ಸಾಕಾಣಿಕೆದಾರಿಗೆ ಅಗತ್ಯ ಮಾಹಿತಿ ನೀಡಿ ಉತ್ಪಾದತೆ ಹೆಚ್ಚಿಸಲು ಮತ್ತು ಜಾನುವಾರುಗಳ ಆರೋಗ್ಯ ಕಾಪಾಡಲು ಸಹಾಯಕವಾಗುತ್ತದೆ ಎಂದು ಹೇಳಿದರು.

ಪಶು ಸಂಗೋಪನಾ ಸಚಿವ ಪ್ರಭು ಚವ್ಹಾಣ ಮಾತನಾಡಿ, ಪಶು ಸಾಕಾಣಿಕೆದಾರರ ಪಾಲಿಗೆ ಇದು ವಾರ್‌ರೂಂ ಆಗಿದ್ದು, ದಿನದ 24 ಗಂಟೆಯೂ ಕಾರ್ಯನಿರ್ವಹಿಸುತ್ತದೆ. ಇಂತಹದ್ದೊಂದು ಸೌಲಭ್ಯ ದೇಶದಲ್ಲೇ ಪ್ರಥಮ ಎಂದು ಹೇಳಿದರು.

ಪ್ರಾಣಿ ಕಲ್ಯಾಣ ವಾರ್‌ರೂಂ ವೀಕ್ಷಿಸಿದ ಮುಖ್ಯಮಂತ್ರಿ ಬಿ.ಎಸ್‌.ಯಡಿಯೂರಪ್ಪ. ಸಚಿವ ಪ್ರಭು ಚವ್ಹಾಣ ಇದ್ದರು

ಜಾನುವಾರುಗಳ ಆರೋಗ್ಯ ಕಾಪಾಡುವಲ್ಲಿ ವಾರ್‌ರೂಂ ಮಹತ್ವದ ಕಾರ್ಯವಹಿಸಲಿದೆ. ಇದರ ಪ್ರಯೋಜನವನ್ನು ಎಲ್ಲ ಜಾನುವಾರು ಸಾಕಣೆದಾರರು ಪಡೆದುಕೊಳ್ಳಬೇಕು ಎಂದು ಮನವಿ ಮಾಡಿದರು.

ಜಾನುವಾರುಗಳಿಗೆ ಸಾಂಕ್ರಾಮಿಕ ರೋಗಗಳು ಬಾರದಂತೆ ಮುಂಜಾಗ್ರತೆ ಕ್ರಮವಾಗಿ ಚುಚ್ಚುಮದ್ದು ಹಾಕಿಸಬೇಕಾದ ವಿವರ, ಬ್ಯಾಂಕುಗಳಿಂದ ವಿವಿಧ ಸಾಲಸೌಲಭ್ಯಗಳ ಮಾಹಿತಿ, ಮಿಶ್ರತಳಿ ಹೈನುರಾಸುಗಳು, ಕುರಿ, ಹಂದಿಗಳು ದೊರೆಯುವ ಸ್ಥಳಗಳು ಮತ್ತು ಅವುಗಳ ಅಂದಾಜಿನ ಬೆಲೆಯ ಬಗ್ಗೆ ಮಾಹಿತಿ ನೀಡಲಾಗುತ್ತದೆ ಎಂದು ತಿಳಿಸಿದರು.

ತುರ್ತು ಸಮಯ, ಅಪಘಾತ ಮತ್ತು ಇತರೆ ಕಾಯಿಲೆಗಳಿಂದ ನರಳುತ್ತಿರುವ ರಾಸುಗಳಿಗೆ ಚಿಕಿತ್ಸೆ ನೀಡಲು ಪಶುವೈದ್ಯರು ಸಿಗದಿದ್ದಾಗ, ಚಿಕಿತ್ಸೆ ಬಗ್ಗೆ ಸಲಹೆ ನೀಡಲಾಗುವುದು ಎಂದು ತಿಳಿಸಿದರು.

**ಪ್ರಾಣಿ ಕಲ್ಯಾಣ ಸಹಾಯವಾಣಿ ಸಂಖ್ಯೆ 8277100200**

**₹45 ಲಕ್ಷದ ವಾರ್‌ರೂಂ**

- ಹೆಬ್ಬಾಳದಲ್ಲಿರುವ ಪಶುಪಾಲನಾ ಭವನದಲ್ಲಿ ₹45 ಲಕ್ಷ ವೆಚ್ಚದಲ್ಲಿ ವಾರ್‌ರೂಂ ಸ್ಥಾಪಿಸಲಾಗಿದೆ
- ಜಾನುವಾರುಗಳ ರೋಗ, ಪ್ರಕೃತಿ ವಿಕೋಪ ಮತ್ತು ಮಾನವನಿಂದ ಜಾನುವಾರುಗಳಿಗೆ ಉಂಟಾಗಬಹುದಾದ ಹಾನಿ ಮತ್ತು ಕ್ರೌರ್ಯಗಳಿಂದ ಜಾನುವಾರುಗಳನ್ನು ರಕ್ಷಿಸಲು ಮತ್ತು ಅವುಗಳ ಆರೋಗ್ಯ ಕಾಪಾಡಲು ಪ್ರಾಣಿ ಕಲ್ಯಾಣ ಸಹಾಯವಾಣಿ ಮುಡಿಪಾಗಿದೆ.
- ಈ ಸಹಾಯವಾಣಿಯು ದೂರವಾಣಿ, ವಾಟ್ಸ್ ಆ್ಯಪ್, ಟ್ವಿಟರ್, ಫೇಸ್‌ಬುಕ್, ಇನ್ಸ್ಟಾಗ್ರಾಂ, ಇ–ಮೇಲ್ ಇತ್ಯಾದಿಗಳ ಮೂಲಕ ಸ್ವೀಕರಿಸಿದ ಕರೆ, ದೂರು, ಪ್ರಶ್ನೆಗಳ ಸಂಖ್ಯೆಗಳು ಮತ್ತು ಈ ಕುರಿತು ಕೈಗೊಂಡ ಕ್ರಮಗಳ ಮಾಹಿತಿಯನ್ನು ವೆಬ್‌ಸೈಟ್‌ನಲ್ಲಿ ಪ್ರತಿ ದಿನವೂ ಅಂಕಿ–ಅಂಶಗಳನ್ನು ಪ್ರಕಟಿಸಲಾಗುತ್ತದೆ.

# ಯುವತಿ ಕೊಲೆ ಮಾಡಿ ಕೊಳವೆಬಾವಿಯಲ್ಲಿ ಹೂತ ಪ್ರಿಯಕರ

ಪ್ರಜಾವಾಣಿ ವಾರ್ತೆ

ಯಲಬುರ್ಗಾ (ಕೊಪ್ಪಳ): ತಾಲ್ಲೂಕಿನ ಗ್ರಾಮವೊಂದರ ಯುವತಿಯೊಬ್ಬಳನ್ನು ಆಕೆಯ ಪ್ರಿಯಕರ ಕೊಲೆ ಮಾಡಿ ಕೆರೆ ಬಳಿಯ ಜಮೀನೊಂದರ ವಿಫಲ ಕೊಳವೆಬಾವಿಯಲ್ಲಿ ಹೂತುಹಾಕಿರುವುದು ತಡವಾಗಿ ಬೆಳಕಿಗೆ ಬಂದಿದೆ.

ಯಲಬುರ್ಗಾ ಠಾಣೆ ಪೊಲೀಸರು ಆರೋಪಿ ಗುರುತಿಸಿದ ಸ್ಥಳದಲ್ಲಿ ಬುಧವಾರ ಜೆಸಿಬಿ ಯಂತ್ರದಿಂದ ನೆಲ ಅಗೆದು ಶವ ಹೊರ ತೆಗೆದರು.

'ವರ್ಷದಿಂದ ಯುವತಿಯನ್ನು ಪ್ರೀತಿಸುತ್ತಿದ್ದ ಆಕೆಯ ಸಂಬಂಧಿಯೂ ಆಗಿರುವ ಯುವಕ, ಆಕೆಯನ್ನು ಮನೆಯಲ್ಲಿಯೇ ಇಟ್ಟುಕೊಂಡಿದ್ದ. ಯುವತಿಗೆ ಇನ್ನೆರಡು ತಿಂಗಳಲ್ಲಿ 18 ವರ್ಷ ಪೂರ್ಣಗೊಳ್ಳುತ್ತಿತ್ತು. ಮದುವೆಗೆ ಸಿದ್ಧತೆ ನಡೆದಿತ್ತು. ಆದರೆ, ಆತ ಆಗಾಗ ಆಕೆಯೊಂದಿಗೆ ಜಗಳ ಮಾಡುತ್ತಿದ್ದ' ಎಂದು ಪೊಲೀಸರು ತಿಳಿಸಿದ್ದಾರೆ

'ಜಗಳ ವಿಕೋಪಕ್ಕೆ ತಿರುಗಿ 15 ದಿನಗಳ ಹಿಂದೆ ಈ ಕೃತ್ಯ ಎಸಗಿದ್ದಾಗಿ ಆರೋಪಿ ತಪ್ಪೊಪ್ಪಿಕೊಂಡಿದ್ದಾನೆ. ಆತನನ್ನು ನ್ಯಾಯಾಂಗ ಬಂಧನಕ್ಕೆ ಒಪ್ಪಿಸಲಾಗಿದೆ' ಎಂದು ಪೊಲೀಸರು ಮಾಹಿತಿ ನೀಡಿದ್ದಾರೆ.

## ರಾಜ್ಯ ಕೋವಿಡ್ ಅಂಕಿ–ಅಂಶ

**28,19,465** ▲ ಒಟ್ಟು ಸೋಂಕಿತರು
(28,15,029 ನಿನ್ನೆಯ ವಿವರ)

**1,16,450** ▼ ಸಕ್ರಿಯ ಪ್ರಕರಣಗಳು

**26,68,705** ▲ ಗುಣಮುಖರಾದವರು

**34,287** ಒಟ್ಟು ಸಾವು ▲

ದಿನದ ಏರಿಕೆ

| | | |
|---|---|---|
| ಹೊಸ ಪ್ರಕರಣ | 4,436 | ▲ |
| ಗುಣಮುಖ | 6,455 | ▼ |
| ಸಾವು | 123 | ▼ |

ಆಧಾರ: ರಾಜ್ಯ ಆರೋಗ್ಯ ಇಲಾಖೆ
ಪ್ರಜಾವಾಣಿ ಗ್ರಾಫಿಕ್ಸ್

## ಪಿವಿ ಬ್ರ್ಯಾಂಡ್ ಸ್ಪಾಟ್

ಪತ್ರಿಕೆಯಲ್ಲಿ ಪ್ರಕಟವಾಗುತ್ತಿರುವ ಪಿವಿ ಬ್ರ್ಯಾಂಡ್ ಸ್ಪಾಟ್ ಪ್ರಸ್ತುತಿಯ ಲೇಖನ ಸಿದ್ಧಪಡಿಸುವಲ್ಲಿ ನಮ್ಮ ಪತ್ರಕರ್ತರ ಯಾವುದೇ ಪಾತ್ರ ಇರುವುದಿಲ್ಲ. ಸಂಸ್ಥೆಯ ಜಾಹೀರಾತು ಮತ್ತು ಬ್ರ್ಯಾಂಡ್ ವಿಭಾಗಗಳ ಪ್ರಸ್ತುತಿಯಾಗಿರುವ 'ಪಿವಿ ಬ್ರ್ಯಾಂಡ್ ಸ್ಪಾಟ್'ನ ಮಾಹಿತಿಯನ್ನು (ಕಂಟೆಂಟ್) ಓದುಗರು ಜಾಹೀರಾತು ಎಂದೇ ಭಾವಿಸಬಹುದು.

ಪ್ರಜಾವಾಣಿ ಸೆಲೆಬ್ರಿಟಿ LIVE
Prajavani.net Prajavani Prajavani
ಫೇಸ್‌ಬುಕ್, ಯೂಟ್ಯೂಬ್, ಟ್ವಿಟರ್‌ನಲ್ಲಿ ಏಕಕಾಲಕ್ಕೆ ನೇರ ಪ್ರಸಾರ

ಗುರುವಾರದ ವಿಶೇಷ
ಚಿತ್ರನಟ, ಸಾಮಾಜಿಕ ಹೋರಾಟಗಾರ
ಚೇತನ್ ಅಹಿಂಸಾ ಜೊತೆಗೆ
ಮುಖಾಮುಖಿ
ಇಂದು ಮಧ್ಯಾಹ್ನ 12 ರಿಂದ 1

# ಆಯುಷ್ ವೈದ್ಯರ ಸೇವೆ ಮುಂದುವರಿಸಲು ಚರ್ಚೆ: ಗೃಹ ಸಚಿವ ಬೊಮ್ಮಾಯಿ

ಹಾವೇರಿ: 'ಕೋವಿಡ್ ತುರ್ತು ಪರಿಸ್ಥಿತಿಯಲ್ಲಿ ಎಂ.ಬಿ.ಬಿ.ಎಸ್. ವೈದ್ಯರ ಕೊರತೆ ಬಂದಾಗ, ಆಯುಷ್ ವೈದ್ಯರು ಕಾರ್ಯನಿರ್ವಹಿಸಿದ್ದಾರೆ. ಮೂರನೇ ಅಲೆ ಎದುರಿಸಲು ಹೆಚ್ಚಿನ ವೈದ್ಯಕೀಯ ಸಿಬ್ಬಂದಿ ಅಗತ್ಯವಿದ್ದು ಆಯುಷ್ ವೈದ್ಯರನ್ನೇ ತಾತ್ವಿಕವಾಗಿ ಮುಂದುವರಿಸಲು ಆರೋಗ್ಯ ಸಚಿವರೊಂದಿಗೆ ಚರ್ಚಿಸಿ ನಿರ್ಣಯ ಕೈಗೊಳ್ಳಲಾಗುವುದು' ಎಂದು ಗೃಹ ಸಚಿವ ಬಸವರಾಜ ಬೊಮ್ಮಾಯಿ ಹೇಳಿದರು.

ಬುಧವಾರ ಪತ್ರಿಕಾಗೋಷ್ಠಿಯಲ್ಲಿ ಮಾತನಾಡಿ, ಕೋವಿಡ್ ರೂಪಾಂತರ ತಳಿಯಾದ 'ಡೆಲ್ಟಾ ಪ್ಲಸ್' ವೈರಸ್ ಸೋಂಕು ಹರಡದಂತೆ ಸರ್ಕಾರ ತೀವ್ರ ನಿಗಾ ವಹಿಸಿದೆ. ಈ ವೈರಸ್‌ನ ಬೇರೆ ಬೇರೆ ಪ್ರಕಾರಗಳು, ಪರಿಣಾಮ ಹಾಗೂ ಈಗಿನ ವ್ಯಾಕ್ಸಿನ್ ಬಳಕೆಗಳ ಕುರಿತಂತೆ ಅಧ್ಯಯನ ನಡೆಸಲಾಗುತ್ತಿದೆ. ಕೇಂದ್ರ ಆರೋಗ್ಯ ಇಲಾಖೆ ನೀಡುವ ಸಲಹೆಗಳನ್ನು ನಿಯಮಾವಳಿಗಳನ್ನು ಪಾಲಿಸಲಾಗುವುದು' ಎಂದು ಹೇಳಿದರು.

# ಯುವಕ ಸಾವು: ಮರ್ಯಾದೆಗೇಡು ಹತ್ಯೆ ಶಂಕೆ

ಪ್ರಜಾವಾಣಿ ವಾರ್ತೆ

ಕೊಪ್ಪಳ: ಕಾರಟಗಿ ತಾಲ್ಲೂಕಿನ ಬರಗೂರು ಗ್ರಾಮದಲ್ಲಿ ಅಂತರ್ಜಾತಿ ಯುವತಿಯನ್ನು ಪ್ರೀತಿಸುತ್ತಿದ್ದ ಯುವಕ ಶವವಾಗಿ ಪತ್ತೆಯಾಗಿದ್ದು, ಮರ್ಯಾದೆಗೇಡು ಹತ್ಯೆ ಶಂಕೆ ವ್ಯಕ್ತವಾಗಿದೆ.

ದಾನಪ್ಪ ಮಾದರ (22) ಮೃತ ಯುವಕ.

ಮಂಗಳವಾರ ಮನೆಯಿಂದ ಹೊರಹೋಗಿದ್ದ ಯುವಕ ಗ್ರಾಮದ ಬಳಿಯ ಮುಷ್ಟೂರು ರಸ್ತೆಯಲ್ಲಿ ಶವವಾಗಿ ಪತ್ತೆಯಾಗಿದ್ದಾನೆ.

'ಮಗ ಕುರುಬ ಸಮುದಾಯದ ಹುಡುಗಿಯನ್ನು ಪ್ರೀತಿಸುತ್ತಿದ್ದ. ಹಿಂದೆ ಈ ಸಂಬಂಧ ಜಗಳವಾಗಿ ಅವಾಚ್ಯ ಶಬ್ದಗಳಿಂದ ನಿಂದಿಸಲಾಗಿತ್ತು. ಜಾತಿ ನಿಂದನೆ ಮಾಡಿ ಕೊಲೆ ಬೆದರಿಕೆ ಹಾಕಲಾಗಿತ್ತು. ವಾರದ ಬಳಿಕ ಮಾರಕಾಸ್ತ್ರಗಳಿಂದ ಕೊಚ್ಚಿ ಕೊಲೆ ಮಾಡಿದ್ದಾರೆ' ಎಂದು ಯುವಕನ ತಂದೆ ಕರಿಹನುಮಂತಪ್ಪ ಮಾದರ ಪೊಲೀಸ್ ಠಾಣೆಗೆ ನೀಡಿದ ದೂರಿನಲ್ಲಿ ತಿಳಿಸಿದ್ದಾರೆ.

'ಘಟನೆ ಸಂಬಂಧ ಇಬ್ಬರನ್ನು ಬಂಧಿಸಲಾಗಿದೆ. ಆರು ಜನರ ವಿರುದ್ಧ ಪ್ರಕರಣ ದಾಖಲಾಗಿದ್ದು, ಸಂಶಯದ ಆಧಾರದ ಮೇಲೆ ನಾಲ್ವರ ವಿಚಾರಣೆ ನಡೆಸಲಾಗಿದೆ' ಎಂದು ಕಾರಟಗಿ ಪೊಲೀಸರು ತಿಳಿಸಿದ್ದಾರೆ.

# ಕೇರಳದ ತಟ್ಟೆಕಾಡ್‌ನಲ್ಲಿ ಹೊಸ ಬಗೆಯ ಚಿಮ್ಮುವ ಕಪ್ಪೆ ಪತ್ತೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಹೊಸ ಜಾತಿಯ ಚಿಮ್ಮುವ ಕಪ್ಪೆಯೊಂದನ್ನು ಕೇರಳದ ತಟ್ಟೆಕಾಡ್ ಪಕ್ಷಿಧಾಮದ ಸಮೀಪದಲ್ಲಿ ಸಂಶೋಧಕರು ಪತ್ತೆ ಮಾಡಿದ್ದಾರೆ.

ಜೂವಲಾಜಿಕಲ್ ಸರ್ವೆ ಆಫ್ ಇಂಡಿಯಾ, ಬೆಂಗಳೂರಿನ ಮೌಂಟ್ ಕಾರ್ಮೆಲ್ ಕಾಲೇಜು ಮತ್ತು ಭುವನೇಶ್ವರದ ನ್ಯಾಷನಲ್ ಇನ್‌ಸ್ಟಿಟ್ಯೂಟ್ ಆಫ್ ಸೈನ್ಸ್ ಎಜುಕೇಷನ್ ರೀಸರ್ಚ್ (ನೈಸರ್) ತಂಡ ಜಂಟಿಯಾಗಿ ಈ ಅಪರೂಪದ ಕಪ್ಪೆಯನ್ನು ಪತ್ತೆ ಮಾಡಿವೆ.

ಇದಕ್ಕೆ ಈಯುಫೆಲಿಕ್ಟೀಸ್ ಕೇರಳ ಎಂದು ನಾಮಕರಣ ಮಾಡಲಾಗಿದೆ. ಕೇರಳದಲ್ಲಿ ಜೀವ ವೈವಿಧ್ಯತೆ ಅಗಾಧವಾಗಿರುವ ಕಾರಣಕ್ಕೆ ಈ ಹೆಸರನ್ನು ಇಡಲಾಗಿದೆ. ಇದು ಈ ಪ್ರದೇಶದ ವಿಶಿಷ್ಟ ಕಪ್ಪೆಗಳ ತಳಿಗಳ ಪೈಕಿ ಒಂದಾಗಿದೆ. ಈ ಕುರಿತ ಅಧ್ಯಯನದ ವರದಿಯು ನ್ಯೂಜಿಲೆಂಡ್‌ನ ಅಂತರ-ರಾಷ್ಟ್ರೀಯ ಜರ್ನಲ್ ಝೂಟಾಕ್ಸ್‌ದಲ್ಲಿ ಪ್ರಕಟವಾಗಿದೆ.

ಕಪ್ಪೆಗಳ ವೈವಿಧ್ಯತೆ, ಅವುಗಳ ರೂಪ ಮತ್ತು ಗುಣ ಲಕ್ಷಣಗಳು, ವಂಶವಾಹಿ ಇತ್ಯಾದಿ ಅಂಶಗಳನ್ನು ಒಳಗೊಂಡ ಏಕೀಕೃತ ವರ್ಗೀಕರಣದ ಮೂಲಕ ಈ ಹೊಸ ಪ್ರಭೇದದ ಕಪ್ಪೆಯ ಅಧ್ಯಯನ ನಡೆಸಲಾಗಿದೆ. ಆರಂಭಿಕ ಅಧ್ಯಯನದ ಪ್ರಕಾರ ಈ ಬಗೆಯ ಕಪ್ಪೆಗಳು ಕೇವಲ ಪಶ್ಚಿಮಘಟ್ಟದ ಪರ್ವತಗಳ ಕೆಳಗೆ ಇರುವ ಜಲಮೂಲಗಳ ಬಳಿ, ಅದರಲ್ಲೂ ಪಾಲಕ್ಕಾಡ್ ಸಮೀಪದಲ್ಲಿ ಮಾತ್ರ ಇರುತ್ತವೆ ಎಂದು ಹೇಳಲಾಗಿತ್ತು.

ಚಿಮ್ಮುವ ಕಪ್ಪೆ

ಪಶ್ಚಿಮಘಟ್ಟ ಪ್ರದೇಶಗಳಲ್ಲಿ ಈ ಬಗೆಯ ಕಪ್ಪೆಗಳು ವ್ಯಾಪಕವಾಗಿ ಹಂಚಿ ಹೋಗಿರುವ ವ್ಯಾಪ್ತಿಯ ನಿಖರತೆ ಪಡೆಯಲು ಇನ್ನಷ್ಟು ಅಧ್ಯಯನಗಳು ಆಗಬೇಕಾಗಿದೆ. ಇವು ಸಿಹಿನೀರಿನ ಮೂಲಗಳ ಬಳಿ ವಾಸಿಸುವ ಕಾರಣ, ಅಂತಹ ನೀರಿನ ಮೂಲಗಳನ್ನು ರಕ್ಷಿಸುವುದರ ಜತೆಗೆ ಕಪ್ಪೆಗಳ ರಕ್ಷಣೆಯೂ ಆಗಬೇಕು. ಭಾರತದಲ್ಲಿ ಕಳೆದ ಎರಡು ಶತಮಾನಗಳಿಂದ(1799) ವಿವಿಧ ಬಗೆಯ ಚಿಮ್ಮುವ ಕಪ್ಪೆಗಳನ್ನು (ಸ್ಕಿಟ್ಟರಿಂಗ್‌ಫ್ರಾಗ್) ಪತ್ತೆಮಾಡಲಾಗಿದೆ. ವರ್ಗೀಕರಣ ಮಾಡುವಲ್ಲಿ ಏರುಪೇರಾಗಿರುವುದರಿಂದ ಸಾಕಷ್ಟು ಗೊಂದಲಕ್ಕೆ ಕಾರಣವಾಗಿದೆ ಎಂದು ವಿಜ್ಞಾನಿಗಳು ಹೇಳಿದ್ದಾರೆ.

**ಮುಖ್ಯಾಂಶಗಳು**

- ಕಪ್ಪೆಗೆ ಈಯುಫೆಲಿಕ್ಟೀಸ್ ಕೇರಳ ಎಂದು ನಾಮಕರಣ
- ಕೇರಳದಲ್ಲಿ ಸುಮಾರು 180 ಜಾತಿಯ ಕಪ್ಪೆಗಳು

ಈಯುಫೆಲಿಕ್ಟೀಸ್ ಕುಟುಂಬದ ಸದಸ್ಯ ಕಪ್ಪೆಗಳು ಅರೇಬಿಯಾ ಪರ್ಯಾಯ ದ್ವೀಪಗಳು, ಪಾಕಿಸ್ತಾನ, ನೇಪಾಳ, ಶ್ರೀಲಂಕಾ, ಮಯಾನ್ಮಾರ್ ಮತ್ತು ಥೈಲಾಂಡ್‌ಗಳಲ್ಲೂ ವ್ಯಾಪಿಸಿವೆ. ಹೊಸ ಅಧ್ಯಯನದಿಂದ ಈ ಪ್ರಭೇದದ ಕಪ್ಪೆಗಳು ಭಾರತೀಯ ಮೂಲದ್ದೇ ಎಂಬುದು ಸಾಬೀತಾಗಿದೆ ಎಂದು ಪ್ರಕಟಣೆ ತಿಳಿಸಿದೆ.

ಕೇರಳದಲ್ಲಿ ಸುಮಾರು 180 ಜಾತಿಯ ಕಪ್ಪೆಗಳಿವೆ. ಇನ್ನೂ ಸಾಕಷ್ಟು ಹೊಸ ಬಗೆಯ ಕಪ್ಪೆಗಳು ಇರಬಹುದು, ಇವುಗಳ ಕುರಿತ ವಿವರಣೆ ಮತ್ತು ಗುಣಲಕ್ಷಣದ ಆಧಾರದಲ್ಲಿ ನಿರ್ಧರಿಸಬಹುದು ಎಂದೂ ಹೇಳಿದೆ.

ಉತ್ತರ ಕನ್ನಡ ಜಿಲ್ಲೆಯಲ್ಲಿ ಅವೈಜ್ಞಾನಿಕ ಕ್ರಮ

# ಐದು ವರ್ಷದಲ್ಲಿ ಲಕ್ಷ ಮರ ನಾಶ: ಆರೋಪ

ಪ್ರಜಾವಾಣಿ ವಾರ್ತೆ

ಶಿರಸಿ: ಕಳೆದ ಐದು ವರ್ಷಗಳಲ್ಲಿ ವಿವಿಧ ಕಾಮಗಾರಿಗಳ ಅನುಷ್ಠಾನದ ನೆಪದಲ್ಲಿ ಅರಣ್ಯ ಇಲಾಖೆ ಒಂದು ಲಕ್ಷಕ್ಕೂ ಹೆಚ್ಚು ಮರಗಳನ್ನು ನಾಶಪಡಿಸಿದೆ ಎಂದು ಆರೋಪಿಸಿರುವ ಅರಣ್ಯ ಭೂಮಿ ಹಕ್ಕು ಹೋರಾಟಗಾರರ ವೇದಿಕೆ ಅಧ್ಯಕ್ಷ ರವೀಂದ್ರ ನಾಯ್ಕ, 'ಇಂತಹ ಅವೈಜ್ಞಾನಿಕ ಕ್ರಮದ ವಿರುದ್ಧ ಹೈಕೋರ್ಟ್‌ನಲ್ಲಿ ಸಾರ್ವಜನಿಕ ಹಿತಾಸಕ್ತಿ ಅರ್ಜಿ ಸಲ್ಲಿಸುತ್ತೇನೆ' ಎಂದರು.

ನಗರದ ಅರಣ್ಯ ಭೂಮಿ ಹಕ್ಕು ಹೋರಾಟಗಾರ ವೇದಿಕೆ ಕಚೇರಿಯಲ್ಲಿ ಬುಧವಾರ ಅರಣ್ಯ ಇಲಾಖೆ ಮರ ನಾಶಪಡಿಸಿದ ಚಿತ್ರಗಳನ್ನು ಬಿಡುಗಡೆಗೊಳಿಸಿದ ಅವರು, 'ಉತ್ತರ ಕನ್ನಡದಲ್ಲಿ ಮೀಸಲು ಅರಣ್ಯವೇ ಹೆಚ್ಚಿದೆ. ಈ ಭಾಗದ ದಟ್ಟ ಅರಣ್ಯ ವ್ಯಾಪ್ತಿಯಲ್ಲಿ ಅವೈಜ್ಞಾನಿಕ ರೀತಿಯಲ್ಲಿ ಬೆಲೆ ಬಾಳುವ ಮರಗಳನ್ನು ಕತ್ತರಿಸಲಾಗಿದೆ. ಅವುಗಳನ್ನು ಕೆರೆ ದಡಕ್ಕೆ ಹಾಕಿ, ಅದರ ಮೇಲೆ ಮಣ್ಣು ಮುಚ್ಚಿ, ಮರ ಕಡಿತದ ಸಾಕ್ಷ್ಯ ನಾಶಪಡಿಸಲಾಗುತ್ತಿದೆ' ಎಂದು ಆರೋಪಿಸಿದರು.

ಅರಣ್ಯ ಇಲಾಖೆ ಕಡಿದ ಮರಗಳ ಚಿತ್ರ ಪ್ರದರ್ಶಿಸುತ್ತಿರುವ ರವೀಂದ್ರ ನಾಯ್ಕ

'ಶಿರಸಿ, ಯಲ್ಲಾಪುರ, ಜೋಯಿಡಾ ಸೇರಿದಂತೆ ವಿವಿಧೆಡೆ ಸಾಗವಾನಿ, ಮತ್ತಿ, ಜಂಬೆ ಮುಂತಾದ ಬೆಲೆ ಬಾಳುವ ಮರಗಳನ್ನು ಕತ್ತರಿಸಿದ್ದಾರೆ. ಕರಾವಳಿ ಭಾಗದಲ್ಲೂ ಹಲವೆಡೆ ಇದೇ ಅವಾಂತರ ನಡೆದಿದೆ. ಅರಣ್ಯ ಪ್ರದೇಶದಲ್ಲಿ ನಡೆದ ಒಟ್ಟೂ ಕಾಮಗಾರಿ ಹಾಗೂ ಅರಣ್ಯ ಸಾಂದ್ರತೆ ಪ್ರಮಾಣ ಅನುಪಾತ ತುಲನೆ ಮಾಡಿದರೆ ಲಕ್ಷದಷ್ಟು ಮರಗಳು ನಾಶಗೊಂಡಿದ್ದು ದೃಢಪಟ್ಟಿದೆ' ಎಂದರು.

> **ಮರ ಕಡಿದು ಅಗಳ ತೆಗೆಯುವ, ಕೆರೆ ನಿರ್ಮಾಣದ ಕೆಲಸ ನಡೆದಿಲ್ಲ. ಈ ಆರೋಪ ನಿರಾಧಾರ. ಅಗತ್ಯ ದಾಖಲೆ ನೀಡಿದರೆ ಪರಿಶೀಲಿಸಲಾಗುವುದು**
> **ಡಿ.ಯತೀಶಕುಮಾರ್**, ಕೆನರಾ ವೃತ್ತ ಮುಖ್ಯ ಅರಣ್ಯ ಸಂರಕ್ಷಣಾಧಿಕಾರಿ

'ಪ್ರತಿ ವರ್ಷ ಕಾಡುಪ್ರಾಣಿಗಳ ಓಡಾಟ ನಿರ್ಬಂಧಿಸಲು ನೂರಾರು ಮೀಟರ್ ಅಗಳ ತೆಗೆಯಲಾಗುತ್ತಿದೆ. ಜಿಲ್ಲೆಯಾದ್ಯಂತ ಪ್ರತಿ ವರ್ಷ 300ರಷ್ಟು ಕೆರೆಗಳನ್ನು ಅರಣ್ಯ ಪ್ರದೇಶದಲ್ಲಿ ಗಿಡ, ಮರ ಇದ್ದ ಜಾಗದಲ್ಲಿಯೇ ತೆಗೆಯಲಾಗುತ್ತಿದೆ. ಇದರಿಂದಾಗಿ ಮರಗಳು ನಾಶಗೊಳ್ಳುತ್ತಿವೆ' ಎಂದು ದೂರಿದರು.

> ವಿವಿಧ ಇಲಾಖೆಗಳಿಗೆ ನಡೆಸುವ ಸ್ಪರ್ಧಾತ್ಮಕ ಪರೀಕ್ಷೆಗಳಲ್ಲಿ 'ಸಾಮಾನ್ಯ ಕನ್ನಡ' ಮತ್ತು 'ಕಡ್ಡಾಯ ಕನ್ನಡ' ಪ್ರಶ್ನೆಪತ್ರಿಕೆಗಳು ಇರಲಿದ್ದು, ಇವುಗಳಲ್ಲಿ ಪರಿಣತಿ ಸಾಧಿಸಲು ನಿರಂತರ ಅಭ್ಯಾಸ ಇರಬೇಕಾಗುತ್ತದೆ.

## ಕನ್ನಡ ಭಾಷಾ ವಿಷಯಕ್ಕೆ ಸಿದ್ಧತೆ ಹೇಗೆ?

**ಡಾ. ಅರ್ಚನಾ ಆರ್.**

ಪ್ರತಿವರ್ಷ ರೈಲ್ವೆ, ಬ್ಯಾಂಕ್, ಕೆಪಿಎಸ್‌ಸಿ, ಯುಪಿಎಸ್‌ಸಿ, ಪಿಡಿಒ, ಪೊಲೀಸ್ ನೇಮಕಾತಿ ಪರೀಕ್ಷೆಗಳು ಸೇರಿದಂತೆ ಹಲವು ಸ್ಪರ್ಧಾತ್ಮಕ ಪರೀಕ್ಷೆಗಳನ್ನು ಅಭ್ಯರ್ಥಿಗಳು ಎದುರಿಸುತ್ತಿರುತ್ತಾರೆ. ವಿವಿಧ ಇಲಾಖೆಗಳಿಗೆ ನಡೆಸುವ ಪರೀಕ್ಷೆಗಳಲ್ಲಿ 'ಸಾಮಾನ್ಯ ಜ್ಞಾನ'ದ ಜೊತೆಗೆ 'ಸಾಮಾನ್ಯ ಕನ್ನಡ' ಮತ್ತು 'ಕಡ್ಡಾಯ ಕನ್ನಡ' ಪ್ರಶ್ನೆಪತ್ರಿಕೆಗಳು ಇರಲಿದ್ದು, ಇವು ಅಭ್ಯರ್ಥಿಗಳ ಭಾಷಾ ಹಿಡಿತವನ್ನು ಪರೀಕ್ಷಿಸುವ ದೃಷ್ಟಿಯಿಂದ ಅತ್ಯಂತ ಮಹತ್ವದ್ದಾಗಿವೆ.

ಪ್ರಸ್ತುತ ಪೊಲೀಸ್ ಇಲಾಖಾ ಪರೀಕ್ಷೆಗೆ ಸಂಬಂಧಿಸಿದಂತೆ ಅಧಿಸೂಚನೆ ಪ್ರಕಟವಾಗಿದ್ದು, ಅಭ್ಯರ್ಥಿಗಳು ಇದರ ತಯಾರಿಯಲ್ಲಿ 'ಕಡ್ಡಾಯ ಕನ್ನಡ' ಮತ್ತು 'ಸಾಮಾನ್ಯ ಕನ್ನಡ' ಪತ್ರಿಕೆಗಳನ್ನು ನಿರ್ಲಕ್ಷಿಸುವಂತಿಲ್ಲ. ಈ ಹುದ್ದೆಗಳ ಆಯ್ಕೆಗೆ ಲಿಖಿತ ಪರೀಕ್ಷೆಯನ್ನು ಕನ್ನಡ ಮತ್ತು ಆಂಗ್ಲ ಭಾಷೆಯಲ್ಲಿ ನಡೆಸಲಾಗುವುದು. ಸಾಮಾನ್ಯ ಕನ್ನಡ ಪತ್ರಿಕೆಯಲ್ಲಿ ಪ್ರಶ್ನೆಗಳನ್ನು ವಸ್ತುನಿಷ್ಠ ಬಹು ಆಯ್ಕೆ ಮಾದರಿಯಲ್ಲಿ ಕೇಳಲಾಗುತ್ತದೆ. ಆದರೆ ಕಡ್ಡಾಯ ಕನ್ನಡ ಭಾಷಾ ಪರೀಕ್ಷೆಗೆ ಸ್ಪರ್ಧಾರ್ಥಿಗಳು ಹೆಚ್ಚಿನ ಸಿದ್ಧತೆ ಮಾಡಿಕೊಳ್ಳುವ ಅಗತ್ಯವಿದೆ.

ಸಾಮಾನ್ಯ ಕನ್ನಡ ಪತ್ರಿಕೆಯಲ್ಲಿ ನಿಮ್ಮ ಕನ್ನಡ ಭಾಷಾ ಜ್ಞಾನದ ಬಗ್ಗೆ 100 ಅಂಕದ ಪ್ರಶ್ನೆಗಳು ಇರುತ್ತವೆ. ಪ್ರೌಢಶಾಲೆಯಿಂದ ಪದವಿ ಹಂತದವರೆಗೆ ಅಭ್ಯರ್ಥಿಯು ಪಡೆದಿರುವ ಕನ್ನಡ ಭಾಷಾ ಜ್ಞಾನವನ್ನು ಪರೀಕ್ಷಿಸುವ ಪ್ರಶ್ನೆಗಳಿರುತ್ತವೆ.

- ಕನ್ನಡ ವ್ಯಾಕರಣದ ಗ್ರಹಿಕೆ
- ಕಾಗುಣಿತ ಮತ್ತು ಪದಗಳನ್ನು ಬಳಸುವ ಸಾಮರ್ಥ್ಯ
- ವಿರುದ್ಧಾರ್ಥಕ ಪದಗಳು, ಸಮಾನಾರ್ಥಕ ಪದಗಳ ಪರಿಜ್ಞಾನಗಳ ಕುರಿತ ಪ್ರಶ್ನೆಗಳು
- ಭಾಷೆಯ ಅರಿವು ಮತ್ತು ಗ್ರಹಿಸುವ ಸಾಮರ್ಥ್ಯ ಮೊದಲಾದವುಗಳ ಮೂಲಕ ಅಭ್ಯರ್ಥಿಯ ಭಾಷಾ ಪರಿಣತಿಯನ್ನು ಪರೀಕ್ಷಿಸಲಾಗುತ್ತದೆ

ಸ್ಪರ್ಧಾತ್ಮಕ ಪರೀಕ್ಷೆಯಲ್ಲಿ ಸಾಮಾನ್ಯ ಜ್ಞಾನ ಪತ್ರಿಕೆಯಷ್ಟೇ ಮಹತ್ವವನ್ನು ಸಾಮಾನ್ಯ ಕನ್ನಡ ಪತ್ರಿಕೆಗೂ ನೀಡಿದರೆ ಮಾತ್ರ ಹೆಚ್ಚಿನ ಅಂಕಗಳನ್ನು ಗಳಿಸಲು ಸಾಧ್ಯ. ಕೆಪಿಎಸ್‌ಸಿ ನಡೆಸುವ ಪಿಎಸ್‌ಐ, ಕೆಎಎಸ್ ಮುಖ್ಯ ಪರೀಕ್ಷೆಗಳಲ್ಲಿ ಕಡ್ಡಾಯ ಕನ್ನಡ ಪರೀಕ್ಷೆಗಳಿರುತ್ತವೆ. ಈ ಪರೀಕ್ಷೆಯಲ್ಲಿ ಮಾತ್ರ ವಿವರಣಾತ್ಮಕ ಉತ್ತರಗಳನ್ನು ನೀಡಬೇಕಾಗುತ್ತದೆ. ಇದು ಬರವಣಿಗೆ ಆಧಾರಿತ ಪತ್ರಿಕೆಯಾಗಿದ್ದು, ಇದರಲ್ಲಿ ಬರಹದ ಕೌಶಲವನ್ನು ಪರೀಕ್ಷಿಸಲಾಗುತ್ತದೆ.

ಈ ಪ್ರಶ್ನೆ ಪತ್ರಿಕೆಯಲ್ಲಿ ಸಾಮಾನ್ಯವಾಗಿ ಈ ಕೆಳಗಿನ ಸ್ಪರ್ಧಾರ್ಥಿಯ ಬರಹದ ಕೌಶಲಗಳನ್ನು ಪರೀಕ್ಷಿಸುವ ಪ್ರಶ್ನೆಗಳಿರುತ್ತವೆ.

- ಅಭ್ಯರ್ಥಿಯ ವಿಷಯದ ಸಮಗ್ರ ಗ್ರಹಿಕೆಯ ಸಾಮರ್ಥ್ಯ
- ಪದ ಪ್ರಯೋಗ ಮತ್ತು ಪದ ಜ್ಞಾನ
- ವಿಷಯವನ್ನು ಸಂಕ್ಷೇಪಿಸುವುದು
- ಲಘು ಪ್ರಬಂಧ
- ಇಂಗ್ಲಿಷ್‌ನಿಂದ ಕನ್ನಡಕ್ಕೆ ಭಾಷಾಂತರ

ಈ ಲಿಖಿತ ಪರೀಕ್ಷೆಗಳಲ್ಲಿ ಸ್ಪರ್ಧಾರ್ಥಿಗಳ ಭಾಷಾ ಸಾಮರ್ಥ್ಯವನ್ನು ಅಳೆಯಲಾಗುತ್ತದೆ.

(ಲೇಖಕಿ: ಸಹಾಯಕ ಪ್ರಾಧ್ಯಾಪಕರು, ವಿಜಯ ಪದವಿಪೂರ್ವ ಕಾಲೇಜು, ಬೆಂಗಳೂರು)

### ಸಾಮಾನ್ಯ ಕನ್ನಡ ಮತ್ತು ಕಡ್ಡಾಯ ಕನ್ನಡ ಪರೀಕ್ಷೆಯ ಸಿದ್ಧತೆಗೆ ಸಲಹೆಗಳು

- ಸ್ಪರ್ಧಾರ್ಥಿಗಳು ತಾವು ಆಯ್ಕೆ ಮಾಡಿಕೊಂಡ ಪರೀಕ್ಷೆಯ ಪಠ್ಯಕ್ರಮವನ್ನು ಸಂಗ್ರಹಿಸಿ, ಸಮಗ್ರವಾಗಿ ಗ್ರಹಿಸಬೇಕು.
- ಉತ್ತಮ ಬರವಣಿಗೆ ರೂಢಿಸಿಕೊಳ್ಳಲು ದಿನಪತ್ರಿಕೆಗಳ ಸಂಪಾದಕೀಯ ಅಂಕಣವನ್ನು ಸಂಗ್ರಹಿಸಿ ನೋಟ್ಸ್ ಮಾಡಿಕೊಳ್ಳಬೇಕು.
- ಹಳೆಯ ಮತ್ತು ಮಾದರಿ ಪ್ರಶ್ನೆಪತ್ರಿಕೆಗಳನ್ನು ಬರೆದು ಅಭ್ಯಸಿಸಬೇಕು.
- ಇದು ಭಾಷಾ ವಿಷಯವಾಗಿರುವುದರಿಂದ ಓದಿನಷ್ಟೇ ಬರವಣಿಗೆಗೂ ಒತ್ತು ನೀಡಬೇಕು.
- ತಂತ್ರಜ್ಞಾನ ಮತ್ತು ಸ್ಮಾರ್ಟ್‌ಫೋನ್‌ಗಳನ್ನು ಸ್ಪರ್ಧಾತ್ಮಕ ಪರೀಕ್ಷೆಯ ಸಿದ್ಧತೆಗೆ ಬಳಸಿಕೊಳ್ಳಬೇಕು.
- ಅಣಕು ಪರೀಕ್ಷೆಗಳನ್ನು ತೆಗೆದುಕೊಳ್ಳಬೇಕು.
- ಸಾಮಾನ್ಯ ಜ್ಞಾನ ಪತ್ರಿಕೆಯಷ್ಟೇ ಸಾಮಾನ್ಯ ಕನ್ನಡ, ಕಡ್ಡಾಯ ಕನ್ನಡ ಪತ್ರಿಕೆಗಳಿಗೂ ಮಹತ್ವವನ್ನು ನೀಡಿ ಅಭ್ಯಸಿಸಬೇಕು.

## ಪಿಯುಸಿಯಿಂದಲೇ ಇರಲಿ ತಯಾರಿ

**ವಿಶ್ವನಾಥ ನಾಗಠಾಣ**

**ಸ್ಪರ್ಧಾತ್ಮಕ** ಪರೀಕ್ಷೆ ಎದುರಿಸುವುದು ಒಂದು ರೀತಿಯ ಸವಾಲು. ಐಎಎಸ್, ಕೆಎಎಸ್, ಬ್ಯಾಂಕಿಂಗ್ ಸೇರಿದಂತೆ ಎಲ್ಲಾ ಸ್ಪರ್ಧಾತ್ಮಕ ಪರೀಕ್ಷೆ ಸಿದ್ಧತೆಗೆ ಮೊದಲು ರೀಸನಿಂಗ್ ಎಬಿಲಿಟಿ, ಕ್ವಾಂಟಿಟೇಟಿವ್ ಆಪ್ಟಿಟ್ಯೂಡ್, ಜನರಲ್ ಇಂಗ್ಲಿಷ್– ಇವುಗಳನ್ನು ತಿಳಿದುಕೊಂಡಿರಬೇಕು.

ಎಫ್‌ಡಿಎ–ಎಸ್‌ಡಿಎ, ಐಬಿಪಿಎಸ್, ಪಿಡಿಒ.. ಹೀಗೆ ಯಾವುದೇ ಪರೀಕ್ಷೆ ಇರಲಿ ಸುಮಾರು ಆರು ತಿಂಗಳ ಮೊದಲೇ ಪರೀಕ್ಷೆ ತಯಾರಿ ನಡೆಸಬೇಕಾಗುತ್ತದೆ. ಅದರೊಂದಿಗೆ ಮೇಲೆ ತಿಳಿಸಿದ ವಿಷಯಗಳನ್ನು ಗಮನದಲ್ಲಿರಿಸಿಕೊಂಡೇ ಅಧ್ಯಯನ ಮಾಡಬೇಕು.

### ಸಮಯ ನಿಗದಿ

ಓದಿಗೆ ಮೊದಲು ಸಮಯ ನಿಗದಿ ಮಾಡಿಕೊಂಡು ಓದಬೇಕು. ಪ್ರಶ್ನೆಪತ್ರಿಕೆ ಬಿಡಿಸುವಾಗಲೂ ಸಮಯ ನಿಗದಿ ಮಾಡಿಕೊಳ್ಳಬೇಕು. ನಂತರ ಬಿಡಿಸಿದ ಪ್ರಶ್ನೆಗಳಿಗೆ ನೀವೇ ಅಂಕ ನೀಡಿಕೊಳ್ಳಬೇಕು. ಈಗ ಪ್ರತಿ ಪರೀಕ್ಷೆಯಲ್ಲೂ ನೆಗೆಟಿವ್ ಅಂಕಗಳು ಇರುವುದರಿಂದ ಆದಷ್ಟು ತಪ್ಪು ಉತ್ತರ ನೀಡುವುದನ್ನು ಕಡಿಮೆ ಮಾಡಬೇಕು. ಯಾವ ಪರೀಕ್ಷೆ ಬರೆಯುತ್ತಿದ್ದೀರಿ ಆ ಪರೀಕ್ಷೆಗೆ ಸಂಬಂಧಿಸಿ ಅಣಕು ಪರೀಕ್ಷೆ ಮಾಡಬೇಕು.

### ಆರ್‌ಆರ್‌ಆರ್ ನಿಯಮ

'ರೀಡ್, ರೀಕಾಲ್ ಹಾಗೂ ರೀರೈಟ್ (ಆರ್‌ಆರ್‌ಆರ್) ನಿಯಮವನ್ನು ಪಾಲಿಸಬೇಕು. ಪದೇ ಪದೇ ಓದುವುದು, ಓದಿದ್ದನ್ನು ಪುನರ್‌ಮನನ ಮಾಡಿಕೊಳ್ಳುವುದು ಹಾಗೂ ಬರೆದು ಅಭ್ಯಾಸ ಮಾಡುವುದು ಮಾಡಬೇಕು. ಹೆಚ್ಚಿನ ಸ್ಪರ್ಧಾರ್ಥಿಗಳು ಓದುತ್ತಾ ಓದುತ್ತಾ ಮುಂದೆ ಸಾಗುತ್ತಾರೆ. ಹೀಗೆ ಮಾಡಿದರೆ ಹಿಂದಿನದ್ದು ಮರೆತು ಹೋಗುತ್ತದೆ. ಇದು ಸರಿಯಾದ ಮಾರ್ಗವಲ್ಲ. ಹಾಗಾಗಿ ಪುನರ್‌ಮನನಕ್ಕೆ ನಿಮ್ಮದೇ ಆದ ಪದ್ಧತಿಯನ್ನು ಬಳಸಿಕೊಳ್ಳಬಹುದು.

### ಆತ್ಮವಿಶ್ವಾಸ ಹೆಚ್ಚಿಸಿಕೊಳ್ಳಿ

ಒಮ್ಮೆ ಕಾನ್‌ಸ್ಟೇಬಲ್ ಪರೀಕ್ಷೆ ಬರೆದರೆ, ಪಿಎಸ್‌ಐ, ಎಫ್‌ಡಿಎ ಹೀಗೆ ಬೇರೆ ಬೇರೆ ಪರೀಕ್ಷೆಗಳನ್ನು ಬರೆಯುತ್ತಾ ಹೋಗುತ್ತೀರಿ. ನೀವು ಹೆಚ್ಚು ಹೆಚ್ಚು ಸ್ಪರ್ಧಾತ್ಮಕ ಪರೀಕ್ಷೆಗಳನ್ನು ಬರೆದಷ್ಟೂ ನಿಮ್ಮಲ್ಲಿ ಆತ್ಮವಿಶ್ವಾಸದ ಮಟ್ಟ ಹೆಚ್ಚುತ್ತಾ ಹೋಗುತ್ತದೆ. ಆಗ ನಿಮ್ಮಲ್ಲಿ 'ನಾನು ಈಗ ಕೆಪಿಎಸ್‌ಸಿ, ಯುಪಿಎಸ್‌ಸಿ ಪರೀಕ್ಷೆ ಬರೆಯಬಹುದು' ಎಂಬ ವಿಶ್ವಾಸ ಬೆಳೆಯುತ್ತಾ ಹೋಗುತ್ತದೆ. ಇದು ನಿಮ್ಮಲ್ಲಿ ಆತ್ಮವಿಶ್ವಾಸನ್ನೂ ಹೆಚ್ಚಿಸುತ್ತದೆ.

### ಪಿಯುಸಿಯಿಂದಲೇ ತಯಾರಿ

ಪಿಯುಸಿ ವಿದ್ಯಾರ್ಥಿಗಳ ಮನದಲ್ಲಿ ನಾವು ಸ್ಪರ್ಧಾತ್ಮಕ ಪರೀಕ್ಷೆ ಬರೆಯಬೇಕು ಎಂಬ ಆಲೋಚನೆ ಹುಟ್ಟುವುದೇ ಬಹಳ ಉತ್ತಮ ವಿಷಯ. ಪ್ರತಿಯೊಬ್ಬ ಅಭ್ಯರ್ಥಿಯೂ ತಮ್ಮನ್ನು ತಾವು ಆತ್ಮವಿಮರ್ಶೆ ಮಾಡಿಕೊಳ್ಳಬೇಕು. ತಾನು ಯಾವ ಹಂತದಲ್ಲಿದ್ದೇನೆ ಎನ್ನುವುದು ನೋಡಬೇಕು. ನಮ್ಮನ್ನು ಬೇರೆಯವರೊಂದಿಗೆ ಹೋಲಿಸಿಕೊಳ್ಳಬಾರದು. ಇದರೊಂದಿಗೆ ಪ್ರತಿನಿತ್ಯ ಓದುವುದು, ಪ್ರಶ್ನೆಪತ್ರಿಕೆ ಬಿಡಿಸುವುದು ಮುಂತಾದುವನ್ನು ತಪ್ಪದೇ ಮಾಡಬೇಕು.

### ಗಣಿತ ಕಷ್ಟವಲ್ಲ

ಬಹಳಷ್ಟು ಸ್ಪರ್ಧಾರ್ಥಿಗಳಿಗೆ ಕ್ವಾಂಟಿಟೇಟಿವ್ ಆಪ್ಟಿಟ್ಯೂಡ್ ಅಥವಾ ಗಣಿತ ಕಷ್ಟ ಎನ್ನುವುದು ಮನಸ್ಸಿನಲ್ಲಿರುತ್ತದೆ. ಆದರೆ ಯಾವ ವಿಷಯವೂ ಕಷ್ಟವಲ್ಲ. ಅದನ್ನು ಸ್ವತಃ ಮನಸ್ಸು ಮಾಡಿ ಆ ವಿಷಯದೊಂದಿಗೆ ಗೆಳೆತನ ಬೆಳೆಸಿಕೊಳ್ಳಬೇಕು. ಗಣಿತದ ಮೂಲದಿಂದ ಕಲಿಯಲು ಆರಂಭಿಸಬೇಕು. ಆಗ ಇನ್ನೊಂದು ಆರು ತಿಂಗಳಿಗೆ ಒಂದು ಹಂತಕ್ಕೆ ಬರಲು ಸಾಧ್ಯ. ಗಣಿತದಲ್ಲಿ ಹೆಚ್ಚು ವೇಗವಾಗಿರಬೇಕು.

ಪ್ರಶ್ನೆಯನ್ನು ಅರ್ಥ ಮಾಡಿಕೊಂಡು, ಆ ಪ್ರಶ್ನೆಗೆ ಹೇಗೆ ಉತ್ತರಿಸುತ್ತೀರಿ ಎಂಬುದು ಯುಪಿಎಸ್‌ಸಿ ಪರೀಕ್ಷೆಗಳಲ್ಲಿ ಬಹಳ ಮುಖ್ಯವಾಗುತ್ತದೆಯೇ ಹೊರತು ತುಂಬಾ ಓದಿದ್ದೀರಿ ಎನ್ನುವುದು ಎಲ್ಲಿಯೂ ಮುಖ್ಯವಾಗುವುದಿಲ್ಲ. ಪ್ರಶ್ನೆಪತ್ರಿಕೆಯಲ್ಲಿ ಉತ್ತರವನ್ನು ಹೇಗೆ ನಿರೂಪಿಸಿದ್ದೀರಿ ಎಂಬುದು ಮುಖ್ಯವಾಗುತ್ತದೆ.

ಸ್ಪರ್ಧಾತ್ಮಕ ಪರೀಕ್ಷೆ ಹೇಗಿರುತ್ತದೆ, ಯಾವ ರೀತಿ ತಯಾರಿ ನಡೆಸಬೇಕು, ಯಾವೆಲ್ಲಾ ವಿಷಯಗಳನ್ನು ಓದಬೇಕು ಎಂಬ ವಿಷಯಗಳನ್ನು ಆಳವಾಗಿ ತಿಳಿದುಕೊಳ್ಳಲು ಕೋಚಿಂಗ್ ಹೋಗುವುದು ಉತ್ತಮ. ಅಲ್ಲಿ ನುರಿತ ತರಬೇತುದಾರರಿರುತ್ತಾರೆ. ಒಮ್ಮೆ ಪರೀಕ್ಷೆ ಹೇಗೆ ಬರೆಯಬೇಕು ಎಂಬುದು ನಿಮ್ಮ ತಲೆಯಲ್ಲಿ ಬಂದರೆ ಸ್ವ–ಮಾರ್ಗದರ್ಶನದೊಂದಿಗೆ ಮುಂದಿನ ತಯಾರಿ ನಡೆಸಬಹುದು. ಇದರೊಂದಿಗೆ ಪತ್ರಿಕೆಗಳನ್ನು ಓದಿ ಪ್ರಸ್ತುತ ವಿದ್ಯಮಾನಗಳ ಬಗ್ಗೆ ಜ್ಞಾನ ಬೆಳೆಸಿಕೊಳ್ಳುವುದು ಅಗತ್ಯವಾಗುತ್ತದೆ.

(ಲೇಖಕ: ಅಧ್ಯಯನ ನಿರ್ದೇಶಕರು, ಐಎಸಿಇ ಕರೀಯರ್ ಕನ್ಸಲ್ಟಂಟ್ಸ್, ಧಾರವಾಡ)

ನಿರೂಪಣೆ: ರೇಷ್ಮಾ

## ಪ್ರಜಾವಾಣಿ ಉದ್ಯೋಗ ವಾರ್ತೆ

**ಪಶು ವೈದ್ಯಕೀಯ ಇಲಾಖೆಯಲ್ಲಿ ಹುದ್ದೆಗಳು**

ಕರ್ನಾಟಕ ಪಶುಪಾಲನಾ ಹಾಗೂ ಪಶು ವೈದ್ಯಕೀಯ ಸೇವೆಗಳ ಇಲಾಖೆಯಡಿ ವಿವಿಧ ಹುದ್ದೆಗಳನ್ನು ಭರ್ತಿ ಮಾಡಲು ಅರ್ಜಿ ಆಹ್ವಾನಿಸಲಾಗಿದೆ. ಆಸಕ್ತರು ಆನ್‌ಲೈನ್ ಮೂಲಕ ಅರ್ಜಿ ಸಲ್ಲಿಸಬಹುದು.

**ಹುದ್ದೆಗಳು:** ಪಶುವೈದ್ಯಕೀಯ ಪರೀಕ್ಷಕರು ಹಾಗೂ ಪಶುವೈದ್ಯಕೀಯ ಸಹಾಯಕರು

**ಹುದ್ದೆಗಳ ಸಂಖ್ಯೆ:** 115

**ವಯೋಮಿತಿ:** ಕನಿಷ್ಠ 18 ವರ್ಷಗಳು, ಗರಿಷ್ಠ 35 ವರ್ಷ (ಆಗಸ್ಟ್ 16, 2021ಕ್ಕೆ ಅನ್ವಯವಾಗುವಂತೆ). ಪರಿಶಿಷ್ಟ ಜಾತಿ, ಪರಿಶಿಷ್ಟ ವರ್ಗ, ಪ್ರವರ್ಗ 1ರ ಅಭ್ಯರ್ಥಿಗಳಿಗೆ 5 ವರ್ಷ ವಯೋಮಿತಿ ಸಡಿಲಿಕೆ ಇದೆ. ಪ್ರವರ್ಗ 2ಎ, 2ಬಿ, 3ಬಿ ಅಭ್ಯರ್ಥಿಗಳಿಗೆ 3 ವರ್ಷ ಸಡಿಲಿಕೆ ಇದೆ.

**ಆಯ್ಕೆ ಪ್ರಕ್ರಿಯೆ:** ಮೆರಿಟ್ ಲಿಸ್ಟ್, ಲಿಖಿತ ಪರೀಕ್ಷೆ ಹಾಗೂ ಸಂದರ್ಶನದ ಮೂಲಕ ಅಭ್ಯರ್ಥಿಗಳನ್ನು ಆಯ್ಕೆ ಮಾಡಲಾಗುವುದು.

**ಅರ್ಜಿ ಶುಲ್ಕ:** ಎಸ್‌ಸಿ, ಎಸ್‌ಟಿ, ಪ್ರವರ್ಗ 1, ಅಂಗವಿಕಲ ಹಾಗೂ ಮಾಜಿ ಸೈನಿಕರಿಗೆ ₹ 270, ಸಾಮಾನ್ಯ ವರ್ಗ, 2ಎ, 2ಬಿ, 3ಎ, 3ಬಿ ಅಭ್ಯರ್ಥಿಗಳಿಗೆ ₹ 520.

**ಅರ್ಜಿ ಸಲ್ಲಿಸಲು ಕೊನೆಯ ದಿನಾಂಕ:** ಆಗಸ್ಟ್ 16, 2021

**ಹೆಚ್ಚಿನ ಮಾಹಿತಿಗೆ:** http://ahvs.kar.nic.in/en-home.html

## ಸಿಇಟಿ ದಿಕ್ಸೂಚಿ

# Maths - Complex Numbers-2

1. If $\cos\alpha+2\cos\beta+3\cos\gamma=0$, $\sin\alpha+2\sin\beta+3\sin\gamma=0$ and $\alpha+\beta+\gamma=\pi$, then $\sin 3\alpha+8\sin 3\beta+27\sin 3\gamma=$
(1) -18 (2) 0 (3) 3 (4) 9

2. If the conjugate of $(x+iy)(1-2i)$ is $1+i$ then
(1) $x-iy=\frac{1+i}{1-2i}$ (2) $x+iy=\frac{1-i}{1-2i}$
(3) $x=\frac{1}{5}$ (4) $x=-\frac{1}{5}$

3. If $\alpha$ and $\beta$ are different complex number with $|\beta|=1$, then $\left|\frac{\beta-\alpha}{1-\bar{\alpha}\beta}\right|$ is equal to
(1) 1/2 (2) 1 (3) 1/3 (4) 2

4. If $f(x)=\begin{vmatrix}\sin x & \cos x & \tan x\\ x^3 & x^2 & x\\ 2x & 1 & x\end{vmatrix}$ then $\underset{x\to 0}{Lt}\frac{f(x)}{x^2}=$
(1) 0 (2) 3 (3) 2 (4) 1

5. The number of solutions of the equation $z^2+\bar{z}=0$ where $z\in C$ are
(1) 1 (2) 4 (3) 5 (4) 6

6. The modulus and amplitude of $\frac{1+2i}{1-(1-i)^2}$ are __
(1) $\sqrt{2}$ & $\frac{\pi}{6}$ (2) 1 & $\frac{\pi}{4}$
(3) 1 & 0 (4) 1 & $\frac{\pi}{3}$

7. If $2x=-1+\sqrt{3}i$, then the value of $(1-x^2+x)^6-(1-x+x^2)^6=$ + ______
(1) 32 (2) 64 (3) -64 (4) 0

8. If $\alpha$ and $\beta$ are two different complex numbers with, $|\beta|=1$, then $\left|\frac{\beta-\alpha}{1-\bar{\alpha}\beta}\right|$ is equal to
(1) 0 (2) 1 (3) 1/2 (4) - 1

9. If, If $Z=\frac{(\sqrt{3}+i)^3(3i+4)^2}{(8+6i)^2}$, then $|z|$ is equal to
(1) 0 (2) 1 (3) 2 (4) 3

10. If $1, w, w^2$ are three cube of unity then $(1-w+w^2)(1+w-w^2)$ is ______
(1) 1 (2) 2 (3) 3 (4) 4

11. The real part of $(1-\cos\theta+i\sin\theta)^{-1}$ is
(1) ½ (2) $1/(1+\cos\theta)$
(3) $\tan\theta/2$ (4) $\cot\theta/2$

12. The simplified form of $i^n+i^{n+1}+i^{n+2}+i^{n+3}$ is
(1) 0 (2) 1 (3) -1 (4) I

13. If $\left(\frac{1+i}{1-i}\right)^m=1$, then the least positive integral value of m is
(1) 2 (2) 3 (3) 4 (4) 1

14. If $\left(\frac{1-i}{1+i}\right)^{96}=a+ib$ then (a,b) is
(1) (1, 1) (2) (1, 0) (3) (0, 1) (4) (0, - 1)

15. If, $z=x+iy$ then the equation [z + 1] = [z-1] represents
(1) x-axis (2) y-axis
(3) a circle (4) a parabola

**Answers**

1. Answer: (2)
Sol:-Let $a=\cos\alpha+i\sin\alpha=e^{i\alpha}$
$b=\cos\beta+i\sin\beta=e^{i\beta}$
$c=\cos\gamma+i\sin\gamma=e^{i\gamma}$
clearly a+2b+3c = 0
$\therefore a^3+(2b)^3+(3c)^3=3(a)(2b)(3c)$
$=18abc$
$=18e^{i(\alpha+\beta+\gamma)}$
$\Rightarrow a^3+8b^3+27c^3=-18$
comparing imaginary parts on either side
we get $\sin 3\alpha+8\sin 3\beta+27\sin 3\gamma=0$

2. Answer: (2) Sol:- Given $(x-iy)(1+2i)=1+i$
Take conjugate on both sides
$(x+iy)(1-2i)=1-i$
$\therefore x+iy=\frac{1-i}{1-2i}$

3. Answer: (2) Sol:-Let $\beta=i, \alpha=2i, \left|\frac{\beta-\alpha}{1-\alpha\beta}\right|=1$
Sol:-

4. Answer: (1) Sol:- $\underset{x\to 0}{Lt}\frac{f(x)}{x^2}=\underset{x\to 0}{Lt}\frac{f''(x)}{2}=\frac{0}{2}=0$
Sol:-

5. Answer: (2)
Sol:- Sol:-Let $2=x+iy, z^2=-z\Rightarrow(x+iy)^2=-x+iy$
By simplifying
$z_1=0+i0,$
$z_2=-1+i0,$
$z_3=\frac{1}{2}+i\frac{\sqrt{3}}{2}$
$z_4=\frac{1}{2}-i\frac{\sqrt{3}}{2}$

6 Ans : (3) Sol : $z=\frac{1+2i}{1-(1-1)^2}=\frac{1+2i}{1+2i}$
Sol :
$|z|=1, amp(z)=0$

7. Ans : (4) Sol : $x=\frac{-1+i\sqrt{3}}{2}=\omega$
Sol :
$\Rightarrow(1-x^2+x)^6-(1-x+x^2)^6$
$=(1-\omega^2+\omega)^6-(1-\omega+\omega^2)^6$
$=0$

8. Answer (2) Hint: $|\beta|=1$
Hint:
$\left|\frac{\beta-\alpha}{1-\bar{\alpha}\beta}\right|=\left|\frac{\beta-\alpha}{\beta\bar{\beta}-\bar{\alpha}\beta}\right|=\frac{1}{|\beta|}\left|\frac{\beta-\alpha}{\bar{\beta}-\bar{\alpha}}\right|=1$

9 Answer (4)
Hint : Hint : $|z|=\frac{\left(\sqrt{(\sqrt{3})^2+1^1}\right)^3\left(\sqrt{3^2+4^2}\right)^2}{\left(\sqrt{8^2+6^2}\right)^2}$
$=\frac{4^{3/2}\times 5^2}{10^2}=\frac{8\times 25}{100}=2$

10. Answer (4) Hint : $(1-\omega+\omega^2)(1+\omega-\omega^2)$
Hint : $=(-2\omega)(-2\omega^2)=4\omega^3=4$

11. Answer (1) Sol. $\Rightarrow(1-\cos\theta+i\sin\theta)^{-1}$
Sol.
$\frac{1-\cos\theta-i\sin\theta}{2(1-\cos\theta)}$
Real part = 1/2

12. Answer (1)
Sol. $i^n+I^{n+1}+I^{n+2}+I^{n+3}$
$=(i)^n+i(i)^n-(i)^n-i(i)^n=0$

13. Answer: (3)
Sol: Sol: $\left(\frac{1+i}{1-i}\right)^m$
$\left(\frac{1+i}{1-i}\times\frac{1+i}{1+i}\right)^m=\left(\frac{(1+i)^2}{1-i^2}\right)^m=\left(\frac{2i}{2}\right)^m$
$=i^m$ = 1 (for m = 4)

14. Answer (2)
Solution:
Rationalize $\frac{1-i}{1+i}$

15. Answer: (2)
Sol: $|z+1|=|z-1|$

Locus of z is perpendicular bisector of line segment joining -1 and 1

(ಪ್ರಶ್ನೋತ್ತರ ಸಂಯೋಜನೆ: ಆಕಾಶ್ ಇನ್‌ಸ್ಟಿಟ್ಯೂಟ್, ಬೆಂಗಳೂರು)

## ಪೊಲೀಸ್ ಕಾನ್‌ಸ್ಟೇಬಲ್ ನೇಮಕಾತಿ ಪರೀಕ್ಷೆಯ ಮಾದರಿ ಪ್ರಶ್ನೆಗಳು

**ಭಾಗ- 12**

**156. ವಿಶ್ವಸಂಸ್ಥೆಯ ಕೇಂದ್ರ ಕಚೇರಿ ಎಲ್ಲಿದೆ?**
ಎ) ಲಂಡನ್ (ಯು.ಕೆ)
ಬಿ) ನವದೆಹಲಿ (ಭಾರತ)
ಸಿ) ಪ್ಯಾರಿಸ್ (ಫ್ರಾನ್ಸ್)
ಡಿ) ನ್ಯೂಯಾರ್ಕ್ (ಯುಎಸ್‌ಎ)

**157. ಭಾರತದ ಉಪ ರಾಷ್ಟ್ರಪತಿಯವರು ಯಾರಿಂದ ಆರಿಸಲ್ಪಡುತ್ತಾರೆ?**
ಎ) ಲೋಕಸಭೆ ಸದಸ್ಯರು
ಬಿ) ಲೋಕಸಭೆ ಹಾಗೂ ರಾಜ್ಯಸಭೆ ಸದಸ್ಯರು
ಸಿ) ರಾಜ್ಯಸಭೆ ಸದಸ್ಯರು
ಡಿ) ಲೋಕಸಭೆ, ರಾಜ್ಯಸಭೆ ಮತ್ತು ವಿಧಾನಸಭೆ ಸದಸ್ಯರು

**158. ಯಾರು ರಾಜ್ಯಸಭೆ ಮುಖ್ಯಸ್ಥರಾಗಿ (Chairman) ಕಾರ್ಯನಿರ್ವಹಿಸುತ್ತಾರೆ?**
ಎ) ರಾಷ್ಟ್ರಪತಿ
ಬಿ) ಸ್ಪೀಕರ್
ಸಿ) ಉಪರಾಷ್ಟ್ರಪತಿ
ಡಿ) ಪ್ರಧಾನಮಂತ್ರಿ

**159. ಲೋಕಸಭೆಗೆ ಆಯ್ಕೆಯಾಗಲು ಇರುವ ಕನಿಷ್ಠ ವಯೋಮಾನ ಎಷ್ಟು?**
ಎ) 21 ಬಿ) 25
ಸಿ) 18 ಡಿ) 16

**160. ಈ ಕೆಳಗಿನ ಯಾವ ಹಕ್ಕು ಮೂಲಭೂತ ಹಕ್ಕು ಅಲ್ಲ?**
ಎ) ಸ್ವಾತಂತ್ರ್ಯದ ಹಕ್ಕು
ಬಿ) ಸಮಾನತೆಯ ಹಕ್ಕು
ಸಿ) ನೌಕರಿಯ ಹಕ್ಕು
ಡಿ) ಶೋಷಣೆಯ ವಿರುದ್ಧದ ಹಕ್ಕು

**161. ಕನೌಜ್‌ದ ರಾಜ ಹರ್ಷವರ್ಧನನನ್ನು ಸೋಲಿಸಿದ ರಾಜ ಯಾರು?**
ಎ) ಕೆಂಪೇಗೌಡ
ಬಿ) ಕೃಷ್ಣದೇವರಾಯ
ಸಿ) ಇಮ್ಮಡಿ ಪುಲಿಕೇಶಿ
ಡಿ) ಕೃಷ್ಣರಾಜ ಒಡೆಯರ್

**162. ಕೋವಿಡ್ ಸೋಂಕು ಯಾವುದರಿಂದ ತಗಲುತ್ತದೆ?**
ಎ) ಬ್ಯಾಕ್ಟೀರಿಯಾ
ಬಿ) ಶಿಲೀಂಧ್ರ
ಸಿ) ವೈರಾಣು
ಡಿ) ಬಾವಲಿ

**163. ಯಾವುದು ಬಣ್ಣ ಮತ್ತು ವಾಸನೆ ಇಲ್ಲದ ವಿಷಕಾರಿ ಅನಿಲವಾಗಿದೆ?**
ಎ) ಕಾರ್ಬನ್ ಡೈ ಆಕ್ಸೈಡ್
ಬಿ) ಮಿಥೇನ್
ಸಿ) ಸಾರಜನಕ
ಡಿ) ಕಾರ್ಬನ್ ಮೊನಾಕ್ಸೈಡ್

**164. ಕರ್ನಾಟಕದ ಇಂದಿನ ರಾಜ್ಯಪಾಲರು ಯಾರು?**
ಎ) ಖುರ್ಷಿದ್ ಆಲಂ ಖಾನ್
ಬಿ) ಡಾ. ಎಚ್.ಆರ್. ಭಾರದ್ವಾಜ್
ಸಿ) ವಜುಭಾಯಿ ವಾಲ
ಡಿ) ಟಿ.ಎನ್.ಚತುರ್ವೇದಿ

**165. ರಮೇಶನು ತನ್ನ ಕಾರಿನಲ್ಲಿ 'ಎ' ನಗರದಿಂದ 'ಬಿ' ನಗರಕ್ಕೆ ಗಂಟೆಗೆ ಸರಾಸರಿ 40 ಕಿ.ಮೀ. ವೇಗದಲ್ಲಿ ಪ್ರಯಾಣಿಸಿದ್ದು, 'ಎ' ನಗರದಿಂದ 'ಬಿ' ನಗರಕ್ಕಿರುವ ದೂರ 60 ಕಿ.ಮೀ. ಆಗಿರುತ್ತದೆ. ಹಾಗಾದರೆ, ರಮೇಶನು ತನ್ನ ಕಾರಿನಲ್ಲಿ 'ಎ' ನಗರದಿಂದ 'ಬಿ' ನಗರಕ್ಕೆ ತಲುಪಲು ತೆಗೆದುಕೊಂಡ ಸಮಯ ಎಷ್ಟು?**
ಎ) 60 ನಿಮಿಷ
ಬಿ) 90 ನಿಮಿಷ
ಸಿ) 120 ನಿಮಿಷ
ಡಿ) 100 ನಿಮಿಷ

**166. ಈ ಸರಣಿಯ ಮುಂದಿನ ಭಾಗವನ್ನು ಗುರುತಿಸಿರಿ. ACE, BDF, CEG ---- ?**
ಎ) DFH ಬಿ) DJK
ಸಿ) LMN ಡಿ) DEF

**167. 'ರಾಜೀವ್ ಗಾಂಧಿ ಖೇಲ್ ರತ್ನ' ಪ್ರಶಸ್ತಿಯನ್ನು ಪ್ರಥಮ ಬಾರಿಗೆ ಪಡೆದವರು ಯಾರು?**
ಎ) ಮಹಮದ್ ಅಜರುದ್ದೀನ್
ಬಿ) ಸಚಿನ್ ತೆಂಡೂಲ್ಕರ್
ಸಿ) ಲಿಯಾಂಡರ್ ಪೇಸ್
ಡಿ) ವಿಶ್ವನಾಥನ್ ಆನಂದ್

**168. ಟಿಪ್ಪು ಸುಲ್ತಾನನು ಬ್ರಿಟಿಷರೊಂದಿಗೆ ಯುದ್ಧದಲ್ಲಿ ಹೋರಾಡುತ್ತ ಮೃತಪಟ್ಟ ವರ್ಷ ಯಾವುದು?**
ಎ) 1782
ಬಿ) 1799
ಸಿ) 1800
ಡಿ) 1823

**169. 'ಮೈಸೂರು ಸಂಸ್ಥಾನ'ವನ್ನು 'ಕರ್ನಾಟಕ' ಎಂದು ಮರುನಾಮಕರಣ ಮಾಡಿದ ವರ್ಷ ಯಾವುದು?**
ಎ) 1973 ಬಿ) 1956
ಸಿ) 1947 ಡಿ) 1948

**170. 'ಗೋಲ್ಡನ್ ಚಾರಿಯೆಟ್' ಎಂದು ಯಾವುದನ್ನು ಹೆಸರಿಸಲಾಗಿದೆ?**
ಎ) ಬಸ್ಸು
ಬಿ) ಹಡಗು
ಸಿ) ರೈಲು
ಡಿ) ಮೇಲ್ಕಂಡ ಯಾವುದೂ ಅಲ್ಲ

**ಭಾಗ 11ರ ಉತ್ತರ**
141. ಸಿ, 142. ಎ, 143. ಸಿ, 144. ಡಿ, 145. ಎ, 146. ಡಿ, 147. ಎ, 148. ಸಿ, 149. ಸಿ, 150. ಡಿ, 151. ಬಿ, 152. ಎ, 153. ಬಿ, 154. ಬಿ, 155. ಡಿ

(ಪ್ರಶ್ನೋತ್ತರ ಸಂಯೋಜನೆ: ಸ್ಲೇಟ್ ಸ್ಪರ್ಧಾತ್ಮಕ ಪರೀಕ್ಷೆಗಳ ತರಬೇತಿ ಕೇಂದ್ರ, ಧಾರವಾಡ)

ಅಭಿಮತ ಪುಟದ ವಿಳಾಸ
ಸಂಪಾದಕರು, ಅಭಿಮತ ವಿಭಾಗ, ಪ್ರಜಾವಾಣಿ, 75, ಎಂ.ಜಿ.ರಸ್ತೆ, ಬೆಂಗಳೂರು-01
ಇ-ಮೇಲ್ : editpage@prajavani.co.in

**ಸುಭಾಷಿತ**

ಮಾನಸಿಕ ಶಿಸ್ತು ಒಬ್ಬ ವ್ಯಕ್ತಿಯನ್ನು ವಿಭಿನ್ನವಾಗಿಸುತ್ತದೆ, ವಿಭಿನ್ನವಾಗಿ ಯೋಚಿಸುವ ಸಾಮರ್ಥ್ಯ ತಂದುಕೊಡುತ್ತದೆ ಮತ್ತು ತನ್ನ ಚೈತನ್ಯವನ್ನು ಸರಿಯಾದ ದಿಕ್ಕಿನಲ್ಲಿ ಕೊಂಡೊಯ್ಯುವಂತೆ ಮಾಡುತ್ತದೆ. **-ಸಚಿನ್ ತೆಂಡೂಲ್ಕರ್**

# ಜಮ್ಮು ಮತ್ತು ಕಾಶ್ಮೀರ ಮಾತುಕತೆಯ ಹೆಜ್ಜೆ ಸ್ವಾಗತಾರ್ಹ

**ಜಮ್ಮು** ಮತ್ತು ಕಾಶ್ಮೀರದ ಪ್ರಮುಖ ರಾಜಕೀಯ ಪಕ್ಷಗಳನ್ನು ಕೇಂದ್ರ ಸರ್ಕಾರವು ಮಾತುಕತೆಗೆ ಆಹ್ವಾನಿಸಿದೆ. ಜಮ್ಮು ಮತ್ತು ಕಾಶ್ಮೀರದ ಗುಪ್ಕಾರ್ ಕೂಟದ ಸದಸ್ಯ ಪಕ್ಷಗಳ ಮುಖಂಡರು ಪ್ರಧಾನಿ ನರೇಂದ್ರ ಮೋದಿ ಅವರ ಜೊತೆಯಲ್ಲಿ ನವದೆಹಲಿಯಲ್ಲಿ ಗುರುವಾರ (ಜೂನ್ 24) ಮಾತುಕತೆ ನಡೆಸಲಿದ್ದಾರೆ. ಸಂವಿಧಾನದ 370ನೇ ವಿಧಿಯ ಅಡಿಯಲ್ಲಿ ಈ ಪ್ರದೇಶಕ್ಕೆ ನೀಡಿದ್ದ ವಿಶೇಷ ಸ್ಥಾನ-ಮಾನವನ್ನು ರದ್ದುಗೊಳಿಸಿ, 2019ರಲ್ಲಿ ಈ ರಾಜ್ಯವನ್ನು ಎರಡು ಕೇಂದ್ರಾಡಳಿತ ಪ್ರದೇಶಗಳನ್ನಾಗಿ ವಿಭಜಿಸಿದ ನಂತರದಲ್ಲಿ ನಡೆಯುತ್ತಿರುವ ಅತ್ಯಂತ ಮಹತ್ವದ ಬೆಳವಣಿಗೆ ಇದು. ಕೇಂದ್ರ ಸರ್ಕಾರವು ಈ ಕಣಿವೆ ಪ್ರದೇಶದ ಪ್ರಮುಖ ರಾಜಕೀಯ ಪಕ್ಷಗಳನ್ನು ಮಾತುಕತೆಗೆ ಆಹ್ವಾನಿಸಿದ್ದು ಸ್ವಾಗತಾರ್ಹ ಕ್ರಮ. ಅಲ್ಲಿನ ರಾಜಕೀಯ ಪಕ್ಷಗಳು 'ನಾವು ಮಾತುಕತೆಗೆ ಬರುತ್ತೇವೆ' ಎಂಬ ಸಂದೇಶವನ್ನು ಕೇಂದ್ರಕ್ಕೆ ರವಾನಿಸಿರುವುದು ಕೂಡ ಅಷ್ಟೇ ಸ್ವಾಗತಾರ್ಹ. ವಿಶೇಷ ಸ್ಥಾನಮಾನ ರದ್ದುಪಡಿಸುವುದರೊಂದಿಗೆ ಜಮ್ಮು ಮತ್ತು ಕಾಶ್ಮೀರಕ್ಕೆ ನೀಡಿದ್ದ 'ರಾಜ್ಯ'ದ ಸ್ಥಾನಮಾನವನ್ನೂ ಹಿಂದಕ್ಕೆ ಪಡೆಯಲಾಗಿದೆ. ಜಮ್ಮು ಮತ್ತು ಕಾಶ್ಮೀರ ಪುನರ್ ವಿಂಗಡಣೆ ಕಾಯ್ದೆಯ ಮೂಲಕ ರಾಜ್ಯವನ್ನು ಎರಡು ಕೇಂದ್ರಾಡಳಿತ ಪ್ರದೇಶಗಳನ್ನಾಗಿ ವಿಭಜಿಸಲಾಗಿದೆ. ಅಲ್ಲಿ ಜನರಿಂದ ಚುನಾಯಿತವಾದ ಸರ್ಕಾರ ಇಲ್ಲ. ಈಗ ಪ್ರಧಾನಿಯವರು ಅಲ್ಲಿನ ರಾಜಕೀಯ ಪಕ್ಷಗಳನ್ನು ಮಾತುಕತೆಗೆ ಆಹ್ವಾನಿಸಿರುವ ಕಾರಣ, ಜಮ್ಮು ಮತ್ತು ಕಾಶ್ಮೀರದಲ್ಲಿ ರಾಜಕೀಯ ಚಟುವಟಿಕೆಗಳು ಗರಿಗೆದರಬಹುದು, ಚುನಾವಣೆಗಳು ನಡೆದು ಅಲ್ಲಿ ಜನರಿಂದ ಆಯ್ಕೆಯಾದ ಸರ್ಕಾರವೊಂದು ಆಡಳಿತದ ಚುಕ್ಕಾಣಿ ಹಿಡಿಯಬಹುದು ಎಂಬ ನಿರೀಕ್ಷೆ ಹೊಂದಬಹುದು.

**ವ್ಯವಸ್ಥೆಯ ಬಗ್ಗೆ ಜನರಿಗೆ ಹೆಚ್ಚು ವಿಶ್ವಾಸ ಮೂಡುವಂತೆ ನೋಡಿಕೊಳ್ಳಬೇಕಾದ ಜವಾಬ್ದಾರಿ ರಾಜಕೀಯ ಪಕ್ಷಗಳಿಗೆ ಇದೆ**

ವಿಶೇಷ ಸ್ಥಾನಮಾನ ರದ್ದಾದ ನಂತರದಲ್ಲಿ ಜಮ್ಮು ಮತ್ತು ಕಾಶ್ಮೀರದ ಮಾಜಿ ಮುಖ್ಯಮಂತ್ರಿಗಳಾದ ಫಾರೂಕ್ ಅಬ್ದುಲ್ಲಾ, ಮೆಹಬೂಬಾ ಮುಫ್ತಿ ಸೇರಿದಂತೆ ಅನೇಕ ರಾಜಕೀಯ ಮುಖಂಡರನ್ನು ಗೃಹಬಂಧನದಲ್ಲಿ ಇರಿಸಲಾಗಿತ್ತು. ಅಲ್ಲಿನ ರಾಜಕೀಯ ಪಕ್ಷಗಳ ದನಿಗೆ ಹೆಚ್ಚಿನ ಬೆಲೆ ಇರಲಿಲ್ಲ. ಅಷ್ಟೇ ಅಲ್ಲದೆ, ಪ್ರಜಾತಂತ್ರ ವ್ಯವಸ್ಥೆಯಲ್ಲಿ ಯಾವತ್ತಿಗೂ ಸ್ಥಗಿತಗೊಳ್ಳಬಾರದ ಕೆಲವು ಪ್ರಕ್ರಿಯೆಗಳು ಕೂಡ ಅಲ್ಲಿ ನಿಂತುಹೋಗಿದ್ದವು– ಇಂಟರ್ನೆಟ್ ಸಂಪರ್ಕ ಕೆಲವು ಕಾಲ ಇಲ್ಲವಾಗಿದ್ದ ಕಾರಣ ಮಾಧ್ಯಮ ಸ್ವಾತಂತ್ರ್ಯಕ್ಕೂ ಧಕ್ಕೆಯಾಗಿತ್ತು. ಇದರಿಂದಾಗಿ ಆ ಒಂದು ಭಾಗದ ಜನರ ದನಿ ದೇಶದ ಇತರ ಕಡೆಗಳ ಜನರಿಗೆ ಸರಿಯಾಗಿ ಕೇಳಿಸದಂತೆ ಆಗಿತ್ತು. ಇಂತಹ ಕ್ರಮಗಳು ಪ್ರಜಾತಂತ್ರ ವ್ಯವಸ್ಥೆಗೆ ಸರಿಹೊಂದುವುದಿಲ್ಲ. ಈ ಕ್ರಮಗಳ ಪರಿಣಾಮವಾಗಿ, ಜಮ್ಮು ಮತ್ತು ಕಾಶ್ಮೀರದಲ್ಲಿ ಪ್ರಜಾ ತಾಂತ್ರಿಕ ಪ್ರಕ್ರಿಯೆಗಳನ್ನು ಮತ್ತೆ ಆರಂಭಿಸಬೇಕು ಎಂಬ ಒತ್ತಡವು ಕೇಂದ್ರ ಸರ್ಕಾರದ ಮೇಲೆ ಹೆಚ್ಚುತ್ತಿತ್ತು. ಅದರಲ್ಲೂ ಮುಖ್ಯವಾಗಿ, ಅಮೆರಿಕದಲ್ಲಿ ಜೋ ಬೈಡೆನ್ ಅವರು ಅಧ್ಯಕ್ಷರಾಗಿ ಅಧಿಕಾರ ಸ್ವೀಕರಿಸಿದ ನಂತರದಲ್ಲಿ, ಕಾಶ್ಮೀರದ ವಿಚಾರವಾಗಿ ಕೇಂದ್ರ ಸರ್ಕಾರವು ಹೆಚ್ಚಿನ ಒತ್ತಡ ಎದುರಿಸುತ್ತಿದೆ ಎಂಬ ವರದಿಗಳು ಇವೆ. ಬೈಡೆನ್ ನೇತೃತ್ವದ ಸರ್ಕಾರದ ಜೊತೆ ಒಳ್ಳೆಯ ಸಂಬಂಧವನ್ನು ಭಾರತ ಹೊಂದಬೇಕು ಎಂದಾದರೆ, ಕಾಶ್ಮೀರದಲ್ಲಿ ಪ್ರಜಾತಂತ್ರದ ಮರುಸ್ಥಾಪನೆ ಆಗಬೇಕು ಎಂಬ ವಿಶ್ಲೇಷಣೆ ಗಳು ಕೂಡ ಇವೆ. ಕಣಿವೆ ಪ್ರದೇಶದ ವಿವಿಧ ರಾಜಕೀಯ ಪಕ್ಷಗಳಿಗೆ ಮಾತುಕತೆಗೆ ಆಹ್ವಾನ ನೀಡುವ ಸಂದರ್ಭದಲ್ಲಿ ಪ್ರಧಾನಿಯವರ ಮನಸ್ಸಿನಲ್ಲಿ ಈ ಎಲ್ಲ ಲೆಕ್ಕಾಚಾರಗಳು ಇದ್ದಿರಬಹುದು.

ಗುರುವಾರ ನಡೆಯಲಿರುವ ಮಾತುಕತೆಯ ಸಂದರ್ಭದಲ್ಲಿ ಮಹತ್ವದ ಬದಲಾವಣೆಗಳು ಆಗಿಬಿಡುತ್ತವೆ ಎಂಬ ನಿರೀಕ್ಷೆ ಬೇಡ ಎನ್ನುವ ಸಂದೇಶವು ಕೇಂದ್ರ ಸರ್ಕಾರದ ಕಡೆಯಿಂದ ರವಾನೆ ಆಗಿದೆ. ಹೀಗಿದ್ದರೂ, ಕೇಂದ್ರ ಹಾಗೂ ಕಣಿವೆ ಪ್ರದೇಶದ ರಾಜಕೀಯ ಪಕ್ಷಗಳ ಜೊತೆ ಮಾತುಕತೆ ಶುರುವಾಗುತ್ತಿದೆ ಎಂಬುದೇ ದೊಡ್ಡ ಸಂಗತಿ. ಈ ಮಾತುಕತೆ ಸಂದರ್ಭದಲ್ಲಿ, ಜಮ್ಮು ಮತ್ತು ಕಾಶ್ಮೀರದಲ್ಲಿ ವಿಧಾನಸಭಾ ಚುನಾವಣೆ ಪ್ರಕ್ರಿಯೆಗೆ ಚಾಲನೆ ನೀಡುವುದಕ್ಕೆ ಸಂಬಂಧಿಸಿದ ವಿಷಯಗಳು ಪ್ರಸ್ತಾಪ ಆಗುವ ಸಾಧ್ಯತೆ ಇದೆ. ಗುಪ್ಕಾರ್ ಕೂಟವು, ಜಮ್ಮು ಮತ್ತು ಕಾಶ್ಮೀರಕ್ಕೆ ರಾಜ್ಯದ ಸ್ಥಾನಮಾನ ನೀಡುವುದಷ್ಟೇ ಅಲ್ಲದೆ, ಅಲ್ಲಿಗೆ ಸಂವಿಧಾನದ 370ನೇ ವಿಧಿಯ ಅಡಿಯಲ್ಲಿ ಮತ್ತೆ ವಿಶೇಷ ಸ್ಥಾನಮಾನ ಕಲ್ಪಿಸಬೇಕು ಎಂಬ ಬೇಡಿಕೆಯನ್ನು ಕೇಂದ್ರದ ಮುಂದೆ ಇರಿಸುವ ಸಾಧ್ಯತೆ ಇದೆ. ವಿಶೇಷ ಸ್ಥಾನಮಾನ ಕಲ್ಪಿಸಲು ಕೇಂದ್ರವು ಒಪ್ಪಿಕೊಳ್ಳುವ ಸಾಧ್ಯತೆ ತೀರಾ ಕ್ಷೀಣ. ಆದರೆ, ಜಮ್ಮು ಮತ್ತು ಕಾಶ್ಮೀರಕ್ಕೆ 'ರಾಜ್ಯ' ಎಂಬ ಸ್ಥಾನವನ್ನು ಮತ್ತೆ ನೀಡುವುದಕ್ಕೆ ಕೇಂದ್ರಕ್ಕೆ ಆಕ್ಷೇಪವೇನೂ ಇರಲಿಕ್ಕಿಲ್ಲ. ಅಲ್ಲಿಗೆ ರಾಜ್ಯದ ಸ್ಥಾನಮಾನವನ್ನು ಮತ್ತೆ ನೀಡಲಾಗುವುದು ಎಂದು ಕೇಂದ್ರವೇ ಈ ಹಿಂದೆ ಭರವಸೆ ನೀಡಿತ್ತು. ಹಾಗಾಗಿ, ಈಗಿನ ಸಂದರ್ಭದಲ್ಲಿ ಜಮ್ಮು ಮತ್ತು ಕಾಶ್ಮೀರಕ್ಕೆ 'ಕಣಿವೆ ರಾಜ್ಯ' ಎಂಬ ಪಟ್ಟವನ್ನು ಮತ್ತೆ ನೀಡುವ ವಿಚಾರವು ಕೇಂದ್ರಕ್ಕೂ ಗುಪ್ಕಾರ್ ಕೂಟಕ್ಕೂ ಒಪ್ಪಿಗೆ ಆಗುವ ಸಮಾನ ಅಂಶ ಆಗಬಹುದು. ಕೇಂದ್ರವು ಜಮ್ಮು ಮತ್ತು ಕಾಶ್ಮೀರದಲ್ಲಿ ಮತ್ತೆ ರಾಜಕೀಯ ಚಟುವಟಿಕೆಗಳನ್ನು ಆರಂಭಿಸಿ, ಅಲ್ಲಿ ಚುನಾವಣೆಗಳನ್ನು ನಡೆಸಿ, ಆ ಚುನಾವಣೆಗಳಲ್ಲಿ ಆದಷ್ಟು ಹೆಚ್ಚಿನ ಸಂಖ್ಯೆಯಲ್ಲಿ ರಾಜಕೀಯ ಪಕ್ಷಗಳು ಪಾಲ್ಗೊಳ್ಳುವಂತೆ ನೋಡಿಕೊಳ್ಳಬೇಕು. ಹಾಗೆ ಮಾಡಿದರೆ, ಅಲ್ಲಿನ ಜನರಿಗೆ ಕೂಡ ವ್ಯವಸ್ಥೆಯ ಬಗ್ಗೆ ಹೆಚ್ಚು ವಿಶ್ವಾಸ ಮೂಡುತ್ತದೆ. ಮಾಜಿ ಪ್ರಧಾನಿ ಅಟಲ್ ಬಿಹಾರಿ ವಾಜಪೇಯಿ ಅವರು ಪ್ರತಿಪಾದಿಸುತ್ತಿದ್ದ 'ಇನ್ಸಾನಿಯತ್, ಜಮೂರಿಯತ್, ಕಾಶ್ಮೀರಿಯತ್' (ಮಾನವೀಯತೆ, ಪ್ರಜಾಪ್ರಭುತ್ವ, ಕಾಶ್ಮೀರದ ಸಾಂಸ್ಕೃತಿಕ ಪ್ರಜ್ಞೆ) ತತ್ವದ ಅಡಿಯಲ್ಲಿ ಕೇಂದ್ರವು ಮುಂದಡಿ ಇರಿಸಿದರೆ, ಸಕಾರಾತ್ಮಕ ಫಲಿತಾಂಶವನ್ನು ನಿರೀಕ್ಷಿಸಬಹುದು.

## ದಿನದ ಟ್ವೀಟ್

### ಹೆಮ್ಮೆ ತರಲಿದ್ದಾರೆ

**ಕ್ರೀಡೆಗಳನ್ನು ನಮ್ಮ ದೈನಂದಿನ ಬದುಕಿನ ಭಾಗವನ್ನಾಗಿ ಮಾಡಿಕೊಳ್ಳುವ ಮೂಲಕ ಒಲಿಂಪಿಕ್ ದಿನ (ಜೂನ್ 23) ಆಚರಿಸೋಣ. ಟೋಕಿಯೊ ಒಲಿಂಪಿಕ್ಸ್‌ನಲ್ಲಿ ರಾಷ್ಟ್ರವನ್ನು ಪ್ರತಿನಿಧಿಸುವ ಎಲ್ಲ ಕ್ರೀಡಾಪಟುಗಳಿಗೆ ಶುಭಾಶಯ. ಸಾಂಕ್ರಾಮಿಕ ತಂದೊಡ್ಡಿರುವ ಸವಾಲುಗಳ ನಡುವೆಯೂ ಭಾರತಕ್ಕೆ ಹೆಮ್ಮೆ ತರಬೇಕೆಂಬ ಅವರ ಬದ್ಧತೆ ಮತ್ತು ಕಠಿಣ ಪರಿಶ್ರಮವು ನಿಶ್ಚಿತವಾಗಿಯೂ ಅವರ ಪ್ರದರ್ಶನಗಳಲ್ಲಿ ವ್ಯಕ್ತವಾಗಲಿದೆ.**

**ಡಾ. ರಾಜೀವ್ ಕುಮಾರ್ ಗುಪ್ತಾ** , ಐಎಎಸ್ ಅಧಿಕಾರಿ, ಗುಜರಾತ್

### ನಿಜವಾದ ಯುದ್ಧ

**ಕೊರೊನಾ ವೈರಾಣುವು ಅದನ್ನು ನಿಭಾಯಿಸುವ ನಮ್ಮ ಆಡಳಿತ ಮಟ್ಟದ ಸಾಮರ್ಥ್ಯಕ್ಕಿಂತಲೂ ಹೆಚ್ಚು ಪ್ರಭಾವಶಾಲಿಯಾಗಿದೆ. ಚುನಾವಣೆಯಲ್ಲಿ ಗೆಲುವು ಸಾಧಿಸುವ ಸಾಮರ್ಥ್ಯದ ಆಧಾರದ ಮೇಲೆ ಎಲ್ಲ ಬಗೆಯ ನಾಯಕರನ್ನೂ ನಮ್ಮ ಜನರು ಹೀರೊ-ಗಳಾಗಿಸುತ್ತಿದ್ದಾರೆ. ಆದರೆ ಜಗತ್ತಿನ ನಿಜವಾದ ಯುದ್ಧಗಳಲ್ಲಿ ಗೆಲ್ಲುವ ವಿಷಯಕ್ಕೆ ಬಂದಾಗ, ಅವರಲ್ಲಿ ಹೆಚ್ಚಿನವರು ನಗಣ್ಯರಾಗಿಬಿಡುತ್ತಾರೆ.**

**ಅಶ್ವಿನ್ ಮಹೇಶ್,** ನಗರ ಯೋಜನಾ ತಜ್ಞ

## 50 ವರ್ಷಗಳ ಹಿಂದೆ

ಗುರುವಾರ, 24-6-1971

**• ಪುನರ್‌ರಚಿತವಾದ ಪ್ರದೇಶ ಆಡಳಿತ ಕಾಂಗ್ರೆಸ್ ಸಮಿತಿಗೆ ಅರಸು ಅಧ್ಯಕ್ಷತೆ ಸಂಭವ**

**ನವದೆಹಲಿ, ಜೂನ್ 23**– ಮೈಸೂರು ಪ್ರದೇಶ ಕಾಂಗ್ರೆಸ್ ಸಮಿತಿಯ ಪುನರ್‌ರಚನೆ ಕುರಿತು ಪಕ್ಷದ ಸರ್ವೋಚ್ಚ ನಾಯಕರ ಜೊತೆ ಮಾತುಕತೆಗಾಗಿ ಮೈಸೂರಿನ ಆಡಳಿತ ಕಾಂಗ್ರೆಸ್ ನಾಯಕರು ಈಗ ದೆಹಲಿಗೆ ಆಗಮಿಸಿದ್ದಾರೆ.

ಮಾತುಕತೆ ನಾಳೆ ಆರಂಭವಾಗಲಿದೆ. ರಾಜ್ಯ ವಿಧಾನಸಭೆಗೆ ನಡೆಯಲಿರುವ ಚುನಾವಣೆಗೆ ಪಕ್ಷವನ್ನು ಸಿದ್ಧಗೊಳಿಸುವುದು ಈ ಪುನರ್‌ರಚನೆ ಪ್ರಯತ್ನದ ಮುಖ್ಯ ಉದ್ದೇಶ.

ರಾಜ್ಯ ಆಡಳಿತ ಕಾಂಗ್ರೆಸ್ ಅಡ್‌ಹಾಕ್ ಸಮಿತಿಯ ಸಂಚಾಲಕರಾದ ಶ್ರೀ ದೇವರಾಜ ಅರಸು ಅವರು ಪುನರ್‌ರಚಿತ ಪ್ರದೇಶ ಕಾಂಗ್ರೆಸ್ ಸಮಿತಿಯ ಅಧ್ಯಕ್ಷರಾಗುವ ಸಂಭವವಿದೆ. ಇಬ್ಬರು ಉಪಾಧ್ಯಕ್ಷರು ಮತ್ತು ಮೂವರು ಪ್ರಧಾನ ಕಾರ್ಯದರ್ಶಿಗಳನ್ನು ನೇಮಕ ಮಾಡಲಾಗುವುದು.

**• ಪೊಲೀಸರಿಗೆ 'ಮಾಮೂಲು': ಪ್ರಯಾಣಿಕರಿಗೆ ಪರದಾಟ**

**ಬೆಂಗಳೂರು, ಜೂನ್ 23**–'ನಗರದ ರೈಲ್ವೆ-ನಿಲ್ದಾಣದ ಎದುರು ರಸ್ತೆಯ ಮೇಲೆ ಕೆಲವು ಬಾಲಕರು ನಿಂತು, ಪೊಲೀಸರ ಪರವಾಗಿ ಆಟೋರಿಕ್ಷಾ ಚಾಲಕರಿಂದ 'ಮಾಮೂಲು' ವಸೂಲಿ ಮಾಡುತ್ತಿದ್ದಾರೆ'

ಇಂದು ಬೆಳಿಗ್ಗೆ ಸೇರಿದ ಪತ್ರಿಕಾಗೋಷ್ಠಿಯಲ್ಲಿ ವರದಿಗಾರರೊಬ್ಬರು ಪೊಲೀಸ್ ಕಮೀಷನರರ ಗಮನಕ್ಕೆ ತಂದಾಗ, ಈ ಬಗ್ಗೆ ತತ್‌ಕ್ಷಣ ತನಿಖೆ ನಡೆಸಲು ಪೊಲೀಸ್ ಕಮೀಷನರ್ ಶ್ರೀ ಎಚ್. ವೀರಭದ್ರಯ್ಯ ಅವರು ಆದೇಶ ನೀಡಿದರು.

'ಪೊಲೀಸರಿಗೆ ಕೊಡಬೇಕು' ಎಂದು ಹೇಳಿ ಈ ಬಾಲಕರು ಆಟೋರಿಕ್ಷಾ ಚಾಲಕರಿಂದ ತಲಾ ಹತ್ತು ಪೈಸೆ ವಸೂಲಿ ಮಾಡುತ್ತಿದ್ದಾರೆ' ಎಂದು ವರದಿಗಾರರು ಕಮೀಷನರರ ಗಮನಕ್ಕೆ ತಂದರು.

---

ಕೃಷಿ ಉತ್ಪಾದನೆ ಹೆಚ್ಚಾಗಿದ್ದರೂ ರೈತರ ಆದಾಯ ಹೆಚ್ಚಾಗದಿರುವುದಕ್ಕೆ ಹಲವು ಕಾರಣಗಳಿವೆ

# ರೈತರ 'ಆದಾಯ ಡಬಲ್': ಯಾವಾಗ? ಎಲ್ಲಿ?

ವಿಶ್ಲೇಷಣೆ

ಗುರುರಾಜ್ ಎಸ್. ದಾವಣಗೆರೆ

**ಕೊರೊನಾ** ಸಾಂಕ್ರಾಮಿಕದ ಪಿಡುಗು ಇಡೀ ವಿಶ್ವದ ಬಹುತೇಕ ಕ್ಷೇತ್ರಗಳ ಮೇಲೆ ವ್ಯತಿರಿಕ್ತ ಪರಿಣಾಮ ಬೀರಿದ್ದರೂ ಕಳೆದ ವರ್ಷದ ಉತ್ತಮ ಮಳೆಯು ಜಲಾಶಯಗಳು ಬರಿದಾಗದಂತೆ ನೋಡಿಕೊಂಡದ್ದ-ರಿಂದ, ಅಚ್ಚರಿಯೆಂಬಂತೆ ನಮ್ಮ ಕೃಷಿ ಕ್ಷೇತ್ರ ಮಾತ್ರ ಹೆಚ್ಚಿನ ಉತ್ಪಾದನೆ ದಾಖಲಿಸಿ ಅನನ್ಯ ಸಾಧನೆ ಮಾಡಿದೆ. ಆದರೆ ವಿಪರ್ಯಾಸವೆಂಬಂತೆ, ರೈತರ ಆದಾಯವೇನೂ ಜಾಸ್ತಿಯಾಗಿಲ್ಲ. ಅಲ್ಲದೆ ಕೇಂದ್ರ ಸರ್ಕಾರ 2016ರಲ್ಲಿ ಘೋಷಿಸಿದ್ದ 'ರೈತರ ಆದಾಯವನ್ನು ಡಬಲ್' ಮಾಡುವ ಗುರಿ ತಲುಪಲು ಬಾಕಿ ಇರುವುದು ಇನ್ನು ಎಂಟು ತಿಂಗಳು ಮಾತ್ರ. ಅದನ್ನು ಸಾಧಿಸುವುದು ಅಸಾಧ್ಯ ಎಂಬ ಮಾತು ತಜ್ಞರಿಂದ ಕೇಳಿಬರುತ್ತಿದೆ.

ಸ್ವಾತಂತ್ರ್ಯದ 75ನೇ ವರ್ಷದ ಸಮಾರೋಪದ ವೇಳೆಗೆ ದೇಶದ ರೈತರ ಆದಾಯವನ್ನು ಡಬಲ್ ಮಾಡುತ್ತೇವೆ ಎಂದು 2016ರ ರಾಷ್ಟ್ರೀಯ ವಿಜ್ಞಾನ ದಿನದಂದು ಘೋಷಿಸಿದ್ದ ಪ್ರಧಾನಿ ನರೇಂದ್ರ ಮೋದಿ ಅವರು, ಅದಕ್ಕೆ ತಕ್ಕ ಕ್ರಮಗಳನ್ನು ಕೈಗೊಳ್ಳಲು ರಾಜ್ಯ ಸರ್ಕಾರಗಳಿಗೆ ನಿರ್ದಿಷ್ಟ ಸೂಚನೆ ನೀಡುವಂತೆ ಕೇಂದ್ರ ಕೃಷಿ ಸಚಿವಾಲಯಕ್ಕೆ ತಾಕೀತು ಮಾಡಿದ್ದರು.

ಈ ಮಹತ್ವಾಕಾಂಕ್ಷಿ ಯೋಜನೆಗೆ ಸಾಥ್ ನೀಡಿದ ಭಾರತೀಯ ಕೃಷಿ ಸಂಶೋಧನಾ ಮಂಡಳಿ (ಐಸಿಎಆರ್), ಪ್ರತೀ ರಾಜ್ಯದ ಜಿಲ್ಲೆಗಳಲ್ಲಿ ತಲಾ ಎರಡು ಹಳ್ಳಿಗಳನ್ನು ದತ್ತು ತೆಗೆದುಕೊಂಡು, ಸುಧಾರಿತ ಬೇಸಾಯ ಕ್ರಮಗಳ ಮೂಲಕ ಬೆಳೆ ಇಳುವರಿ ಹೆಚ್ಚಿಸಲು ಮುಂದಾಯಿತು.

ಯೋಜನೆ ಅನುಷ್ಠಾನಗೊಳಿಸಿ ರೈತರಿಗೆ ಕಾಲ ಕಾಲಕ್ಕೆ ಮಾರ್ಗದರ್ಶನ ಮತ್ತು ಸಲಹೆ ನೀಡಿ ಬೆಳೆ ಮಾರಾಟಗೊಂಡು, ರೈತರ ಕೈಗೆ ಹಣ ಸಿಗುವವರೆಗೂ ಕೃಷಿ ವಿಜ್ಞಾನ ಕೇಂದ್ರಗಳು ನೆರವಾಗಬೇಕು ಎಂಬ ಸೂತ್ರ ಅನುಸರಿಸ-ಲಾಯಿತು. ಅದರಂತೆ, ಎಲ್ಲ ರಾಜ್ಯಗಳ 651 ಕೃಷಿ ವಿಜ್ಞಾನ ಕೇಂದ್ರಗಳು 1,416 ಹಳ್ಳಿಗಳನ್ನು ದತ್ತು ತೆಗೆದುಕೊಂಡು ಕೆಲಸ ಶುರು ಮಾಡಿದವು.

2019- 20ರ ಆರ್ಥಿಕ ಸಮೀಕ್ಷೆ ಪ್ರಕಾರ, ಆ ಹಿಂದಿನ ಆರು ವರ್ಷಗಳ (2014- 2020) ಕೃಷಿ ಪ್ರಗತಿಯ ದರ ಕೇವಲ ಶೇ 2.88ರಷ್ಟಿದೆ. ಈ ವರ್ಷದ ಕೊನೆಗೆ ಅದು ಶೇ 2.90 ತಲುಪಲಿದೆ ಎಂಬ ಅಂದಾಜಿದೆ. 2016ರಲ್ಲಿ ಯೋಜನೆ ಘೋಷಣೆಯಾದ ತಕ್ಷಣ ಪ್ರತಿಕ್ರಿಯಿಸಿದ್ದ ಕೃಷಿ ಮಾರುಕಟ್ಟೆ ತಜ್ಞರು, ಕೃಷಿಕರ ಆದಾಯ ಡಬಲ್ ಆಗಲು ಪ್ರಗತಿಯ ಪ್ರಮಾಣ ವರ್ಷಕ್ಕೆ ಶೇ 14.86ರಷ್ಟಿರಬೇಕು ಎಂದಿದ್ದರು. ಆದರೆ 2017ರ ಸಂಶೋಧನಾ ವರದಿ ಆಧರಿಸಿ ಹೇಳಿಕೆ ನೀಡಿದ ನೀತಿ ಆಯೋಗವು ಪ್ರತಿವರ್ಷ ಪ್ರಗತಿಯ ದರ ಶೇ 10.4ರಷ್ಟಿದ್ದರೆ ಸಾಕು ಎಂದಿದೆ. ಅದಕ್ಕೆ ಸಾಕ್ಷ್ಯ ನೀಡುವ ಆಯೋಗದ ಸದಸ್ಯ ರಮೇಶ್ ಚಂದ್, 2001- 2014ರ ಅವಧಿಯಲ್ಲಿ ದೇಶದ ಇಳುವರಿ ಕ್ಷೇತ್ರ ಶೇ 3.1ರ ಬೆಳವಣಿಗೆ ಕಂಡಿದೆ ಮತ್ತು 2021ರ ವೇಳೆಗೆ ಅದು ಶೇ 18.7 ತಲುಪಲಿದೆ ಎಂದು ಖಚಿತವಾಗಿ ವಾದ ಮಂಡಿಸುತ್ತಾರೆ. ಕೃಷಿಯ ಜೊತೆ ಜಾನುವಾರುಗಳಿಂದ ಬರುವ ಆದಾಯವನ್ನೂ ಸೇರಿಸಿದರೆ ರೈತರ ಆದಾಯ 2022ರ ವೇಳೆಗೆ ಶೇ 27.5ರಷ್ಟು ಹೆಚ್ಚಲಿದೆ ಎನ್ನುತ್ತಾರೆ.

ವಾಸ್ತವಾಂಶ ಬೇರೆಯೇ ಇದ್ದು, ಕಳೆದ ಸೆಪ್ಟೆಂಬರ್‌ನಲ್ಲಿ ಲೋಕಸಭೆಯ ಕಲಾಪದಲ್ಲಿ ಕೇಳಲಾದ ಪ್ರಶ್ನೆಗೆ ಉತ್ತರಿಸಿದ ಕೃಷಿ ಸಚಿವ ನರೇಂದ್ರ ಸಿಂಗ್ ತೋಮರ್, 'ನ್ಯಾಷನಲ್ ಸ್ಯಾಂಪಲ್ ಸರ್ವೆ ಕಚೇರಿಯ ಪ್ರಕಾರ, 2013- 14ರವರೆಗಿನ ದಾಖಲೆ ಮಾತ್ರ ಇದೆ, ನಂತರದ್ದು ಇಲ್ಲ' ಎಂದಿದ್ದಾರೆ. 2020ರ ಮಾರ್ಚ್‌ನಲ್ಲಿ ವರದಿ ನೀಡಿದ ಸ್ಥಾಯಿ ಸಮಿತಿ, ಆದಾಯ ದ್ವಿಗುಣಗೊಳಿ-ಸುವ ವಿವರಗಳ ಕುರಿತು ವಿಸ್ತೃತ ವಿಚಾರವಿಮರ್ಶೆ ಮಾಡಿದೆಯೇ ಹೊರತು ಬೆಳವಣಿಗೆ ದರದ ಕುರಿತು ಚಕಾರ ಎತ್ತಿಲ್ಲ.

ಯೋಜನೆಯ ಕುರಿತು ವಿಷಯ ಸಂಗ್ರಹಿಸಲು 70 ಕೃಷಿ ವಿಜ್ಞಾನ ಕೇಂದ್ರಗಳನ್ನು ಸಂಪರ್ಕಿಸುವ ಪ್ರಯತ್ನ 'ಡೌನ್ ಟು ಅರ್ಥ್' ತಂಡದಿಂದ ನಡೆಯಿತು. ಉತ್ತರ ಕೊಟ್ಟ ಕೇಂದ್ರಗಳು ಕೇವಲ 22. 'ನಾವು ಮಾಹಿತಿ ಕೊಡುವುದಿಲ್ಲ' ಎಂದು 27 ಕೇಂದ್ರಗಳು ನೇರವಾಗಿ ಹೇಳಿದರೆ, ಉಳಿದ 21 ಕೇಂದ್ರಗಳಿಗೆ ಕ್ರಿಯಾತ್ಮಕವಾದ ಫೋನ್ ನಂಬರ್‌ಗಳಾಗಲೀ ಇ– ಮೇಲ್ ವಿಳಾಸವಾಗಲೀ ಇರಲಿಲ್ಲ.

ಪ್ರಶ್ನೆಗಳಿಗೆ ಉತ್ತರಿಸಿದ ಕೃಷಿ ವಿಜ್ಞಾನ ಕೇಂದ್ರದ ಅಧಿಕಾರಿಗಳು, 'ಸರ್ಕಾರದ ಯೋಜನೆಯಂತೆ ಕೆಲಸ ನಡೆಯುತ್ತಿದೆ. ರೈತರು ಸ್ಪಂದಿಸುತ್ತಿದ್ದಾರೆ, ಆದರೆ ಹಾಕಿಕೊಂಡ ಗುರಿ ತಲುಪುತ್ತೇವೆಯೋ ಇಲ್ಲವೋ ಎಂದು ಈಗಲೇ ಹೇಳಲಾಗದು' ಎಂದಿದ್ದಾರೆ. ರೈತರನ್ನೇ ಸಂಪರ್ಕಿಸಿದಾಗ ಆಶ್ಚರ್ಯಕರ ಮಾಹಿತಿ ಹೊರಬಿದ್ದಿದೆ. ಹತ್ತರಲ್ಲಿ 9 ರೈತರಿಗೆ ತಮ್ಮ ಹಳ್ಳಿಗಳನ್ನು ಅಂಥದ್ದೊಂದು ಯೋಜನೆಯ ಅಡಿಯಲ್ಲಿ ಆಯ್ಕೆ ಮಾಡಲಾಗಿದೆ ಎಂಬುದೇ ತಿಳಿದಿರಲಿಲ್ಲ.

'ನಿಮ್ಮ ಆದಾಯ ಡಬಲ್ ಆಗಬಹುದೆಂದು ನಿಮಗೆ ಅನ್ನಿಸುತ್ತಿದೆಯೇ' ಎಂಬ ಪ್ರಶ್ನೆಗೆ ಒಬ್ಬರು ಮಾತ್ರ, 'ಆಗಬಹುದೇನೋ, ಆದರೆ ನಮಗೆ ಬೇಕಾದ ಬೆಳೆ ಬೆಳೆಯಲು ಅವಕಾಶವಿಲ್ಲ. ಅವರು ಹೇಳಿದ್ದನ್ನೇ ಮಾಡಬೇಕು. ಇದ್ಯಾವ ನ್ಯಾಯ?' ಎಂದು ಅಸಮಾಧಾನ ವ್ಯಕ್ತಪಡಿಸಿದ್ದಾರೆ.

ಉತ್ತರಪ್ರದೇಶದ ಹರ್ದೋಯಿ ಜಿಲ್ಲೆಯ ಹರಿಯವನ್ ಹಳ್ಳಿಯ ಕಾಮೇಶ್ವರ್, 'ಮೊದಲೆಲ್ಲ ಅರ್ಧ ಎಕರೆಗೆ 5-6 ಟನ್ ಕಬ್ಬು ಬೆಳೆಯುತ್ತಿದ್ದೆ. ಅಧಿಕಾರಿಗಳು ಬಂದು ನಿನ್ನ ಜಮೀನನ್ನು 'ಇನ್‌ಕಂ ಡಬಲ್' ಮಾಡುವ ಯೋಜನೆಗೆ ಗುರುತಿಸಿದ್ದೇವೆ, ಇನ್ನು ಮುಂದೆ ಹೊಸ ತಳಿ 0238 ಬೆಳೆಯಿರಿ ಎಂದು ಸಲಹೆ ನೀಡಿದ ನಂತರ ಇಳುವರಿ 4 ಟನ್‌ಗೆ ಇಳಿಕೆಯಾಗಿದೆ' ಎಂದು ಹೇಳಿದ್ದಾರೆ.

'ಕಬ್ಬಿನ ಬದಲಿಗೆ ಬೇರೆಯದನ್ನು ಬೆಳೆದರೆ ಮಾಡಿದ ಖರ್ಚೂ ವಾಪಸ್ ಬರುವುದಿಲ್ಲ' ಎಂದಿರುವ ಇನ್ನೊಬ್ಬ ರೈತ ಅಶುತೋಶ್ ಮಿಶ್ರ, 'ಕಳೆದ ಬಾರಿ ಗೋಧಿ ಬೆಳೆದಾಗ ಬೆಂಬಲ ಬೆಲೆ ಪ್ರತೀ ಕ್ವಿಂಟಲ್‌ಗೆ ₹ 1,868 ಇದ್ದರೂ ಸಿಕ್ಕಿದ್ದು ಕೇವಲ ಸಾವಿರ ರೂಪಾಯಿ. ಇನ್ನೊಂದು ಹೊಲದಲ್ಲಿ ಬೆಳೆದ ಮೆಕ್ಕೆಜೋಳಕ್ಕೆ ಪ್ರತೀ ಕ್ವಿಂಟಲ್‌ಗೆ ಬೆಂಬಲ ಬೆಲೆಗಿಂತ ಸಾವಿರ ರೂಪಾಯಿ ಕಡಿಮೆ ಸಿಕ್ಕಿತ್ತು. ಪರಿಸ್ಥಿತಿ ಹೀಗಿರುವಾಗ ಅದ್ಯಾವ ರೀತಿಯಲ್ಲಿ ಆದಾಯ ಡಬಲ್ ಆಗುತ್ತದೆ?' ಎಂದು ಖಾರವಾಗಿ ಪ್ರಶ್ನಿಸಿದ್ದಾರೆ.

ಅಹಮದಿ ಹಳ್ಳಿಯ ರಾಮ್‌ಪಾಲ್, 'ಕಳೆದ ಸಲ ಬೆಳೆದ ಕಬ್ಬಿಗೆ ಕೆಂಪು ಕೊಳೆ ರೋಗ ತಗುಲಿದ್ದರಿಂದ ಶುಗರ್ ಮಿಲ್‌ನವರು ಒಂದೇ ಒಂದು ಕೆ.ಜಿ ಕಬ್ಬನ್ನೂ ಕೊಳ್ಳಲಿಲ್ಲ, ಹಾಕಿದ್ದ ಬಂಡವಾಳವೆಲ್ಲ ಸಾಲವಾಗಿ ತಲೆ ಮೇಲೆ ಬಂದಿದೆ' ಎಂದಿದ್ದಾರೆ.

ಹರಿಯಾಣ ಮತ್ತು ಮಧ್ಯಪ್ರದೇಶದ ಸದತ್‌ಪುರ ಮತ್ತು ಲೊಕ್ರ ಹಳ್ಳಿಗಳ ಆಶೋಕ್ ಕುಮಾರ್ ಮತ್ತು ಭೀಮಸಿಂಗ್, ಹೂವು, ಹತ್ತಿ, ಬಟಾಣಿ ಬೆಳೆಗಳನ್ನು ಸಾವಯವ ವಿಧಾನದಲ್ಲಿ ಬೆಳೆದು ಆದಾಯ ಡಬಲ್ ಮಾಡಿಕೊಂಡಿದ್ದರೂ, ಸಾಧನೆಯ ಶ್ರೇಯಸ್ಸನ್ನು ಕೃಷಿ ವಿಜ್ಞಾನ ಕೇಂದ್ರಕ್ಕೆ ಕೊಡಲು ಒಪ್ಪಿಲ್ಲ. ಕಪ್ಪು ಗೋಧಿಯನ್ನು ಬೆಳೆಯುವ ಅಶೋಕ್, 'ಉತ್ಪನ್ನವನ್ನು ಯಾವ ಮಾರುಕಟ್ಟೆಗೂ ತೆಗೆದುಕೊಂಡು ಹೋಗುವುದಿಲ್ಲ, ಕೊಳ್ಳುವವರು ಇಲ್ಲಿಯೇ ಬರುತ್ತಾರೆ. ನಮ್ಮ ಬೆಲೆಗೇ ಖರೀದಿಸುತ್ತಾರೆ' ಎಂದಿದ್ದು, 'ಬೆಳೆ ಆಯ್ಕೆಯ ಸ್ವಾತಂತ್ರ್ಯ ನಮಗೇ ಇರಬೇಕು. ಆಗ ಮಾತ್ರ ಆದಾಯವನ್ನು ಡಬಲ್ ಅಷ್ಟೇ ಅಲ್ಲ, ನಾಲ್ಕು ಪಟ್ಟು ಏರಿಸಬಹುದು' ಎಂಬ ಭರವಸೆಯ ಮಾತನ್ನಾಡಿದ್ದಾರೆ.

ಆಯ್ದ ಕೆಲವು ಹಳ್ಳಿಗಳ ರೈತರ ಆದಾಯ ಹೆಚ್ಚಿಸುವ ಉಪಕ್ರಮಗಳ ಪ್ರಗತಿಯ ಸ್ಥಿತಿಯೇ ಹೀಗಿರಬೇಕಾದರೆ, ಉಳಿದ ಕೋಟ್ಯಂತರ ರೈತರ ಆದಾಯ ಡಬಲ್ ಆಗುವುದು ಯಾವಾಗ?

## ಚುರುಮುರಿ

### ಬಂಡಾಯದ ಬಾವುಟ

• ಎಸ್.ಬಿ.ರಂಗನಾಥ್

**ಮನೆಮಕ್ಕಳು** ಯಜಮಾನನ ವಿರುದ್ಧ ಬಂಡಾಯದ ಬಾವುಟ ಹಾರಿಸಿದ್ದರಿಂದ ಗೃಹಕಲಹ ತಾರಕಕ್ಕೇರಿತ್ತು. ಮನೆಯೊಂದು ಮೂರು ಬಾಗಿಲು ಆಗುವ ಹಂತ ತಲುಪಿತ್ತು. ಮೂವರು ಗಂಡು ಮಕ್ಕಳು ಎಡ-ಬಲ-ಮಧ್ಯಮ ಎಂದು ಮೂರು ಗುಂಪುಗಳಾಗಿ ಕಚ್ಚಾಡುತ್ತಿದ್ದರು. ಇವರಿಗೆ ಹೆಣ್ಣು ಕೊಟ್ಟ ಬೀಗರು ಈ ಹಿಂದೆ ಬಹಳಷ್ಟು ಬಾರಿ ರಾಜಿ ಪಂಚಾಯಿತಿ ಮಾಡಿದ್ದರೂ ಪ್ರಯೋಜನವಾಗಿರಲಿಲ್ಲ. ಕೊನೆಯ ಪ್ರಯತ್ನ ಮಾಡಲು ಮಧ್ಯಮನ ಮಾವ ಬಂದಿದ್ದರು.

'ಅವರು ಬೇಡ, ತಮ್ಮ ಅಳಿಯನ ಪರ ವಹಿಸ್ತಾರೆ. ನಮ್ಮ ಮಾವ ಬರಲಿ' ಎಂದ ಮೊದಲ ಮಗ. ಮೂರನೇ ಮಗನೂ ಅದೇ ರಾಗ ಎಳೆದ.

'ನಿಮ್ಮ ಮಾವಂದಿರು ನಿಮ್ಮ ಪರ ವಹಿಸುವುದಿಲ್ವೇ?' ಎಂದು ಅಪ್ಪ ಗದರಿಸಿದಾಗ ಸುಮ್ಮನಾದರು.

ಮಾವ ಕೇಳಿದರು, 'ನಿಮ್ಮ ಸಮಸ್ಯೆ ಏನ್ರಯ್ಯಾ?'

'ಅದೇ ಹಳೇ ಸಮಸ್ಯೆ. ಅಪ್ಪ ಪಕ್ಷಪಾತ ಮಾಡ್ತಾರೆ. ಅವರ ಹೆಸರಲ್ಲಿ ಎಲ್ಲ ಅಧಿಕಾರವನ್ನೂ ಮಧ್ಯದ ಮಗ ಚಲಾಯಿಸ್ತಾನೆ. ನಮಗೆ ಯಾವ ಅಧಿಕಾರಾನೂ ಇಲ್ಲ. ನಮ್ಮ ಮಕ್ಕಳಿಗೆ ಬಿಸ್ಕತ್ ಕೊಡಿಸೋಕೂ ನಮಗೆ ಆಗ್ತಿಲ್ಲ'.

'ಇದೆಲ್ಲಾ ಸುಳ್ಳು, ಆಗದವರ ಚಿತಾವಣೆ. ಬೇಕಾದ್ರೆ ಈಗಲೇ ಯಜಮಾನಿಕೆ ಬಿಡಲು ನಾನು ಸಿದ್ಧ'.

'ಹೀಗೆ ಹೇಳ್ತಾನೇ ಮುದುಕರಾದ್ರಿ'.

ಮಾವ ಹೇಳಿದರು- 'ನಾನಿಲ್ಲಿ ಮಧ್ಯಸ್ಥನಾಗಿ ಬಂದಿರೋದು ಯಜಮಾನಿಕೆ ಬದಲಾಯಿಸೋಕಲ್ಲ. ನಿಮ್ಮ ಭಿನ್ನಾಭಿಪ್ರಾಯ ಬಗೆಹರಿಸೋಕೆ. ನಮ್ಮ ನಿಮ್ಮದು ಸಂಪ್ರದಾಯಸ್ಥ, ಶಿಸ್ತಿಗೆ ಹೆಸರಾದ ದೊಡ್ಡ ಮನೆತನ. ಈಚೆಗೆ ನಮ್ಗೆ ವಿರೋಧಿಗಳು ಹೆಚ್ಚಾಗಿದ್ದಾರೆ... ಅಲ್ದೆ ಈ ಕೊರೊನಾ, ಫಂಗಸ್‌ಗಳ ಆರ್ಭಟ ಇನ್ನೂ ತಣ್ಣಗಾಗ್ತಿಲ್ಲ. ಇವೆಲ್ಲಾ ಮುಗಿಯೋವರೆಗೆ ಹೊಂದಿಕೊಂಡಿರಿ'.

'ಹಾಗಾದ್ರೆ ನಮ್ಗೆ ಯಜಮಾನಿಕೆ ಈ ಜನ್ಮದಲ್ಲಿ ಸಿಕ್ಕಂತೆಯೇ' ಎಂದು ಬಂಡುಕೋರ ಮಕ್ಕಳು ತಲೆಮೇಲೆ ಕೈಹೊತ್ತರು.

## ಸಂಗತ

# 'ಅವಳ' ಹಾದಿ ಮುಕ್ತವಾಗಲಿ

ವಿಧವೆಯರ ಸ್ವಾವಲಂಬನೆಗೆ ನೆರವಾಗುವ ಕೆಲಸ ತೀವ್ರಗತಿಯಲ್ಲಿ ಆಗಬೇಕಿದೆ

• ಡಾ. ಜ್ಯೋತಿ

**ಗಂಡನನ್ನು** ಕಳೆದುಕೊಂಡ ಹೆಣ್ಣನ್ನು ನಿಕೃಷ್ಟವಾಗಿ ಕಾಣುವ ಪರಿಪಾಟ ಇನ್ನೂ ಉಳಿದಿರುವುದು ವಿಷಾದದ ಸಂಗತಿ. ಯಾಕೆಂದರೆ, ಸಂಗಾತಿಯನ್ನು ಕಳೆದುಕೊಂಡ ಗಂಡು ಬಾಹ್ಯ ಜಗತ್ತಿನ ಯಾವುದೇ ಕಟ್ಟುಪಾಡುಗಳಿಲ್ಲದೆ ಪುನಃ ಹಸೆಮಣೆ ಏರಿದರೆ, ಹೆಣ್ಣು ಮಾತ್ರ ಸಾಮಾಜಿಕ ಕಟ್ಟುಪಾಡುಗಳಲ್ಲಿ ಬಂದಿಯಾಗಿ ನಲುಗುತ್ತಾಳೆ.

2020ರಲ್ಲಿ ಪ್ರಕಟವಾದ ವರದಿಯೊಂದರ ಪ್ರಕಾರ, ಭಾರತದಲ್ಲಿ ಸದ್ಯಕ್ಕೆ 5.5 ಕೋಟಿ ವಿಧವೆಯರಿದ್ದಾರೆ. 'ವಿಧ್' ಎನ್ನುವ ಸಂಸ್ಕೃತ ಪದದ ಅರ್ಥ 'ನಿರ್ಗತಿಕ'. ಭಾರತದಲ್ಲಿ ವಿಧವೆಯರನ್ನು ಹೆಚ್ಚುಕಡಿಮೆ ಹಾಗೆಯೇ ನಡೆಸಿಕೊಳ್ಳಲಾಗುತ್ತಿದೆ. ಪ್ರತಿವರ್ಷ, ಜೂನ್ 23 ಅನ್ನು 'ಅಂತರರಾಷ್ಟ್ರೀಯ ವಿಧವೆಯರ ದಿನ' ಎಂದು ಪರಿಗಣಿಸಲ್ಪಟ್ಟ ಕಾರಣ, ವರ್ತಮಾನದ ಜಗತ್ತಿನಲ್ಲಿ ವಿಧವೆಯರ ಸ್ಥಿತಿಗತಿಯ ಕುರಿತು ಮರುನೋಟ ಹರಿಸಬೇಕಾಗಿದೆ.

ವೈಧವ್ಯದ ಐತಿಹಾಸಿಕ ಪರಂಪರೆಯತ್ತ ದೃಷ್ಟಿ ಹಾಯಿಸಿದರೆ, 'ಸ್ವಯಂವರ'ದ ಮೂಲಕ ಬಾಳ-ಸಂಗಾತಿಯನ್ನು ಆಯ್ಕೆ ಮಾಡುತ್ತಿದ್ದ ಅಥವಾ 'ನಿಯೋಗ'ದಿಂದ ಮಗುವನ್ನು ಪಡೆಯುವ ಅವಕಾಶವಿದ್ದ ಹೆಣ್ಣು, ಕ್ರಮೇಣ 'ಸತಿ ಸಹಗಮನ'ದ ಹಂತ ತಲುಪಿದಳು ಎನ್ನುವ ಅಂಶವೇ ಒಂದು ವಿಪರ್ಯಾಸ. ಅಂತೂ ಸಹಗಮನವು ವಿಧವೆಯನ್ನು ಅವಳ ಗಂಡನ ಚಿತೆಯೊಂದಿಗೆ ಜೀವಂತವಾಗಿ ಸುಟ್ಟರೆ, ಇದರಿಂದ ಹೊರಗುಳಿದ ವಿಧವೆಯರ ಬಾಳೇನೂ ಸಂತೋಷದಾಯಕವಾಗಿರಲಿಲ್ಲ. ಬದಲಾಗಿ ದೈನಂದಿನ ಬದುಕು ಮಾನಸಿಕ ಹಿಂಸೆಯಾಗಿತ್ತು.

ವೈಧವ್ಯ ಅವಳ ಪಾಪದ ಫಲವೆಂದು ನಂಬಿದ್ದರಿಂದ, ಅವಳನ್ನು ಎಲ್ಲಾ ಶುಭ ಸಮಾರಂಭಗಳಿಂದ ದೂರವಿಟ್ಟು ಅಸ್ಪೃಶ್ಯಳಂತೆ ನಡೆಸಿಕೊಳ್ಳಲಾಯಿತು. ಗಂಡಸರು ವಿಧವೆಯತ್ತ ಆಕರ್ಷಿತರಾಗಬಾರದೆಂದು, ಅವಳ ತಲೆ ಬೋಳಿಸಿ, ನಿರಾಭರಣಗೊಳಿಸಿ, ಸ್ವನಿಗ್ರಹದ ಪಾಠ ಹೇಳಲಾಯಿತು. ಇವುಗಳ ನಡುವೆಯೂ ಅಕಸ್ಮಾತ್ ಅವಳ ಮನ ಜಾರಿಯೋ ಅಥವಾ ಬಲವಂತವಾಗಿ ಪುರುಷನ ಕಾಮತೃಷೆಗೆ ಸಿಕ್ಕಿಯೋ ಗರ್ಭಿಣಿಯಾದರೆ ಅವಳನ್ನು ಬಹಿಷ್ಕರಿಸಲಾಗುತ್ತಿತ್ತು. ಮುಂದೆ ಅವಳು ಮತ್ತು ಅವಳಿಗೆ ಹುಟ್ಟಿದ ಮಗು ಜೀವನಪರ್ಯಂತ ಅಸ್ಪೃಶ್ಯರಂತೆ ಬದುಕಬೇಕಿತ್ತು. ಹೀಗೆ, ಹೆಣ್ಣಿನ ಅಸ್ತಿತ್ವವು ಗಂಡನ ಉಳಿವು ಅಳಿವಿನ ಪರಿಧಿಯೊಳಗೆ ಕಟ್ಟಲ್ಪಟ್ಟಿತ್ತು.

ಬ್ರಿಟಿಷ್ ಆಳ್ವಿಕೆಯ ಕಾಲದಲ್ಲಿ ಸತಿಪದ್ಧತಿಯನ್ನು ನಿಷೇಧಿಸಲಾಯಿತಾದರೂ ವಿಧವೆಯರ ಜೀವನ ಶೋಚನೀಯವಾಗಿಯೇ ಮುಂದುವರಿಯಿತು. ಬಡತನ, ಕೌಟುಂಬಿಕ ಬೆಂಬಲದ ಕೊರತೆ, ಒಂಟಿತನ, ಮದುವೆಯಾಗಲು ಸಿದ್ಧವಿಲ್ಲದ ಆದರೆ ಕಾಮತೃಷೆಗೆ ಬಳಸಿಕೊಳ್ಳುವ ಪುರುಷ ವರ್ಗದಿಂದ ದೌರ್ಜನ್ಯಕ್ಕೆ ಒಳಗಾಗುವ ವಿಧವೆಯರು, ಬದುಕಿನ ಬಗ್ಗೆ ನಿರಾಶರಾಗುವ ಸಂಭವ ಹೆಚ್ಚಿಗೆ ಇತ್ತು.

ಉತ್ತರಪ್ರದೇಶದ ಮಥುರಾದ ಬೃಂದಾವನದಲ್ಲಿ ವಿಧವೆಯರನ್ನು ಬಿಟ್ಟು ಹೋಗುವ ಸಂಪ್ರದಾಯ ಇಂದಿಗೂ ಚಾಲ್ತಿಯಲ್ಲಿದೆ. ಅದನ್ನು 'ವಿಧವೆಯರ ನಗರ'ವೆಂದೇ ಕರೆಯುತ್ತಾರೆ. ಮನೆಯಿಂದ ಪರಿತ್ಯಕ್ತರಾದವರು ಅಲ್ಲಿ ಜೀವನೋಪಾಯಕ್ಕಾಗಿ ಭಿಕ್ಷಾಟನೆ, ವೇಶ್ಯಾವಾಟಿಕೆಯಂತಹ ಮಾರ್ಗಗಳನ್ನು ಕಂಡುಕೊಂಡು ಕೃಷ್ಣನ ಆರಾಧನೆಯಲ್ಲಿ ತಮ್ಮ ಜೀವನದ ಉಳಿದ ದಿನಗಳನ್ನು ಕಳೆಯುತ್ತಾರೆ. ಇವರಲ್ಲಿ ಬಹಳಷ್ಟು ಬಾಲವಿಧವೆಯರೂ ಇದ್ದಾರೆ.

ಈ ಹಿನ್ನೆಲೆಯಲ್ಲಿ ನಾವು ಅರ್ಥಮಾಡಿಕೊಳ್ಳ-ಬೇಕಾದುದು, ವೈಧವ್ಯ ಎನ್ನುವುದು ಯಾವುದೇ ಮಹಿಳೆಯ ಸ್ವಆಯ್ಕೆಯಲ್ಲ. ಅದೊಂದು ಜೀವನದ ಆಕಸ್ಮಿಕ ಭಾಗವಷ್ಟೇ. ವಿಪರ್ಯಾಸವೆಂದರೆ, ಸಂಗಾತಿಯನ್ನು ಕಳೆದುಕೊಂಡ ಮಹಿಳೆಗೆ ಅಗತ್ಯವಾಗಿ ಬೇಕಾಗಿರುವ ಆಸರೆ ಮತ್ತು ಸಾಂತ್ವನ ನೀಡುವ ಬದಲಾಗಿ, ಸಮಾಜ ಅವಳ ಭವಿಷ್ಯದ ಹಾದಿಯನ್ನು ಇನ್ನಷ್ಟು ಕಠಿಣಗೊಳಿಸಿ, ಬದುಕುವ ಇಚ್ಛಾಶಕ್ತಿಯನ್ನು ಕಸಿದುಕೊಳ್ಳುತ್ತದೆ.

ವಿಧವೆಯರ ಮರುವಿವಾಹದ ಸಾಧ್ಯತೆ ಇಂದಿಗೂ ಕಠಿಣವಾಗಿಯೇ ಉಳಿದಿದೆ. ಹೆಣ್ಣು ಗಂಡನ ಮನೆಯ ಸ್ವತ್ತು ಎಂದು ಪರಿಗಣಿಸಲ್ಪಟ್ಟಿರುವುದರಿಂದ, ಆಕೆಯ ಮರುಮದುವೆಗೆ ಮೃತ ಗಂಡನ ಮನೆಯವರ ಅನುಮೋದನೆ ಬೇಕಾಗುತ್ತದೆ. ಜೊತೆಗೆ, ತವರು ಮನೆಯವರ ಬೆಂಬಲವೂ ಅಗತ್ಯವಾಗುತ್ತದೆ. ಒಂದು ವೇಳೆ ಎರಡೂ ಕಡೆಯಿಂದ ಸಹಮತವಿದ್ದರೂ ಅಕಸ್ಮಾತ್ ಅವಳಿಗೆ ಮಕ್ಕಳೇನಾದರೂ ಇದ್ದಲ್ಲಿ, ಹೆಚ್ಚಿನ ಸಂದರ್ಭಗಳಲ್ಲಿ ಎರಡನೇ ಗಂಡ ಅವರನ್ನು ಸ್ವೀಕರಿಸದ ಕಾರಣ, ಮಕ್ಕಳ ಭವಿಷ್ಯದ ಕುರಿತಾಗಿಯೂ ಯೋಚಿಸಬೇಕಾಗುತ್ತದೆ.

ಈ ಎಲ್ಲಾ ಅಂಶಗಳನ್ನು ಗಮನದಲ್ಲಿ ಇಟ್ಟುಕೊಂಡು, ಸಾಮಾಜಿಕ ಕಳಂಕಗಳನ್ನು ಮೆಟ್ಟಿ ನಿಲ್ಲುವುದು ಅಷ್ಟು ಸುಲಭವಲ್ಲ, ಪರಿವರ್ತನೆಗೆ ಬಹಳಷ್ಟು ಸಮಯ ತಗಲುತ್ತದೆ ಮತ್ತು ಮದುವೆಯೊಂದೇ ಹೆಣ್ಣಿನ ಅಸ್ತಿತ್ವ-ವಲ್ಲ ಎನ್ನುವ ಕಾರಣದಿಂದಾಗಿ, ಸರ್ಕಾರ ಮತ್ತು ಸಂಘ ಸಂಸ್ಥೆಗಳು ವಿಧವೆಯರ ಸ್ವಾವಲಂಬನೆಗೆ ನೆರವಾಗುವ ಕೆಲಸವನ್ನು ತೀವ್ರಗತಿಯಲ್ಲಿ ಮಾಡಬೇಕಿದೆ. ಇವರಲ್ಲಿ ಹೆಚ್ಚಿನವರಿಗೆ ವಿದ್ಯಾಭ್ಯಾಸ ಮತ್ತು ತರಬೇತಿಯ ಕೊರತೆ ಇರುವುದರಿಂದ, ಈ ದಿಸೆಯಲ್ಲಿ ಸೂಕ್ತ ಕ್ರಮಗಳ ಅಗತ್ಯವಿದೆ. ಶಿಕ್ಷಣ ಮುಂದುವರಿಸಲು ಉಚಿತ ಸವಲತ್ತುಗಳು, ಸ್ವ-ಸಹಾಯ ಸಂಘಟನೆಗಳಿಂದ ಸಾಮುದಾಯಿಕ ಬೆಂಬಲ, ಕಡಿಮೆ ಬಡ್ಡಿ ದರದಲ್ಲಿ ಸಾಲಸೌಲಭ್ಯ, ಜೊತೆಗೆ ಅವರಿಗಾಗಿ ಆಶ್ರಯತಾಣಗಳನ್ನು ನಿರ್ಮಿಸಲು ಸರ್ಕಾರದ ಸಹಯೋಗದೊಂದಿಗೆ ಸಂಘ ಸಂಸ್ಥೆಗಳು ಮುಂದೆ ಬರಬೇಕಾಗಿದೆ.

ವಿಧವೆಯರಿಗೆ ಅನುಕಂಪದ ಬದಲಾಗಿ, ಅವರಿಷ್ಟದಂತೆ ಬದುಕು ಕಟ್ಟಿಕೊಳ್ಳುವ ಮುಕ್ತ ವಾತಾವರಣ ಕಲ್ಪಿಸಬೇಕಿದೆ. ಪ್ರತಿಯೊಬ್ಬ ಪ್ರಜ್ಞಾವಂತ ನಾಗರಿಕ ಈ ದಿಸೆಯಲ್ಲಿ ನೆರವಿನಹಸ್ತ ಚಾಚಬೇಕಿದೆ.

## ವಾಚಕರ ವಾಣಿ

### ನೋಟ್‌ಬುಕ್ ಟ್ಯಾಬ್ಲೆಟ್– ಶಾಲಾ ಮಕ್ಕಳನ್ನೂ ಪರಿಗಣಿಸಿ

ಕೊರೊನಾ ಸೋಂಕಿನ ಆತಂಕ ಸದ್ಯಕ್ಕೆ ಒಂದು ಹಂತಕ್ಕೆ ಬಂದು ನಿಂತಿದ್ದರೂ ಮೂರನೆಯ ಅಲೆಯ ಗುಮ್ಮದ ಭಯ ಇದ್ದೇ ಇದೆ. ಇಂತಹ ಸ್ಥಿತಿಯಲ್ಲಿ ಶೈಕ್ಷಣಿಕ ವ್ಯವಸ್ಥೆ ಅಷ್ಟು ಸುಲಭದಲ್ಲಿ ಹಳಿಗೆ ಬರುವ ಲಕ್ಷಣಗಳು ಕಾಣುತ್ತಿಲ್ಲ. ಹೀಗಿರುವಾಗ ಸರ್ಕಾರವು ಪದವಿ ವಿದ್ಯಾರ್ಥಿಗಳಿಗೆ ಕಲಿಕಾ ಟ್ಯಾಬ್ಲೆಟ್ ಪಿ.ಸಿ.ಗಳನ್ನು ಕೊಡಲು ಉದ್ದೇಶಿಸಿರುವುದು ಅತ್ಯಂತ ಸೂಕ್ತವಾದ ನಿರ್ಧಾರವಾಗಿದೆ.

ಇದೇ ರೀತಿ ಪ್ರಾಥಮಿಕ ಮತ್ತು ಪ್ರೌಢಶಾಲಾ ಮಕ್ಕಳಿಗೂ ನೋಟ್‌ಬುಕ್ ಟ್ಯಾಬ್ಲೆಟ್ ನೀಡುವುದು ಉಚಿತ. ಇದರಿಂದ ಮಕ್ಕಳು ಮನೆಯಲ್ಲೇ ಶಾಲಾ ಶಿಕ್ಷಕರ ಮೂಲಕ ಕಲಿಕೆಯಲ್ಲಿ ನಿರತರಾಗುವುದು ಸುಲಭವಾಗುತ್ತದೆ. ಜೊತೆಗೆ ಪಠ್ಯಪುಸ್ತಕದ ಅಗತ್ಯವೂ ಅಷ್ಟಾಗಿ ಬರದು. ಮುಂದೆ ಶಾಲೆಗಳು ಆರಂಭವಾದಾಗಲೂ ಮಕ್ಕಳು ಈ ಸೌಲಭ್ಯವನ್ನು ಬಳಸಿಕೊಳ್ಳಬಹುದು.

**ತಿರುಪತಿ ನಾಯಕ್,** ಹೊಸನಗರ

### ಈ ತತ್ವ ಪಾಲಿಸೋಣ

ಹೊರದೇಶಗಳಿಂದ ಆಮದು ಮಾಡಿಕೊಳ್ಳುತ್ತಿರುವ ಪೆಟ್ರೋಲಿಯಂ ಉತ್ಪನ್ನಗಳ ಮೇಲೆ ನಾವೆಲ್ಲರೂ ಹೆಚ್ಚು ಅವಲಂಬಿತರಾಗಿದ್ದೇವೆ. ಹೆಚ್ಚು ಹೆಚ್ಚು ಬಳಸಿದಂತೆ ಮುಂದಿನ ಪೀಳಿಗೆಗೆ ಇವು ಸಿಗುವುದಿಲ್ಲ. ಇಂತಹ ಬರಿದಾಗುವ ಸಂಪನ್ಮೂಲಗಳು ಬರೀ ನಮ್ಮ ಪೀಳಿಗೆಗೆ ಖಾಲಿ ಆಗಬಾರದಲ್ಲವೇ? ಈಗಲಾದರೂ ನಾವು ಎಚ್ಚೆತ್ತುಕೊಳ್ಳಬೇಕಾದ ಸಂದರ್ಭ ಬಂದಿದೆ.

ಆಮದಾಗುವ ಪೆಟ್ರೋಲಿಯಂ ಸಂಪನ್ಮೂಲಗಳಿಗೆ ಅಷ್ಟೊಂದು ತೆರಿಗೆ ಕಟ್ಟಿ, ಜಾಗತಿಕ ತಾಪಮಾನ ಹೆಚ್ಚಿಸಿ, ಪ್ರಕೃತಿಯನ್ನು ನಾಶ ಮಾಡುವಂತಹ ಅನೇಕ ಅನಿಲಗಳು ಹೊರಸೂಸುವಂತೆ ಮಾಡಿ, ನಮ್ಮ ಆರೋಗ್ಯವನ್ನು ನಾವೇ ಹಾಳು ಮಾಡಿಕೊಂಡು ಆರ್ಥಿಕವಾಗಿ ದುರ್ಬಲರಾಗುವ ಬದಲು, ನವೀಕರಿಸುವ ಮತ್ತು ಪುನರ್‌ಭರ್ತಿ ಮಾಡುವ ನೈಸರ್ಗಿಕ ಇಂಧನಗಳನ್ನು ಬಳಸಬಹುದಲ್ಲವೇ? ಅಷ್ಟಕ್ಕೂ ಇವು ಬರಿದಾಗದ ಸಂಪನ್ಮೂಲಗಳು. ಇವನ್ನು ಬಳಸುವುದರಿಂದ ನಮಗೆ ಅನೇಕ ಉಪಯೋಗಗಳಿವೆ. ಇವು ಹೊರಸೂಸುವ ಅನಿಲಗಳು ಹೆಚ್ಚು ದುಷ್ಪರಿಣಾಮವನ್ನು ಬೀರುವುದಿಲ್ಲ. ಅದಲ್ಲದೆ ಬೆಲೆಯೂ ಕಡಿಮೆ. ಸೌರಶಕ್ತಿಯಂತಹ ಸಂಪನ್ಮೂಲಗಳನ್ನು ಮನುಷ್ಯ ಎಷ್ಟೇ ಬಳಸಿದರೂ ಪ್ರಕೃತಿಗೆ ಅದನ್ನು ಪುನರ್‌ಭರ್ತಿ ಮಾಡುವ ಸಾಮರ್ಥ್ಯವಿದೆ. ಸಂಪನ್ಮೂಲ ಸಂರಕ್ಷಣೆ ನಮ್ಮೆಲ್ಲರ ಹೊಣೆ. ಅದಕ್ಕಾಗಿ 4R (ರೆಡ್ಯೂಸ್- ಕಡಿತ, ರೀಯೂಸ್– ಮರುಬಳಕೆ, ರೀಜನರೇಟ್- ಪುನರುತ್ಪಾದನೆ, ರಿಸರ್ಚ್– ಸಂಶೋಧನೆ) ತತ್ವವನ್ನು ಪಾಲಿಸುವುದರತ್ತ ನಮ್ಮೆಲ್ಲರ ಹೆಜ್ಜೆ ಇರಲಿ.

**ಅರ್ಚನಾ,** ಅರಕಲಗೂಡು

### ಒಂದೇ ಬಗೆಯ ಅಲೆ

2ಜಿ 3ಜಿ 4ಜಿ... ಮೊಬೈಲ್
ನೆಟ್‌ವರ್ಕ್‌ಗೆ
ಹೋಲಿಕೆಯಾಗುವಂತಿದೆ
ಕೋವಿಡ್ ಒಂದು, ಎರಡು,
ಮೂರನೇ ಅಲೆ...
ಎರಡೂ ತರಂಗ/ಅಲೆಗಳು
ಹೆಚ್ಚಾದಂತೆ
ಅವುಗಳ ವೇಗವೂ ಹೆಚ್ಚು...
ಮೊಬೈಲ್ ವೇಗಕ್ಕಾಗಿ ಹೊಸ
ಸಿಮ್, ಮೊಬೈಲ್ ಮದ್ದು...
ಕೋವಿಡ್ ತಡೆಗಾಗಿ
ಮಾಸ್ಕ್, ಸ್ಯಾನಿಟೈಸರ್,
ಲಸಿಕೆಯೇ ಮದ್ದು...

**ಚೆಲುವರಾಜು ಕೆ.** ಧನಗೆರೆ, ಕೊಳ್ಳೇಗಾಲ

### ಅನ್‌ಲಾಕ್: ಬೇಜವಾಬ್ದಾರಿ ವರ್ತನೆ ಸಲ್ಲ

ಲಾಕ್‌ಡೌನ್ ಇದ್ದಾಗ ಜನರು ಪೊಲೀಸರ ಭಯದಿಂದ ಹೊರಗೆ ತಿರುಗಾಡುವುದನ್ನು ನಿಲ್ಲಿಸಿದ್ದರು. ಆದರೆ ಈಗ ಅನ್‌ಲಾಕ್ ಘೋಷಿಸಿದ್ದೇ ತಡ ಅಗತ್ಯ ಇದ್ದವರು, ಇಲ್ಲದವರು ಎಲ್ಲರೂ ಒಂದೇ ಸಮನೆ ಹೊರಗಡೆ ತಿರುಗಾಡುತ್ತಿರುವುದಕ್ಕೆ, ಕಳೆದ ಎರಡು ದಿನಗಳಿಂದ ಬೆಂಗಳೂರಿನಲ್ಲಿ ಸಂಚಾರ ದಟ್ಟಣೆ ಹೆಚ್ಚಾಗಿರುವುದೇ ನಿದರ್ಶನ. ಇಂತಹ ಬೇಜವಾಬ್ದಾರಿ ವರ್ತನೆಯು ಕೋವಿಡ್ ರೋಗವು ಮತ್ತೆ ಉಲ್ಬಣಗೊಳ್ಳಲು ಕಾರಣವಾಗಬಹುದು. ಇಂತಹ ಆತಂಕದ ಸ್ಥಿತಿಯಲ್ಲಿ ನಮಗೆ ನಾವೇ ನಿಯಂತ್ರಣವನ್ನು ಹೇರಿಕೊಂಡು, ಈ ರೋಗದ ವಿರುದ್ಧದ ಹೋರಾಟದಲ್ಲಿ ನಮ್ಮದೇ ಆದಂತಹ ಪಾತ್ರವನ್ನು ನಿರ್ವಹಿಸಲು ಪ್ರಯತ್ನಿಸೋಣ.

**ರಿಯಾಝ್ ಅಹ್ಮದ್,** ರೋಣ

### ಹೊಸ ಶಿಕ್ಷಣ ನೀತಿ: ಆತುರ ಸಲ್ಲದು

ನೂತನ ರಾಷ್ಟ್ರೀಯ ಶಿಕ್ಷಣ ನೀತಿಯ ಶಿಫಾರಸಿನಂತೆ, 2021- 22ನೇ ಸಾಲಿನಿಂದ ರಾಜ್ಯದ ಪದವಿ ಕಾಲೇಜುಗಳಲ್ಲಿ ನಾಲ್ಕು ವರ್ಷದ ಪದವಿ ಕೋರ್ಸುಗಳನ್ನು ಆರಂಭಿಸಲು ಸರ್ಕಾರ ಚಿಂತನೆ ನಡೆಸಿದೆ. ಇದು ಸ್ವಾಗತಾರ್ಹವಾದರೂ ಕೋವಿಡ್ ಪರಿಸ್ಥಿತಿಯಿಂದ ಜನ ಇನ್ನೂ ಚೇತರಿಸಿಕೊಳ್ಳದಿರುವಾಗ ಈ ಹೊಸ ನೀತಿಯನ್ನು ಪಾಲಿಸುವಲ್ಲಿ ಕೆಲವು ಗೊಂದಲಗಳು ಉಂಟಾಗಬಹುದು. ಕಾಲೇಜುಗಳು ಇದಕ್ಕೆ ಪೂರ್ವಸಿದ್ಧತೆಯಲ್ಲಿ ತೊಡಗಬೇಕು. ಹಾಗಾಗಿ ಕನಿಷ್ಠ ಒಂದು ವರ್ಷವಾದರೂ ಸಮಯಾವಕಾಶ ಬೇಕಾಗುತ್ತದೆ. ಬಹುಮುಖ್ಯವಾಗಿ ಪಠ್ಯಕ್ರಮವನ್ನು ಅಳವಡಿಸುವುದೇ ದೊಡ್ಡ ಮಟ್ಟದ ಕೆಲಸ. ಈ ಕುರಿತ ಸಮಿತಿಗೆ ವರದಿ ನೀಡಲು ಸೂಚಿಸಲಾಗಿದೆ ಸರಿ. ಆದರೆ ಇಲ್ಲಿ ಭಾಷಾ ವಿಷಯಗಳನ್ನಷ್ಟೇ ಅಲ್ಲದೆ ಇತರ ಐಚ್ಛಿಕ ವಿಷಯಗಳನ್ನೂ ಮನದಲ್ಲಿಟ್ಟು ಸಿದ್ಧತೆ ನಡೆಸಬೇಕು ಎಂಬುದನ್ನು ಮರೆಯುವಂತಿಲ್ಲ.

ಈಗಿನ ಸಿಲಬಸ್‌ಗಳನ್ನು ಪರಾಮರ್ಶಿಸಿ, ಬದಲಾಗಬೇಕಾದ, ಹೊಸದಾಗಿ ಅಳವಡಿಸಬೇಕಾದ ವಿಷಯಗಳ ಬಗೆಗೆ ಕೂಲಂಕಷ ಚರ್ಚೆಗಳಾಗಬೇಕು. ಇದಕ್ಕಾಗಿ ಶಿಕ್ಷಣ ತಜ್ಞರ ತಂಡವನ್ನು ಮೊದಲು ನೇಮಿಸಿ, ಹೊಸ ಪಠ್ಯಕ್ರಮವು ವಿದ್ಯಾರ್ಥಿಗಳಿಗೆ ಎಷ್ಟರ ಮಟ್ಟಿಗೆ ಉಪಯುಕ್ತ, ಅಲ್ಲದೆ ಪ್ರಸ್ತುತ ಕಾಲಕ್ಕೆ ಪಠ್ಯವನ್ನು ಯಾವ ಹಂತದಲ್ಲಿ ಸಿದ್ಧಗೊಳಿಸಬೇಕು ಎಂಬೆಲ್ಲ ವಿಚಾರಗಳ ಬಗ್ಗೆ ಚರ್ಚೆಗಳಾಗಬೇಕಿದೆ. ಈಗಿರುವ ಕೆಲವು ಸೆಮಿಸ್ಟರ್‌ಗಳು ಪರೀಕ್ಷೆಗಳ ಭಾಗ್ಯವನ್ನೇ ಕಂಡಿಲ್ಲದಿರುವಾಗ ಹೊಸ ಯೋಜನೆಗಳು ಆತುರವಾಗಿ ಅನುಷ್ಠಾನಗೊಳ್ಳುವುದು ಸೂಕ್ತವಲ್ಲ. ಇದಕ್ಕೂ ಮೊದಲು ಕಾಲೇಜುಗಳಲ್ಲಿ ಮೂಲ ಸೌಲಭ್ಯಗಳ ಕೊರತೆ, ಉಪನ್ಯಾಸಕರ ಕೊರತೆ ಮತ್ತು ಕಾರ್ಯಭಾರ ವ್ಯವಸ್ಥೆಯನ್ನು ಪರಿಶೀಲಿಸುವ ಜರೂರಿದೆ.

**ವಿ.ಶ್ರೀರಾಮ್,** ಬೆಂಗಳೂರು

Printed and published by B A Ravi on behalf of The Printers (Mysore ) Private Ltd., at The Printers ( Mysore ) Private Ltd, Plot Nos. 7-12, Kumbalgodu Industrial Area, Bengaluru-560 074. News Editor: Sudesha Doddapalya (Responsible for selection of news under the PRB Act). Editorial Office: 75, Mahatma Gandhi Road, Bengaluru- 560 001. E-mail: editorpv@prajavani.co.in. Phone: 080 - 45557333, Editorial: 080 - 45557251, Circ: 1800-425-8009, Advt: 1800-425-8008. Also printed at Hubballi-Dharwad, Mangaluru, Kalaburagi, Davanagere, Mysuru and Hosapete. © All rights reserved. Reproduction in whole or in part without permission is prohibited. To know more about The Printers (Mysore) Private Ltd, visit www.printersmysore.com.

# ಕೊರೊನಾವೈರಾಣುವಿನ ಹೊಸ ರೂಪ
# ಡೆಲ್ಟಾ ಪ್ಲಸ್

ಮುಂಬೈನ ಲಸಿಕಾ ಕೇಂದ್ರವೊಂದರಲ್ಲಿ ಮಹಿಳೆಯೊಬ್ಬರಿಗೆ ಅವರ ವಾಹನದಲ್ಲಿಯೇ ಕೋವಿಡ್ ಲಸಿಕೆ ನೀಡಲಾಯಿತು ಎಎಫ್‌ಪಿ ಚಿತ್ರ

**ಭಾರತದಲ್ಲಿ ಕೋವಿಡ್‌ನ** ಎರಡನೇ ಅಲೆ ತೀವ್ರವಾಗಲು ಕಾರಣವಾಗಿದ್ದು ಡೆಲ್ಟಾ (ಬಿ.1.617) ತಳಿಯ ಕೊರೊನಾವೈರಾಣು ಎಂದು ತಜ್ಞರು ಹೇಳಿದ್ದಾರೆ. ಆದರೆ ಈಗ ಡೆಲ್ಟಾ ತಳಿಯ ರೂಪಾಂತರ ತಳಿಯಾದ, 'ಡೆಲ್ಟಾ ಪ್ಲಸ್' (ಬಿ.1.617.2) ದೇಶದ ಕೆಲವೆಡೆ ಕಾಣಿಸಿಕೊಂಡಿದೆ. ವಿಶ್ವದ 9 ದೇಶಗಳಲ್ಲಿ ಈ ತಳಿಯು ಕಾಣಿಸಿಕೊಂಡಿದೆ. ಡೆಲ್ಟಾ ಪ್ಲಸ್ ತಳಿಯು ಒಂದು ಆಸಕ್ತಿದಾಯಕ ತಳಿ ಎಂದಷ್ಟೇ ವಾರದ ಹಿಂದೆ ಕೇಂದ್ರ ಸರ್ಕಾರ ಹೇಳಿತ್ತು. ಆದರೆ ಈಗ, ಇದು ಕಳವಳಕಾರಿ ರೂಪಾಂತರ ತಳಿ ಎಂದು ಘೋಷಿಸಿದೆ.

ಕೊರೊನಾ ವೈರಾಣುವಿನ ಹೊರಕವಚದಲ್ಲಿ ಮುಳ್ಳುಚಾಚಿಕೆಗಳು (ಸ್ಪೈಕ್ ಪ್ರೋಟೀನ್) ಇರುತ್ತವೆ. ವೈರಾಣುಗಳು ಮನುಷ್ಯನ ಜೀವಕೋಶಗಳನ್ನು ಪ್ರವೇಶಿಸಲು ಈ ಮುಳ್ಳು ಚಾಚಿಕೆಗಳು ನೆರವಾಗುತ್ತವೆ. ವೈರಾಣು ಎಷ್ಟು ಕ್ಷಿಪ್ರವಾಗಿ ಹರಡುತ್ತವೆ ಎಂಬುದು ಈ ಮುಳ್ಳುಚಾಚಿಕೆಗಳ ಸಂಖ್ಯೆ ಮತ್ತು ಸ್ವರೂಪವನ್ನು ಆಧರಿಸಿರುತ್ತದೆ. ಮೂಲ ಕೊರೊನಾ ವೈರಾಣುವಿನಲ್ಲಿ ಈ ಮುಳ್ಳುಚಾಚಿಕೆಗಳ ಸಂಖ್ಯೆ ಕಡಿಮೆ ಇತ್ತು. ಹೀಗಾಗಿ ಮೊದಲ ಅಲೆಯಲ್ಲಿ ಸೋಂಕು ನಿಧಾನವಾಗಿ ಹರಡಿತು. ಜಗತ್ತಿನ ವಿವಿಧೆಡೆ ಎರಡನೇ ಅಲೆಯಲ್ಲಿ ಕಾಣಿಸಿಕೊಂಡ ಹೊಸ ತಳಿಯ ವೈರಾಣುವಿನಲ್ಲಿ ಈ ಮುಳ್ಳುಚಾಚಿಕೆಗಳು ಹೆಚ್ಚಾಗಿದ್ದವು. ಹೀಗಾಗಿ ಎರಡನೇ ಅಲೆ ತೀವ್ರವಾಗಿತ್ತು.

ಭಾರತದಲ್ಲಿ ಮೊದಲು ಪತ್ತೆ ಮಾಡಿದ್ದ ಡೆಲ್ಟಾ ತಳಿಯಲ್ಲೂ ಮುಳ್ಳುಚಾಚಿಕೆಗಳು ತೀವ್ರವಾಗಿದ್ದವು. ಹೀಗಾಗಿಯೇ ಎರಡನೇ ಅಲೆ ಅತ್ಯಂತ ಕ್ಷಿಪ್ರವಾಗಿ ಹರಡಿತು. ಡೆಲ್ಟಾ ಪ್ಲಸ್ ತಳಿಯಲ್ಲಿನ ಮುಳ್ಳುಚಾಚಿಕೆಗಳು ಮತ್ತಷ್ಟು ತೀವ್ರವಾಗಿವೆ. ಹೀಗಾಗಿ ಸೋಂಕು ಹರಡುವಿಕೆಗೆ ಈ ತಳಿಯು ಮತ್ತಷ್ಟು ವೇಗ ನೀಡುತ್ತದೆ ಎಂದು ಈ ತಳಿಯ ವಂಶವಾಹಿ ಅಧ್ಯಯನ ನಡೆಸಿರುವ ಭಾರತದ ವಿಜ್ಞಾನಿಗಳು ಹೇಳಿದ್ದಾರೆ.

ಭಾರತೀಯ ವೈದ್ಯಕೀಯ ಸಂಶೋಧನಾ ಪರಿಷತ್ತಿನ ಅಧೀನದಲ್ಲಿರುವ 28 ಪ್ರಯೋಗಾಲಯಗಳಲ್ಲಿ ಈ ತಳಿಯ ವಂಶವಾಹಿ ಅಧ್ಯಯನ ಮುಂದುವರಿಸಲಾಗಿದೆ. ಭಾರತದಲ್ಲಿ ಮಹಾರಾಷ್ಟ್ರದಲ್ಲಿ ಈ ತಳಿಯು ಮೊದಲು ಕಾಣಿಸಿಕೊಂಡಿದ್ದು, ರಾಜ್ಯದ ಎಲ್ಲಾ ಜಿಲ್ಲೆಗಳಿಂದ ತಲಾ 100 ಕೋವಿಡ್ ರೋಗಿಗಳ ಸೋಂಕಿನ ಮಾದರಿಗಳನ್ನು ಈ ಪ್ರಯೋಗಾಲಯಗಳಿಗೆ ಕಳುಹಿಸಲಾಗಿದೆ. ಇವುಗಳಲ್ಲಿ 21ರಷ್ಟು ಮಾದರಿಗಳಲ್ಲಿ ಮಾತ್ರವೇ ಡೆಲ್ಟಾ ಪ್ಲಸ್ ತಳಿ ಪತ್ತೆಯಾಗಿದೆ. ಈ ತಳಿಯು ಅತ್ಯಂತ ಕ್ಷಿಪ್ರವಾಗಿ ಹರಡುವ ಶಕ್ತಿ ಹೊಂದಿರುವ ಕಾರಣದಿಂದಲೇ ಇದನ್ನು ಕಳವಳಕಾರಿ ರೂಪಾಂತರ ತಳಿ ಎಂದು ಪರಿಗಣಿಸಲಾಗಿದೆ.

## ಅಪಾಯಕಾರಿಯೇ?

**ಡೆಲ್ಟಾ** ಪ್ಲಸ್ ತಳಿಯಲ್ಲಿನ ಸ್ಪೈಕ್‌ಪ್ರೋಟೀನ್‌ಗಳು ತೀವ್ರಗಾಮಿ ಸ್ವರೂಪದವು. ಹೀಗಾಗಿ, ಇವು ಅತ್ಯಂತ ಕ್ಷಿಪ್ರವಾಗಿ ಹರಡುವ ಸಾಮರ್ಥ್ಯ ಹೊಂದಿವೆ. ಅಲ್ಲದೆ, ಡೆಲ್ಟಾ ಪ್ಲಸ್ ತಳಿಯ ಇತರ ಕೆಲವು ಗುಣಲಕ್ಷಣಗಳನ್ನು ವಿಜ್ಞಾನಿಗಳು ಗುರುತಿಸಿದ್ದಾರೆ. ದೇಶದಲ್ಲಾಗಲೀ, ವಿಶ್ವದಲ್ಲಾಗಲೀ ಈವರೆಗೆ ಡೆಲ್ಟಾ ಪ್ಲಸ್ ತಳಿಯ ಕಾರಣದಿಂದ ಸಾವು ಸಂಭವಿಸಿದ್ದು ವರದಿಯಾಗಿಲ್ಲ ಎಂಬುದೇ ಸಮಾಧಾನಕರ ಸಂಗತಿ ಎಂದು ವಿಜ್ಞಾನಿಗಳು ಅಭಿಪ್ರಾಯಪಟ್ಟಿದ್ದಾರೆ.

ಈಗ ದೇಶದ ಕೆಲವೇ ರಾಜ್ಯಗಳಲ್ಲಿ, ಒಟ್ಟು ಎರಡಂಕಿಯಷ್ಟು ಪ್ರಕರಣಗಳಲ್ಲಷ್ಟೇ ಡೆಲ್ಟಾ ಪ್ಲಸ್ ತಳಿ ಪತ್ತೆಯಾಗಿದೆ. ಇದನ್ನು ತಕ್ಷಣವೇ ನಿಯಂತ್ರಿಸದಿದ್ದರೆ ಇತರೆಡೆಗೂ ಹರಡುವ ಸಾಧ್ಯತೆ ಇದೆ. ಇದರಿಂದಾಗಿ ದೇಶದಲ್ಲಿ ಕೋವಿಡ್‌ನ ಮೂರನೇ ಅಲೆ ಸೃಷ್ಟಿಯಾಗಬಹುದು ಎಂದು ವಿಜ್ಞಾನಿಗಳು ಕಳವಳ ವ್ಯಕ್ತಪಡಿಸಿದ್ದಾರೆ. ಮಾನವನ ಶ್ವಾಸಕೋಶದ ಜೀವಕೋಶಗಳಿಗೆ ಬಲವಾಗಿ ಅಂಟಿಕೊಳ್ಳುವ ಸಾಮರ್ಥ್ಯವನ್ನು ಡೆಲ್ಟಾ ಪ್ಲಸ್ ತಳಿಯ ಕೊರೊನಾವೈರಾಣು ಹೊಂದಿದೆ. ಇದರಿಂದ ರೋಗದ ತೀವ್ರತೆ ಹೆಚ್ಚುತ್ತದೆಯೇ ಅಥವಾ ಇಲ್ಲವೇ ಎಂಬುದರ ಬಗ್ಗೆ ವಿಜ್ಞಾನಿಗಳು ಪರಿಶೀಲನೆ ನಡೆಸುತ್ತಿದ್ದಾರೆ. ಮನುಷ್ಯನ ದೇಹದಲ್ಲಿನ ಪ್ರತಿಕಾಯಗಳು ಡೆಲ್ಟಾ ಪ್ಲಸ್ ತಳಿಯ ವಿರುದ್ಧ ಕಡಿಮೆ ಪ್ರತಿರೋಧ ತೋರುತ್ತವೆ ಎಂಬುದು ಅಧ್ಯಯನದಿಂದ ಕಪತ್ತೆಯಾಗಿದೆ. ಹೀಗಾಗಿಯೇ ಈ ತಳಿಯನ್ನು ಕಳವಳಕಾರಿ ತಳಿ ಎಂದು ಪರಿಗಣಿಸಲಾಗಿದೆ.

ದೇಶದಲ್ಲಿ ನಾಲ್ಕೈದು ತಿಂಗಳ ನಂತರ ಕೋವಿಡ್‌ನ ಮೂರನೇ ಅಲೆ ಕಾಣಿಸಿಕೊಳ್ಳಬಹುದು ಎಂದು ಅಂದಾಜಿಸಲಾಗಿತ್ತು. ಈ ತಳಿಯ ಕಾರಣದಿಂದ ಶೀಘ್ರದಲ್ಲೇ ಮೂರನೇ ಅಲೆ ತಲೆದೋರುವ ಅಪಾಯವಿದೆ ಎಂದು ವಿಜ್ಞಾನಿಗಳು ಕಳವಳ ವ್ಯಕ್ತಪಡಿಸಿದ್ದಾರೆ.

## ಲಸಿಕೆ ಕೆಲಸ ಮಾಡುತ್ತವೆಯೇ?

**ಭಾರತದಲ್ಲಿ** ಈಗ ಕೋವಿಡ್ ಹರಡದಂತೆ ನೀಡಲಾಗುತ್ತಿರುವ ಕೋವಿಶೀಲ್ಡ್, ಕೋವ್ಯಾಕ್ಸಿನ್ ಮತ್ತು ಸ್ಪುತ್ನಿಕ್-ವಿ ಲಸಿಕೆಗಳು ಡೆಲ್ಟಾ ಪ್ಲಸ್ ತಳಿಯ ವಿರುದ್ಧ ಕೆಲಸ ಮಾಡುತ್ತವೆಯೇ ಎಂಬುದರ ಬಗ್ಗೆ ಸಾಮಾಜಿಕ ಜಾಲತಾಣಗಳಲ್ಲಿ ಚರ್ಚೆ ನಡೆಯುತ್ತಿದೆ. 'ಡೆಲ್ಟಾ ತಳಿಯ ವಿರುದ್ಧ ಈ ಲಸಿಕೆಗಳು ಪರಿಣಾಮಕಾರಿಯಾಗಿ ಕೆಲಸ ಮಾಡುತ್ತಿದ್ದವು. ಡೆಲ್ಟಾ ಪ್ಲಸ್ ತಳಿಯ ವಿರುದ್ಧ ಕೆಲಸ ಮಾಡುತ್ತವೆಯೇ ಎಂಬುದನ್ನು ಈಗಲೇ ಹೇಳಲು ಸಾಧ್ಯವಿಲ್ಲ. ಈ ಬಗ್ಗೆ ಅಧ್ಯಯನಗಳು ನಡೆಯುತ್ತಿವೆ. ಅಧ್ಯಯನಗಳು ಮುಗಿದ ನಂತರ ಈ ಬಗ್ಗೆ ಸ್ಪಷ್ಟವಾದ ಮಾಹಿತಿ ಸಿಗಲಿದೆ' ಎಂದು ಕೇಂದ್ರ ಸರ್ಕಾರ ಹೇಳಿದೆ.

## ಎಲ್ಲೆಲ್ಲಿ ಪತ್ತೆ

ದೇಶದ ಹಲವೆಡೆ ಡೆಲ್ಟಾ ಪ್ಲಸ್ ತಳಿಯ ಒಟ್ಟು 40ಕ್ಕೂ ಹೆಚ್ಚು ಪ್ರಕರಣಗಳು ಪತ್ತೆಯಾಗಿವೆ. ಈ ತಳಿಯ ಕೊರೊನಾವೈರಾಣುವಿಗೆ ತುತ್ತಾದವರಿಗೆ ಚಿಕಿತ್ಸೆ ಮುಂದುವರಿಸಲಾಗಿದೆ.

**45,000+** ಡೆಲ್ಟಾಪ್ಲಸ್ ಅವತರಣಿಕೆಗಾಗಿ ದೇಶದಾದ್ಯಂತ ನಡೆದ ವಂಶವಾಹಿ ಅಧ್ಯಯನಗಳ ಸಂಖ್ಯೆ

**40** ದೇಶದಾದ್ಯಂತ ಈಗ ಪತ್ತೆಯಾಗಿರುವ ಡೆಲ್ಟಾ ಪ್ಲಸ್ ಪ್ರಕರಣಗಳು

**ಮಹಾರಾಷ್ಟ್ರ:** ರತ್ನಗಿರಿ ಮತ್ತು ಜಲಗಾಂವ್ ಜಿಲ್ಲೆಗಳಲ್ಲಿ ಒಟ್ಟು 21 ಡೆಲ್ಟಾ ಪ್ಲಸ್ ತಳಿಯ ಪ್ರಕರಣಗಳು ಪತ್ತೆಯಾಗಿವೆ

**ಮಧ್ಯಪ್ರದೇಶ:** ರಾಜ್ಯದ ಕೆಲವು ಜಿಲ್ಲೆಗಳಲ್ಲಿ ಒಟ್ಟು ಆರು ಪ್ರಕರಣಗಳು ಪತ್ತೆಯಾಗಿವೆ. ರಾಜ್ಯದ ರಾಜಧಾನಿ ಭೋಪಾಲ್ ಮತ್ತು ಶಿವಪುರಿ ಜಿಲ್ಲೆಗಳಲ್ಲಿ ಮಾತ್ರ ಡೆಲ್ಟಾ ಪ್ಲಸ್ ಪ್ರಕರಣಗಳು ಕಾಣಿಸಿಕೊಂಡಿವೆ

**ಕೇರಳ:** ಕೇರಳದ ಪತ್ತನಂತಿಟ್ಟ ಮತ್ತು ಪಾಲಕ್ಕಾಡ್‌ನಲ್ಲಿ ಒಟ್ಟು ಮೂರು ಡೆಲ್ಟಾ ಪ್ಲಸ್ ಪ್ರಕರಣಗಳು ಪತ್ತೆಯಾಗಿವೆ. ಮೂರು ಪ್ರಕರಣಗಳಲ್ಲಿ ನಾಲ್ಕು ವರ್ಷದ ಬಾಲಕನೂ ಸೇರಿದ್ದಾನೆ

**ಕರ್ನಾಟಕ:** ರಾಜ್ಯದ ಮೊದಲ ಡೆಲ್ಟಾ ಪ್ಲಸ್ ತಳಿ ಪ್ರಕರಣವು ಮೈಸೂರಿನಲ್ಲಿ ಪತ್ತೆಯಾಗಿದೆ ಎಂದು ಬುಧವಾರವಷ್ಟೇ ರಾಜ್ಯ ಸರ್ಕಾರ ಘೋಷಿಸಿದೆ

**ತಮಿಳುನಾಡು:** ತಮಿಳುನಾಡಿನಲ್ಲಿ ಈವರೆಗೆ ಡೆಲ್ಟಾ ಪ್ಲಸ್ ತಳಿಯ ಮೂರು ಪ್ರಕರಣಗಳು ಪತ್ತೆಯಾಗಿವೆ ಎಂದು ವರದಿಯಾಗಿದೆ. ಆದರೆ ಹೆಚ್ಚಿನ ಮಾಹಿತಿ ಲಭ್ಯವಿಲ್ಲ

**ಆಂಧ್ರಪ್ರದೇಶ, ಪಂಜಾಬ್:** ಎರಡೂ ರಾಜ್ಯಗಳಲ್ಲಿ ತಲಾ ಒಂದು ಪ್ರಕರಣವಷ್ಟೇ ಪತ್ತೆಯಾಗಿದೆ. ಹೆಚ್ಚಿನ ಮಾಹಿತಿ ಲಭ್ಯವಿಲ್ಲ

**ಜಮ್ಮು:** ಜಮ್ಮುವಿನಲ್ಲಿ ಈವರೆಗೆ ಡೆಲ್ಟಾ ಪ್ಲಸ್ ತಳಿಯ ಒಂದು ಪ್ರಕರಣ ಪತ್ತೆಯಾಗಿದೆ. ಹೆಚ್ಚಿನ ಮಾಹಿತಿ ಲಭ್ಯವಿಲ್ಲ

- ಉಳಿದ ಪ್ರಕರಣಗಳು ಎಲ್ಲೆಲ್ಲಿಯವು ಎಂಬುದರ ಬಗ್ಗೆ ಸ್ಪಷ್ಟ ಮಾಹಿತಿ ಲಭ್ಯವಿಲ್ಲ

ಆಧಾರ: ಪಿಟಿಐ, ರಾಯಿಟರ್ಸ್

## ಮೂರು ರಾಜ್ಯಗಳಲ್ಲಿ ಕಟ್ಟೆಚ್ಚರ

**'ಡೆಲ್ಟಾ ಪ್ಲಸ್'** ಸೋಂಕಿತ ರೋಗಿಗಳು ಕಂಡುಬರುವ ಜಿಲ್ಲೆಗಳು ಮತ್ತು ಕ್ಲಸ್ಟರ್‌ಗಳಲ್ಲಿ ತಕ್ಷಣ ನಿಯಂತ್ರಣ ಕ್ರಮಗಳನ್ನು ಕೈಗೊಳ್ಳುವಂತೆ ಕೇಂದ್ರ ಸರ್ಕಾರವು ಮಹಾರಾಷ್ಟ್ರ, ಮಧ್ಯಪ್ರದೇಶ ಮತ್ತು ಕೇರಳ ಸರ್ಕಾರಗಳಿಗೆ ಸಲಹೆ ನೀಡಿದೆ.

ಈ ರೂಪಾಂತರಿ ತಳಿಯ ಬಗ್ಗೆ ಹೆಚ್ಚು ಆತಂಕಪಡಬೇಕಿಲ್ಲ ಎಂದು ಕೇಂದ್ರ ಆರೋಗ್ಯ ಕಾರ್ಯದರ್ಶಿ ರಾಜೇಶ್ ಭೂಷಣ್ ಅವರು ಮೊದಲು ಹೇಳಿದ್ದರು. ಆದರೆ ರೂಪಾಂತರವು ಆತಂಕಕಾರಿ ಎಂದು ಸರ್ಕಾರ ಸ್ಪಷ್ಟನೆ ನೀಡಿದೆ. ರತ್ನಗಿರಿ ಜಿಲ್ಲೆಯೊಂದರಲ್ಲೇ 16 ಪ್ರಕರಣ ದಾಖಲಾಗಿವೆ. ವಿಶೇಷವೆಂದರೆ, ಪ್ರಮುಖ ನಗರಗಳಲ್ಲಿ ಇದರ ಕುರುಹು ಪತ್ತೆಯಾಗಿಲ್ಲ.

ಡೆಲ್ಟಾ ಪ್ಲಸ್ ರೂಪಾಂತರ ಕಂಡುಬರುವ ಜಿಲ್ಲೆಗಳು ಮತ್ತು ಕ್ಲಸ್ಟರ್‌ಗಳಲ್ಲಿ ಸೋಂಕು ಪರೀಕ್ಷೆ, ಸೋಂಕು ಪತ್ತೆ ಮತ್ತು ಲಸಿಕಾ ಕಾರ್ಯಕ್ರಮಗಳನ್ನು ವೇಗಗೊಳಿಸುವಂತೆ ಕೇಂದ್ರ ಸರ್ಕಾರ ಸೂಚಿಸಿದೆ. ಜನಸಂದಣಿಯನ್ನು ತಡೆಯುವುದು ಮತ್ತು ಜನರ ಬೆರೆಯುವಿಕೆಯನ್ನು ನಿಗ್ರಹಿಸುವಂತೆ ರಾಜ್ಯ ಸರ್ಕಾರಗಳಿಗೆ ತಿಳಿಸಿದೆ.

ಸಕ್ರಿಯ ರೋಗಿಗಳ ಪರೀಕ್ಷಾ ಮಾದರಿಗಳನ್ನು ತಕ್ಷಣವೇ ಗೊತ್ತುಪಡಿಸಿದ ಐಎನ್‌ಎಸ್‌ಎಸಿಒಜಿ ಪ್ರಯೋಗಾಲಯಗಳಿಗೆ ಕಳುಹಿಸಲಾಗಿದೆಯೇ ಎಂದು ಖಚಿತಪಡಿಸಿಕೊಳ್ಳಿ. ಇದರಿಂದ ವೈದ್ಯಕೀಯ ಸೋಂಕುಶಾಸ್ತ್ರೀಯವಾಗಿ ಪರಸ್ಪರ ಸಂಬಂಧಗಳನ್ನು ಪತ್ತೆಮಾಡಬಹುದು ಎಂದು ಸರ್ಕಾರ ತಿಳಿಸಿದೆ.

**ಎಲ್ಲೆಲ್ಲಿ ಪತ್ತೆ?**

ಡೆಲ್ಟಾ ಪ್ಲಸ್ ರೂಪಾಂತರ ಪತ್ತೆಯಾದ ಒಂಬತ್ತು ದೇಶಗಳಲ್ಲಿ ಭಾರತವೂ ಸೇರಿದೆ ಎಂದು ಆರೋಗ್ಯ ಸಚಿವಾಲಯ ಹೇಳಿದೆ.




ಚೀನಾ, ಅಮೆರಿಕ, ಆಫ್ರಿಕಾ, ಸ್ಕ್ಯಾಂಡಿನೇವಿಯಾ, ಜಪಾನ್ ಮತ್ತು ಪೆಸಿಫಿಕ್ ರಿಮ್ ದೇಶಗಳಲ್ಲಿ ಡೆಲ್ಟಾ ರೂಪಾಂತರವು ಏಕಾಏಕಿ ದೃಢಪಟ್ಟಿತ್ತು. ಇದು ಹೆಚ್ಚು ಹರಡುವಂತೆ ಕಂಡುಬರುತ್ತದೆ ಮತ್ತು ಹೆಚ್ಚು ಗಂಭೀರ ಕಾಯಿಲೆಗೆ ಕಾರಣವಾಗುತ್ತದೆ ಎಂದು ವಿಜ್ಞಾನಿಗಳು ವರದಿ ಮಾಡಿದ್ದರು.

ಬ್ರಿಟನ್‌ನಲ್ಲಿ ಈ ತಳಿಯು ವ್ಯಾಪಕವಾಗಿ ಹರಡಿದೆ ಎನ್ನಲಾಗಿದೆ. ಬ್ರಿಟನ್‌ನಲ್ಲಿ ಈವರೆಗೆ ಡೆಲ್ಟಾ ಪ್ಲಸ್ ತಳಿಯ 41 ಪ್ರಕರಣಗಳನ್ನು ಪತ್ತೆ ಮಾಡಲಾಗಿದೆ. ಡೆಲ್ಟಾ ಪ್ಲಸ್ ಸೋಂಕಿಗೆ ತುತ್ತಾಗಿರುವವರನ್ನು ಆಸ್ಪತ್ರೆಗಳಲ್ಲಿ ಐಸೊಲೇಷನ್‌ನಲ್ಲಿ ಇರಿಸಲಾಗಿದೆ. 41 ಸೋಂಕಿತರು ಸಂಪರ್ಕಿಸಿದ್ದವರನ್ನು ಮತ್ತು ಅವರ ಸಂಚಾರ ವಿವರವನ್ನು ಕಲೆ ಹಾಕಲಾಗಿದೆ.

ಸೋಂಕಿತರ ಸಂಪರ್ಕಕ್ಕೆ ಬಂದಿದ್ದವರನ್ನು ಆರ್‌ಟಿಪಿಸಿಆರ್ ಪರೀಕ್ಷೆಗೆ ಒಳಪಡಿಸಲಾಗಿದೆ. ಅವರಲ್ಲಿ ಕೋವಿಡ್ ತಗುಲಿದ್ದವರ ಗಂಟಲ ದ್ರವದ ಮಾದರಿಯನ್ನು ವಂಶವಾಹಿ ಪರೀಕ್ಷೆಗೆ ಕಳುಹಿಸಲಾಗಿದೆ.

ಗೋಪ್ಯತೆ ನೀತಿ ತನಿಖೆ ಪ್ರಶ್ನಿಸಿ ಫೇಸ್‌ಬುಕ್ ಮತ್ತು ವಾಟ್ಸ್‌ಆ್ಯಪ್ ಅರ್ಜಿ

# ಸಿಸಿಐ ನೋಟಿಸ್‌ಗೆ ತಡೆ ನಿರಾಕರಣೆ

ಪ್ರಜಾವಾಣಿ ವಾರ್ತೆ

**ನವದೆಹಲಿ:** ಫೇಸ್‌ಬುಕ್ ಮತ್ತು ವಾಟ್ಸ್‌ಆ್ಯಪ್‌ಗೆ ಭಾರತೀಯ ಸ್ಪರ್ಧಾ ಆಯೋಗವು (ಸಿಸಿಐ) ನೀಡಿರುವ ನೋಟಿಸ್‌ಗೆ ತಡೆಯಾಜ್ಞೆ ನೀಡಲು ದೆಹಲಿ ಹೈಕೋರ್ಟ್ ನಿರಾಕರಿಸಿದೆ. ಪರಿಷ್ಕೃತ ಗೋಪ್ಯತೆ ನೀತಿಯ ಕುರಿತು ಮಾರ್ಚ್‌ನಲ್ಲಿ ಆದೇಶಿಸಲಾದ ತನಿಖೆಗೆ ಸಂಬಂಧಿಸಿದಂತೆ ಕೆಲವು ಮಾಹಿತಿಯನ್ನು ಒದಗಿಸುವಂತೆ ಫೇಸ್‌ಬುಕ್ ಒಡೆತನದ ವಾಟ್ಸ್‌ಆ್ಯಪ್‌ಗೆ ಭಾರತದ ಸ್ಪರ್ಧಾ ಆಯೋಗ ಸೂಚಿಸಿತ್ತು.

'ನೋಟಿಸ್‌ಗೆ ವಿಭಾಗೀಯ ನ್ಯಾಯಪೀಠ ತಡೆ ನೀಡಿಲ್ಲ. ಈ ಹಂತದಲ್ಲಿ ತಡೆ ನೀಡುವುದಿಲ್ಲ' ಎಂದು ನ್ಯಾಯಪೀಠ ಮಂಗಳವಾರ ತಿಳಿಸಿದ್ದು, ಬುಧವಾರ ಇದರ ಪ್ರತಿ ಲಭ್ಯವಾಗಿದೆ. ನ್ಯಾಯಮೂರ್ತಿಗಳಾದ ಅನುಪ್ ಜೆ. ಭಂಭಾನಿ ಮತ್ತು ಜಸ್ಮೀತ್ ಸಿಂಗ್ ಅವರ ರಜಾದಿನದ ನ್ಯಾಯಪೀಠ ವಿಚಾರಣೆ ನಡೆಸಿತು. ತನಿಖೆಯ ಭಾಗವಾಗಿ, ಜೂನ್ 4ರಂದು ಹೊಸ ನೋಟಿಸ್ ನೀಡಿರುವುದು ಕಾನೂನಿಗೆ ಅನುಗುಣವಾಗಿದೆ ಎಂದು ಹೆಚ್ಚುವರಿ ಸಾಲಿಸಿಟರ್ ಜನರಲ್ ಅಮನ್ ಲೇಖಿ ಅವರು ತಿಳಿಸಿದ್ದಾರೆ ಎಂದು ಪೀಠ ಹೇಳಿತು. 'ವರದಿಯನ್ನು ಸಿದ್ಧಪಡಿಸಿದ ನಂತರ ಅದನ್ನು ಸಿಸಿಐಗೆ ರವಾನಿಸಲಾಗುವುದು' ಎಂದು ಸಿಐಐ ಪರ ಹಾಜರಿದ್ದ ಸಾಲಿಸಿಟರ್ ಜನರಲ್ ತಿಳಿಸಿದರು. ವಿಚಾರಣೆಯ ಮುಂದಿನ ದಿನಾಂಕದ ಮೊದಲು ವರದಿ ಪೂರ್ಣಗೊಳ್ಳುವುದಿಲ್ಲ ಎಂದೂ ತಿಳಿಸಿದ್ದಾರೆ.

ಸ್ವಯಂ ಪ್ರೇರಿತವಾಗಿ ದಾಖಲಿಸಿಕೊಂಡ ಪ್ರಕರಣದಲ್ಲಿ ಸಿಸಿಐ ಮಹಾನಿರ್ದೇಶಕರು ತನಿಖೆಯ ಭಾಗವಾಗಿಯೇ ಜೂನ್‌ನಲ್ಲಿ ನೋಟಿಸ್ ನೀಡಿದ್ದಾರೆ ಎಂದು ಕೋರ್ಟ್ ಹೇಳಿದೆ. ಈ ನೋಟಿಸ್ ಪ್ರಶ್ನಿಸಿ ಅರ್ಜಿದಾರರು ತಡೆ ನೀಡುವಂತೆ ಕೋರಿದ್ದರು. ವಾಟ್ಸ್‌ಅಪ್ ಮತ್ತು ಫೇಸ್‌ಬುಕ್‌ಗಳಿಗೆ ಕ್ರಮವಾಗಿ ಜೂನ್ 4 ಮತ್ತು ಜೂನ್ 8 ರಂದು ನೋಟಿಸ್ ನೀಡಲಾಗಿತ್ತು.

ಫೇಸ್‌ಬುಕ್ ಮತ್ತು ವಾಟ್ಸ್‌ಆ್ಯಪ್ ಸಲ್ಲಿಸಿರುವ ಮೇಲ್ಮನವಿಯನ್ನು ಜುಲೈ 9ರಂದು ವಿಭಾಗೀಯ ಪೀಠದಲ್ಲಿ ಪರಿಗಣಿಸುವಂತೆ ನಿರ್ದೇಶಿಸಿದ್ದೇವೆ ಎಂದು ನ್ಯಾಯಮೂರ್ತಿಗಳು ಹೇಳಿದರು.

## 'ಆತುರದ ಕ್ರಮಕ್ಕೆ ವಿರೋಧ'

'ಸಮಸ್ಯೆ ಎಂದರೆ, ವಾಟ್ಸ್‌ಆ್ಯಪ್‌ನವರು ಜೂನ್ 4ರಂದು ಹೊಸ ನೋಟಿಸ್ ಸ್ವೀಕರಿಸಿದ್ದಾರೆ ಮತ್ತು ಪ್ರತಿಕ್ರಿಯಿಸಲು ಅವರಿಗೆ ನೀಡಿರುವ ಕೊನೆಯ ದಿನಾಂಕ ಜೂನ್ 21' ಎಂದು ವಾಟ್ಸ್‌ಆ್ಯಪ್ ಪರ ಹಾಜರಿದ್ದ ವಕೀಲ ಹರೀಶ್ ಸಾಳ್ವೆ ಅವರು ಹೇಳಿದ್ದಾರೆ.

ಗೋಪ್ಯತೆ ನೀತಿ ಪ್ರಶ್ನಿಸಿರುವ ಹಲವು ಅರ್ಜಿಗಳು ಈಗಾಗಲೇ ಸುಪ್ರೀಂ ಕೋರ್ಟ್ ಮತ್ತು ಹೈಕೋರ್ಟ್‌ನಲ್ಲಿವೆ. ಸರ್ಕಾರ ಕೂಡ ಇದನ್ನು ಪರಿಶೀಲಿಸುತ್ತಿದೆ ಎಂದು ಅವರು ಹೇಳಿದ್ದಾರೆ.

'ಇಲ್ಲಿ ಪ್ರಶ್ನೆ ಇರುವುದು ಸ್ವಾಮ್ಯಕ್ಕೆ ಸಂಬಂಧಪಟ್ಟಂತೆ. ಇದು ದೇಶದ ಅತ್ಯುನ್ನತ ನ್ಯಾಯಾಲಯವಾದ ಸುಪ್ರೀಂ ಕೋರ್ಟ್‌ನ ಪರಿಶೀಲನೆಯಲ್ಲಿದೆ' ಎಂದು ಫೇಸ್‌ಬುಕ್ ಪರವಾಗಿ ಹಾಜರಾದ ಹಿರಿಯ ವಕೀಲ ಮುಕುಲ್ ರೋಹಟಗಿ ಹೇಳಿದರು.

# ಉಪ ಮುಖ್ಯಮಂತ್ರಿ ಹುದ್ದೆಗೆ ನಿಶಾದ್ ಪಾರ್ಟಿ ಬೇಡಿಕೆ

**ಲಖನೌ:** ಉತ್ತರ ಪ್ರದೇಶದಲ್ಲಿ ಮುಂದಿನ ವಿಧಾನಸಭಾ ಚುನಾವಣೆಯಲ್ಲಿ ಬಿಜೆಪಿ ಸರ್ಕಾರ ರಚಿಸಿದರೆ, ಉಪಮುಖ್ಯಮಂತ್ರಿ ಸ್ಥಾನವನ್ನು ತಮಗೆ ಬಿಟ್ಟುಕೊಡಬೇಕು ಎಂದು ಬಿಜೆಪಿಯ ಪ್ರಮುಖ ಮಿತ್ರಪಕ್ಷ 'ನಿಶಾದ್ ಪಾರ್ಟಿ'ಯ ಅಧ್ಯಕ್ಷ ಸಂಜಯ್ ನಿಶಾದ್ ಬೇಡಿಕೆ ಇಟ್ಟಿದ್ದಾರೆ. ಈ ಹುದ್ದೆಯನ್ನು ನೀಡದಿದ್ದರೆ ಮೈತ್ರಿಕೂಟದಿಂದ ಹೊರ ನಡೆಯುವ ಬೆದರಿಕೆಯನ್ನೂ ಒಡ್ಡಿದ್ದಾರೆ.

ಉತ್ತರ ಪ್ರದೇಶದಲ್ಲಿ ಬಿಜೆಪಿ ನಾಯಕರ ನಡುವೆ ಮೂಡಿರುವ ವೈಮನಸ್ಸನ್ನು ಶಮನ ಮಾಡುವಲ್ಲಿ ಬಿಜೆಪಿ ನಾಯಕರು ಶ್ರಮಿಸುತ್ತಿರುವ ಸಂದರ್ಭದಲ್ಲೇ ಈ ಬೆಳವಣಿಗೆಯೂ ನಡೆದಿದೆ.

'ಉತ್ತರ ಪ್ರದೇಶದ ಒಟ್ಟು ಮತದಾರರಲ್ಲಿ ಶೇ 18ರಷ್ಟು ನಿಶಾದ್ ಸಮುದಾಯಕ್ಕೆ ಸೇರಿರುವವರು. ಅವರು ಸುಮಾರು 152 ವಿಧಾನಸಭಾ ಕ್ಷೇತ್ರಗಳಲ್ಲಿ ಪ್ರಭಾವ ಹೊಂದಿದ್ದಾರೆ. 2022ರ ಚುನಾವಣೆಯಲ್ಲಿ ಬಿಜೆಪಿ ಅಧಿಕಾರಕ್ಕೆ ಮರಳಬೇಕೆಂದರೆ ನನ್ನನ್ನು ಉಪ ಮುಖ್ಯಮಂತ್ರಿ ಅಭ್ಯರ್ಥಿ ಎಂದು ಘೋಷಿಸಬೇಕು' ಎಂದು ಸಂಜಯ್ ಅವರು ಮಾಧ್ಯಮದವರ ಮುಂದೆ ಹೇಳಿದ್ದಾರೆ. ಬಿಜೆಪಿಯ ರಾಷ್ಟ್ರಮಟ್ಟದ ನಾಯಕರ ಮುಂದೆಯೂ ಅವರು ಈ ಬೇಡಿಕೆ ಇರಿಸಿದ್ದಾರೆ.

## ಪಿವಿ ಫ್ಯಾಕ್ಟ್ ಚೆಕ್

ಮಾಹಿತಿ/ವಿಡಿಯೊ ಕಳುಹಿಸಬೇಕಾದ ಸಂಖ್ಯೆ 9606038256

'ದೇಶದಲ್ಲಿ ಮುಸ್ಲಿಮರು, ಕ್ರೈಸ್ತಧರ್ಮೀಯರು ಮತ್ತು ಬೌದ್ಧರು ಹಬ್ಬಗಳನ್ನು ಆಚರಿಸುವುದನ್ನು ಆಯಾ ಧರ್ಮದ ಗುರುಗಳು ನಿರ್ಧರಿಸುತ್ತಾರೆ. ಆದರೆ ಹಿಂದೂಗಳ ಹಬ್ಬವನ್ನು ನ್ಯಾಯಾಲಯಗಳು ನಿರ್ಧರಿಸುತ್ತವೆ. ಇದು ತಾರತಮ್ಯವಲ್ಲವೇ? ಇದಕ್ಕೆ ಕಾರಣವಾಗಿರುವ ಸಂವಿಧಾನದ 25, 26, 27, 28, 29, 30 ಮತ್ತು 31ನೇ ವಿಧಿಗಳಿಗೆ ತಿದ್ದುಪಡಿ ತರಬೇಕು. ಸಂವಿಧಾನಕ್ಕೆ ತಿದ್ದುಪಡಿ ತರಬೇಕು' ಎಂದು ಸುಪ್ರೀಂ ಕೋರ್ಟ್‌ನ ನಿವೃತ್ತ ಮುಖ್ಯ ನ್ಯಾಯಮೂರ್ತಿ ರಂಜನ್ ಗೊಗೊಯಿ ಅವರು ಮಾಡಿದ್ದಾರೆ ಎನ್ನಲಾದ ಟ್ವೀಟ್‌ನ ಸ್ಕ್ರೀನ್‌ಶಾಟ್ ಸಾಮಾಜಿಕ ಜಾಲತಾಣಗಳಲ್ಲಿ ವೈರಲ್ ಆಗಿದೆ. @RanjanGogoii ಮತ್ತು @SGBJP ಎಂಬ ಹ್ಯಾಂಡ್ಲರ್‌ಗಳಿಂದ ಈ ಟ್ವೀಟ್ ಮಾಡಲಾಗಿದೆ.

'ಇದು ಸುಳ್ಳುಸುದ್ದಿ. ರಂಜನ್ ಗೊಗೊಯಿ ಅವರ ಹೆಸರಿನಲ್ಲಿ ಕಿಡಿಗೇಡಿಗಳು ಈ ಟ್ವೀಟ್ ಮಾಡಿದ್ದಾರೆ. ಇದೇ ವಿವರ ಇರುವ ಟ್ವೀಟ್ ಅನ್ನು 2020ರ ಮಾರ್ಚ್ 26ರಂದು ಪುಷ್ಪೇಂದ್ರ ಕುಲಶ್ರೇಷ್ಠ ಎಂಬುವವರು ಮಾಡಿದ್ದರು. ಅದರಲ್ಲಿದ್ದ ಪಠ್ಯವನ್ನೇ ಪೇಸ್ಟ್ ಮಾಡಿ @RanjanGogoii ಮತ್ತು @SGBJP ಹ್ಯಾಂಡ್ಲರ್‌ಗಳಲ್ಲಿ ಟ್ವೀಟ್ ಮಾಡಲಾಗಿದೆ. @RanjanGogoii ಎಂಬ ಹ್ಯಾಂಡ್ಲರ್‌ನ ಖಾತೆಯನ್ನು ಡಿಲೀಟ್ ಮಾಡಲಾಗಿದೆ. @SGBJP ಎಂಬ ಹ್ಯಾಂಡ್ಲರ್‌ನ ಅನ್ನು ಟ್ವಿಟರ್ ಸ್ಥಗಿತಗೊಳಿಸಿದೆ. ಟ್ವಿಟರ್‌ನ ನಿಯಮಗಳನ್ನು ಉಲ್ಲಂಘಿಸಿದ ಕಾರಣಕ್ಕೆ ಈ ಖಾತೆಯನ್ನು ಸ್ಥಗಿತಗೊಳಿಸಲಾಗಿದೆ. ಈ ಎರಡೂ ಖಾತೆಗಳು ನಿವೃತ್ತ ನ್ಯಾಯಮೂರ್ತಿ ರಂಜನ್ ಗೊಗೊಯಿ ಅವರದ್ದಲ್ಲ ಎಂಬುದು ದೃಢಪಟ್ಟಿದೆ' ಎಂದು ದಿ ಲಾಜಿಕಲ್ ಇಂಡಿಯನ್ ಫ್ಯಾಕ್ಟ್‌ಚೆಕ್ ಪ್ರಕಟಿಸಿದೆ.

## ಗುಂಡಣ್ಣ




## ಬೆರಗಿನ ಬೆಳಕು
ಗುರುರಾಜ ಕರಜಗಿ

### ಆಶ್ರಮದ ಕಡೆಗೆ ಪಯಣ

**ಬೋಧಿಸತ್ವ** ವೆಸ್ಸಂತರ ಹೆಂಡತಿ ಮಕ್ಕಳನ್ನು ಕರೆದುಕೊಂಡು ರಥದಲ್ಲಿ ಕುಳಿತು ಸಿವಿ ರಾಷ್ಟ್ರದಿಂದ ಹೊರಟ. ಅವನಿಗೆ ತಿಳಿಯದಂತೆ, ಮುಂದೆ ಅವನಿಗೆ ಅನುಕೂಲವಾಗಲೆಂದು ರಾಣಿ ಪುಸತಿದೇವಿ ಮತ್ತೆರಡು ರಥಗಳಲ್ಲಿ ಅಪಾರವಾದ ಧನಕನಕಗಳನ್ನು ತುಂಬಿ ಅವನ ರಥದ ಹಿಂದೆ ಕಳುಹಿಸಿದಳು. ನಗರವನ್ನು ದಾಟಿದ ಮೇಲೆ ಅದನ್ನು ಮತ್ತೊಮ್ಮೆ ನೋಡಬೇಕೆಂಬ ಇಚ್ಛೆಯಿಂದ ರಥವನ್ನು ನಗರದ ಕಡೆಗೆ ತಿರುಗಿಸಿದ. ಅರಮನೆಯನ್ನು ನೋಡಿದ, ತಂದೆ-ತಾಯಿಗಳ ವಿಶೇಷ ನಿವಾಸಗಳನ್ನು ಕಂಡ. ಅವನ ಕರುಣೆಯಿಂದಾಗಿ ಭೂಮಿ ನಡುಗಿತು. ಇನ್ನೂ ಹೆಚ್ಚು ಹೊತ್ತು ಹಾಗೆಯೇ ಕರುಣೆ ಉಕ್ಕಿದರೆ ನಗರಕ್ಕೆ ಅಪಾಯವಾದೀತೆಂದು ಮರಳಿ ರಥವನ್ನು ತಿರುಗಿಸಿ ಓಡಿಸಿದ. ಹೆಂಡತಿಗೆ ಹೇಳಿದ, 'ಭದ್ರೆ, ಹಿಂದೆ ನೋಡುತ್ತಿರು. ನನ್ನಿಂದ ಏನಾದರೂ ಅಪೇಕ್ಷೆ ಮಾಡುವ ಯಾಚಕರು ಬಂದರೆ ಅವರಿಗೆ ನಿರಾಸೆ ಮಾಡಬೇಡ. ನಿನ್ನ ಬಳಿ ಇರುವ ಆಭರಣಗಳನ್ನು ಕೊಟ್ಟುಬಿಡು'. ಆಕೆ ಹಿಂತಿರುಗಿ, 'ಆರ್ಯ, ನಮ್ಮ ಹಿಂದೆ ಎರಡು ರಥಗಳು ಬರುತ್ತಿವೆ. ಬಹುಶಃ ಅದನ್ನು ಅತ್ತೆಯವರೇ ಕಳುಹಿಸಿರಬೇಕು' ಎಂದಳು. ಅಷ್ಟು ಹೊತ್ತಿಗೆ ಕೆಲವು ಯಾಚಕರು ಓಡಿ ಬಂದು, 'ರಾಜಕುಮಾರ, ನೀನು ನಗರದಲ್ಲಿ ದಾನಮಾಡಿದಾಗ ನಾವು ಇರಲಿಲ್ಲ. ನೀನು ದೇಶತ್ಯಾಗ ಮಾಡುತ್ತಿದ್ದೀ ಎಂದು ತಿಳಿದು ನಿನ್ನ ಹಿಂದೆಯೇ ಓಡಿ ಬಂದೆವು. ದಯವಿಟ್ಟು ನಮಗೆ ಏನಾದರೂ ದಾನ ಮಾಡು' ಎಂದು ಕೇಳಿದರು.

ವೆಸ್ಸಂತರ ಕೇಳಿದವರಿಗೆಲ್ಲ, ಹಿಂದಿದ್ದ ರಥಗಳಲ್ಲಿಯ ವಸ್ತುಗಳನ್ನು ದಾನಮಾಡುತ್ತ ಬಂದ. ಅವನ ಪರೀಕ್ಷೆಗೋ ಏನೊ ಮತ್ತಷ್ಟು ಜನರು ಬಂದರು. ಅವರಿಗೆ ಹಿಂದಿನ ರಥದ ಕುದುರೆಗಳನ್ನು, ರಥಗಳನ್ನು ದಾನಮಾಡಿಬಿಟ್ಟ. ಮುಂದೆ ಸಾಗುತ್ತಿದ್ದಾಗ, ನಾಲ್ಕು ಜನ ಬಂದು ಅವನ ರಥದ ನಾಲ್ಕು ಕುದುರೆಗಳನ್ನು ಬೇಡಿ ಪಡೆದುಕೊಂಡು ಹೋದರು. ರಥ ಹಾಗೆಯೇ ನಿಂತುಬಿಟ್ಟಿತು. ಅಷ್ಟರಲ್ಲಿ, ಇದನ್ನು ಕಂಡ ದೇವದೂತರು ಓಡಿಬಂದು ಕುದುರೆಗಳ ರೂಪ ಧರಿಸಿ ರಥವನ್ನು ಎಳೆದುಕೊಂಡು ಹೊರಟರು. ವೆಸ್ಸಂತರನ ಧೃಡತೆಯ ಪರೀಕ್ಷೆಗೆ ಅಲ್ಲಿಗೆ ಒಬ್ಬ ಬ್ರಾಹ್ಮಣ ಬಂದು, 'ರಾಜಾ, ನನಗೆ ನಿನ್ನ ರಥ, ಕುದುರೆಗಳ ಮೇಲೆ ಮನಸ್ಸಾಗಿದೆ. ಅವುಗಳನ್ನು ನನಗೆ ಕೊಡು' ಎಂದು ಕೇಳಿದ. ಆಗ ವೆಸ್ಸಂತರ ರಥದಿಂದ ಹೆಂಡತಿ, ಮಕ್ಕಳನ್ನು ಕೆಳಗಿಳಿಸಿ, ರಥದಲ್ಲಿದ್ದ ವಸ್ತುಗಳ ಸಮೇತ ಎಲ್ಲವನ್ನೂ ದಾನಮಾಡಿಬಿಟ್ಟ. ತಕ್ಷಣ ಆ ಬ್ರಾಹ್ಮಣ ರಥ ಸಹಿತವಾಗಿ ಮಾಯವಾಗಿ ಹೋದ!

ವೆಸ್ಸಂತರನ ಮುಖದ ಮೇಲೆ ಒಂದು ಚೂರೂ ದುಃಖದ ಛಾಯೆ ಇರಲಿಲ್ಲ. ಅವರೆಲ್ಲರೂ ನಡೆದೇ ಹೊರಟರು. ಬೋಧಿಸತ್ವ ವೆಸ್ಸಂತರ ಹೆಂಡತಿ ಮಾದ್ರಿಗೆ ಹೇಳಿದ, 'ಮಾದ್ರಿ, ಮಕ್ಕಳಿಗೆ ನಡೆಯುವುದು ಕಷ್ಟವಾಗುತ್ತದೆ. ಕೃಷ್ಣಾಜಿನ ಚಿಕ್ಕವಳು, ಹಗುರವಾಗಿದ್ದಾಳೆ. ಅವಳನ್ನು ನೀನು ಎತ್ತಿಕೊ. ಮಗ ಜಾಲಿಕುಮಾರ ದೊಡ್ಡವನು, ಭಾರವಾಗಿದ್ದಾನೆ. ಅವನನ್ನು ನಾನು ಕರೆದುಕೊಳ್ಳುತ್ತೇನೆ'. ಇಬ್ಬರೂ ಮಕ್ಕಳನ್ನು ಎತ್ತಿಕೊಂಡು ಬೆಟ್ಟದ ಕಡೆಗೆ ನಡೆದರು. ಅವರು ಹೋಗಬೇಕೆಂದಿದ್ದು ವಂಕಪರ್ವತ. ಅಲ್ಲಿಯೇ ಒಂದು ಆಶ್ರಮವನ್ನು ಕಟ್ಟಿಕೊಂಡು ಉಳಿಯುವುದು ವೆಸ್ಸಂತರನ ಗುರಿಯಾಗಿತ್ತು. ಅದಕ್ಕಾಗಿ ದಾರಿಯಲ್ಲಿ ಎದುರು ಬಂದವರನ್ನೆಲ್ಲ, ವಂಕಪರ್ವತವೆಲ್ಲಿ ಎಂದು ಕೇಳುತ್ತಿದ್ದರು. ಅವರು ಕನಿಕರದಿಂದ ಇವರನ್ನು ನೋಡಿ, 'ಅಯ್ಯೋ, ಇನ್ನೂ ಅದು ಬಹಳ ದೂರದಲ್ಲಿದೆ' ಎಂದಾಗ ಮಾದ್ರಿಗೆ ನಿರಾಸೆಯಾಗುತ್ತಿತ್ತು. ಆದರೆ ವೆಸ್ಸಂತರ ಮಾತ್ರ ಎಂದಿನಂತೆ ದುಃಖರಹಿತನಾಗಿದ್ದು ಉಳಿದವರಿಗೆ ಉತ್ತೇಜನ ನೀಡುತ್ತಿದ್ದ.

## ದಿನ ಭವಿಷ್ಯ

ಗುರುವಾರ ಜೂನ್ 24, 2021

**ಶ್ರೀಪ್ಲವ ನಾಮ ಸಂವತ್ಸರ ಉತ್ತರಾಯಣ ಗ್ರೀಷ್ಮ ಋತು ಜ್ಯೇಷ್ಠ ಮಾಸ ಶುಕ್ಲ ಪಕ್ಷ ಮಳೆ ನಕ್ಷತ್ರ ಆದ್ರ್ರ ಪೂರ್ಣಿಮಾ ಗಂ. 45-45 (ರಾ. 12-20) ಗುರುವಾರ ನಿತ್ಯ ನಕ್ಷತ್ರ ಜ್ಯೇಷ್ಠ ಗಂ. 7-47 (ಬೆ. 9-10) ಶುಭ ನಾಮ ಯೋಗ ಗಂ. 1-0 ಉಪರಿ ಶುಕ್ಲ ನಾಮ ಯೋಗ ಗಂ. 52-51 ಭದ್ರೆ ಕರಣ ಗಂ. 18-39 ವಿಷ ಗಂ. 18-30 ಅಮೃತ ಗಂ. 49-7 :** ರಾಹುಕಾಲ ಮ ಗಂ. 1-30 ರಿಂದ 3-00 ಗುಳಿಕ ಕಾಲ ಬೆ ಗಂ 9-00 ರಿಂದ 10-30 ಯಮಗಂಡ ಕಾಲ ಬೆ ಗಂ 6-00 ರಿಂದ 7-30 ಸೂರ್ಯೋದಯ: 5-58 ಸೂರ್ಯಾಸ್ತ: 6-44 ಅದೃಷ್ಟ ಸಂಖ್ಯೆ 2 5

**ಮೇಷ:** ರಾಜಕೀಯ ಕ್ಷೇತ್ರದಲ್ಲಿರುವವರಿಗೆ ನಿರೀಕ್ಷಿತ ಕೆಲಸಗಳು ಉತ್ತಮ ಫಲ ನೀಡುತ್ತವೆ. ಜೊತೆಗೆ, ಹಣಕಾಸಿನ ಅನುಕೂಲತೆಗಳೂ ದೊರಕಲಿದೆ. ಬಂಧುಗಳಿಂದ ಉತ್ತಮ ಸಹಕಾರ ದೊರಕಲಿದೆ.

**ವೃಷಭ:** ಕೃಷಿ ಕ್ಷೇತ್ರಗಳಲ್ಲಿ ದುಡಿಯುವವರಿಗೆ ಉತ್ತಮ ಸಹಕಾರ. ಕಾರ್ಯಕ್ಷೇತ್ರದಲ್ಲಿ ಅನಿರೀಕ್ಷಿತ ಪ್ರಶಂಸೆಗಳು ನಿಮ್ಮ ಪಾಲಿಗೆ ಬರಲಿವೆ. ಮಹಿಳೆಯರ ಆರೋಗ್ಯದಲ್ಲಿ ಸ್ವಲ್ಪಮಟ್ಟಿನ ವ್ಯತ್ಯಯದ ಸಾಧ್ಯತೆ ಕಂಡುಬರಲಿದೆ.

**ಮಿಥುನ:** ಬ್ಯಾಂಕಿಂಗ್ ಹಾಗೂ ಹಣಕಾಸು ವ್ಯವಹಾರಗಳಲ್ಲಿ ತೊಡಗಿಕೊಂಡವರಿಗೆ ನಿರೀಕ್ಷಿತವಾದ ಕಾರ್ಯ ಸಿದ್ಧಿಯಾಗಿ ಲಾಭ ದೊರಕಲಿದೆ. ವಿದ್ಯಾರ್ಥಿಗಳಿಗೆ ಪರಿಶ್ರಮಕ್ಕೆ ತಕ್ಕ ಪ್ರತಿಫಲ. ಆರೋಗ್ಯದಲ್ಲಿ ಸುಧಾರಣೆ ಕಂಡುಬರುವುದು.

**ಕರ್ಕಾಟಕ:** ವ್ಯಾಪಾರದಲ್ಲಿ ಲಾಭವನ್ನು ಹೊಂದಲಿದ್ದೀರಿ. ಮನಸ್ಸಿಗೆ ನೆಮ್ಮದಿಯ ದಿನವಾಗಿ ಪರಿಣಮಿಸಲಿದೆ. ಕೆಲಸ ಕಾರ್ಯಗಳಲ್ಲಿ ಯಶಸ್ಸು. ಆರ್ಥಿಕ ಸಂಪನ್ಮೂಲಗಳನ್ನು ಹುಡುಕುವ ಭರದಲ್ಲಿ ಎಚ್ಚರಿಕೆಯ ನಡೆ ಅಗತ್ಯ.

**ಸಿಂಹ:** ವಿದ್ಯಾರ್ಥಿಗಳಿಗೆ ಶಿಕ್ಷಣದಲ್ಲಿ ಪ್ರಗತಿಯನ್ನು ನಿರೀಕ್ಷಿಸಬಹುದು. ಭವಿಷ್ಯಕ್ಕೆ ಸಂಬಂಧಿಸಿದ ಹಲವಾರು ಉತ್ತಮ ಮಾರ್ಗಗಳು ಗೋಚರವಾಗಲಿವೆ. ದುಗುಡಕ್ಕೆ ಎಡೆಮಾಡದೆ ಸಮಾಧಾನ ಚಿತ್ತದಿಂದ ವ್ಯವಹರಿಸುವುದು ಉತ್ತಮ.

**ಕನ್ಯಾ:** ಆರ್ಥಿಕ ಸ್ಥಿರತೆಯಿಂದಾಗಿ ನೆಮ್ಮದಿ ಮೂಡಲಿದೆ. ನೆರೆಹೊರೆಯವರೊಂದಿಗೆ ಮಧುರ ಬಾಂಧವ್ಯ ಉಂಟಾಗುವುದು. ವಿದೇಶದಲ್ಲಿರುವ ಕುಟುಂಬದಿಂದ ಸುವಾರ್ತೆ. ಮಾತೃವರ್ಗದವರ ಸಮಾಗಮ.

**ತುಲಾ:** ಹೊಸದಾಗಿ ಆರಂಭಿಸುವ ಕೆಲಸ ಕಾರ್ಯಗಳು ನಿರ್ವಿಘ್ನವಾಗಿ ನಡೆಯಲಿದ್ದು ಉತ್ತಮ ಫಲಿತಾಂಶ ನೀಡಲಿದೆ. ವಿದ್ಯಾರ್ಥಿಗಳಿಗೆ ಅದೃಷ್ಟ ಒಲಿದುಬರಲಿದೆ. ಮನೋರಂಜನೆಗಾಗಿ ಹೆಚ್ಚಿನವೆಚ್ಚ ಭರಿಸಬೇಕಾದೀತು.

**ವೃಶ್ಚಿಕ:** ಉದ್ಯೋಗದಲ್ಲಿ ಒಳ್ಳೆಯ ಹೆಸರು ಪಡೆಯುವಿರಿ. ದೂರದ ಊರಿಗೆ ವರ್ಗಾವಣೆಯಾಗುವ ಸಾಧ್ಯತೆ ಕಂಡುಬರುವುದು. ಮನೆ ನಿರ್ಮಾಣಕ್ಕೆ ಸಂಬಂಧಿಸಿದ ವ್ಯವಹಾರಗಳಲ್ಲಿ ಅಭಿವೃದ್ಧಿ ಕಂಡುಕೊಳ್ಳುವಿರಿ.

**ಧನು:** ನಿಮ್ಮ ಪಾಲಿನ ಕೆಲಸ ಕಾರ್ಯಗಳು ಸರಾಗವಾಗಿ ನಿರ್ವಹಣೆಯಾಗಲಿದೆ. ದೂರದೂರುಗಳಿಗೆ ಪ್ರಯಾಣ ಸಾಧ್ಯತೆ ಕಂಡುಬರುವುದು. ವಾಹನ ಚಾಲನೆಯಲ್ಲಿ ಎಚ್ಚರ ವಹಿಸಬೇಕಾಗಿದೆ.

**ಮಕರ:** ಪುತ್ರ ಸಮಸ್ಯೆ ಪರಿಹಾರದಿಂದ ಮಾನಸಿಕ ಶಾಂತಿ ದೊರಕಲಿದೆ. ಧಾರ್ಮಿಕ ಕಾರ್ಯಕ್ರಮಗಳ ಸಂಭ್ರಮ. ಪ್ರಯಾಣದಲ್ಲಿ ಎಚ್ಚರ ಅಗತ್ಯ. ಮಹಿಳೆಯರ ಮಾನಸಿಕ ನೆಮ್ಮದಿಯನ್ನು ಕದಡುವ ಪ್ರಸಂಗ ಎದುರಾದೀತು.

**ಕುಂಭ:** ವೈವಾಹಿಕ ವ್ಯವಹಾರಗಳಲ್ಲಿ ಬಂಧು ಮನ್ನಣೆದೊರಕಲಿದೆ. ವೈಯಕ್ತಿಕ ಬದುಕಿನಲ್ಲಿ ಹಿತಕರ ಬದಲಾವಣೆ ಕಂಡುಬರಲಿದೆ. ಸಾಮಾಜಿಕ ಬದುಕು ಸರಾಗ. ವಿದ್ಯಾರ್ಥಿಗಳಿಗೆ ಹುಮ್ಮಸ್ಸು ತರುವಂತಹ ವಾತಾವರಣ ಮೂಡಲಿದೆ.

**ಮೀನ:** ರಚನಾತ್ಮಕ ಕಾರ್ಯಕ್ರಮಗಳಿಗೆ ವಚ್ಚ ಭರಿಸಬೇಕಾದೀತು. ಅಣ್ಣನ ಸಹಕಾರದಿಂದ ನೆಮ್ಮದಿ ಹೊಂದಲಿದ್ದೀರಿ. ಸ್ವತ್ತು ವ್ಯವಹಾರಗಳ ಬಗ್ಗೆ ಸೋದರರೊಡನೆ ಚರ್ಚೆ ಮಾಡಲಿದ್ದೀರಿ.

**ನಿಮ್ಮ ಜನ್ಮದಿನ 24-ಜೂನ್** ಈ ದಿನವು ಅತ್ಯಂತ ಶುಭಕರವಾಗಿದ್ದು, ಮದುವೆ ವಿಚಾರದಲ್ಲಿ ಸಾವಧಾನದಿಂದ ಮುಂದುವರಿಯುವಂತೆ ತಂದೆಯಿಂದ ಹಿತನುಡಿ ಪಡೆಯುವಿರಿ.ಕೃಷಿ ಜಮೀನು ಖರೀದಿ ವಿಚಾರದಲ್ಲಿ ಮುಂದುವರಿಯಲು ಸೂಕ್ತ ಸಮಯ. ವಿದೇಶದಲ್ಲಿರುವ ಸೋದರನಿಗೆ ಆಸ್ತಿ ಖರೀದಿಸುವಿರಿ.

## ಪದಬಂಧ 4637 – ವಿದ್ಯಾ ವಿನಯ್

**ಎಡದಿಂದ ಬಲಕ್ಕೆ**
1.ಈತ ಹೆದರುವ ವ್ಯಕ್ತಿ (3)
2.ಪ್ರಾಣವಾಯು ಇಲ್ಲಿದೆ! (5)
4.ಎದುರಿಗೆ ಮೂರ್ತೀಭವಿಸುವುದು (4)
6.ದಂಪತಿಗಳು ಹಬ್ಬಿಸಿದ ಗಾಳಿಸುದ್ದಿ! (3)
7.ಮತ ಹಾಕುವಾಗ ಆವರಿಸಿದ ಕತ್ತಲು (2)
9.ಆ ದಿನದಲ್ಲೇ ಬಂದಿರುವ ಮಂತ್ರಿ (3)
11.ತಿಲಕದ ಬಳಿಯಿರುವ ಎಳ್ಳು (2)
13.ಹೊಸದಾಗಿ ಕಾಣುತ್ತಿರುವ ಧಾನ್ಯ (3)
14.ಕೈಯಲ್ಲಿರಿಸಿಕೊಂಡಿರುವ ಖಡ್ಗ (4)
15.ಶುಭಕಾರ್ಯಗಳಲ್ಲಿ ನುಡಿಸುವ ವಾದ್ಯ (5)
16.ಭೂಮಿಯಿಂದ ಬಂದಿರುವ ಹಿನ್ನೆಲೆ! (3)

**ಮೇಲಿಂದ ಕೆಳಕ್ಕೆ**
1.ಹಿಂಸೆ ಮಾಡಬಾರದೆಂಬ ವ್ರತ (5)
3.ಅದೇ ತಾನೆ ಮದುವೆಯಾದ ಜೋಡಿ (5)
5.ಪಾವತಿ ಪತ್ರ ಇಲ್ಲಿದೆ (3)
8.ಈತ ಲಗ್ನವಾಗುತ್ತಿರುವವ (5)
10. ಪಾಪಿಗಳ ಲೋಕ (3)
12.ರಾಮನ ಮಗನಿದ್ದರೇ ಈ ಹುರುಪು ! (5)




### 4636ನೇ ಪದಬಂಧದ ಉತ್ತರ

**ಎಡದಿಂದ ಬಲಕ್ಕೆ:** 1.ಆತುರ 6.ತಾರಾತಿಗಡಿ 7.ರಜನಿ 10.ಚಿತ್ತಪಲ್ಲಟ 15.ಕಾಮನೆ 16.ಗುಪ್ತಗಾಮಿನಿ 17.ರಸನ

**ಮೇಲಿಂದ ಕೆಳಕ್ಕೆ:** 1.ಆಭರಣ 2.ರದನಿ 3.ಪಾತಾಳ 4.ಪ್ರತಿಜ್ಞೆ 5.ಜಡಿಮಳೆ 8.ಉತ್ತರ 9.ತಲ್ಲಣ 11.ಅವಗುಣ 12.ಮನೆತನ 13.ತಗಾದೆ 14.ಅನಿಲ 15.ಕಾತರ

## ಸುಡೊಕು 5023

| | | | | | | | | |
|---|---|---|---|---|---|---|---|---|
| | 6 | | | 7 | | 2 | 9 | 3 |
| | | | | | | | | |
| | 8 | | 5 | 2 | | 1 | 6 | |
| 1 | | 5 | | | | | 8 | |
| 4 | | | 2 | | 5 | | | 1 |
| | 9 | | | | | | 2 | |
| | | 9 | 3 | | 2 | | 4 | |
| 7 | | | 9 | | 8 | 5 | | 2 |
| | 5 | | | 4 | | | 3 | |

**ಆಡುವುದು ಹೇಗೆ?**

ಮನೆಗಳನ್ನು 1ರಿಂದ 9ರವರೆಗಿನ ಅಂಕಿಗಳಿಂದ ತುಂಬಿ. ಮೇಲಿನಿಂದ ಕೆಳಕ್ಕೆ, ಎಡದಿಂದ ಬಲಕ್ಕೆ ಪ್ರತಿ ಸಾಲಿಗೂ ಇದೇ ನಿಯಮ. ದೊಡ್ಡ ಚೌಕದ ಒಳಗಿನ ಮಧ್ಯಮ ಚೌಕದ ಮನೆಗಳನ್ನೂ ತುಂಬಬೇಕು. ಯಾವ ಅಂಕಿಯೂ ಯಾವುದೇ ಸಾಲು, ಮಧ್ಯಮ ಚೌಕದಲ್ಲಿ ಪುನರಾವರ್ತನೆ ಆಗಬಾರದು.

### 5022 ಸುಡೊಕು

| | | | | | | | | |
|---|---|---|---|---|---|---|---|---|
| 4 | 6 | 5 | 3 | 9 | 8 | 7 | 1 | 2 |
| 2 | 7 | 1 | 4 | 6 | 5 | 3 | 8 | 9 |
| 9 | 8 | 3 | 7 | 1 | 2 | 5 | 4 | 6 |
| 7 | 1 | 9 | 5 | 8 | 3 | 2 | 6 | 4 |
| 5 | 2 | 6 | 9 | 4 | 7 | 1 | 3 | 8 |
| 3 | 4 | 8 | 6 | 2 | 1 | 9 | 7 | 5 |
| 6 | 3 | 4 | 1 | 5 | 9 | 8 | 2 | 7 |
| 8 | 5 | 7 | 2 | 3 | 4 | 6 | 9 | 1 |
| 1 | 9 | 2 | 8 | 7 | 6 | 4 | 5 | 3 |

ಕೊರೊನಾ ಭೀತಿ ಬೇಡ, ಮುಂಜಾಗ್ರತೆ ಇರಲಿ

ಹೊರಗೆ ಹೋಗುವಾಗ ಮುಖಗವಸು ಧರಿಸಿ

ಪ್ರಜಾವಾಣಿ ಶ್ರದ್ಧಾಂಜಲಿ & ಸವಿನೆನಪು ಜಾಹೀರಾತುಗಳು

Log on to : https://homages.deccanherald.com
or
Scan QR code to access booking form

ವೈಕುಂಠ ಸಮಾರಾಧನೆ



ಶ್ರೀ ಎನ್. ಶಿವರಾಮರವರು
(ಶ್ರೀ ಎಸ್. ಆರ್. ನಾರಾಯಣ ರೆಡ್ಡಿಯವರ ಮಗ), ಸುದ್ದಗುಂಟ ಪಾಳ್ಯ, ಬೆಂಗಳೂರು ಇವರು ದಿನಾಂಕ 13-6-2021 ಭಾನುವಾರದಂದು ದೈವಾಧೀನರಾದರೆಂದು ತಿಳಿಸಲು ವಿಷಾದಿಸುತ್ತೇವೆ. ತತ್ಸಂಬಂಧವಾದ ವೈಕುಂಠ ಸಮಾರಾಧನೆ ಕಾರ್ಯವನ್ನು ದಿನಾಂಕ 24-6-2021ನೇ ಗುರುವಾರ ಬೆಳಿಗ್ಗೆ 9:00 ಗಂಟೆಗೆ ಮೃತರ ಸ್ವಗೃಹ ವಿಳಾಸ: ನಂ. 576 "ಎ" 1ನೇ ಮುಖ್ಯರಸ್ತೆ, ಐಎಎಸ್ ಕಾಲೋನಿ, ಸೆಕ್ಟರ್ 6, ಹೆಚ್.ಎಸ್.ಆರ್ ಲೇಔಟ್, ಬೆಂಗಳೂರು-560 102 ಇಲ್ಲಿ ಏರ್ಪಡಿಸಲಾಗಿದೆ
ಇಂತಿ ದುಃಖತಪ್ತರು: ಜಿ.ಆರ್. ಶೈಲಜಾ ಮತ್ತು ಕುಟುಂಬದವರು.

NAME CHANGE ANNOUNCEMENT

Log on to :
dhclassifieds.com

ಪ್ರಜಾವಾಣಿ ಶ್ರದ್ಧಾಂಜಲಿ & ಸವಿನೆನಪು ಜಾಹೀರಾತುಗಳು

ನಿಮ್ಮ ಪ್ರೀತಿಪಾತ್ರರ ಅಗಲಿಕೆಯನ್ನು ಶ್ರದ್ಧಾಂಜಲಿ ಜಾಹೀರಾತು ಮೂಲಕ ಪ್ರಕಟಿಸಲು ಅಥವಾ ನಿಮ್ಮ ಪ್ರೀತಿಪಾತ್ರರ ಸವಿನೆನಪಿಗೆ ಸಂತಾಪ ಸೂಚನೆ ಪ್ರಕಟಿಸಲು ಬಯಸುವಿರಾದರೆ, ನಮ್ಮ
ಡೆಕ್ಕನ್ ಹೆರಾಲ್ಡ್ ಮತ್ತು ಪ್ರಜಾವಾಣಿ
ಪತ್ರಿಕೆಗಳಲ್ಲಿ ನಿಮ್ಮ ಜಾಹೀರಾತುಗಳನ್ನು ಪ್ರಕಟಿಸಲು ಅಗತ್ಯವಿರುವ ಎಲ್ಲ ಮಾರ್ಗದರ್ಶನ ನೀಡುತ್ತೇವೆ.
ದಯವಿಟ್ಟು ಸಂಪರ್ಕಿಸಿ:
Santhosh Kumar : 9880856233
Jerry : 9731810277 | Ravichandra : 9901641752
Vishal : 9845114560 | Anitha R: 9900428036
ನಿಮ್ಮ ಮಾರ್ಗದರ್ಶನಕ್ಕಾಗಿ ಕೆಲವು ಅನುಕೂಲಕರ ಫಾರ್ಮಾಟ್ಸ್ ಹಾಗೂ ಟೆಕ್ಸ್ಟ್ ಆಯ್ಕೆಗಳನ್ನು ಹೊಂದಿರುವ ಒಂದು ವೆಬ್‌ಸೈಟ್‌ನ್ನು ಕೂಡ ನಾವು ಆರಂಭಿಸಿದ್ದೇವೆ. ದಯವಿಟ್ಟು ಲಾಗಾನ್ ಮಾಡಿರಿ
https://homages.deccanherald.com
ಅಥವಾ QR code ಸ್ಕ್ಯಾನ್ ಮಾಡಿ
ನಮ್ಮ ಆನ್‌ಲೈನ್ ಬುಕ್ಕಿಂಗ್ ಫಾರಂ ಪಡೆಯಿರಿ.

ಚೀನಾಕ್ಕೆ ಸೆಡ್ಡು ಹೊಡೆವ ಕಾರ್ಯತಂತ್ರ

# ಭಾರತ, ಅಮೆರಿಕ ಜಂಟಿ ಸಮರಾಭ್ಯಾಸಕ್ಕೆ ಚಾಲನೆ

ಹಿಂದೂ ಮಹಾಸಾಗರದಲ್ಲಿ ಭಾರತ ಮತ್ತು ಅಮೆರಿಕದ ನೌಕಾಪಡೆಗಳು ಆರಂಭಿಸಿರುವ ಜಂಟಿ ಸಮರಾಭ್ಯಾಸದಲ್ಲಿ ಭಾರತದ ಯುದ್ಧನೌಕೆ ಐಎನ್‌ಎಸ್ ಕೊಚ್ಚಿ ಪಾಲ್ಗೊಂಡಿದೆ –ಪಿಟಿಐ ಚಿತ್ರ

ನವದೆಹಲಿ (ಪಿಟಿಐ): ಭಾರತ ಮತ್ತು ಅಮೆರಿಕದ ನೌಕಾಪಡೆಗಳು ಹಿಂದೂ ಮಹಾಸಾಗರದಲ್ಲಿ ಎರಡು ದಿನಗಳ ಜಂಟಿ ಸಮರಾಭ್ಯಾಸಕ್ಕೆ ಬುಧವಾರ ಚಾಲನೆ ನೀಡಿದವು.

ಇಂಡೊ-ಪೆಸಿಫಿಕ್ ಪ್ರದೇಶದಲ್ಲಿ ತನ್ನ ಪ್ರಾಬಲ್ಯ ವೃದ್ಧಿಸಿಕೊಳ್ಳಲು ಯತ್ನಿಸುತ್ತಿರುವ ಚೀನಾಕ್ಕೆ ಸೆಡ್ಡು ಹೊಡೆಯುವ ಕಾರ್ಯತಂತ್ರದ ಭಾಗವಾಗಿ ಈ ಸಮರಾಭ್ಯಾಸವನ್ನು ಹಮ್ಮಿಕೊಳ್ಳಲಾಗಿದೆ.

ಅಣ್ವಸ್ತ್ರ ಅಳವಡಿಸಿದ ಯುದ್ಧ-ವಿಮಾನಗಳನ್ನು ಹೊತ್ತ ಹಡಗು 'ಯುಎಸ್‌ಎಸ್ ರೊನಾಲ್ಡ್ ರೇಗನ್', 'ಎಫ್-18' ಯುದ್ಧವಿಮಾನಗಳು, ಎಲ್ಲ ರೀತಿಯ ಹವಾಮಾನ ಪರಿಸ್ಥಿತಿಯಲ್ಲಿ ಕಾರ್ಯಾಚರಿಸಬಲ್ಲ 'ಇ-2ಸಿ' ಯುದ್ಧ-ವಿಮಾನಗಳನ್ನು ಈ ತಾಲೀಮಿನಲ್ಲಿ ಅಮೆರಿಕ ನಿಯೋಜಿಸಿದೆ ಎಂದು ಮೂಲಗಳು ಹೇಳಿವೆ.

ಜಾಗ್ವಾರ್ ಮತ್ತು ಸುಖೋಯ್-30ಎಂಕೆಐ ಯುದ್ಧವಿಮಾನಗಳು, ಹಾರಾಟದ ಸಮಯದಲ್ಲಿಯೇ ಯುದ್ಧ-ವಿಮಾನಗಳಿಗೆ ಇಂಧನ ಮರುಪೂರಣ ಮಾಡಬಲ್ಲ 'ಐಎಲ್-78' ವಿಮಾನಗಳು, ಐಎನ್‌ಎಸ್ ಕೊಚ್ಚಿ ಮತ್ತು ಐಎನ್‌ಎಸ್ ತೇಗ್ ಯುದ್ಧನೌಕೆ-ಗಳನ್ನು ಭಾರತ ನಿಯೋಜಿಸಿದೆ.

ಅಲ್ಲದೇ, ಕಡಲ ಗಡಿಯಲ್ಲಿ ಕಣ್ಗಾವಲಿಡುವ 'ಪಿ8ಐ' ಯುದ್ಧವಿಮಾನಗಳು, 'ಎಂಐಜಿ 29ಕೆ' ಜೆಟ್‌ಗಳು ಸಹ ತಮ್ಮ ಸಾಮರ್ಥ್ಯ ಪ್ರದರ್ಶಿಸಲಿವೆ ಎಂದು ಮೂಲಗಳು ಹೇಳಿವೆ.

**ಮುಖ್ಯಾಂಶಗಳು**

- ಯುದ್ಧ ಕೌಶಲಗಳಿಗೆ ಸಾಣೆ ಹಿಡಿಯುವ ಪ್ರಯತ್ನ
- ಸಾಗರದಲ್ಲಿ ಶೋಧ ಮತ್ತು ರಕ್ಷಣಾ ಕಾರ್ಯಾಚರಣೆ ತಾಲೀಮು
- ಉಭಯ ದೇಶಗಳ ನೌಕಾಪಡೆಗಳಿಂದ ಮಾಹಿತಿ ವಿನಿಮಯ

'ಭಾರತದ ನೌಕಾಪಡೆಯ ಯುದ್ಧನೌಕೆಗಳು, ಯುದ್ಧವಿಮಾನಗಳ ಜೊತೆ ವಾಯುಪಡೆಯ ಯುದ್ಧವಿ-ಮಾನಗಳು ಸಹ ಈ ಜಂಟಿ ಸಮರಾ-ಭ್ಯಾಸದಲ್ಲಿ ಭಾಗವಹಿಸಿವೆ' ಎಂದು ನೌಕಾಪಡೆಯ ವಕ್ತಾರ ಕಮಾಂಡರ್ ವಿವೇಕ್ ಮಧ್ವಾಲ್ ಹೇಳಿದ್ದಾರೆ.

'ಸಮುದ್ರದಲ್ಲಿ ಕೈಗೊಳ್ಳುವ ಕಾರ್ಯಾಚರಣೆಯಲ್ಲಿ ಉಭಯ ದೇಶಗಳ ನೌಕಾಪಡೆಗಳು ಪಾಲ್ಗೊಳ್ಳು-ವುದು, ಆಮೂಲಕ ದ್ವಿಪಕ್ಷೀಯ ಸಂಬಂಧವನ್ನು ಬಲಪಡಿಸುವುದೇ ಈ ಜಂಟಿ ಸಮಾರಾಭ್ಯಾಸದ ಉದ್ದೇಶ' ಎಂದೂ ಅವರು ಹೇಳಿದ್ದಾರೆ.

# ಮತ್ತೆ ಪವಾರ್ ಭೇಟಿಯಾದ ಪ್ರಶಾಂತ್

## 15 ದಿನಗಳಲ್ಲಿ 3ನೇ ಬಾರಿ ಭೇಟಿ, ವಿವಿಧ ವಿಷಯಗಳ ಚರ್ಚೆ

ಪ್ರಶಾಂತ್ ಕಿಶೋರ್

ನವದೆಹಲಿ (ಪಿಟಿಐ): ಚುನಾವಣಾ ಕಾರ್ಯತಂತ್ರ ನಿರೂಪಕ ಪ್ರಶಾಂತ್ ಕಿಶೋರ್ ಅವರು ಎನ್‌ಸಿಪಿ ಮುಖ್ಯಸ್ಥ ಶರದ್ ಪವಾರ್ ಅವರನ್ನು ಬುಧವಾರ ಪುನಃ ಭೇಟಿಯಾಗಿ ಒಂದು ಗಂಟೆಗೂ ಹೆಚ್ಚು ಕಾಲ ಮಾತುಕತೆ ನಡೆಸಿದ್ದಾರೆ. ಹದಿನೈದು ದಿನಗಳ ಅಂತರದಲ್ಲಿ ಈ ನಾಯಕರ ಮಧ್ಯೆ ನಡೆದ ಮೂರನೇ ಭೇಟಿ ಇದಾಗಿದೆ.

ಪವಾರ್ ಅವರ ನಿವಾಸದಲ್ಲಿ ಮಂಗಳವಾರ ಎಂಟು ವಿರೋಧ ಪಕ್ಷಗಳ ನಾಯಕರ ಸಭೆ ನಡೆದಿತ್ತು. ಈ ಸಭೆಯ ಅಧ್ಯಕ್ಷತೆ-ಯನ್ನು ಪವಾರ್ ಅವರೇ ವಹಿಸಿದ್ದರು. ಮರುದಿನವೇ ನಡೆದ ಈ ಭೇಟಿಯು ರಾಜಕೀಯ ವಲಯದಲ್ಲಿ ಕುತೂಹಲಕ್ಕೆ ಕಾರಣವಾಗಿದೆ. ಪವಾರ್-ಕಿಶೋರ್ ಅವರ ಈ ಮಾತುಕತೆಗಳು, ವಿರೋಧಪಕ್ಷಗಳನ್ನು ಒಗ್ಗೂಡಿಸಿ, ಬಿಜೆಪಿಯ ವಿರುದ್ಧ ಬಲಿಷ್ಠವಾದ ತೃತೀಯ ರಂಗದ ರಚನೆಯ ಪ್ರಯತ್ನಗಳಾಗಿವೆ ಎಂದು ಹೇಳಲಾಗುತ್ತಿದೆ.

ವಿವಿಧ ಪಕ್ಷಗಳ ನಾಯಕರ ಸಭೆಗೂ ಮುನ್ನ ಮಂಗಳವಾರ ಪವಾರ್ ಅವರು ಎನ್‌ಸಿಪಿಯ ರಾಷ್ಟ್ರೀಯ ಕಾರ್ಯಕಾರಿ ಸಭೆ ನಡೆಸಿದ್ದರು. ಪಕ್ಷದ ಭವಿಷ್ಯದ ನೀತಿಗಳು, ಮುಂದಿನ ಲೋಕಸಭಾ ಚುನಾವಣೆ ಹಾಗೂ ಪ್ರಸ್ತುತ ರಾಜಕೀಯ ವಿಷಯಗಳ ಬಗ್ಗೆ ಅಲ್ಲಿ ಚರ್ಚಿಸಲಾಗಿತ್ತು ಎಂದು ಮುಖಂಡರು ತಿಳಿಸಿದ್ದಾರೆ.

ಸುದ್ದಿ 2 ನಿಮಿಷ

## ಉ.ಪ್ರದೇಶದಲ್ಲಿ ಕಾಂಗ್ರೆಸ್‌ಗೆ ಪ್ರಿಯಾಂಕಾ ಕ್ಯಾಪ್ಟನ್: ಸಲ್ಮಾನ್ ಖುರ್ಷಿದ್

ನವದೆಹಲಿ(ಪಿಟಿಐ): ಉತ್ತರ ಪ್ರದೇಶದಲ್ಲಿ ಪ್ರಿಯಾಂಕಾ ಗಾಂಧಿ ವಾಧ್ರಾ ಅವರು ಕ್ಯಾಪ್ಟನ್ ಆಗಿ ಪಕ್ಷವನ್ನು ಮುನ್ನಡೆಸಲಿದ್ದಾರೆ ಎಂದು ಕಾಂಗ್ರೆಸ್‌ನ ಹಿರಿಯ ನಾಯಕ ಸಲ್ಮಾನ್ ಖುರ್ಷಿದ್ ಹೇಳಿದ್ದಾರೆ.

ಈ ವಿಚಾರವಾಗಿ ಸುದ್ದಿಸಂಸ್ಥೆ ಪಿಟಿಐಗೆ ಹೇಳಿಕೆ ನೀಡಿರುವ ಅವರು, 'ಉತ್ತರ ಪ್ರದೇಶದ ಮತದಾರರ ಮುಂದೆ ತಮ್ಮನ್ನು ತಾವು ಹೇಗೆ ಪ್ರಸ್ತುತ ಪಡಿಸಿಕೊಳ್ಳ-ಬೇಕು ಎಂಬುದನ್ನು ಪ್ರಿಯಾಂಕಾ ಅವರೇ ನಿರ್ಧರಿಸಲಿದ್ದಾರೆ. ಅವರು ರಾಜ್ಯದಲ್ಲಿ ಪಕ್ಷದ ಉಸ್ತುವಾರಿಯ-ನ್ನು ಮುನ್ನಡೆಸಲಿದ್ದಾರೆ. ಉತ್ತರ ಪ್ರದೇಶದಲ್ಲಿ ಕಾಂಗ್ರೆಸ್ ಪಕ್ಷಕ್ಕೆ ಪ್ರಿಯಾಂಕಾ ಗಾಂಧಿಯೇ ಕ್ಯಾಪ್ಟನ್' ಎಂದು ಸಲ್ಮಾನ್ ಖುರ್ಷಿದ್ ಪ್ರತಿ-ಪಾದಿಸಿದ್ದಾರೆ.

'ಉತ್ತರ ಪ್ರದೇಶ ವಿಧಾನಸಭಾ ಚುನಾವಣೆಯಲ್ಲಿ ಕಾಂಗ್ರೆಸ್ ಪಕ್ಷವು ಬಿಜೆಪಿಗೆ ಕಠಿಣ ಎದುರಾಳಿ-ಯಾಗಲಿದೆ. ಪಕ್ಷವು ತನ್ನ ಎಲ್ಲ ಶಕ್ತಿಯಿಂದ ಚುನಾವಣೆಯನ್ನು ಎದುರಿಸಲಿದೆ. ಈ ಬಗ್ಗೆ ಪ್ರಿಯಾಂಕಾ ಗಾಂಧಿ ನಿರ್ಧರಿಸಲಿದ್ದಾರೆ' ಎಂದು ಖುರ್ಷಿದ್ ಹೇಳಿದ್ದಾರೆ.

'ಪ್ರಿಯಾಂಕಾ ಅವರು ಉತ್ತರ ಪ್ರದೇಶದ ನಾಯಕತ್ವದ ಬಗ್ಗೆ ನಿರ್ಧಾರ ತೆಗೆದುಕೊಳ್ಳಲಿದ್ದಾರೆ. ನಮ್ಮ ಮಟ್ಟಿಗೆ ಅವರೊಬ್ಬ ನಾಯಕಿ. ಅವರು ನಮ್ಮನ್ನು ಮುನ್ನಡೆಸಲಿದ್ದಾರೆ' ಎಂದು ಖುರ್ಷಿದ್ ತಿಳಿಸಿದ್ದಾರೆ.

2022ರ ಮಾರ್ಚ್‌ನಲ್ಲಿ ಉತ್ತರ ಪ್ರದೇಶ ವಿಧಾನ ಸಭೆಗೆ ಚುನಾವಣೆ ನಡೆಯಲಿದೆ.

## ಡ್ರಗ್ಸ್ ಪ್ರಕರಣ: ದಾವೂದ್ ಸಹೋದರ ಕಸ್ಕರ್ ಬಂಧನ

ಮುಂಬೈ (ಪಿಟಿಐ): ಡ್ರಗ್ಸ್ ಪ್ರಕರಣದಲ್ಲಿ ಭೂಗತ ಪಾತಕಿ ದಾವೂದ್ ಇಬ್ರಾಹಿಂ ಸಹೋದರ ಇಕ್ಬಾಲ್ ಕಸ್ಕರ್‌ನನ್ನು ಮುಂಬೈನ ಮಾದಕವಸ್ತು ನಿಯಂತ್ರಣ ಬ್ಯೂರೊ (ಎನ್‌ಸಿಬಿ) ಬುಧವಾರ ಬಂಧಿಸಿದೆ ಎಂದು ಅಧಿಕಾರಿ-ಯೊಬ್ಬರು ತಿಳಿಸಿದ್ದಾರೆ.

ಇತ್ತೀಚೆಗೆ ವಶಪಡಿಸಿಕೊಂಡ 15 ಕೆ.ಜಿ ಹಶೀಶ್ ಪ್ರಕರಣಕ್ಕೆ ಸಂಬಂಧಿಸಿದಂತೆ ಕಸ್ಕರ್‌ನನ್ನು ಬಂಧಿಸಲಾಗಿದೆ. ಈ ಪ್ರಕರಣದಲ್ಲಿ ಆತ ಭಾಗಿಯಾಗಿದ್ದಾನೆ ಎಂಬುದು ಕಂಡುಬಂದಿದೆ ಎಂದು ತಿಳಿಸಿರುವ ಅಧಿಕಾರಿಗಳು, ಹೆಚ್ಚಿನ ವಿವರಗಳನ್ನು ಬಹಿರಂಗಪಡಿಸಿಲ್ಲ. ಕಸ್ಕರ್‌ನನ್ನು 2017ರಲ್ಲಿ ಠಾಣೆ ಪೊಲೀಸರು ಸುಲಿಗೆ ಪ್ರಕರಣಕ್ಕೆ ಸಂಬಂಧಿಸಿ ಬಂಧಿಸಿದ್ದರು. ಡ್ರಗ್ಸ್ ಪ್ರಕರಣದಲ್ಲಿ ಬಂಧಿಸಿದ ನಂತರ, ದಕ್ಷಿಣ ಮುಂಬೈನ ಬಲ್ಲಾರ್ಡ್ ಎಸ್ಟೇಟ್‌ನಲ್ಲಿರುವ ಎನ್‌ಸಿಬಿ ಕಚೇರಿಗೆ ಕರೆತರಲಾಗಿದೆ ಎಂದು ಅಧಿಕಾರಿಗಳು ತಿಳಿಸಿದ್ದಾರೆ.

# ಪ್ರಧಾನಿ ಮೋದಿ ಜತೆ ಮುಖಂಡರ ಸಭೆ ಇಂದು

ಶ್ರೀನಗರ (ಪಿಟಿಐ): ಜಮ್ಮು ಮತ್ತು ಕಾಶ್ಮೀರದ ವಿಶೇಷ ಸ್ಥಾನಮಾನವನ್ನು ರದ್ದುಗೊಳಿಸಿದ ಸುಮಾರು ಎರಡು ವರ್ಷಗಳ ಬಳಿಕ, ಪ್ರಧಾನಿ ನರೇಂದ್ರ ಮೋದಿ ಅವರು ಗುರುವಾರ ಅಲ್ಲಿನ 14 ರಾಜಕೀಯ ಪಕ್ಷಗಳ ಪ್ರತಿನಿಧಿಗಳ ಜತೆಗೆ ಮಾತುಕತೆ ನಡೆಸಲಿದ್ದಾರೆ.

ಮಾತುಕತೆಯ ಕಾರ್ಯಸೂಚಿ ಏನೆಂಬುದು ಪ್ರಕಟವಾಗದಿದ್ದರೂ, ರಾಜ್ಯದಲ್ಲಿ ರಾಜಕೀಯ ಚಟುವಟಿಕೆಗಳನ್ನು ಪುನಃ ಆರಂಭಿಸುವ ವಿಚಾರವಾಗಿಯೇ ಚರ್ಚೆ ನಡೆಯಲಿದೆ ಎಂದು ನಿರೀಕ್ಷಿಸಲಾಗಿದೆ.

ಪ್ರಧಾನಿ ಜತೆಗಿನ ಸಭೆಯಲ್ಲಿ ಯಾವ ಬೇಡಿಕೆಗಳನ್ನು ಇಡಬೇಕು ಎಂಬ ತೀರ್ಮಾನ ಕೈಗೊಳ್ಳಲು ರಾಜ್ಯದ ಪ್ರಮುಖ ಎಂಟು ಪಕ್ಷಗಳ ಗುಪ್ಕಾರ್ ಕೂಟವು ಮಂಗಳವಾರ ನ್ಯಾಷನಲ್ ಕಾನ್ಫರೆನ್ಸ್ ಅಧ್ಯಕ್ಷ ಫಾರೂಕ್ ಅಬ್ದುಲ್ಲಾ ಅವರ ನಿವಾಸದಲ್ಲಿ ಸಭೆ ನಡೆಸಿತ್ತು. ಕಾಶ್ಮೀರದ ವಿಶೇಷ ಸ್ಥಾನಮಾನವ-ನ್ನು ಮರು ಸ್ಥಾಪಿಸಲು ಪ್ರಧಾನಿಯನ್ನು ಒತ್ತಾಯಿಸಲು ಕೂಟ ತೀರ್ಮಾನಿಸಿದೆ.

ಫಾರೂಕ್ ಅಬ್ದುಲ್ಲಾ ಅವರು ಬುಧವಾರ ನ್ಯಾಷನಲ್ ಕಾನ್ಫರೆನ್ಸ್‌ನ ಮುಖಂಡರ ಸಭೆಯನ್ನು ಪ್ರತ್ಯೇಕವಾಗಿ ಆಯೋಜಿಸಿದ್ದಾರೆ. ಜಮ್ಮು-ಕಾಶ್ಮೀರದ ಏಕತೆ ಮತ್ತು ಸಮಗ್ರತೆ-ಯನ್ನು ಕಾಪಾಡುವಂತೆ ಕೇಂದ್ರದ ಮೇಲೆ ಒತ್ತಡ ಹೇರಬೇಕು ಎಂದು ಸಭೆಯಲ್ಲಿ ತೀರ್ಮಾನಿಸಲಾಗಿದೆ ಎಂದು ಮುಖಂಡರು ತಿಳಿಸಿದ್ದಾರೆ.

ಪ್ರಧಾನಿಯ ಅಧ್ಯಕ್ಷತೆಯಲ್ಲಿ ನಡೆಯಲಿರುವ ಸಭೆಯಲ್ಲಿ 14 ರಾಜಕೀಯ ಪಕ್ಷಗಳ ಪ್ರತಿನಿಧಿಗಳು ಪಾಲ್ಗೊಳ್ಳಲಿದ್ದಾರೆ. ಪಿಡಿಪಿ ಮುಖ್ಯಸ್ಥೆ ಮೆಹಬೂಬಾ ಮುಫ್ತಿ ಅವರು ಬುಧವಾರವೇ ದೆಹಲಿಯನ್ನು ತಲುಪಿದ್ದಾರೆ.

ಪ್ರಜಾವಾಣಿ
ಕ್ಲಾಸಿಫೈಡ್ಸ್
ಪ್ರತಿಯೊಬ್ಬರಿಗೂ ಉಪಯುಕ್ತ
email: dhclassifieds@deccanherald.co.in
ಜಾಹೀರಾತುಗಳಿಗಾಗಿ ಸಂಪರ್ಕಿಸಿ:
080 - 45557160 /161/ 162/ 163/ 164
9845114560 / 9731810277/ 9886213331

ಭವಿಷ್ಯ

Astrology

★॥ಕೊಳ್ಳೇಗಾಲದ ಪ್ರಖ್ಯಾತ ಮೋಡಿಮಾಂತ್ರಿಕರು॥★ ನಿಮ್ಮ_ಸಮಸ್ಯೆ ಯಾವುದೇಯಿದ್ದರೂ ಶ್ರೀ_ಭದ್ರಕಾಳಿದೇವಿಯ ಬಲಿಷ್ಠ_ಪೂಜೆಯಿಂದ ಗ್ಯಾರಂಟಿ_ಪರಿಹಾರ. ವಿಶೇಷ_ಸೂಚನೇ: ನಮ್ಮ_ಮೋಡಿ_ಸಿದ್ಧಾಂತ ತಪ್ಪದು. ಸ್ತ್ರೀ_ಮೋಡಿ, ಪುರುಷ_ಮೋಡಿಗಾರರು. ಮೋಡಿ ಕೃಷ್ಣಪ್ಪ. 9880877747

★ಮಂತ್ರದುರ್ಗಿ ಮಾಂತ್ರಿಕರು★ ಕೇರಳ, ಕೊಳ್ಳೆಗಾಲದ ಮಂತ್ರಸಿದ್ಧ_ವಾಕ್ಸಿದ್ದಿಯಿಂದ ಸ್ತ್ರೀಪುರುಷ ವಶೀಕರಣ ಕೆಲವೇ_ಗಂಟೆಗಳಲ್ಲಿ.ಫೋನಿನ_ ಮುಖಾಂತರ ಶಾಶ್ವತ_ಪರಿಹಾರ. (ಸ್ತ್ರೀಪುರುಷ ವಶೀಕರಣ_ಸ್ಪೆಷಲಿಸ್ಟ್) ಪಂ.ರಾಮಚಂದ್ರಭಟ್. 9008711329

ಕೆಲಸದ ನಂತರ ಕಾಣಿಕೆ. ಸ್ತ್ರೀ ಪುರುಷ ವಶೀಕರಣ. ನಿಮ್ಮ ಯಾವುದೇ ಗುಪ್ತಸಮಸ್ಯೆಗಳಿಗೆ, ಇಷ್ಟಪಟ್ಟವರು. ನಿಮ್ಮಂತೆ ಆಗಲು, 2 ದಿನದಲ್ಲಿ ಪರಿಹಾರ: 9591580089.

ಒಂದೇ ಕರೆಯಲ್ಲಿ ಶಾಶ್ವತ ಪರಿಹಾರ ಸ್ತ್ರೀಪುರುಷ ವಶೀಕರಣ ಸ್ಪೆಷಲಿಸ್ಟ್ 100% ಗ್ಯಾರಂಟಿ ಪರಿಹಾರ ಪಂಡಿತ್.ಕೃಷ್ಣಪ್ರಸಾದ್.ಉಚಿತ ಭವಿಷ್ಯ ಖಚಿತ ಪರಿಹಾರ ಶ್ರೀಕ್ಷೇತ್ರ ಧರ್ಮಸ್ಥಳ. 7022443071

★॥ಸಿಗಂದೂರು ಚೌಡೇಶ್ವರಿ॥★ ವಶೀಕರಣ ಆಗಬೇಕಾದವರಿಗೆ ಹಚ್ಚುವುದಾಗಲಿ,ತಿನ್ನಿಸುವುದಾಗಲಿ, ಬಟ್ಟೆ,ಫೋಟೋ,ಕೂದಲು ಇಲ್ಲದಿದ್ದರೂ ಸ್ತ್ರೀಪುರುಷ ಲೈಂಗಿಕ ವಶೀಕರಣ, ಸ್ತ್ರೀಯರಿಗೆ 7ಗಂಟೆಗಳಲ್ಲಿ ಉಚಿತ ಪರಿಹಾರ.9845153558

ಉದ್ಯೋಗಾವಕಾಶ

Part-Time Jobs

ಕನ್ನಡ ಮತ್ತು ಇಂಗ್ಲೀಷ್ ಓದಲು,ಬರೆಯಲು ಬರುವ ಯುವಕ/ಯುವತಿಯರಿಗೆ,ಗೃಹಿಣಿಯರಿಗೆ ವಯಸ್ಸಾದವರು ಮನೆಯಲ್ಲೇ ಕುಳಿತು ನಾವು ಕೊಡುವ ಬುಕ್ ಬರೆಯುವ ಮೂಲಕ ತಿಂಗಳಿಗೆ 12,000-15,000 ವರೆಗೆ ಸಂಪಾದಿಸಿ.ಕೊರಿಯರ್ ಸೌಲಭ್ಯವಿದೆ.8884777502, 8884777503

General

ಕರ್ನಾಟಕದಾದ್ಯಂತ ಪುನರಾರಂಭವಾಗಿರುವ ಪ್ರಸಿದ್ಧಕಂಪನಿ ಹಾಗೂ ಆಫೀಸ್ ಕೆಲಸಗಳಿಗೆಯುವಕ ಯುವತಿಯರು ಬೇಕಾಗಿದ್ದಾರೆ ವಸತಿಯೂಟದೊಂದಿಗೆ Salary+OT 16,800-45000/-.8792155097, 8792156697

ವಾಹನ

Four Wheelers Selling

Others

ಟಾಟಾ Intra V10
ದೊಡ್ಡ ಗಾಡಿಯ ಲೋಡ್ ಅಧಿಕ ಆದಾಯ
TATA INTRA ವಾಹನದ ಮೇಲೆ ಆಕರ್ಷಕ ಕೊಡುಗೆಗಳೊಂದಿಗೆ

ಇಂದೇ ಕೊಳ್ಳಿರಿ ನಿಮ್ಮ ಮಾಸಿಕ ಕಂತನ್ನು 2 ತಿಂಗಳ* ನಂತರ ಪ್ರಾರಂಭಿಸಿ
4.99%* ಬಡ್ಡಿದರ/ 47 ತಿಂಗಳು
₹30,000/-* ದವರೆಗೆ ಗ್ರಾಹಕರ ಕೊಡುಗೆಗಳು
ಎಕ್ಸ್‌ಚೇಂಜ್ ₹20,000/-* ದವರೆಗೆ
ಹೆಚ್ಚಿನ ವಿವರಗಳಿಗಾಗಿ ಕರೆಮಾಡಿ
Bangalore -7259784441
Bangalore/Mysore 95389 35533
Tumkur/Davanagere/ Chitradurga 98950 23373
Mangalore/Shivamogga/ Udupi/Hassan/ Chikkamagalur/Karwar 96208 63338
Hubli/Haveri/Gadag/Bellary/ Raichur - 9620955858
Bagalkot/Bijapur/Gulbarga/ Bidar - 73899 44057
Hubli/Belgaum- 91088 64572
* ಷರತ್ತುಗಳು ಅನ್ವಯಿಸುತ್ತವೆ.

ಲೈಫ್ ಸಪೋರ್ಟ್ ಸಾಧನಗಳೊಂದಿಗೆ
TATA WINGER
AIS 125 Part 1 Compliant

ಟಾಟಾ ಮೋಟಾರ್ಸ್‌ರವರಿಂದ ಸಾಂಕ್ರಾಮಿಕ ಖಾಯಿಲೆಯ ಈ ಅವಧಿಯಲ್ಲಿ ದೇಶಕ್ಕೆ ಉತ್ತಮ ಸೇವೆ ಒದಗಿಸಲು ಆಂಬ್ಯುಲೆನ್ಸ್‌ಗಳನ್ನು ಸಿದ್ಧಪಡಿಸಲಾಗಿದೆ
ಪ್ರಾರಂಭಿಕ ಬೆಲೆ Rs14.21* ಲಕ್ಷದಿಂದ
ಆಂಬ್ಯುಲೆನ್ಸ್ GST ದರದಲ್ಲಿ ಇಳಿಕೆ 28% ರಿಂದ 12% ಗೆ
ಒಳಾಂಗಣದ ವಿಶೇಷತೆಗಳು



ಆಕ್ಸಿಜನ್ ಡೆಲಿವರಿ ಸಿಸ್ಟಮ್

95%* ದವರೆಗೆ ಸಾಲ ಸೌಲಭ್ಯ
3 ವರ್ಷ/3 ಲಕ್ಷ ಕಿ.ಮೀ ವಾರಂಟಿ
ಹೆಚ್ಚಿನ ವಿವರಗಳಿಗಾಗಿ ಕರೆಮಾಡಿ
Bangalore/Hassan / Dakshina Kannada/Udupi/ Chikamagalur/Madiker/ Karwar/Mysore/Mandya/ Chamrajnagar : 95387 84422
Tumkur/Chitradurga/ Davanagere/Bellary/ Hospet/Gangavathi/ Raichur : 89398 22317
Belgaum/Hubli/ Dharwad/Sirsi/ Haveri/Gadag/ Bagalkot/Bijapur/ Gulbarga/Bidar : 95130 66621
* ಷರತ್ತುಗಳು ಅನ್ವಯಿಸುತ್ತವೆ

EDUCATION SPECIAL
We are coming out with special offer for Admission Notice, Education Success Congratulation Ads
DH Classifieds More value, more impact
For details contact:
Jerry : 9731810277
Vishal : 9845114560
Tanveer: 9886213331
E-mail: dhclassifieds@deccanherald.co.in

ಓದುಗರ ಗಮನಕ್ಕೆ
ಪತ್ರಿಕೆಯಲ್ಲಿ ಪ್ರಕಟವಾಗುವ ಜಾಹೀರಾತುಗಳು ವಿಶ್ವಾಸಾರ್ಹವೆಂದು ಭಾವಿಸಲಾಗಿದೆ. ಆದರೆ, ಅವುಗಳಲ್ಲಿ ಪ್ರಕಟಿಸಲಾದ ವಸ್ತು, ಸೇವೆಗಳ ಗುಣಮಟ್ಟ ಹಾಗೂ ನೈಜತೆಯನ್ನು ಓದುಗರೇ ನಿರ್ಧರಿಸಿಕೊಳ್ಳಬೇಕು. ಈ ಜಾಹೀರಾತುಗಳಿಗೆ ಪತ್ರಿಕೆ ಜವಾಬ್ದಾರರಲ್ಲ.
ಜಾಹೀರಾತು ವ್ಯವಸ್ಥಾಪಕರು,
ದಿ ಪ್ರಿಂಟರ್ಸ್ (ಮೈಸೂರು) ಪ್ರೈವೇಟ್ ಲಿ. ಬೆಂಗಳೂರು

EDUCATION
To Place your Classified Ads Contact:
9845114560

ಎಐಎಂಐಎಂ ಸಂಸದ ಇಮ್ತಿಯಾಜ್ ಜಲೀಲ್ ಪ್ರತಿಪಾದನೆ

# ಮುಸ್ಲಿಮರ ಬೆಂಬಲ ಇಲ್ಲದೇ ಬಿಜೆಪಿ ವಿರೋಧಿ ಕೂಟ ಅಸಾಧ್ಯ

ಔರಂಗಾಬಾದ್ (ಪಿಟಿಐ): ಬಿಜೆಪಿ ವಿರುದ್ಧ ರಚಿಸುವ ಯಾವುದೇ ರಾಜಕೀಯ ಕೂಟ ಯಶಸ್ವಿಯಾಗಲು ಮುಸ್ಲಿಮರ ಬೆಂಬಲ ಬೇಕೇಬೇಕು ಎಂದು ಎಐಎಂಐಎಂನ ಔರಂಗಾಬಾದ್ ಸಂಸದ ಇಮ್ತಿಯಾಜ್ ಜಲೀಲ್ ಬುಧವಾರ ಹೇಳಿದ್ದಾರೆ.

ಈ ಹೇಳಿಕೆ ಮೂಲಕ ಅವರು ವಿರೋಧ ಪಕ್ಷಗಳ ನಾಯಕರ ಸಭೆ ನಡೆಸಿರುವ ಎನ್‌ಸಿಪಿ ವರಿಷ್ಠ ಶರದ್ ಪವಾರ್ ಅವರನ್ನು ಕುಟುಕಿದ್ದಾರೆ.

'ದೇಶದ ಮುಸ್ಲಿಮರು ಈಗ ಆಲ್ ಇಂಡಿಯಾ ಮಜ್ಲಿಸ್-ಎ-ಇತ್ತೇಹಾದುಲ್ ಮುಸ್ಲಿಮೀನ್ (ಎಐಎಂಐಎಂ) ಪಕ್ಷದೊಂದಿಗೆ ಇದ್ದಾರೆ. ಮುಸ್ಲಿಮರು ಎನ್‌ಸಿಪಿ ಬೆಂಬಲಿಸುತ್ತಾರೆ ಎಂದು ಶರದ್ ಪವಾರ್ ಭಾವಿಸಿದ್ದರೆ ಅವರು ಔರಂಗಾಬಾದ್‌ಗೆ ಭೇಟಿ ನೀಡಿ ವಾಸ್ತವ ಅರಿಯಬೇಕು' ಎಂದರು.

'ಮುಂದಿನ ವರ್ಷ ಉತ್ತರ ಪ್ರದೇಶ ಹಾಗೂ ದೆಹಲಿ ವಿಧಾನಸಭೆ-ಗಳಿಗೆ ನಡೆಯುವ ಚುನಾವಣೆಯಲ್ಲಿ ಪಕ್ಷವು ಸ್ಪರ್ಧಿಸಲಿದೆ' ಎಂದರು.

'ಪ್ರಧಾನಿ ನರೇಂದ್ರ ಮೋದಿ, ದೆಹಲಿ ಮುಖ್ಯಮಂತ್ರಿ ಅರವಿಂದ ಕೇಜ್ರಿವಾಲ್ ಅವರು ಒಂದೇ ನಾಣ್ಯದ ಎರಡು ಮುಖಗಳಿದ್ದಂತೆ. ಈಶಾನ್ಯ ದೆಹಲಿಯಲ್ಲಿ ನಡೆದ ಗಲಭೆಯಿಂದ ಇದು ಮನದಟ್ಟಾಗಿದೆ. ಮುಸ್ಲಿಮರ ಪರ ಕೇಜ್ರಿವಾಲ್ ಧ್ವನಿ ಎತ್ತುವರು ಎಂಬ ನಿರೀಕ್ಷೆ ಹುಸಿಯಾಗಿದೆ' ಎಂದರು.

**ಕುಸಿದ ಸೇತುವೆ** ಪಶ್ಚಿಮ ಬಂಗಾಳದ ಹೌರಾದಲ್ಲಿ ಮುಂಡೇಶ್ವರಿ ನದಿಯಲ್ಲಿ ಎರಡೂ ಬದಿಯಲ್ಲಿ ಸಂಪರ್ಕ ಕಲ್ಪಿಸುತ್ತಿದ್ದ ಸೇತುವೆ ಪ್ರವಾಹದ ಕಾರಣ ಕುಸಿದಿದೆ –ಪಿಟಿಐ ಚಿತ್ರ

**ಸಂಕ್ಷಿಪ್ತ ಸುದ್ದಿ**

## ಜಮ್ಮು: ಗಡಿ ಬಳಿ 27 ಕೆ.ಜಿ ಹೆರಾಯಿನ್ ವಶಕ್ಕೆ ಪಡೆದ ಬಿಎಸ್‌ಎಫ್

ಶ್ರೀನಗರ: ಜಮ್ಮು ಮತ್ತು ಕಾಶ್ಮೀರದ ಕಥುವಾ ಜಿಲ್ಲೆಯ ಅಂತರರಾಷ್ಟ್ರೀಯ ಗಡಿ ಬಳಿ ಪಾಕಿಸ್ತಾನದ ಮಾದಕ ವಸ್ತುಗಳ ಕಳ್ಳಸಾಗಣೆದಾರನೊಬ್ಬನನ್ನು ಗಡಿ ಭದ್ರತಾ ಪಡೆ (ಬಿಎಸ್‌ಎಫ್) ಬುಧವಾರ ಗುಂಡಿಕ್ಕಿ ಕೊಂದಿದೆ.

ಆತನ ಬಳಿಯಿಂದ ಸುಮಾರು ₹135 ಕೋಟಿ ಮೌಲ್ಯದ ಸುಮಾರು 27 ಕೆ.ಜಿ ಹೆರಾಯಿನ್ ಅನ್ನು ವಶಪಡಿಸಿಕೊಂಡಿದೆ ಎಂದು ಎಂದು ಬಿಎಸ್‌ಎಫ್ ಅಧಿಕಾರಿಗಳು ಬುಧವಾರ ತಿಳಿಸಿದ್ದಾರೆ.

'ಹಿರಾನಗರ ಸೆಕ್ಟರ್‌ನ ಪನ್ಸಾರ ಪ್ರದೇಶದಲ್ಲಿ ಈ ಘಟನೆ ನಡೆದಿದೆ. ಭದ್ರತಾ ಸಿಬ್ಬಂದಿ ಎಚ್ಚರಿಕೆ ನೀಡಿದರೂ, ಅದನ್ನು ಕಡೆಗಣಿಸಿ ಕಳ್ಳಸಾಗಣೆದಾರನೊಬ್ಬ ಭಾರತದ ಭೂಪ್ರದೇಶ ಪ್ರವೇಶಿಸಿದ್ದನು. ಬಳಿಕ ಅಲ್ಲಿಂದ ಪರಾರಿಯಾಗಲು ಯತ್ನಿಸಿದ್ದನು. ಈ ವೇಳೆ ಭದ್ರತಾ ಸಿಬ್ಬಂದಿಯು ಆತನ ಮೇಲೆ ಗುಂಡು ಹಾರಿಸಿದರು' ಎಂದು ಬಿಎಸ್‌ಎಫ್ ವಕ್ತಾರರು ಮಾಹಿತಿ ನೀಡಿದರು.

'ಈ ಕಾರ್ಯಾಚರಣೆ ವೇಳೆ ಹೆರಾಯಿನ್‌ನ 27 ಪ್ಯಾಕೆಟ್‌ಗಳು ಸಿಕ್ಕಿದ್ದು, ಪ್ರತಿ ಪ್ಯಾಕೆಟ್‌ಗಳು ಒಂದು ಕೆ.ಜಿ ತೂಕವನ್ನು ಹೊಂದಿದೆ. ಇದರ ಅಂದಾಜು ಮೌಲ್ಯ ₹135 ಕೋಟಿ ಇರಬಹುದು' ಎಂದು ಅವರು ಹೇಳಿದ್ದಾರೆ.

## ಹಣ ಅಕ್ರಮ ವರ್ಗಾವಣೆ ಪ್ರಕರಣ: ಫ್ಯಾಷನ್ ವಿನ್ಯಾಸಕರಿಗೆ ನೋಟಿಸ್

ನವದೆಹಲಿ (ಪಿಟಿಐ): ಪಂಜಾಬ್‌ನ ಕಾಂಗ್ರೆಸ್ ಶಾಸಕರ ವಿರುದ್ಧದ ಹಣ ಅಕ್ರಮ ವರ್ಗಾವಣೆ ಪ್ರಕರಣಕ್ಕೆ ಸಂಬಂಧಿಸಿದಂತೆ ಜಾರಿ ನಿರ್ದೇಶನಾಲಯ (ಇ.ಡಿ) ದೇಶದ ಮೂವರು ಖ್ಯಾತ ಫ್ಯಾಷನ್ ವಿನ್ಯಾಸಕರಿಗೆ ಸಮನ್ಸ್ ಜಾರಿ ಮಾಡಿದೆ ಎಂದು ಅಧಿಕೃತ ಮೂಲಗಳು ತಿಳಿಸಿವೆ.

ದೆಹಲಿಯ ಕೇಂದ್ರ ತನಿಖಾ ಸಂಸ್ಥೆಯ ಎದುರು ಮುಂದಿನ ವಾರದೊಳಗೆ ವಿಚಾರಣೆಗೆ ಹಾಜರಾಗುವಂತೆ ವಿನ್ಯಾಸಕರಿಗೆ ನೋಟಿಸ್ ಕಳುಹಿಸಲಾಗಿದೆ ಎಂದು ಅವರು ಹೇಳಿದರು.

ವಿನ್ಯಾಸಕರ ಹೆಸರನ್ನು ಬಹಿರಂಗಪಡಿಸಿಲ್ಲ. ಶಾಸಕ ಸುಖಪಾಲ್ ಸಿಂಗ್ ಖೈರಾ ಮತ್ತು ಅವರ ಕುಟುಂಬ ಸದಸ್ಯರ ವಿರುದ್ಧದ ಹಣ ಅಕ್ರಮ ವರ್ಗಾವಣೆ ಪ್ರಕರಣಕ್ಕೆ ಸಂಬಂಧಿಸಿ ನೋಟಿಸ್ ನೀಡಲಾಗಿದೆ. ಪ್ರಕರಣಕ್ಕೆ ಸಂಬಂಧಿಸಿ ದಾಳಿ ನಡೆಸಿದಾಗ ಖೈರಾ ಆಮ್ ಆದ್ಮಿ ಪಕ್ಷದ (ಎಎಪಿ) ಬಂಡಾಯ ಶಾಸಕರಾಗಿದ್ದರು. ಅವರು ಇತ್ತೀಚೆಗೆ ಮತ್ತೆ ಕಾಂಗ್ರೆಸ್ ಸೇರಿದ್ದಾರೆ.

## ಸುಪ್ರೀಂ ಮೊರೆ ಹೋದ ರಾಮ್‌ದೇವ್



ನವದೆಹಲಿ: ಅಲೋಪಥಿ ವೈದ್ಯಕೀಯ ಪದ್ಧತಿಯ ಬಗ್ಗೆ ನೀಡಿರುವ ಹೇಳಿಕೆಯನ್ನು ಖಂಡಿಸಿ ತಮ್ಮ ವಿರುದ್ಧ ದಾಖಲಾಗಿರುವ ವಿವಿಧ ಪ್ರಕರಣಗಳ ವಿಚಾರಣೆಯನ್ನು ತಡೆಹಿಡಿಯುವಂತೆ ಯೋಗಗುರು ಬಾಬಾ ರಾಮ್‌ದೇವ್ ಸುಪ್ರೀಂ ಕೋರ್ಟ್‌ಗೆ ಮನವಿ ಮಾಡಿದ್ದಾರೆ.

ಪಟ್ನಾ ಹಾಗೂ ರಾಯ್‌ಪುರದಲ್ಲಿ ಭಾರತ ವೈದ್ಯಕೀಯ ಸಂಘ ದಾಖಲಿಸಿರುವ ಎಫ್‌ಐಆರ್‌ಗಳನ್ನು ದೆಹಲಿಗೆ ವರ್ಗಾಯಿಸುವಂತೆ ಅರ್ಜಿಯಲ್ಲಿ ಕೋರಿದ್ದಾರೆ. ರಾಮ್‌ದೇವ್ ತಮ್ಮ ಹೇಳಿಕೆಗಳಿಂದ ಅಲೋಪಥಿ ವೈದ್ಯಪದ್ಧತಿಯ ಬಗ್ಗೆ ತಪ್ಪು ಮಾಹಿತಿ ಹರಡುತ್ತಿದ್ದಾರೆ ಎಂದು ಭಾರತೀಯ ವೈದ್ಯಕೀಯ ಸಂಘವು ಆರೋಪಿಸಿ, ದೂರು ನೀಡಿತ್ತು.

ಕೋವಿಡ್ ಆರೈಕೆಯ ವಿಚಾರವಾಗಿ ರಾಮ್‌ದೇವ್ ಅವರು ಅಲೋಪಥಿ ವೈದ್ಯಕೀಯ ಪದ್ಧತಿಯನ್ನು ಟೀಕೆಗೆ ಒಳಪಡಿಸಿದ್ದರು. ಆದರೆ, ಕೇಂದ್ರದ ಆರೋಗ್ಯ ಸಚಿವರ ಕಠಿಣ ಪದಗಳ ಪತ್ರ ಬಂದ ಬಳಿಕ ಅವರು ತಮ್ಮ ಹೇಳಿಕೆಯನ್ನು ಹಿಂಪಡೆದುಕೊಂಡಿದ್ದರು.

ಪೂರ್ವ ಲಡಾಖ್ ಬಿಕ್ಕಟ್ಟು

# ಭಾರತ–ಚೀನಾ ಮತ್ತೊಂದು ಸುತ್ತಿನ ಮಾತುಕತೆ

ನವದೆಹಲಿ(ಪಿಟಿಐ): ಪೂರ್ವ ಲಡಾಖ್ ಗಡಿ ಬಿಕ್ಕಟ್ಟಿಗೆ ಸಂಬಂಧಿಸಿ ಭಾರತ-ಚೀನಾ ರಾಜತಾಂತ್ರಿಕ ಮಟ್ಟದ ಮತ್ತೊಂದು ಸುತ್ತಿನ ಮಾತುಕತೆ ಈ ವಾರ ನಡೆಯುವ ಸಾಧ್ಯತೆ ಇದೆ. ಬಾಕಿ ಉಳಿದಿರುವ ಪ್ರದೇಶಗಳಿಂದ ಸೇನಾ ಪಡೆಗಳನ್ನು ಹಿಂದಕ್ಕೆ ಕರೆಸಿಕೊಳ್ಳುವ ಬಗ್ಗೆ ಮಾತುಕತೆ ನಡೆಯಲಿದೆ ಎಂದು ಮೂಲಗಳು ತಿಳಿಸಿವೆ.

ಭಾರತ-ಚೀನಾ ಗಡಿ ವ್ಯವಹಾರಗಳ ಸಮನ್ವಯಕ್ಕಾಗಿ ನಡೆಯುವ ಮಾತುಕತೆಯು ಉಭಯ ದೇಶಗಳ ಸೇನಾ ಪಡೆಗಳ ನಡುವೆ ಪೂರ್ವ ಲಡಾಖ್‌ನಲ್ಲಿ ಇರುವ ಉದ್ವಿಗ್ನತೆ ಕಡಿಮೆಗೊಳಿಸುವ ನಿರೀಕ್ಷೆ ಇದೆ. ಜೂನ್ 24ರಂದು ಮಾತುಕತೆ ನಡೆಯುವ ನಿರೀಕ್ಷೆ ಇದೆ ಎನ್ನಲಾಗಿದೆ. ಈ ಮಾತುಕತೆಯ ಬಳಿಕ ಮತ್ತೊಂದು ಸುತ್ತಿನ ಕಮಾಂಡರ್ ಮಟ್ಟದ ಮಾತುಕತೆ ನಡೆಯಲಿದೆ ಎಂಬುದೂ ತಿಳಿದುಬಂದಿದೆ.

## ₹ 2.5 ಲಕ್ಷದವರೆಗೆ ಜಮೆ: ಗೃಹಿಣಿಯರಿಗೆ ಐ.ಟಿ. ಪರಿಶೀಲನೆಯಿಂದ ವಿನಾಯಿತಿ

ನವದೆಹಲಿ (ಪಿಟಿಐ): ನೋಟು ರದ್ದತಿಯ ನಂತರದಲ್ಲಿ ಗೃಹಿಣಿಯವರು ತಮ್ಮ ಬ್ಯಾಂಕ್ ಖಾತೆಯಲ್ಲಿ ಜಮಾ ಮಾಡಿದ ₹ 2.5 ಲಕ್ಷದವರೆಗಿನ ಮೊತ್ತವು ಆದಾಯ ತೆರಿಗೆ ಪರಿಶೀಲನೆಗೆ ಒಳಪಡುವುದಿಲ್ಲ ಎಂದು ಆದಾಯ ತೆರಿಗೆ ಮೇಲ್ಮನವಿ ನ್ಯಾಯಮಂಡಳಿ (ಐಟಿಎಟಿ) ಹೇಳಿದೆ.

ಗ್ವಾಲಿಯರ್‌ನ ಉಮಾ ಅಗರ್ವಾಲ್ ಅವರು ಸಲ್ಲಿಸಿದ್ದ ಮೇಲ್ಮನವಿಯ ವಿಚಾರಣೆ ನಡೆಸಿದ ಐಟಿಎಟಿ ಆಗ್ರಾ ಪೀಠವು, ತನ್ನ ಈ ಆದೇಶವು ಇದೇ ಬಗೆಯ ಇತರ ಪ್ರಕರಣಗಳಿಗೂ ಅನ್ವಯ ಆಗುತ್ತದೆ ಎಂದು ಹೇಳಿದೆ.

ಉಮಾ ಅವರು 2016–17ನೆಯ ಸಾಲಿನ ಐ.ಟಿ. ವಿವರಗಳಲ್ಲಿ ತಮ್ಮ ಆದಾಯ ₹ 1.30 ಲಕ್ಷ ಎಂದು ಘೋಷಿ-ಸಿಕೊಂಡಿದ್ದರು. ಆದರೆ, ನೋಟು ರದ್ದತಿ ನಂತರದಲ್ಲಿ ಅವರು ₹ 2.11 ಲಕ್ಷವನ್ನು ತಮ್ಮ ಬ್ಯಾಂಕ್ ಖಾತೆಗೆ ಜಮಾ ಮಾಡಿದರು. ಇದನ್ನು ಆದಾಯ ತೆರಿಗೆ ಇಲಾಖೆಯು ಪರಿಶೀಲನೆಗೆ ಕೈಗೆತ್ತಿಕೊಂಡಿತ್ತು. ಈ ಹಣದ ಬಗ್ಗೆ ವಿವರ ನೀಡುವಂತೆ ಉಮಾ ಅವರಿಗೆ ಸೂಚಿಸಲಾಗಿತ್ತು.

ಹಿಂದೆ ಉಳಿತಾಯ ಮಾಡಿದ್ದ ಹಣ, ಪತಿ, ಮಗ, ಕೆಲವು ಸಂಬಂಧಿಕರು ತಮಗೆ ನೀಡಿದ ಹಣದಿಂದ ಇಷ್ಟು ಮೊತ್ತ ಆಗಿದೆ ಎಂದು ಉಮಾ ಹೇಳಿದ್ದರು. ಈ ವಿವರಣೆಯನ್ನು ಆದಾಯ ತೆರಿಗೆ ಆಯುಕ್ತರು (ಮೇಲ್ಮನವಿ) ಒಪ್ಪಲಿಲ್ಲ. ನಂತರ ಉಮಾ ಅವರು ಐಟಿಎಟಿ ಮೊರೆ ಹೋದರು. 'ದೇಶದ ಎಲ್ಲೆಡೆ ಮಹಿಳೆಯರು ಮನೆಯ ಖರ್ಚುಗಳಲ್ಲೇ ಒಂದಿಷ್ಟು ಹಣ ಉಳಿತಾಯ ಮಾಡುತ್ತಿದ್ದಾರೆ. ವರ್ಷಗಳಿಂದ ಕೂಡಿಟ್ಟ ₹ 500 ಹಾಗೂ ₹ 1000ದ ಮುಖಬೆಲೆಯ ನೋಟುಗಳನ್ನು ನೋಟು ರದ್ದತಿ ನಂತರ ಅವರು ಜಮಾ ಮಾಡಬೇಕಾಯಿತು' ಎಂದು ಐಟಿಎಟಿ ಆದೇಶದಲ್ಲಿ ಹೇಳಲಾಗಿದೆ.

## ಕೋವಿಡ್ ನಿರ್ಮೂಲನೆಗೆ 'ಡೆಲ್ಟಾ' ರೂಪಾಂತರ ವೈರಸ್ ಅಡ್ಡಿ

ವಾಷಿಂಗ್ಟನ್ (ಪಿಟಿಐ): 'ಕೋವಿಡ್ 19' ಸಾಂಕ್ರಾಮಿಕದ ಸಂಪೂರ್ಣ ನಿರ್ಮೂಲನೆ ಮಾಡುವ ಅಮೆರಿಕದ ಪ್ರಯತ್ನಗಳಿಗೆ ಅಪಾಯಕಾರಿಯಾಗಿರುವ 'ಡೆಲ್ಟಾ' ರೂಪಾಂತರ ಕೊರೊನಾ ವೈರಸ್ ಬಹುದೊಡ್ಡ ಆತಂಕವನ್ನು ತಂದೊಡ್ಡಿದೆ ಎಂದು ರಾಷ್ಟ್ರೀಯ ಅಲರ್ಜಿ ಮತ್ತು ಸಾಂಕ್ರಾಮಿಕ ರೋಗಗಳ (ಎನ್‌ಐಎಐಡಿ) ಮುಖ್ಯಸ್ಥ ಹಾಗೂ ಶ್ವೇತಭವನದ ಮುಖ್ಯ ವೈದ್ಯಕೀಯ ಸಲಹೆಗಾರ ಡಾ. ಆಂಥೊನಿ ಫೌಸಿ ಎಚ್ಚರಿಸಿದ್ದಾರೆ.

# ಗೂಗಲ್ ವಿರುದ್ಧ ತನಿಖೆಗೆ ಆದೇಶ

ನವದೆಹಲಿ (ಪಿಟಿಐ): ದೇಶದ ಸ್ಮಾರ್ಟ್ ಟಿ.ವಿ.ಗಳ ಕಾರ್ಯಾಚರಣೆ ವ್ಯವಸ್ಥೆಯ (operating system) ಮಾರುಕಟ್ಟೆಯಲ್ಲಿ ಗೂಗಲ್ ಕಂಪನಿಯು ಸ್ಪರ್ಧಾತ್ಮಕತೆಗೆ ವಿರುದ್ಧವಾದ ರೀತಿಯಲ್ಲಿ ನಡೆದುಕೊಂಡಿದೆ ಎಂಬ ಆರೋಪದ ಬಗ್ಗೆ ವಿಸ್ತೃತ ತನಿಖೆಗೆ ಭಾರತೀಯ ಸ್ಪರ್ಧಾ ಆಯೋಗ (ಸಿಸಿಐ) ಆದೇಶಿಸಿದೆ.

ಟಿ.ವಿ. ಆ್ಯಪ್ ವಿತರಣೆ ಒಪ್ಪಂದದ (ಟಿಎಡಿಎ) ಅಡಿಯಲ್ಲಿ, ಗೂಗಲ್‌ನ ಎಲ್ಲ ಆ್ಯಪ್‌ಗಳನ್ನು ಮೊದಲೇ ಇನ್‌ಸ್ಟಾಲ್ ಮಾಡಿರಬೇಕು ಎಂದು ಹೇಳುವುದು ಟಿ.ವಿ. ತಯಾರಕರ ಮೇಲೆ ನ್ಯಾಯಸಮ್ಮತವಲ್ಲದ ಷರತ್ತುಗಳನ್ನು ಹೇರಿದಂತೆ ಎಂದು ಮೇಲ್ನೋಟಕ್ಕೆ ಅನಿಸುತ್ತದೆ ಎಂದು ಆಯೋಗವು ಹೇಳಿದೆ.

'ಸ್ಮಾರ್ಟ್ ಟಿ.ವಿ.ಗಳಿಗೆ ಸಂಬಂಧಿಸಿದಂತೆ ನಾವು ಪಾಲಿಸುತ್ತಿರುವ ಪ್ರಕ್ರಿಯೆಗಳು ಸಂಬಂಧಪಟ್ಟ ಕಾನೂನುಗಳಿಗೆ ಅನುಗುಣವಾಗಿಯೇ ಇವೆ ಎಂಬ ದೃಢ ವಿಶ್ವಾಸ ನಮ್ಮದು' ಎಂದು ಗೂಗಲ್‌ನ ವಕ್ತಾರರೊಬ್ಬರು ಪ್ರತಿಕ್ರಿಯೆ ನೀಡಿದ್ದಾರೆ.

## ದೇಶದಾದ್ಯಂತ ಮಾರುಕಟ್ಟೆ ಧಾರಣೆ

**ಅಡಿಕೆ**
**ಬಂಟ್ವಾಳ**
ಕೋಕ 10000-22500
ಹೊಸತು 23500-42000
ಹಳತು 42500-52000
**ಕುಮಟಾ**
ಚಿಪ್ಪು 28569-31289
ಕೋಕ 19569-29289
ಫ್ಯಾಕ್ಟರಿ 13699-17729
ಹಳೆಚಾಲಿ 40169-41399
ಹೊಸಚಾಲಿ 36089-38099
**ಪುತ್ತೂರು**
ಕೋಕ 9500-25000
ಹೊಸತು 29500-42100
**ಶಿವಮೊಗ್ಗ**
ಬೆಟ್ಟೆ 43829-45899
ಗೊರಬಲು 17100-33389
ರಾಶಿ 39569-42849
ಸರಕು 49509-74400
**ಸಿದ್ದಾಪುರ**
ಬಿಳಿಗೋಟು 26899-32608
ಚಾಲಿ 34069-38129
ಕೋಕ 23099-30812
ಕೆಂಪುಗೋಟು 26011-31258
ರಾಶಿ 38159-41899
ತಟ್ಟಿಬೆಟ್ಟೆ 30211-40589
**ಸುಳ್ಯ**
ಕೋಕ 10000-25000
ಹೊಸತು 30000-42000
ಹಳತು 42000-52000
**ತೀರ್ಥಹಳ್ಳಿ**
ಬೆಟ್ಟೆ 43000-44625
ಗೊರಬಲು 21009-33199
ರಾಶಿ 32066-42799
ಸರಕು 44259-75400
**ಯಲ್ಲಾಪುರ**
ಬಿಳಿಗೋಟು 27127-33672
ಚಾಲಿ 33829-39099
ಕೋಕ 22012-31899
ಕೆಂಪುಗೋಟು 28919-33699
ರಾಶಿ 39199-42797
ತಟ್ಟಿಬೆಟ್ಟೆ 32131-38899
**ಏಲಕ್ಕಿ ಧಾರಣೆ**
**ಸಕಲೇಶಪುರ**
ಕೂಳೆ 700- 800
ನಡುಗೋಲು 850-900
ರಾಶಿ 950-1000
ರಾಶಿ ಉತ್ತಮ 1000-1050
ಜರಡಿ 1150 -1200
ಹೆರಕಿದ್ದು 1500-1600
ಹಸಿರು ಸಾಧಾರಣ 900- 1000
ಹಸಿರು ಉತ್ತಮ 1100- 1200
ಹಸಿರು ಅತಿ ಉತ್ತಮ 1400-1500
**ಕಾಳು ಮೆಣಸು** 385
**ರೇಷ್ಮೆಗೂಡು**
**ರಾಮನಗರ**
ಮಿಶ್ರ ತಳಿ (ಸಿ.ಬಿ) 327-390
ದ್ವಿತಳಿ (ಬಿ.ವಿ) 377-491

### ಕಾಫಿ ಧಾರಣೆ (50 ಕೆ.ಜಿಗೆ ₹ ಗಳಲ್ಲಿ)

| | ಮೂಡಿಗೆರೆ | ಹಾಸನ | | |
|---|---|---|---|---|
| | ಮುದ್ರಮನೆ | ಪ್ಲಾಂಟರ್ಸ್ | ಅಲ್ಲಾನಾ | ನ್ಯೂಯಾರ್ಕ್ |
| ಎಪಿ | 10,900 | 10,800 | 10,675 | 151.25 |
| ಎಸಿ | 4,705 | 4,000 | 4,075 | |
| ಆರ್‌ಪಿ | 5,400 | 5,250 | 5,350 | ಲಂಡನ್ (ಡಾಲರ್) |
| ಆರ್‌ಸಿ | 3,125 | 3,100 | 3,125 | 1565 |

### ಷೇರುಪೇಟೆ ವಹಿವಾಟು




### ಎನ್‌ಎಸ್‌ಇ ನಿಫ್ಟಿ

| | |
|---|---|
| ಹಿಂದಿನ ಅಂತ್ಯ | 15,772 |
| ಇಂದಿನ ಅಂತ್ಯ | 15,686 |
| ▼ | 85 |
| ದಿನದ ಗರಿಷ್ಠ | 15,862 |

### ವಿನಿಮಯ ದರ

| | |
|---|---|
| $ ಡಾಲರ್ | 74.27 |
| £ ಪೌಂಡ್ | 103.7 |
| € ಯುರೊ | 88.69 |
| ¥ ಯೆನ್ (100ಕ್ಕೆ) | 66.92 |

### ಎನ್‌ಇಸಿಸಿ ಸೂಚಿಸಿರುವ ಮೊಟ್ಟೆ ಧಾರಣೆ

ಬೆಂಗಳೂರು
100 ಮೊಟ್ಟೆಗೆ ₹525
12 ಮೊಟ್ಟೆಗೆ ₹72
ಮೈಸೂರು
100 ಮೊಟ್ಟೆಗೆ ₹520

### ಖಾದ್ಯ ತೈಲ ಮುಂಬೈ

(10 ಕೆಜಿಗೆ)

| | |
|---|---|
| ಶೇಂಗಾ (ರಿಫೈಂಡ್) | ₹1430 (1430) |
| ಸೋಯಾ (ರಿಫೈಂಡ್) | ₹1305 (1305) |
| ಸೂರ್ಯಕಾಂತಿ (ರಿಫೈಂಡ್) | ₹1310 (1300) |
| ಪಾಮೋಲಿನ್ | ₹1165 (1160) |

### ಡಿಜಿಟಲ್ ಕಲಿಕಾ ಯೋಜನೆಯಡಿ ₹ 163 ಕೋಟಿ ವೆಚ್ಚ: ಮುಖ್ಯಮಂತ್ರಿ

# '1.55 ಲಕ್ಷ ವಿದ್ಯಾರ್ಥಿಗಳಿಗೆ 'ಟ್ಯಾಬ್' ವಿತರಣೆ'

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ಕೋವಿಡ್ ಸಂದರ್ಭದಲ್ಲಿ ಕಲಿಕೆಗೆ ತೊಂದರೆ ಆಗಬಾರದು ಎಂಬ ಉದ್ದೇಶದಿಂದ ಡಿಜಿಟಲ್ ಕಲಿಕಾ ಯೋಜನೆಯಡಿ ₹ 163 ಕೋಟಿ ವೆಚ್ಚದಲ್ಲಿ ಸರ್ಕಾರಿ ಕಾಲೇಜುಗಳ 1.55 ಲಕ್ಷ ವಿದ್ಯಾರ್ಥಿಗಳಿಗೆ ಟ್ಯಾಬ್ಲೆಟ್ ಪಿಸಿಗಳನ್ನು ವಿತರಿಸಲಾಗುತ್ತಿದೆ' ಎಂದು ಮುಖ್ಯಮಂತ್ರಿ ಬಿ.ಎಸ್. ಯಡಿಯೂರಪ್ಪ ತಿಳಿಸಿದರು.

ವಿಧಾನಸೌಧ ಬ್ಯಾಂಕ್ವೆಟ್ ಹಾಲ್‌ನಲ್ಲಿ ಕಾಲೇಜು ಮತ್ತು ತಾಂತ್ರಿಕ ಶಿಕ್ಷಣ ಇಲಾಖೆಯ ಸಹಯೋಗದಲ್ಲಿ ಬುಧವಾರ ಹಮ್ಮಿಕೊಂಡಿದ್ದ ಸ್ಮಾರ್ಟ್ ತರಗತಿಗಳ ಉದ್ಘಾಟಿಸಿ ಮತ್ತು ಕೆಲವು ವಿದ್ಯಾರ್ಥಿಗಳಿಗೆ ಸಾಂಕೇತಿಕವಾಗಿ ಟ್ಯಾಬ್ಲೆಟ್ ಪಿಸಿ ವಿತರಿಸಿ ಅವರು ಮಾತನಾಡಿದರು.

'ರಾಜ್ಯದಲ್ಲಿ 430 ಸರ್ಕಾರಿ ಪ್ರಥಮ ದರ್ಜೆ ಕಾಲೇಜು, 87 ಸರ್ಕಾರಿ ಪಾಲಿಟೆಕ್ನಿಕ್ ಹಾಗೂ 14 ಸರ್ಕಾರಿ ಎಂಜಿನಿಯರಿಂಗ್ ಕಾಲೇಜುಗಳಲ್ಲಿ ₹ 27.77 ಕೋಟಿ ವೆಚ್ಚದಲ್ಲಿ 2,500 ಸ್ಮಾರ್ಟ್ ತರಗತಿಗಳ ಸ್ಥಾಪಿಸಲಾಗಿದೆ.

ವಿದ್ಯಾರ್ಥಿನಿಯೊಬ್ಬಳಿಗೆ ಮುಖ್ಯಮಂತ್ರಿ ಬಿ.ಎಸ್. ಯಡಿಯೂರಪ್ಪ ಅವರು ಟ್ಯಾಬ್ಲೆಟ್ ಪಿಸಿ ವಿತರಿಸಿದರು. ಉನ್ನತ ಶಿಕ್ಷಣ ಸಚಿವ ಡಾ.ಸಿ.ಎನ್. ಅಶ್ವತ್ಥನಾರಾಯಣ, ಉನ್ನತ ಶಿಕ್ಷಣ ಇಲಾಖೆಯ ಹೆಚ್ಚುವರಿ ಮುಖ್ಯ ಕಾರ್ಯದರ್ಶಿ ಕುಮಾರ್ ನಾಯಕ್ ಇದ್ದರು ಪ್ರಜಾವಾಣಿ ಚಿತ್ರ

ಪ್ರತಿ ಸ್ಮಾರ್ಟ್ ತರಗತಿಯಲ್ಲಿ ಮಲ್ಟಿ ಮೀಡಿಯಾ ಪ್ರೊಜೆಕ್ಟರ್, ಯುಪಿಎಸ್, ಅಂಡ್ರಾಯ್ಡ್ ಬಾಕ್ಸ್, ವೈ-ಫೈ ಅಳವಡಿಸಲಾಗಿದ್ದು, ಬಹುಮಾಧ್ಯಮಗಳ ಬಳಕೆ ಮಾಡಲಾಗುವುದು' ಎಂದರು.

'ನಗರ ಹಾಗೂ ಗ್ರಾಮೀಣ ಪ್ರದೇಶದ ಸಾಮಾಜಿಕವಾಗಿ, ಆರ್ಥಿಕವಾಗಿ ಹಿಂದುಳಿದ ವಿದ್ಯಾರ್ಥಿಗಳಿಗೆ ತಾರತಮ್ಯ ಇಲ್ಲದೆ ಕಲಿಕೆ ನಿರಂತರವಾಗಿ ಮುಂದುವರಿಸಲು ಮತ್ತು ಉನ್ನತ ಶಿಕ್ಷಣದಿಂದ ವಂಚಿತರಾಗದೆ ವಿದ್ಯಾರ್ಥಿಗಳು ಭವಿಷ್ಯ ಕಟ್ಟಿಕೊಳ್ಳಲು ಈ ಯೋಜನೆ ಅನುಕೂಲ ಆಗಲಿದೆ' ಎಂದರು.

ಉನ್ನತ ಶಿಕ್ಷಣ ಸಚಿವರೂ ಆಗಿರುವ ಉಪ ಮುಖ್ಯಮಂತ್ರಿ ಡಾ.ಸಿ.ಎನ್. ಅಶ್ವತ್ಥನಾರಾಯಣ ಮಾತನಾಡಿ, 'ಉನ್ನತ ಶಿಕ್ಷಣ ವಿದ್ಯಾರ್ಥಿಗಳಿಗೆ ಉಚಿತ ಟ್ಯಾಬ್‌ಗಳ ಮೂಲಕ ಕಲಿಕಾ ನಿರ್ವಹಣಾ ವ್ಯವಸ್ಥೆ ಮಾಡಿರುವ ದೇಶದ ಮೊದಲ ರಾಜ್ಯ ಕರ್ನಾಟಕ' ಎಂದರು.

'ಉನ್ನತ ಶಿಕ್ಷಣದಲ್ಲಿ ಮುಂಚೂಣಿಯಲ್ಲಿರುವ ತಂತ್ರಜ್ಞಾನದ ಅವಿಷ್ಕಾರ ಎಲ್ಲ ವಿದ್ಯಾರ್ಥಿಗಳಿಗೆ ಉಪಯೋಗವಾಗಬೇಕು. ಈಗಿನ ವ್ಯವಸ್ಥೆಯಲ್ಲಿ ವಿದ್ಯಾರ್ಥಿಗಳ ಕಲಿಕೆಯನ್ನು ಕಸಿದುಕೊಂಡಂತೆ ಆಗಬಾರದು ಎನ್ನುವ ದೃಷ್ಟಿಯಿಂದ ಆಧುನಿಕ ಉಪಕರಣಗಳನ್ನು ಅಳವಡಿಸಿ, ಗ್ರಾಮೀಣ ಭಾಗದ ವಿದ್ಯಾರ್ಥಿಗಳಿಗೆ ಗುಣಮಟ್ಟದ ಶಿಕ್ಷಣ ನೀಡಲು ಪ್ರಯತ್ನಿಸಲಾಗುತ್ತಿದೆ' ಎಂದರು.

### 'ಸ್ಮಾರ್ಟ್ ಕ್ಲಾಸ್' ವಿದ್ಯಾರ್ಥಿಯಾದ ಡಿಸಿಎಂ

ಸ್ಮಾರ್ಟ್‌ಕ್ಲಾಸ್ ರೂಂ ಉದ್ಘಾಟಿಸಿ ಮುಖ್ಯಮಂತ್ರಿ ತೆರಳಿದ ಬಳಿಕ ಡಾ.ಸಿ.ಎನ್. ಅಶ್ವತ್ಥನಾರಾಯಣ, ಸ್ಮಾರ್ಟ್ ಕ್ಲಾಸ್ ರೂಂನಲ್ಲಿ ಪಾಠ ಕೇಳಿದರು.

ಕೋಲಾರ ಜಿಲ್ಲೆಯ ಮಾಲೂರಿನ ಪ್ರಥಮ ದರ್ಜೆ ಕಾಲೇಜಿನ ಕನ್ನಡ ಸಹಾಯಕ ಪ್ರಾಧ್ಯಾಪಕಿ ಶ್ವೇತಾ ಅವರು ಸ್ಮಾರ್ಟ್ ಕ್ಲಾಸ್ ರೂಂನಿಂದ ಮೊದಲ ಪಾಠ ಆರಂಭಿಸಿದರು. ಬಳಿಕ, ಮಹಾರಾಣಿ ಅಮ್ಮಣ್ಣಿ ಕಾಲೇಜಿನ ಪ್ರಾಧ್ಯಾಪಕಿ ಪ್ರೊ. ಶಾಲಿನಿ ಅವರು ರಸಾಯನ ವಿಜ್ಞಾನ ಪಾಠ ಮಾಡಿದರು. ಹೈಸ್ಪೀಡ್ ಇಂಟರ್‌ನೆಟ್, ಆಧುನಿಕ ಫೀಚರ್‌ಗಳಿರುವ ಟ್ಯಾಬ್ಲೆಟ್ ಪಿಸಿ ಮೂಲಕ ಕಲಿಕಾ ನಿರ್ವಹಣಾ ವ್ಯವಸ್ಥೆ ಅಡಿಯಲ್ಲಿ ನಡೆದ ಈ ಬೋಧನೆ- ಕಲಿಕೆಯ ಮಾದರಿಯನ್ನು ವಿದ್ಯಾರ್ಥಿಯಂತೆಯೇ ಅಶ್ವತ್ಥನಾರಾಯಣ, ಉನ್ನತ ಶಿಕ್ಷಣ ಪರಿಷತ್ ಉಪಾಧ್ಯಕ್ಷ ಪ್ರೊ.ತಿಮ್ಮೇಗೌಡ ಮತ್ತು ಕಾಲೇಜು ಶಿಕ್ಷಣ ಇಲಾಖೆಯ ಆಯುಕ್ತ ಪ್ರದೀಪ್ ಆಲಿಸಿದರು.

### 2019–20ರಲ್ಲಿ ಚುನಾವಣಾ ಟ್ರಸ್ಟ್‌ಗಳ ಮೂಲಕ ಹಂಚಿಕೆ

# ಬಿಜೆಪಿಗೆ ₹ 276 ಕೋಟಿ; ಕಾಂಗ್ರೆಸ್‌ಗೆ ₹ 58 ಕೋಟಿ

ನವದೆಹಲಿ(ಪಿಟಿಐ): ಚುನಾವಣಾ ಟ್ರಸ್ಟ್‌ಗಳ ಮೂಲಕ 2019–20ನೇ ಹಣಕಾಸು ವರ್ಷದಲ್ಲಿ ವಿತರಿಸಲಾದ ದೇಣಿಗೆ ಪೈಕಿ ಬಿಜೆಪಿ ₹ 276.45 ಕೋಟಿ ನೀಡಲಾಗಿದೆ. ಇದು ಎಲ್ಲ ರಾಜಕೀಯ ಪಕ್ಷಗಳಿಗೆ ನೀಡಲಾದ ಒಟ್ಟು ದೇಣಿಗೆಯ ಶೇ 76.17ರಷ್ಟಾಗಲಿದೆ.

ಮತದಾನ ಹಕ್ಕುಗಳ ಗುಂಪು 'ಅಸೋಸಿಯೇಷನ್ ಫಾರ್ ಡೆಮಾಕ್ರಟಿಕ್ ರಿಫಾರ್ಮ್ಸ್' (ಎಡಿಆರ್) 2019–20ನೇ ಹಣಕಾಸು ವರ್ಷದಲ್ಲಿ ಹಂಚಿಕೆಯಾದ ದೇಣಿಗೆಗಳ ವಿವರಗಳನ್ನು ವಿಶ್ಲೇಷಿಸಿ ಸಿದ್ಧಪಡಿಸಿರುವ ವರದಿಯಲ್ಲಿ ಈ ವಿಷಯವನ್ನು ತಿಳಿಸಲಾಗಿದೆ.

ಎರಡನೇ ಸ್ಥಾನದಲ್ಲಿ ಕಾಂಗ್ರೆಸ್ ಪಕ್ಷವಿದ್ದು, ₹ 58 ಕೋಟಿ ದೇಣಿಗೆಯನ್ನು ಸ್ವೀಕರಿಸಿದೆ. ಈ ಮೊತ್ತವು ಏಳು ಚುನಾವಣಾ ಟ್ರಸ್ಟ್‌ಗಳ ಮೂಲಕ ಹಂಚಲಾದ ಒಟ್ಟು ದೇಣಿಗೆಯ ಶೇ 15.88ರಷ್ಟಾಗಲಿದೆ ಎಂದು ಎಡಿಆರ್ ಹೇಳಿದೆ.

**ಮುಖ್ಯಾಂಶಗಳು**
- 'ಅಸೋಸಿಯೇಷನ್ ಫಾರ್ ಡೆಮಾಕ್ರಟಿಕ್ ರಿಫಾರ್ಮ್ಸ್' ವರದಿಯಲ್ಲಿ ಉಲ್ಲೇಖ
- ಜೆಎಸ್‌ಡಬ್ಲ್ಯು ಸ್ಟೀಲ್ ಕಂಪನಿಯಿಂದ ₹ 39.10 ಕೋಟಿ ದೇಣಿಗೆ

ಈ ಹಣಕಾಸು ವರ್ಷದಲ್ಲಿ ಅತ್ಯಧಿಕ ದೇಣಿಗೆ ನೀಡಿದ ಕಂಪನಿಗಳ ಪೈಕಿ ಜೆಎಸ್‌ಡಬ್ಲ್ಯು, ಅಪೊಲೊ ಟೈರ್ಸ್, ಇಂಡಿಯಾಬುಲ್ಸ್, ದೆಹಲಿ ಇಂಟರ್‌ನ್ಯಾಷನಲ್ ಏರ್‌ಪೋರ್ಟ್ ಹಾಗೂ ಡಿಎಲ್‌ಎಫ್ ಸಮೂಹ ಸಂಸ್ಥೆಗಳು ಮುಂಚೂಣಿಯಲ್ಲಿವೆ ಎಂದು ಸಂಸ್ಥೆ ಹೇಳಿದೆ.

ಜೆಎಸ್‌ಡಬ್ಲ್ಯು ಸ್ಟೀಲ್ ಕಂಪನಿ ಗರಿಷ್ಠ ₹ 39.10 ಕೋಟಿ ದೇಣಿಗೆ ನೀಡಿದೆ. ಅಪೊಲೊ ಟೈರ್ಸ್–₹ 30 ಕೋಟಿ, ಇಂಡಿಯಾಬುಲ್ಸ್ ಇನ್ಫ್ರಾಸ್ಟ್ರಕ್ಚರ್ ಲಿಮಿಟೆಡ್ ವಿವಿಧ ಟ್ರಸ್ಟ್‌ಗಳಿಗೆ ₹ 25 ಕೋಟಿ ದೇಣಿಗೆ ನೀಡಿದೆ.

ವ್ಯಕ್ತಿಗತವಾಗಿ 18 ಜನರು ದೇಣಿಗೆ ನೀಡಿದ್ದು, ಈ ಪೈಕಿ 10 ಜನರು ಪ್ರುಡೆಂಟ್ ಎಲೆಕ್ಟೋರಲ್ ಟ್ರಸ್ಟ್‌ಗೆ ಒಟ್ಟು ₹ 2.87 ಕೋಟಿ ದೇಣಿಗೆ ನೀಡಿದ್ದಾರೆ. ವಿವಿಧ ಟ್ರಸ್ಟ್‌ಗಳಿಗೆ ನಾಲ್ವರು ₹ 5.50 ಲಕ್ಷ ನೀಡಿದ್ದಾರೆ. ಸ್ವದೇಶಿ ಎಲೆಕ್ಟೋರಲ್ ಟ್ರಸ್ಟ್‌ಗೆ ನಾಲ್ವರು ನೀಡಿದ ಒಟ್ಟು ದೇಣಿಗೆ ₹ 1 ಲಕ್ಷ ಎಂದು ವರದಿಯಲ್ಲಿ ವಿವರಿಸಲಾಗಿದೆ.

# ಜೆಮ್‌ಶೆಡ್‌ಜಿ ಟಾಟಾ ಶತಮಾನದ ಮಹಾದಾನಿ

ಮುಂಬೈ (ಪಿಟಿಐ): ಭಾರತದ ಉದ್ಯಮ ರಂಗದ ಹಿರಿಯ ವ್ಯಕ್ತಿಗಳಲ್ಲಿ ಒಬ್ಬರಾದ ಜೆಮ್‌ಶೆಡ್‌ಜಿ ಟಾಟಾ ಅವರು ಕಳೆದ ಶತಮಾನದಲ್ಲಿ ಜಗತ್ತು ಕಂಡ ಅತಿದೊಡ್ಡ ದಾನಿ ಎಂದು ಹರೂನ್ ಮತ್ತು ಎಡೆಲ್‌ಗಿವ್ ಪ್ರತಿಷ್ಠಾನ ಹೇಳಿವೆ. ಈ ಎರಡೂ ಸಂಸ್ಥೆಗಳು ಜಂಟಿಯಾಗಿ ಐವತ್ತು ಜನ ಅತಿದೊಡ್ಡ ದಾನಿಗಳ ಪಟ್ಟಿಯನ್ನು ಸಿದ್ಧಪಡಿಸಿವೆ.

ಜೆಮ್‌ಶೆಡ್‌ಜಿ ಟಾಟಾ ಅವರು ದಾನವಾಗಿ ನೀಡಿದ ಹಣದ ಮೊತ್ತ 102 ಬಿಲಿಯನ್ ಡಾಲರ್ (₹ 7.56 ಲಕ್ಷ ಕೋಟಿ). ಭಾರತದ ಟಾಟಾ ಉದ್ಯಮ ಸಮೂಹವನ್ನು ಸ್ಥಾಪಿಸಿದವರು ಜೆಮ್‌ಶೆಡ್‌ಜಿ ಟಾಟಾ. ಹಣವನ್ನು ದಾನವಾಗಿ ನೀಡುವ ವಿಚಾರದಲ್ಲಿ ಜೆಮ್‌ಶೆಡ್‌ಜಿ ಅವರು ಉದ್ಯಮಿಗಳಾದ ಬಿಲ್ ಗೇಟ್ಸ್, ವಾರೆನ್ ಬಫೆಟ್, ಜಾರ್ಜ್ ಸಾರೋಸ್ ಮತ್ತು ಜಾನ್ ಡಿ. ರಾಕ್‌ಫೆಲ್ಲರ್ ಅವರಿಗಿಂತ ಮುಂದಿದ್ದಾರೆ.

'ಹಣವನ್ನು ದಾನವಾಗಿ ನೀಡುವ ವಿಚಾರದಲ್ಲಿ ಅಮೆರಿಕ ಹಾಗೂ ಯುರೋಪಿನ ದಾನಿಗಳು ಕಳೆದ ಶತಮಾನದಲ್ಲಿ ಹೆಚ್ಚು ಪ್ರಭಾವಿಗಳಾಗಿದ್ದಿರಬಹುದು. ಆದರೆ, ಭಾರತದ ಟಾಟಾ ಸಮೂಹದ ಸ್ಥಾಪಕ ಆಗಿರುವ ಜೆಮ್‌ಶೆಡ್‌ಜಿ ಟಾಟಾ ಅವರು ಕಳೆದ ಶತಮಾನದಲ್ಲಿ ಜಗತ್ತು ಕಂಡ ಅತಿದೊಡ್ಡ ದಾನಿ' ಎಂದು ಹರೂನ್‌ನ ಮುಖ್ಯ ಸಂಶೋಧಕ ಹಾಗೂ ಅಧ್ಯಕ್ಷ ರುಪರ್ಟ್ ಹೂಗ್‌ವರ್ಫ್ ಸುದ್ದಿಗಾರರಿಗೆ ತಿಳಿಸಿದರು.

ಜೆಮ್‌ಶೆಡ್‌ಜಿ ಅವರು 1892ರಲ್ಲಿಯೇ ದಾನ ನೀಡಲು ಆರಂಭಿಸಿದ್ದರು. ದಾನಿಗಳ ಈ ಪಟ್ಟಿಯಲ್ಲಿ ಸ್ಥಾನ ಪಡೆದಿರುವ ಇನ್ನೊಬ್ಬ ಭಾರತೀಯ ವಿಪ್ರೊ ಕಂಪನಿ ಅಜೀಂ ಪ್ರೇಮ್‌ಜಿ ಅವರು. ಐವತ್ತು ಜನ ದಾನಿಗಳ ಪಟ್ಟಿಯಲ್ಲಿ 38 ಜನ ಅಮೆರಿಕದವರು, ಐವರು ಬ್ರಿಟನ್ನಿನವರು, ಮೂವರು ಚೀನಾ ದೇಶದವರು.

# ಮಲ್ಯ, ನೀರವ್, ಚೋಕ್ಸಿಯಿಂದ ₹ 9 ಸಾವಿರ ಕೋಟಿ ವಸೂಲು

ಒಂದನೇ ಪುಟದಿಂದ...

ನೀರವ್ ಮೋದಿ ಮತ್ತು ಅವರ ಮಾವ ಚೋಕ್ಸಿ ಅವರು ಪಂಜಾಬ್ ನ್ಯಾಷನಲ್ ಬ್ಯಾಂಕ್‌ಗೆ ₹ 13 ಸಾವಿರ ಕೋಟಿ ವಂಚಿಸಿದ್ದಾರೆ ಎಂಬ ಆರೋಪ ಇದೆ. ಮಲ್ಯ ಅವರು ತಮ್ಮ ಕಿಂಗ್‌ಫಿಷರ್ ಏರ್‌ಲೈನ್ಸ್ ಕಂಪನಿ ಮೂಲಕ ₹ 9 ಸಾವಿರ ಕೋಟಿ ವಂಚಿಸಿದ್ದಾರೆ ಎಂಬ ಆರೋಪವಿದೆ.

ಅಕ್ರಮ ಹಣ ವರ್ಗಾವಣೆ ತಡೆ ಕಾಯ್ದೆಯ (ಪಿಎಂಎಲ್‌ಎ) ಅಡಿಯಲ್ಲಿ ಇಂತಹ ಪ್ರಕರಣಗಳ ಬಗ್ಗೆ ತನಿಖೆ ನಡೆಸುವ ಅಧಿಕಾರ ಹೊಂದಿರುವ ಇ.ಡಿ., ಈ ಎರಡು ಪ್ರಕರಣಗಳಿಗೆ ಸಂಬಂಧಿಸಿದಂತೆ ಒಟ್ಟು ₹ 18,170 ಕೋಟಿ ಮೌಲ್ಯದ ಆಸ್ತಿಗಳನ್ನು ಮುಟ್ಟುಗೋಲು ಹಾಕಿಕೊಂಡಿತ್ತು. ಇದರಲ್ಲಿ ವಿದೇಶದಲ್ಲಿ ಇದ್ದ ಆಸ್ತಿಗಳೂ ಸೇರಿವೆ.

'ಮುಟ್ಟುಗೋಲು ಹಾಕಿಕೊಂಡ ಆಸ್ತಿಗಳ ಮೌಲ್ಯವು ಬ್ಯಾಂಕ್‌ಗಳಿಗೆ ಆಗಿರುವ ನಷ್ಟದ ಶೇಕಡ 80.45ರಷ್ಟು' ಎಂದು ಇ.ಡಿ. ಹೇಳಿದೆ. ಮುಟ್ಟುಗೋಲು ಹಾಕಿಕೊಳ್ಳಲಾದ ಆಸ್ತಿಯಲ್ಲಿ, ಯುನೈಟೆಡ್ ಬ್ರೀವರೀಸ್‌ಗೆ ಸೇರಿದ ₹ 5,824 ಕೋಟಿ ಮೌಲ್ಯದ ಷೇರುಗಳನ್ನು ಎಸ್‌ಬಿಐ ನೇತೃತ್ವದ ಬ್ಯಾಂಕ್‌ಗಳ ಒಕ್ಕೂಟದ ಪರವಾಗಿ ಸಾಲ ವಸೂಲಾತಿ ನ್ಯಾಯಮಂಡಳಿಯು (ಡಿಆರ್‌ಟಿ) ಬುಧವಾರ ಮಾರಾಟ ಮಾಡಿತು ಎಂದು ಇ.ಡಿ. ವಿವರ ನೀಡಿದೆ.

ಪಿಎಂಎಲ್‌ಎ ವಿಶೇಷ ನ್ಯಾಯಾಲಯದ ಸೂಚನೆ ಅನುಸಾರ ಇ.ಡಿ. ಅಧಿಕಾರಿಗಳು, ಯುನೈಟೆಡ್ ಬ್ರೀವರೀಸ್ ಕಂಪನಿಯ ₹ 6,624 ಕೋಟಿ ಮೌಲ್ಯದ ಷೇರುಗಳನ್ನು ಎಸ್‌ಬಿಐ ನೇತೃತ್ವದ ಬ್ಯಾಂಕ್‌ಗಳ ಒಕ್ಕೂಟಕ್ಕೆ ವರ್ಗಾವಣೆ ಮಾಡಿದ್ದರು. 'ಷೇರುಗಳ ಮಾರಾಟದ ಮೂಲಕ ಇನ್ನೂ ₹ 800 ಕೋಟಿ ವಸೂಲು ಶುಕ್ರವಾರದೊಳಗೆ ಆಗಲಿದೆ' ಎಂದು ಇ.ಡಿ. ತಿಳಿಸಿದೆ.

# ಒಂದು ಕೊಠಡಿಗೆ 12 ಮಕ್ಕಳು

ಒಂದನೇ ಪುಟದಿಂದ...

'ರಾಜ್ಯ ಕೋವಿಡ್ ತಾಂತ್ರಿಕ ಸಲಹಾ ಸಮಿತಿ ರೂಪಿಸಿದ ಎಸ್‌ಒಪಿಯನ್ನು ಎಲ್ಲ ಪರೀಕ್ಷಾ ಕೇಂದ್ರಗಳಿಗೆ ರವಾನಿಸಲಾಗಿದೆ' ಎಂದು ಅವರು ಹೇಳಿದ್ದಾರೆ.

'ಪರೀಕ್ಷಾ ಕೊಠಡಿಯಲ್ಲಿ 12 ಮಕ್ಕಳು, ಡೆಸ್ಕ್‌ಗೆ ಒಬ್ಬರಂತೆ ವಿದ್ಯಾರ್ಥಿಗಳು ಇರಬೇಕು. ವಿದ್ಯಾರ್ಥಿಗಳು ಗುಂಪುಗೂಡಲು ಅವಕಾಶ ಇಲ್ಲ. ಮನೆಯಿಂದಲೇ ನೀರಿನ ಬಾಟಲಿ ಮತ್ತು ಊಟದ ಡಬ್ಬಿ ತರಬೇಕು. ಗ್ರಾಮೀಣ ವಿಭಾಗದ ಅಭ್ಯರ್ಥಿಗಳು ಸಾಧ್ಯವಾದಷ್ಟು ತಾಲ್ಲೂಕು ಕೇಂದ್ರಗಳಿಗೆ ಹೋಗದಂತೆ ಪರೀಕ್ಷಾ ಕೇಂದ್ರಗಳನ್ನು ರಚಿಸುವಂತೆ ಎಸ್‌ಒಪಿಯಲ್ಲಿ ಸೂಚಿಸಲಾಗಿದೆ' ಎಂದು ಅವರು ತಿಳಿಸಿದ್ದಾರೆ.

'ಪರೀಕ್ಷಾ ಪ್ರಕ್ರಿಯೆಯಲ್ಲಿ ಭಾಗಿಯಾಗಲಿರುವ ಶಿಕ್ಷಕರು, ಸಿಬ್ಬಂದಿ ಮತ್ತು ಅಧಿಕಾರಿಗಳು ಪರೀಕ್ಷೆಯ ವೇಳೆಗೆ ಒಂದು ಡೋಸ್ ಲಸಿಕೆಯಾದರೂ ಪಡೆದಿರಬೇಕು. ಪ್ರತಿ ಪರೀಕ್ಷಾ ಕೇಂದ್ರಗಳಲ್ಲಿ ಎಸ್‌ಒಪಿ ಅನುಷ್ಠಾನಗೊಳಿಸಲು ಮಾಡಿಕೊಂಡಿರುವ ಸಿದ್ಧತೆಗಳನ್ನು ಪರೀಕ್ಷಾ ಪೂರ್ವದಲ್ಲಿ ಜಿಲ್ಲಾಧಿಕಾರಿ, ಸಿಇಒ ಮತ್ತು ಎಸ್‌ಪಿ ಪರಿಶೀಲಿಸಬೇಕು' ಎಂದು ಸುರೇಶ್ ಕುಮಾರ್ ತಿಳಿಸಿದ್ದಾರೆ.

'ಪರೀಕ್ಷೆ ಆರಂಭಕ್ಕೂ ಮೊದಲು ಮತ್ತು ಪರೀಕ್ಷೆಯ ಬಳಿಕ ಸೋಂಕು ನಿವಾರಕ ದ್ರಾವಣದಿಂದ ಕೊಠಡಿ, ಪೀಠೋಪಕರಣ ಮತ್ತು ಶೌಚಾಲಯಗಳನ್ನು ಸ್ಯಾನಿಟೈಜೇಷನ್ ಮಾಡಲಾಗುವುದು. ಪರೀಕ್ಷಾ ಕೇಂದ್ರಕ್ಕೆ ಬರುವ ಮತ್ತು ನಿರ್ಗಮಿಸುವ ಹಾಗೂ ಕೊಠಡಿ ಪ್ರವೇಶ ಸಮಯದಲ್ಲಿ ಅಂತರ ಕಾಪಾಡಿಕೊಳ್ಳುವ ಜೊತೆ ಮಕ್ಕಳ ಕೈಗೆ ಸ್ಯಾನಿಟೈಜ್ ನೀಡಲಾಗುವುದು' ಎಂದು ಅವರು ವಿವರಿಸಿದ್ದಾರೆ.

'ಕೆಮ್ಮು, ನೆಗಡಿ, ಜ್ವರ ಲಕ್ಷಣಗಳಿರುವ ಅಭ್ಯರ್ಥಿಗಳಿಗೆ ಕನಿಷ್ಠ ಎರಡು ವಿಶೇಷ ಕೊಠಡಿ ಕಾಯ್ದಿರಿಸಲಾಗುವುದು. ಪರೀಕ್ಷಾ ಕೇಂದ್ರದಲ್ಲಿ ಆರೋಗ್ಯ ತಪಾಸಣಾ ಕೇಂದ್ರಗಳು ಬೆಳಿಗ್ಗೆ 8.30ಕ್ಕೆ ಆರಂಭವಾಗಿ ಪರೀಕ್ಷಾ ಪ್ರಕ್ರಿಯೆ ಮುಗಿಯುವವರೆಗೆ ತೆರದಿರಲಿವೆ. ಥರ್ಮಲ್ ಸ್ಕ್ಯಾನರ್, ಪಲ್ಸ್ ಆಕ್ಸಿಮೀಟರ್, ಪ್ರಥಮ ಚಿಕಿತ್ಸಾ ಪೆಟ್ಟಿಗೆಗಳೂ ಇರಲಿದೆ. ಮಾಸ್ಕ್ ಧರಿಸದ ವಿದ್ಯಾರ್ಥಿಗಳಿಗೆ ಆರೋಗ್ಯ ಕೇಂದ್ರಗಳಲ್ಲೇ ಮಾಸ್ಕ್ ನೀಡಲಾಗುವುದು' ಎಂದೂ ತಿಳಿಸಿದ್ದಾರೆ.

**ತುರ್ತು ಚಿಕಿತ್ಸಾ ವಾಹನ:** 'ಆರೋಗ್ಯ ಇಲಾಖೆಯೊಂದಿಗೆ ಸಮನ್ವಯ ಸಾಧಿಸಿ ತಾಲ್ಲೂಕಿಗೊಂದು ತುರ್ತು ಚಿಕಿತ್ಸಾ ವಾಹನ ಮೀಸಲಿಡಲಾಗುವುದು. ಹೊರರಾಜ್ಯದಿಂದ ಬರುವ ಪರೀಕ್ಷಾರ್ಥಿಗಳಿಗೆ ಅನುಕೂಲವಾಗುವಂತೆ ಪರೀಕ್ಷೆಗಳ ದಿನ ರಾಜ್ಯದ ಗಡಿಯಲ್ಲಿ ಜಿಲ್ಲಾಡಳಿತದ ಸಮನ್ವಯದೊಂದಿಗೆ ಕ್ರಮ ವಹಿಸಲಾಗುವುದು' ಎಂದೂ ಅವರು ತಿಳಿಸಿದ್ದಾರೆ.

### ಕೋವಿಡ್ ಕೇರ್ ಸೆಂಟರ್ ಸ್ಥಾಪನೆ

'ತಾಲ್ಲೂಕಿಗೊಂದು ಕೋವಿಡ್ ಆರೈಕೆ ಕೇಂದ್ರ ಸ್ಥಾಪಿಸಿ, ಕೋವಿಡ್ ದೃಢಪಟ್ಟಿರುವ ವಿದ್ಯಾರ್ಥಿಗಳಿಗೆ ಪರೀಕ್ಷೆ ಬರೆಯುವ ವ್ಯವಸ್ಥೆ ಮಾಡಲಾಗುವುದು. ಕುಟುಂಬದಲ್ಲಿ ಯಾರಿಗಾದರೂ ಸೋಂಕು ತಗುಲಿದ್ದು, ಪರೀಕ್ಷಾರ್ಥಿ ಐಸೋಲೇಷನ್‌ನಲ್ಲಿದ್ದರೆ ಅವರನ್ನು ತಪಾಸಣೆ ನಡೆಸಿ ಆರೋಗ್ಯವಾಗಿರುವುದು ಕಂಡುಬಂದರೆ ಕೋವಿಡ್ ಆರೋಗ್ಯ ಕೇಂದ್ರದ ಪರೀಕ್ಷಾ ಕೇಂದ್ರದಲ್ಲಿ ಪರೀಕ್ಷೆ ಬರೆಯಲು ಅವಕಾಶ ನೀಡಲಾಗುವುದು. ಈ ಕೇಂದ್ರದಲ್ಲಿ ಆಂಬುಲೆನ್ಸ್ ಕಾಯ್ದಿರಿಸಲಾಗುವುದು' ಎಂದು ಸುರೇಶ್‌ಕುಮಾರ್ ತಿಳಿಸಿದ್ದಾರೆ.

> **ಪರೀಕ್ಷೆಯನ್ನು ಸುರಕ್ಷಿತವಾಗಿ ನಡೆಸುವ ಸಲುವಾಗಿ ಡಿಸಿ, ಸಿಇಒ, ಎಸ್‌ಪಿ, ಡಿಎಚ್‌ಒ, ಖಜಾನೆ ಅಧಿಕಾರಿಗಳು ಮತ್ತು ಶಿಕ್ಷಣ ಇಲಾಖೆ ಅಧಿಕಾರಿಗಳ ಜೊತೆ ಇದೇ 28ರಂದು ವಿಡಿಯೊ ಸಂವಾದ ನಡೆಸಲಾಗುವುದು**
> **ಎಸ್. ಸುರೇಶ್‌ಕುಮಾರ್**
> ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ ಸಚಿವ

# ಬ್ರಿಟನ್: ನೀರವ್ ಮೋದಿ ಅರ್ಜಿ ವಜಾ

ಲಂಡನ್ (ಪಿಟಿಐ): ಭಾರತಕ್ಕೆ ಹಸ್ತಾಂತರಿಸುವಂತೆ ಸ್ಥಳೀಯ ಕೋರ್ಟ್ ಹೊರಡಿಸಿದ್ದ ಆದೇಶವನ್ನು ಪ್ರಶ್ನಿಸಿ, ದೇಶಭ್ರಷ್ಟ ವಜ್ರ ವ್ಯಾಪಾರಿ ನೀರವ್ ಮೋದಿ ಸಲ್ಲಿಸಿದ್ದ ಅರ್ಜಿಯನ್ನು ಬ್ರಿಟನ್‌ನ ಹೈಕೋರ್ಟ್ ವಜಾಗೊಳಿಸಿದೆ.

ನೀರವ್ ಮೋದಿ

ಇದರೊಂದಿಗೆ, ತನ್ನ ಹಸ್ತಾಂತರವನ್ನು ತಡೆಯುವ ಸಲುವಾಗಿ ನಡೆಸಿದ ಮೊದಲ ಪ್ರಯತ್ನದಲ್ಲಿ ನೀರವ್ ಮೋದಿ ವಿಫಲವಾದಂತಾಗಿದೆ.

ಬ್ರಿಟನ್‌ನ ಕಾನೂನಿನಡಿ, ಹೈಕೋರ್ಟ್‌ನ ಆದೇಶವನ್ನು ಪ್ರಶ್ನಿಸಿ ಮೌಖಿಕ ಮೇಲ್ಮನವಿ ಸಲ್ಲಿಸಲು ಈಗ ನೀರವ್ ಮೋದಿಗೆ ಐದು ದಿನಗಳ ಕಾಲಾವಕಾಶ ಸಿಗಲಿದೆ.

'ಒಂದು ವೇಳೆ ನೀರವ್ ಮೋದಿ ಮೇಲ್ಮನವಿ ಸಲ್ಲಿಸಿದರೆ, ಆ ಅರ್ಜಿಯನ್ನು ಪುರಸ್ಕರಿಸದಂತೆ ಹೈಕೋರ್ಟ್‌ನಲ್ಲಿ ವಾದ ಮಂಡಿಸುವುದಾಗಿ' ಭಾರತ ಸರ್ಕಾರದ ಪರ ವಾದ ಮಂಡಿಸುತ್ತಿರುವ ಕ್ರೌನ್ ಪ್ರಾಸಿಕ್ಯೂಷನ್ ಸರ್ವೀಸ್ (ಸಿಪಿಎಸ್) ಸಂಸ್ಥೆ ಹೇಳಿದೆ.

ಪಂಜಾಬ್ ನ್ಯಾಷನಲ್ ಬ್ಯಾಂಕಿಗೆ ಕೋಟ್ಯಂತರ ರೂಪಾಯಿ ವಂಚಿಸಿದ ಪ್ರಕರಣಕ್ಕೆ ಸಂಬಂಧಿಸಿದಂತೆ ನೀರವ್ ಮೋದಿಯನ್ನು ಭಾರತಕ್ಕೆ ಹಸ್ತಾಂತರಿಸುವಂತೆ ವೆಸ್ಟ್‌ಮಿನ್‌ಸ್ಟರ್ ನ್ಯಾಯಾಲಯ ಫೆಬ್ರುವರಿಯಲ್ಲಿ ಆದೇಶಿಸಿತ್ತು. ನಂತರ, ಅವರ ಹಸ್ತಾಂತರಕ್ಕೆ ಬ್ರಿಟನ್‌ನ ಗೃಹ ಕಾರ್ಯದರ್ಶಿ ಪ್ರೀತಿ ಪಟೇಲ್ ಏಪ್ರಿಲ್‌ನಲ್ಲಿ ಆದೇಶಿಸಿದ್ದರು. ಈ ಆದೇಶ ಪ್ರಶ್ನಿಸಿ ನೀರವ್ ಮೋದಿ ಪರ ವಕೀಲರು ಮೇಲ್ಮನವಿ ಸಲ್ಲಿಸಿದ್ದರು.

# ಚೋಕ್ಸಿ ಅಪಹರಣದ ಬಗ್ಗೆ ನಿರ್ಣಾಯಕ ಪುರಾವೆಗಳಿಲ್ಲ: ಆಂಟಿಗುವಾ ಪ್ರಧಾನಿ

ಡೊಮಿನಿಕಾ(ಪಿಟಿಐ): ಡೊಮಿನಿಕಾದಲ್ಲಿ ಬಂಧಿತನಾಗಿರುವ ವಜ್ರವ್ಯಾಪಾರಿ ಮೆಹುಲ್ ಚೋಕ್ಸಿ ಅವರ ಅಪಹರಣದ ಬಗ್ಗೆ ಯಾವುದೇ ನಿರ್ಣಾಯಕ ಪುರಾವೆಗಳಿಲ್ಲ ಎಂದು ಆಂಟಿಗುವಾ ಮತ್ತು ಬಾರ್ಬುಡಾ ಪ್ರಧಾನಿ ಗಾಸ್ಟನ್ ಬ್ರೌನ್ ಹೇಳಿದ್ದಾರೆ.

ಮೆಹುಲ್ ಚೋಕ್ಸಿ ಅವರನ್ನು ಅಪಹರಿಸಲಾಗಿದೆ ಎಂಬ ಮಾತುಗಳು ಇತ್ತೀಚಿಗೆ ಕೇಳಿ ಬಂದಿದ್ದವು.

ಚೋಕ್ಸಿ 'ಅಪಹರಣ' ಪ್ರಕರಣ ಕುರಿತು ಅಲ್ಲಿನ ಸಂಸತ್ತಿನಲ್ಲಿ ಪ್ರಶ್ನಿಸಿದ ಪ್ರತಿಪಕ್ಷದ ಸಂಸದರು, 'ಸ್ಕಾಟ್ಲೆಂಡ್ ಯಾರ್ಡ್ ಅಥವಾ ಇನ್ನಾವುದೇ ತನಿಖಾ ಸಂಸ್ಥೆಯು ಚೋಕ್ಸಿ ಅವರನ್ನು ಡೊಮಿನಿಕಾಗೆ ಕರೆದೊಯ್ದಿದೆ ಎಂಬುದಕ್ಕೆ ಯಾವುದೇ ಪುರಾವೆಗಳು ಸಿಕ್ಕಿವೆಯೇ' ಎಂದು ಕೇಳಿದ್ದರು.

# ಹಫೀಜ್ ಮನೆ ಬಳಿ ಸ್ಫೋಟ

ಲಾಹೋರ್(ಪಿಟಿಐ): ಮುಂಬೈ ದಾಳಿಯ ಸಂಚುಕೋರ ಹಫೀಜ್ ಸಯೀದ್ ಮನೆ ಬಳಿ ಕಾರು ಬಾಂಬ್ ಸ್ಫೋಟ ಸಂಭವಿಸಿದ್ದು, ಮೂವರು ಮೃತಪಟ್ಟು, 20ಕ್ಕೂ ಅಧಿಕ ಮಂದಿ ಗಾಯಗೊಂಡಿದ್ದಾರೆ ಎಂದು ಪೊಲೀಸರು ತಿಳಿಸಿದ್ದಾರೆ.

ಜೌಹರ್ ಟೌನ್‌ನ ಬಿಒಆರ್ ಸೊಸೈಟಿಯ ಸಯೀದ್ ನಿವಾಸದ ಹೊರಗೆ ಪೊಲೀಸ್ ಪಿಕೆಟ್ ಇದ್ದ ಜಾಗದಲ್ಲಿ ಸ್ಫೋಟ ಸಂಭವಿಸಿದೆ.

ಸಯೀದ್ ಮನೆಯ ಹೊರಗೆ ಪೊಲೀಸ್ ಕಾವಲು ಇಲ್ಲದಿದ್ದರೆ 'ದೊಡ್ಡ ನಷ್ಟ'ಉಂಟಾಗಬಹುದಿತ್ತು ಎಂದು ಪಂಜಾಬ್ ಪೊಲೀಸ್ ಮುಖ್ಯಸ್ಥರು ಹೇಳಿದ್ದಾರೆ. ಸುದ್ದಿಗಾರರೊಂದಿಗೆ ಮಾತನಾಡಿದ ಇನ್‌ಸ್ಪೆಕ್ಟರ್ ಜನರಲ್ ಆಫ್ ಪೊಲೀಸ್ (ಐಜಿಪಿ) ಪಂಜಾಬ್ ಇನಾಮ್ ಘನಿ, ಇದೊಂದು ಭಯೋತ್ಪಾದನಾ ಕೃತ್ಯ ಎಂದು ಹೇಳಿದ್ದಾರೆ.

# 2 ನೇ ಅಲೆ: ಯುವಜನ ಹೈರಾಣ

ಒಂದನೇ ಪುಟದಿಂದ...

ಅವರಲ್ಲಿ ಅರ್ಧಕ್ಕೂ ಅಧಿಕ ಮಂದಿ (ಶೇ 54ರಷ್ಟು) 20ರಿಂದ 40 ವರ್ಷದೊಳಗಿನವರಾಗಿದ್ದಾರೆ. ಮೊದಲ ಅಲೆಯಲ್ಲಿ 9.73 ಲಕ್ಷ ಕೋವಿಡ್ ಪ್ರಕರಣಗಳು ವರದಿಯಾಗಿದ್ದವು. ಅದರಲ್ಲಿ ಈ ವಯೋಮಾನದವರ ಸಂಖ್ಯೆ 4.10 ಲಕ್ಷದಷ್ಟಿತ್ತು.

**ಹರಡುವಿಕೆ ಓಡಾಟ ಕಾರಣ:** ಮೊದಲ ಅಲೆಯ ಒಂದು ವರ್ಷದ ಅವಧಿಯಲ್ಲಿ 20ರಿಂದ 30 ವರ್ಷದೊಳಗಿನವರಲ್ಲಿ 1.99 ಲಕ್ಷ ಮಂದಿ ಕೋವಿಡ್ ಪೀಡಿತರಾಗಿದ್ದರು. ಅದೇ ರೀತಿ, 30ರಿಂದ 40 ವರ್ಷದೊಳಗಿನವರಲ್ಲಿ 2.10 ಲಕ್ಷ ಮಂದಿ ಸೋಂಕಿತರಾಗಿದ್ದರು. ಎರಡನೇ ಅಲೆಯ ಮೂರು ತಿಂಗಳಲ್ಲಿ ಕ್ರಮವಾಗಿ 5.99 ಲಕ್ಷ ಹಾಗೂ 6.48 ಲಕ್ಷ ಮಂದಿ ಕೋವಿಡ್ ಪೀಡಿತರಾಗಿದ್ದಾರೆ.

ಕೋವಿಡ್ ಬಗ್ಗೆ ಈ ವಯೋಮಾನದವರ ನಿರ್ಲಕ್ಷ್ಯದಿಂದಲೇ ಅಗತ್ಯ ಮುನ್ನೆಚ್ಚರಿಕೆಯೊಂದಿಗೆ ಮನೆಯಲ್ಲಿಯೇ ಇದ್ದ ಮಕ್ಕಳು ಹಾಗೂ ವೃದ್ಧರಿಗೆ ಕೂಡ ಸೋಂಕು ತಗುಲುತ್ತಿದೆ ಎಂದು ವೈದ್ಯಕೀಯ ತಜ್ಞರು ಕಳವಳ ವ್ಯಕ್ತಪಡಿಸಿದ್ದಾರೆ.

'ಮೊದಲ ಅಲೆಯಲ್ಲಿ ಸೋಂಕಿತರಾದವರಿಗೆ ಲಕ್ಷಣಗಳು ಗೋಚರಿಸುತಿತ್ತು. ಎರಡನೇ ಅಲೆಯಲ್ಲಿ ಸೋಂಕಿತರಾದ ಬಹುತೇಕ ಯುವಜನತೆ ಹಾಗೂ ಮಧ್ಯಮ ವಯಸ್ಕರಿಗೆ ಲಕ್ಷಣಗಳೇ ಕಾಣಿಸಿಕೊಂಡಿಲ್ಲ. ಮನೆ ಆರೈಕೆಯಲ್ಲಿರುವ ಕೆಲವರಿಗೆ ರಕ್ತದಲ್ಲಿನ ಆಮ್ಲಜನಕ ಪ್ರಮಾಣ ಅರಿವಿಗೆ ಬಾರದೆಯೇ ಶೇ 80ರಿಂದ ಶೇ 70ಕ್ಕೆ ದಿಢೀರ್ ಇಳಿಕೆಯಾಗುತ್ತಿತ್ತು. ಆಗ ಆಸ್ಪತ್ರೆಗೆ ತೆರಳಿದ ಪರಿಣಾಮ ಹಾಗೂ ಐಸಿಯು ಹಾಸಿಗೆ ಸಮಸ್ಯೆಯಿಂದ ಈ ವಯೋಮಾನದವರು ಎರಡನೇ ಅಲೆಯಲ್ಲಿ ಗಂಭೀರ ಸಮಸ್ಯೆ ಎದುರಿಸಿದ್ದಾರೆ' ಎಂದು ತಜ್ಞರು ಅಭಿಮತ ವ್ಯಕ್ತಪಡಿಸಿದ್ದಾರೆ.

'ಎರಡನೇ ಅಲೆಯ ಅವಧಿಯಲ್ಲಿ ಸಾರ್ವಜನಿಕ ಪ್ರದೇಶಗಳು ಸೇರಿದಂತೆ ವಿವಿಧೆಡೆ ಯುವಜನರು ಹಾಗೂ ಮಧ್ಯಮ ವಯಸ್ಕರ ಓಡಾಟ ಹೆಚ್ಚಾಗಿತ್ತು. ಹೆಚ್ಚಿನ ರೋಗ ನಿರೋಧಕ ಶಕ್ತಿ ಇರುವ ಕಾರಣ ಸೋಂಕು ತಗಲುವುದಿಲ್ಲ ಎಂಬ ತಪ್ಪು ಕಲ್ಪನೆ ಬಹುತೇಕರಲ್ಲಿತ್ತು. ಕೆಲವರು ಲಕ್ಷಣಗಳು ಕಾಣಿಸಿಕೊಂಡರೂ ಪರೀಕ್ಷೆ ಮಾಡಿಸಿಕೊಳ್ಳದ ಪರಿಣಾಮ ಅವರಿಂದ ಮತ್ತಷ್ಟು ಮಂದಿಗೆ ಸೋಂಕು ಹರಡಿತು' ಎಂದು ಕೋವಿಡ್ ತಾಂತ್ರಿಕ ಸಲಹಾ ಸಮಿತಿಯ ಸದಸ್ಯರಾದ ಡಾ.ಸಿ.ಎನ್. ಮಂಜುನಾಥ್ ತಿಳಿಸಿದರು.

### 5 ಸಾವಿರಕ್ಕೂ ಅಧಿಕ ಮಂದಿ ಸಾವು

ಕೋವಿಡ್ ಎರಡನೇ ಅಲೆಯಲ್ಲಿ ಸೋಂಕಿನ ತೀವ್ರತೆಗೆ ಯುವಜನರು ಹಾಗೂ ಮಧ್ಯಮ ವಯಸ್ಕರು ಕೂಡ ಹೆಚ್ಚಿನ ಸಂಖ್ಯೆಯಲ್ಲಿ ಮೃತಪಟ್ಟಿದ್ದಾರೆ. ಮೊದಲ ಅಲೆಯಲ್ಲಿ (ಮಾರ್ಚ್ ಮೂರನೇ ವಾರ) 12 ಸಾವಿರಕ್ಕೂ ಅಧಿಕ ಮರಣ ಪ್ರಕರಣ ವರದಿಯಾಗಿತ್ತು. ಎರಡನೇ ಅಲೆಯಲ್ಲಿ 21 ಸಾವಿರಕ್ಕೂ ಅಧಿಕ ಮಂದಿ ಮೃತಪಟ್ಟಿದ್ದಾರೆ. ಇವರಲ್ಲಿ ಶೇ 23.85ರಷ್ಟು ಮಂದಿ 20ರಿಂದ 50 ವರ್ಷದೊಳಗಿನವರೇ ಆಗಿದ್ದಾರೆ. ಮೊದಲ ಅಲೆಯಲ್ಲಿ 20ರಿಂದ 30 ವರ್ಷದೊಳಗಿನವರು 217 ಮಂದಿ, 30ರಿಂದ 40 ವರ್ಷದೊಳಗಿನವರು 560 ಮಂದಿ ಹಾಗೂ 40ರಿಂದ 50 ವರ್ಷದೊಳಗಿನವರು 1,390 ಮಂದಿ ಸಾವಿಗೀಡಾಗಿದ್ದರು. ಎರಡನೇ ಅಲೆಯಲ್ಲಿ 20ರಿಂದ 30 ವರ್ಷದೊಳಗಿನವರು 490 ಮಂದಿ ಮೃತಪಟ್ಟಿದ್ದಾರೆ. 30ರಿಂದ 40 ವರ್ಷದವರು 1,493 ಹಾಗೂ 40ರಿಂದ 50 ವರ್ಷದೊಳಗಿನವರು 3,134 ಮಂದಿ ಸಾವಿಗೀಡಾಗಿದ್ದಾರೆ.

**ವಯೋಮಾನವಾರು ಸೋಂಕಿತರ ವಿವರ** (ರಾಜ್ಯದಲ್ಲಿ ಕೋವಿಡ್ ಕಾಣಿಸಿಕೊಂಡಾಗಿನಿಂದ ಜೂ.21ರವರೆಗೆ)

| ವಯಸ್ಸು | ಪ್ರಕರಣ |
|---|---|
| 0-9 | 86,126 |
| 10-19 | 2,14,148 |
| 20-29 | 5,99,459 |
| 30-39 | 6,48,284 |
| 40-49 | 4,95,103 |
| 50-59 | 3,63,882 |
| 60-69 | 2,53,762 |
| 70-79 | 1,13,572 |
| 80-89 | 32,667 |
| 90-99 | 150 |
| 100+ | 147 |

**ವಯೋಮಾನವಾರು ಮರಣ ಪ್ರಕರಣ**

| ವಯಸ್ಸು | ಪ್ರಕರಣ |
|---|---|
| 0-20 | 150 |
| 20-40 | 2,760 |
| 40-60 | 12,027 |
| 60-80 | 16,007 |
| 80-100+ | 3,081 |

*ರಾಜ್ಯದಲ್ಲಿ ಕೋವಿಡ್ ಕಾಣಿಸಿಕೊಂಡಾಗಿನಿಂದ ಜೂ.21ರವರೆಗೆ

> **ಎರಡನೇ ಅಲೆಯಲ್ಲಿ ಬಹುತೇಕರಿಗೆ ಲಕ್ಷಣಗಳು ಅಷ್ಟಾಗಿ ಗೋಚರಿಸಲಿಲ್ಲ. ಆದರೆ, ರಕ್ತದಲ್ಲಿನ ಆಮ್ಲಜನಕ ಪ್ರಮಾಣವು ದಿಢೀರ್ ಇಳಿಕೆಯಾಗಿ, ಹೆಚ್ಚಿನ ಮರಣ ಸಂಭವಿಸಿದೆ**
> **ಡಾ.ಸಿ. ನಾಗರಾಜ್,** ರಾಜೀವ್ ಗಾಂಧಿ ಎದೆರೋಗಗಳ ಆಸ್ಪತ್ರೆ ನಿರ್ದೇಶಕ

### ಡೆಲ್ಟಾ ಪ್ಲಸ್: ಎರಡನೇ ಪ್ರಕರಣ ಪತ್ತೆ

ಒಂದನೇ ಪುಟದಿಂದ...

ಜೂನ್ ಮೊದಲ ವಾರ ನಿಮ್ಹಾನ್ಸ್‌ಗೆ ವೈರಾಣುವಿನ ಸ್ಯಾಂಪಲ್ ಬಂದಿತ್ತು. ಆ ಸಮಯದಲ್ಲಿ ವ್ಯಕ್ತಿಯಲ್ಲಿ ಸಣ್ಣಗೆ ಜ್ವರ, ನೆಗಡಿಯಂತಹ ಲಕ್ಷಣಗಳಿದ್ದವು. ಈ ವ್ಯಕ್ತಿಯನ್ನು ಪ್ರತ್ಯೇಕಿಸಿ, ಚಿಕಿತ್ಸೆ ಆರಂಭಿಸಲಾಗಿದೆ ಎಂದು ಆರೋಗ್ಯ ಸಚಿವ ಡಾ.ಕೆ.ಸುಧಾಕರ್ ತಿಳಿಸಿದರು.

**6 ಪ್ರಯೋಗಾಲಯಗಳ ಸ್ಥಾಪನೆ:** ಡೆಲ್ಟಾ ಪ್ಲಸ್ ವೈರಾಣುವಿನ ಪತ್ತೆಗಾಗಿ ಆರು ಪ್ರಯೋಗಾಲಯಗಳನ್ನು ಸ್ಥಾಪಿಸಲಾಗುವುದು. ಜಿನೋಮಿಕ್ ಸೀಕ್ವೆನ್ಸ್ ಮೂಲಕ ರೂಪಾಂತರಗೊಂಡ ವೈರಾಣು ಪತ್ತೆ ಮಾಡಲಾಗುತ್ತಿದೆ ಎಂದು ಡಾ.ಕೆ. ಸುಧಾಕರ್ ಸುದ್ದಿಗಾರರಿಗೆ ತಿಳಿಸಿದರು.

18 ವರ್ಷ ಮೇಲ್ಪಟ್ಟ ವಿದ್ಯಾರ್ಥಿಗಳಿಗೆ ಕೋವಿಡ್ ಲಸಿಕೆ ನೀಡಿ ನಂತರ ಕಾಲೇಜು ಆರಂಭಿಸುವ ಕುರಿತಂತೆ ಪ್ರಾಥಮಿಕ ಶಿಕ್ಷಣ ಹಾಗೂ ಉನ್ನತ ಶಿಕ್ಷಣ ಸಚಿವರೊಂದಿಗೆ ಚರ್ಚಿಸಲಾಗುವುದು. ಕಾಲೇಜು ಆರಂಭದ ವಿಚಾರದಲ್ಲಿ ಯಾವುದೇ ಗೊಂದಲ ಬೇಡ. ಕಾಲೇಜು ವಿದ್ಯಾರ್ಥಿಗಳೆಲ್ಲರಿಗೂ ಲಸಿಕೆ ನೀಡಿದ ಬಳಿಕ ಕಾಲೇಜು ಆರಂಭಿಸಬಹುದು ಎಂದು ತಾಂತ್ರಿಕ ಸಲಹಾ ಸಮಿತಿಯು ಮುಖ್ಯಮಂತ್ರಿ ಸಭೆಯಲ್ಲಿ ಸಲಹೆ ನೀಡಿತ್ತು. ಈ ಬಗ್ಗೆ ತಾಂತ್ರಿಕ ಸಲಹಾ ಸಮಿತಿಯೊಂದಿಗೆ ಮತ್ತೊಮ್ಮೆ ಚರ್ಚಿಸಲಾಗುವುದು ಎಂದು ಹೇಳಿದರು.

ಮೊದಲು ಉನ್ನತ ಶಿಕ್ಷಣ, ನಂತರ ಪ್ರೌಢಶಾಲೆ ಆರಂಭಿಸಬೇಕಾಗುತ್ತದೆ. ಸಣ್ಣ ಮಕ್ಕಳಿಗೆ ಮೊದಲೇ ಶಾಲೆ ಆರಂಭಿಸಲಾಗುವುದಿಲ್ಲ. ಇದರಲ್ಲಿ ಸರ್ಕಾರದ ಜವಾಬ್ದಾರಿ ಹೆಚ್ಚಿದೆ ಎಂದು ತಿಳಿಸಿದರು.

ಸರ್ಕಾರಿ ಆಸ್ಪತ್ರೆಗಳಲ್ಲೇ ಹಾಸಿಗೆಗಳು ಖಾಲಿ ಇವೆ. ಖಾಸಗಿ ಆಸ್ಪತ್ರೆಗಳಲ್ಲಿ ಕೋವಿಡ್ ಅಲ್ಲದ ರೋಗಿಗಳು ಬಂದರೆ ಚಿಕಿತ್ಸೆ ನೀಡಲು ಸೂಚಿಸಲಾಗಿದೆ. 3 ನೇ ಅಲೆ ಬಂದರೆ ಆಗ ಮತ್ತೆ ಹಾಸಿಗೆ ಕೇಳಲಾಗುವುದು ಎಂದರು.

### ನ್ಯೂಜಿಲೆಂಡ್ ವೇಗಿಗಳ ಪರಿಣಾಮಕಾರಿ ಬೌಲಿಂಗ್; ವಿರಾಟ್ ಕೊಹ್ಲಿ ಬಳಗಕ್ಕೆ ನಿರಾಸೆ

# ವಿಶ್ವ ಟೆಸ್ಟ್‌ಗೆ ಕಿವೀಸ್ ಪ್ರಥಮ ಚಾಂಪಿಯನ್

ವಿಶ್ವ ಟೆಸ್ಟ್ ಚಾಂಪಿಯನ್‌ಷಿಪ್ ಪ್ರಶಸ್ತಿ ಜಯಿಸಿದ ನ್ಯೂಜಿಲೆಂಡ್ ಆಟಗಾರರ ಸಂಭ್ರಮ– ರಾಯಿಟರ್ಸ್ ಚಿತ್ರ

ಸೌತಾಂಪ್ಟನ್ (ಪಿಟಿಐ): 'ಕ್ಯಾಪ್ಟನ್ ಕೂಲ್' ಕೇನ್ ವಿಲಿಯಮ್ಸನ್ ನಾಯಕತ್ವದ ನ್ಯೂಜಿಲೆಂಡ್ ತಂಡವು ಚೊಚ್ಚಲ ವಿಶ್ವ ಟೆಸ್ಟ್ ಕ್ರಿಕೆಟ್ ಚಾಂಪಿಯನ್‌ಷಿಪ್‌ನ ಕಿರೀಟ ಧರಿಸಿತು.

ಏಜಿಸ್ ಬೌಲ್‌ನಲ್ಲಿ ಬುಧವಾರ ಮುಕ್ತಾಯವಾದ ಫೈನಲ್ ಪಂದ್ಯದಲ್ಲಿ 8 ವಿಕೆಟ್‌ಗಳಿಂದ ಭಾರತ ತಂಡವನ್ನು ಸೋಲಿಸಿದ ನ್ಯೂಜಿಲೆಂಡ್ ವಿಶ್ವ ಚಾಂಪಿಯನ್ ಪಟ್ಟಕ್ಕೇರಿತು. ಗೆಲುವಿಗಾಗಿ 53 ಓವರ್‌ಗಳಲ್ಲಿ 139 ರನ್‌ಗಳ ಗುರಿಯನ್ನು ಬೆನ್ನಟ್ಟಿದ್ದ ತಂಡವು ನಾಯಕ ಕೇನ್ (ಅಜೇಯ 52) ಮತ್ತು ರಾಸ್ ಟೇಲರ್ (ಅಜೇಯ 47) ತಾಳ್ಮೆಯ ಬ್ಯಾಟಿಂಗ್ ಬಲದಿಂದ 45.5 ಓವರ್‌ಗಳಲ್ಲಿ 2 ವಿಕೆಟ್‌ಗಳಿಗೆ 140 ರನ್ ಗಳಿಸಿತು. ಭಾರತದ ಆಫ್‌ಸ್ಪಿನ್ನರ್ ಆರ್. ಅಶ್ವಿನ್ ಕಿವೀಸ್ ಎರಡನೇ ಇನಿಂಗ್ಸ್‌ನ ಆರಂಭದಲ್ಲಿಯೇ ಎರಡು ವಿಕೆಟ್ ಗಳಿಸಿ ಭರವಸೆ ಮೂಡಿಸಿದ್ದರು. ಮೊಹಮ್ಮದ್ ಶಮಿ ಕೂಡ ಉತ್ತಮ ದಾಳಿ ಮಾಡಿದರು. ಆದರೆ ಭಾರತದ ಬೌಲಿಂಗ್ ಪಡೆಯ ಪ್ರಯತ್ನಗಳಿಗೆ ಕೇನ್ ಮತ್ತು ಟೇಲರ್ ಅಡ್ಡಿಯಾಗಿ ನಿಂತರು.

ಸುಮಾರು ಎರಡು ವರ್ಷ ನಡೆದ ಡಬ್ಲ್ಯುಟಿಸಿಯ ಪಾಯಿಂಟ್ ಪಟ್ಟಿಯಲ್ಲಿ ಭಾರತ ಮೊದಲ ಮತ್ತು ನ್ಯೂಜಿಲೆಂಡ್ ಎರಡನೇ ಸ್ಥಾನ ಪಡೆದು ಪ್ರಶಸ್ತಿ ಸುತ್ತಿಗೆ ತಲುಪಿದ್ದವು.

ಟೆಸ್ಟ್ ಚಾಂಪಿಯನ್‌ಷಿಪ್ ವಿಜೇತ ನ್ಯೂಜಿಲೆಂಡ್ ₹ 11.71 ಕೋಟಿ ಬಹುಮಾನ ಹಾಗೂ 'ಗದೆ'ಯನ್ನು ತನ್ನದಾಗಿಸಿಕೊಂಡರೆ, ರನ್ನರ್ ಅಪ್ ಭಾರತ ₹ 5.85 ಕೋಟಿ ಬಹುಮಾನ ಜೇಬಿಗಿಳಿಸಿತು.

ಫೈನಲ್ ಪಂದ್ಯದ ಮೊದಲ ಮತ್ತು ನಾಲ್ಕನೇ ದಿನದಾಟಗಳು ಮಳೆಗೆ ಆಹುತಿಯಾಗಿದ್ದವು. ಆದ್ದರಿಂದ ಪಂದ್ಯವನ್ನು ಮೀಸಲಾಗಿದ್ದ ಆರನೇ ದಿನಕ್ಕೆ ವಿಸ್ತರಿಸಲಾಗಿತ್ತು. ಅಮೋಘ ಬೌಲಿಂಗ್ ಮಾಡಿದ ಟಿಮ್ ಸೌಥಿ (48ಕ್ಕೆ4) ಮತ್ತು ಟ್ರೆಂಟ್ ಬೌಲ್ಟ್ (39ಕ್ಕೆ3)ತಮ್ಮ ಸ್ವಿಂಗ್ ಅಸ್ತ್ರಗಳ ಮೂಲಕ ನ್ಯೂಜಿಲೆಂಡ್ ತಂಡ ಗೆಲುವಿನ ಅವಕಾಶ ಸೃಷ್ಟಿಸಿದರು.

ಎರಡನೇ ಇನಿಂಗ್ಸ್‌ನಲ್ಲಿ ಭಾರತ ತಂಡವನ್ನು 170 ರನ್‌ಗಳಿಗೆ ಕಟ್ಟಿಹಾಕುವಲ್ಲಿ ಕಿವೀಸ್ ಬೌಲಿಂಗ್ ಪಡೆಯು ಯಶಸ್ವಿಯಾಯಿತು. ಕಿವೀಸ್ ಬಳಗವು ಗೆಲುವಿಗಾಗಿ 53 ಓವರ್‌ಗಳಲ್ಲಿ 139 ರನ್‌ಗಳನ್ನು ಗಳಿಸುವ ಸವಾಲನ್ನು ಯಶಸ್ವಿಯಾಗಿ ನಿಭಾಯಿಸಿತು.

ಐದನೇ ದಿನವಾದ ಮಂಗಳವಾರ ಎರಡನೇ ಇನಿಂಗ್ಸ್ ಆರಂಭಿಸಿದ್ದ ಭಾರತವು 30 ಓವರ್‌ಗಳಲ್ಲಿ 2 ವಿಕೆಟ್‌ಗಳಿಗೆ 64 ರನ್ ಗಳಿಸಿತ್ತು. ಕೊನೆಯ ದಿನದಂದು ಆಟ ಮುಂದುವರಿಸಿದ ನಾಯಕ ವಿರಾಟ್ ಕೊಹ್ಲಿ ಮತ್ತು ಚೇತೇಶ್ವರ್ ಪೂಜಾರ ಬೆಳಗಿನ ವಾತಾವರಣದಲ್ಲಿ ಹೆಚ್ಚು ಆಡಲಿಲ್ಲ. ದಿನದಾಟದ ಆರನೇ ಓವರ್‌ನಲ್ಲಿ ಜೆಮಿಸನ್ ಎಸೆತದಲ್ಲಿ ವಿರಾಟ್ ಕೊಹ್ಲಿ ವಿಕೆಟ್‌ಕೀಪರ್ ಬಿಜೆ ವಾಟ್ಲಿಂಗ್‌ಗೆ ಕ್ಯಾಚಿತ್ತರು. ಜೆಮಿಸನ್ ತಮ್ಮ ಇನ್ನೊಂದು ಓವರ್‌ನಲ್ಲಿ ಪೂಜಾರ (15; 80ಎ) ವಿಕೆಟ್ ಕೂಡ ಗಳಿಸಿದರು.

**ರಿಷಭ್ ಆಟ:** ಈ ಹೊತ್ತಿನಲ್ಲಿ ಜೊತೆಗೂಡಿದ ಉಪನಾಯಕ ಅಜಿಂಕ್ಯ ರಹಾನೆ ಮತ್ತು ರಿಷಭ್ ಪಂತ್ ಇನಿಂಗ್ಸ್ ಕಟ್ಟುವ ಪ್ರಯತ್ನ ಮಾಡಿದರು. 40ನೇ ಓವರ್‌ನಲ್ಲಿ ಜೆಮಿಸನ್ ಎಸೆತವನ್ನು ಆಡಿದ್ದ ಪಂತ್ ಕ್ಯಾಚ್ ಅನ್ನು ಸ್ಲಿಪ್ ಫೀಲ್ಡರ್ ಕೈಚೆಲ್ಲಿದ್ದರು. ಇದರಿಂದಾಗಿ ಪಂತ್ ಹೆಚ್ಚು ಹೊತ್ತು ಕ್ರೀಸ್‌ನಲ್ಲಿ ಉಳಿದು, ಭಾರತ ತಂಡವು ನೂರು ರನ್‌ಗಳ ಗಡಿ ದಾಟಲು ಕಾರಣರಾದರು.

ರಿಷಭ್ ಮತ್ತು ಅಜಿಂಕ್ಯ ಐದನೇ ವಿಕೆಟ್ ಜೊತೆಯಾಟದಲ್ಲಿ 37 ರನ್ ಸೇರಿಸಿದರು. ಊಟದ ವಿರಾಮಕ್ಕೂ ಮುನ್ನ ರಹಾನೆ ಔಟಾದರು. ಪಂತ್ ಜೊತೆಗೂಡಿದ ರವೀಂದ್ರ ಜಡೇಜ ಆತ್ಮವಿಶ್ವಾಸದಿಂದ ಆಡಿದರು. ಆರನೇ ವಿಕೆಟ್ ಜೊತೆಯಾಟದಲ್ಲಿ 33 ರನ್ ಸೇರಿಸಿದರು. ಜಡೇಜ ತಮ್ಮ ಆಕ್ರಮಣಕಾರಿ ಶೈಲಿಯ ಬ್ಯಾಟಿಂಗ್ ಬದಲು ತಾಳ್ಮೆಯಿಂದ ಆಡಿದರು. ಪಂತ್ ಕೂಡ ಅವಕಾಶ ಸಿಕ್ಕಾಗ ಬೌಂಡರಿ ಗಳಿಸಿದರು. ಆದರೆ 63ನೇ ಓವರ್‌ನಲ್ಲಿ ನೀಲ್ ವಾಗ್ನರ್ ಎಸೆತದಲ್ಲಿ ಜಡೇಜ ಔಟಾದಾಗ ಜೊತೆಯಾಟ ಮುರಿದುಬಿತ್ತು. ಆರು ಓವರ್‌ಗಳ ನಂತರ ಪಂತ್ (41 ರನ್) ಕೂಡ ಔಟಾದರು. ಇದರೊಂದಿಗೆ ಪಂದ್ಯವನ್ನು ಡ್ರಾದತ್ತ ಕೊಂಡೊಯ್ಯುವ ಪ್ರಯತ್ನಕ್ಕೂ ತೆರೆಬಿದ್ದಂತಾಯಿತು. ಕೊನೆಯ ಹಂತದಲ್ಲಿ ಮೊಹಮ್ಮದ್ ಶಮಿ (13) ಅಲ್ಪಕಾಣಿಕೆ ನೀಡಿದರು.

ಆದರೆ ಮೇಲಿನ ಕ್ರಮಾಂಕದ ಬ್ಯಾಟ್ಸ್‌ಮನ್‌ಗಳ ವೈಫಲ್ಯದ ಪ್ರಯೋಜನ ಕೇನ್ ಬಳಗಕ್ಕೆ ಲಭಿಸಿತು.

### ವಾಟ್ಲಿಂಗ್ ವಿದಾಯ

ನ್ಯೂಜಿಲೆಂಡ್ ತಂಡದ ವಿಕೆಟ್ ಕೀಪರ್ ಬ್ಯಾಟ್ಸ್‌ಮನ್ ಬಿಜೆ ವಾಟ್ಲಿಂಗ್ ಅವರಿಗೆ ಇದು ವಿದಾಯದ ಪಂದ್ಯವಾಗಿತ್ತು.

ತಂಡದ ಪರ 75 ಟೆಸ್ಟ್ ಪಂದ್ಯಗಳನ್ನು ಆಡಿರುವ ಅವರು 3790 ರನ್ ಕಲೆಹಾಕಿದ್ದರು. 28 ಏಕದಿನ ಪಂದ್ಯಗಳಿಂದ 573 ರನ್ ಗಳಿಸಿದ್ದರು. ಐದು ಟ್ವೆಂಟಿ–20 ಪಂದ್ಯಗಳನ್ನು ಆಡಿದ್ದರು.

### ಕ್ರೀಡಾಂಗಣದಿಂದ ಇಬ್ಬರು ಪ್ರೇಕ್ಷಕರನ್ನು ಹೊರದಬ್ಬಿದ ಸಿಬ್ಬಂದಿ

ಸೌತಾಂಪ್ಟನ್ (ಪಿಟಿಐ): ಏಜಿಸ್ ಬೌಲ್ ಕ್ರೀಡಾಂಗಣದಲ್ಲಿ ನಡೆಯುತ್ತಿರುವ ಡಬ್ಲ್ಯುಟಿಸಿ ಫೈನಲ್ ಪಂದ್ಯದಲ್ಲಿ ಮಂಗಳವಾರ ನ್ಯೂಜಿಲೆಂಡ್ ಆಟಗಾರರನ್ನು ನಿಂದಿಸಿದ ಇಬ್ಬರು ಪ್ರೇಕ್ಷಕರನ್ನು ಹೊರಗೆ ಹಾಕಲಾಯಿತು.

'ನ್ಯೂಜಿಲೆಂಡ್ ಆಟಗಾರರ ವಿರುದ್ಧ ಜನಾಂಗೀಯ ನಿಂದನೆಯ ಪದಗಳನ್ನು ಬಳಸಿ ಅಪಹಾಸ್ಯ ಮಾಡಿದ ಬಗ್ಗೆ ಇಬ್ಬರು ಪ್ರೇಕ್ಷಕರ ವಿರುದ್ಧ ಭದ್ರತಾ ಸಿಬ್ಬಂದಿಯು ಮಾಹಿತಿ ಕೊಟ್ಟಿದ್ದರು. ಅದಕ್ಕಾಗಿ ಅವರಿಬ್ಬರನ್ನೂ ಮೈದಾನದಿಂದ ಹೊರಗೆ ಹಾಕಲಾಯಿತು. ಇಲ್ಲಿ ಯಾವುದೇ ರೀತಿಯ ಅನುಚಿತ ವರ್ತನೆ ಮತ್ತು ಆಟಗಾರರ ವಿರುದ್ಧ ನಿಂದನೆ ಮಾಡುವುದನ್ನು ಸಹಿಸಿಕೊಳ್ಳುವುದಿಲ್ಲ. ನಿರ್ದಾಕ್ಷಿಣ್ಯ ಕ್ರಮ ಕೈಗೊಳ್ಳುತ್ತೇವೆ' ಎಂದು ಐಸಿಸಿ ಪ್ರಕಟಣೆಯಲ್ಲಿ ತಿಳಿಸಿದೆ.

### ಭಾರತ–ನ್ಯೂಜಿಲೆಂಡ್ ಸ್ಕೋರ್

**ಭಾರತ ಮೊದಲ ಇನಿಂಗ್ಸ್ 92.1 ಓವರ್‌ಗಳಲ್ಲಿ 217**
**ನ್ಯೂಜಿಲೆಂಡ್ ಮೊದಲ ಇನಿಂಗ್ಸ್ 99.2 ಓವರ್‌ಗಳಲ್ಲಿ 249**
**ಭಾರತ ಎರಡನೇ ಇನಿಂಗ್ಸ್ 73 ಓವರ್‌ಗಳಲ್ಲಿ 170 (ಮಂಗಳವಾರ 30 ಓವರ್‌ಗಳಲ್ಲಿ 2ವಿಕೆಟ್‌ಗೆ 64)**
ಪೂಜಾರ ಸಿ ಟೇಲರ್ ಬಿ ಜೆಮಿಸನ್ 15(80ಎ, 4X2), ಕೊಹ್ಲಿ ಸಿ ವಾಟ್ಲಿಂಗ್ ಬಿ ಜೆಮಿಸನ್ 13 (29ಎ), ರಹಾನೆ ಸಿ ವಾಟ್ಲಿಂಗ್ ಬಿ ಬೌಲ್ಟ್ 15 (40ಎ, 4X1), ಪಂತ್ ಸಿ ನಿಕೋಲ್ಸ್ ಬಿ ಬೌಲ್ಟ್ 41 (88ಎ, 4X4), ಜಡೇಜ ಸಿ ವಾಟ್ಲಿಂಗ್ ಬಿ ವಾಗ್ನರ್ 16 (49ಎ, 4X2), ಅಶ್ವಿನ್ ಸಿ ಟೇಲರ್ ಬಿ ಬೌಲ್ಟ್ 7 (19ಎ), ಶಮಿ ಸಿ ಲಥಾಮ್ ಬಿ ಸೌಥಿ 13 (10ಎ, 4X3), ಇಶಾಂತ್ ಔಟಾಗದೆ 1 (6 ಎ), ಬೂಮ್ರಾ ಸಿ ಲಥಾಮ್ ಬಿ ಸೌಥಿ 0 (4ಎ).
**ಇತರೆ:** (ಬೈ 1,ಲೆಗ್‌ಬೈ 8, ನೋಬಾಲ್ 1, ವೈಡ್ 1) 11
**ವಿಕೆಟ್ ಪತನ:** 3–71 (ವಿರಾಟ್ ಕೊಹ್ಲಿ, 35.5), 4–72 (ಚೇತೇಶ್ವರ್ ಪೂಜಾರ, 37.3), 5–109 (ಅಜಿಂಕ್ಯ ರಹಾನೆ, 49.6), 6–142 (ರವೀಂದ್ರ ಜಡೇಜ, 62.5), 7–156 (ರಿಷಭ್ ಪಂತ್, 69.2), 8–156 (ರವಿಚಂದ್ರನ್ ಅಶ್ವಿನ್, 69.4), 9–170 (ಮೊಹಮ್ಮದ್ ಶಮಿ, 72.2), 10–170 (ಜಸ್‌ಪ್ರೀತ್ ಬೂಮ್ರಾ, 72.6)
**ಬೌಲಿಂಗ್:** ಟಿಮ್ ಸೌಥಿ 19–4–48–4, ಟ್ರೆಂಟ್ ಬೌಲ್ಟ್ 15–2–39–3, ಕೈಲ್ ಜೆಮಿಸನ್ 24–10–30–2, ನೀಲ್ ವಾಗ್ನರ್ 15–2–44–1

**ನ್ಯೂಜಿಲೆಂಡ್ ಎರಡನೇ ಇನಿಂಗ್ಸ್ 45.5 ಓವರ್‌ಗಳಲ್ಲಿ 2 ವಿಕೆಟ್‌ಗೆ 140**
ಲಥಾಮ್ ಸ್ಟಂಪ್ಡ್ ಪಂತ್ ಬಿ ಅಶ್ವಿನ್ 9 (41ಎ), ಕಾನ್ವೆ ಎಲ್‌ಬಿಡಬ್ಲ್ಯು ಅಶ್ವಿನ್ 19 (47ಎ, 4X1), ವಿಲಿಯಮ್ಸನ್ ಔಟಾಗದೆ 52 (89 ಎ, 4X8), ಟೇಲರ್ ಔಟಾಗದೆ 47 (100ಎ, 4X6)
**ಇತರೆ:** (ಲೆಗ್‌ಬೈ 11, ನೋಬಾಲ್ 2) 13
**ವಿಕೆಟ್ ಪತನ:** 1–33(ಟಾಮ್ ಲಥಾಮ್, 13.3), 2–44 (ಡೆವೊನ್ ಕಾನ್ವೆ, 17.2).
**ಬೌಲಿಂಗ್:** ಇಶಾಂತ್ ಶರ್ಮಾ 6.2–2–21–0, ಮೊಹಮ್ಮದ್ ಶಮಿ 10.5–3–31–0, ಜಸ್‌ಪ್ರೀತ್ ಬೂಮ್ರಾ 10.4–2–35–0, ರವಿಚಂದ್ರನ್ ಅಶ್ವಿನ್ 10–5–17–2 , ರವೀಂದ್ರ ಜಡೇಜ 8–1–25–0

**ಫಲಿತಾಂಶ: ನ್ಯೂಜಿಲೆಂಡ್ ತಂಡಕ್ಕೆ ಎಂಟು ವಿಕೆಟ್‌ಗಳ ಜಯ ಮತ್ತು ಪ್ರಶಸ್ತಿ**

## ಸುದ್ದಿ 2 ನಿಮಿಷ

### ಒಲಿಂಪಿಕ್ಸ್: ಚಿನ್ನ ಗೆದ್ದರೆ ₹ 6 ಕೋಟಿ – ಹರಿಯಾಣ ಸರ್ಕಾರ ಘೋಷಣೆ

ಚಂಡೀಗಡ (ಪಿಟಿಐ): ಟೋಕಿಯೊ ಒಲಿಂಪಿಕ್ಸ್‌ನಲ್ಲಿ ಚಿನ್ನದ ಪದಕ ಗೆಲ್ಲುವ ತನ್ನ ರಾಜ್ಯದ ಅಥ್ಲೀಟ್‌ಗಳಿಗೆ ₹ 6 ಕೋಟಿ ಬಹುಮಾನ ನೀಡುವುದಾಗಿ ಹರಿಯಾಣ ಸರ್ಕಾರ ಬುಧವಾರ ಪ್ರಕಟಿಸಿದೆ.

ಬೆಳ್ಳಿ ಪದಕ ವಿಜೇತರಿಗೆ ₹ 4 ಕೋಟಿ ಮತ್ತು ಕಂಚು ಗೆದ್ದವರಿಗೆ ₹ 2.50 ಕೋಟಿ ನೀಡುವುದಾಗಿಯೂ ಸರ್ಕಾರ ಘೋಷಿಸಿದೆ.

ಅಂತರರಾಷ್ಟ್ರೀಯ ಒಲಿಂಪಿಕ್ ದಿನದ ಪ್ರಯುಕ್ತ ಒಲಿಂಪಿಕ್ ಪದಕ ವಿಜೇತರೊಂದಿಗೆ ಮುಖ್ಯಮಂತ್ರಿ ಮನೋಹರ್ ಲಾಲ್ ಖಟ್ಟರ್ ಅವರೊಂದಿಗೆ ಸಂವಾದ ನಡೆಸುತ್ತಿರುವ ಸಂದರ್ಭದಲ್ಲಿ ರಾಜ್ಯದ ಕ್ರೀಡಾ ಸಚಿವ ಸಂದೀಪ್ ಸಿಂಗ್ ಈ ವಿಷಯವನ್ನು ಪ್ರಕಟಿಸಿದರು.

'ರಾಜ್ಯದ 30 ಅಥ್ಲೀಟ್‌ಗಳು ಈ ಬಾರಿಯ ಒಲಿಂಪಿಕ್ಸ್‌ನಲ್ಲಿ ಭಾಗವಹಿಸುತ್ತಿದ್ದು, ಅವರ ಸಿದ್ಧತೆಗೆ ತಲಾ ₹ 5 ಲಕ್ಷ ನೆರವು ನೀಡಲಾಗಿದೆ ಎಂದು ಸಂದೀಪ್ ಇದೇ ವೇಳೆ ತಿಳಿಸಿದ್ದಾರೆ.

### ಒಲಿಂಪಿಕ್ಸ್ ಟಿಕೆಟ್ ನಿರೀಕ್ಷಿಸಿರಲಿಲ್ಲ: ಅನಿರ್ಬನ್

ಕ್ರೋಮ್‌ವೆಲ್ (ಪಿಟಿಐ): ಈ ವರ್ಷ ಸಾಮರ್ಥ್ಯಕ್ಕಿಂತ ಕಡಿಮೆ ಸಾಧನೆ ತೋರಿದ ಕಾರಣ ಟೋಕಿಯೊ ಒಲಿಂಪಿಕ್ಸ್‌ಗೆ ಅರ್ಹತೆ ಗಳಿಸುತ್ತೇನೆಂಬ ನಿರೀಕ್ಷೆಯಿರಲಿಲ್ಲ. ಇದು ನನಗೆ ದೊರೆತ ಕಾಣಿಕೆ ಮತ್ತು ಅವಕಾಶ ಎಂದು ಭಾರತದ ಗಾಲ್ಫ್ ಆಟಗಾರ ಅನಿರ್ಬನ್ ಲಾಹಿರಿ ಅಭಿಪ್ರಾಯಪಟ್ಟಿದ್ದಾರೆ.

ಟೋಕಿಯೊ ಕೂಟದ ರ‍್ಯಾಂಕಿಂಗ್ ಪ್ರಕಾರ ಕೊನೆಯದಾಗಿ ಲಭ್ಯವಿದ್ದ 60ನೇ ಸ್ಥಾನವು ಮಂಗಳವಾರ ಅನಿರ್ಬನ್‌ಗೆ ಒಲಿದಿತ್ತು. ಭಾರತದಲ್ಲಿ ಗರಿಷ್ಠ ರ‍್ಯಾಂಕ್ ಹೊಂದಿರುವ ಆಟಗಾರ ಅವರು. ವಿಶ್ವ ರ‍್ಯಾಂಕಿಂಗ್‌ನಲ್ಲಿ 340ನೇ ಸ್ಥಾನದಲ್ಲಿದ್ದಾರೆ.

ಅನಿರ್ಬನ್ ಸತತ ಎರಡನೇ ಬಾರಿ ಒಲಿಂಪಿಕ್ ಕೂಟಕ್ಕೆ ತೆರಳಲಿದ್ದಾರೆ. 2016ರ ರಿಯೊ ಒಲಿಂಪಿಕ್ಸ್‌ನಲ್ಲಿ ಎಸ್‌ಎಸ್‌ಪಿ ಚೌರಾಸಿಯಾ ಹಾಗೂ ಲಾಹಿರಿ ಆಡಿದ್ದರು.

'ಇದು ದೊಡ್ಡ ಅಚ್ಚರಿ. ಟೋಕಿಯೊ ಒಲಿಂಪಿಕ್ಸ್ ಪ್ರವೇಶದ ನಿರೀಕ್ಷೆಯಿರಲಿಲ್ಲ. ಆದರೆ ಪದಕದೊಂದಿಗೆ ದೇಶಕ್ಕೆ ಹಿಂದಿರುಗುವ ಮೂಲಕ ಋಣ ತೀರಿಸುತ್ತೇನೆ' ಎಂದು ಸದ್ಯ ಕನೆಕ್ಟಿಕಟ್‌ನಲ್ಲಿ ಪಿಜಿಎ ಟೂರ್ ಚಾಂಪಿಯನ್‌ಷಿಪ್‌ಗೆ ಸಜ್ಜುಗೊಳ್ಳುತ್ತಿರುವ ಅನಿರ್ಬನ್ ಹೇಳಿದ್ದಾರೆ.

ಗೋಲು ಗಳಿಸಿದ ಸ್ಪೇನ್‌ನ ಆಯ್ಮೆರಿಕ್ ಲೊಪಾರ್ಟೆ (ಎಡ) ಅವರು ಸಹ ಆಟಗಾರನೊಂದಿಗೆ ಸಂಭ್ರಮಿಸಿದರು.– ರಾಯಿಟರ್ಸ್ ಚಿತ್ರ

## ಯೂರೊ ಕಪ್ ಫುಟ್‌ಬಾಲ್: ಸ್ಪೇನ್ ತಂಡಕ್ಕೆ ಭರ್ಜರಿ ಜಯ

ಸೆವಿಲ್ಲೆ (ರಾಯಿಟರ್ಸ್): ಸ್ಪೇನ್ ತಂಡವು ಸ್ಲೋವಾಕಿಯಾವನ್ನು ಮಣಿಸಿ ಯೂರೊ ಕಪ್ ಫುಟ್‌ಬಾಲ್ ಟೂರ್ನಿಯ ಪ್ರೀ-ಕ್ವಾರ್ಟರ್‌ಫೈನಲ್‌ಗೆ ಲಗ್ಗೆಯಿಟ್ಟಿತು. ಬುಧವಾರ ನಡೆದ 'ಇ' ಗುಂಪಿನ ಪಂದ್ಯದಲ್ಲಿ ಸ್ಪೇನ್‌ಗೆ 5–0 ಅಂತರದ ಗೆಲುವು ಒಲಿಯಿತು.

ವಿಜೇತ ತಂಡದ ಪರ ಆಯ್ಮೆರಿಕ್ ಲೊಪಾರ್ಟೆ (45ನೇ ನಿಮಿಷ), ಪ್ಯಾಬ್ಲೊ ಸರಾಬಿಯಾ (56ನೇ ನಿಮಿಷ) ಹಾಗೂ ಫೆರಾನ್ ಟೊರೆಸ್ ಗೋಲು ದಾಖಲಿಸಿದರೆ, ಎದುರಾಳಿಗಳಿಂದ ಎರಡು ಉಡುಗೊರೆ ಗೋಲುಗಳು ಬಂದವು.

'ಇ' ಗುಂಪಿನ ಮತ್ತೊಂದು ಪಂದ್ಯದಲ್ಲಿ ಸ್ವೀಡನ್ 3–2ರಿಂದ ಪೋಲೆಂಡ್ ಎದುರು ಗೆದ್ದಿತು.

ಗ್ಲಾಸ್ಗೊದಲ್ಲಿ ಮಂಗಳವಾರ ರಾತ್ರಿ ನಡೆದ 'ಡಿ' ಗುಂಪಿನ ಪಂದ್ಯದಲ್ಲಿ ಲೂಕಾ ಮಾಡ್ರಿಚ್ ಗಳಿಸಿದ ಗೋಲಿನ ಬಲದಿಂದ ಕ್ರೊವೇಷ್ಯಾ ತಂಡವು ಸ್ಕಾಟ್ಲೆಂಡ್ ತಂಡವನ್ನು 3–1ರಿಂದ ಸೋಲಿಸಿತು.

ಮಂಗಳವಾರವೇ ನಡೆದ 'ಡಿ' ಗುಂಪಿನ ಇನ್ನೊಂದು ಹಣಾಹಣಿಯಲ್ಲಿ ಇಂಗ್ಲೆಂಡ್ ತಂಡವು ಜೆಕ್ ಗಣರಾಜ್ಯದ ಎದುರು 1–0ಯಿಂದ ಗೆಲುವು ಸಾಧಿಸಿತು. ತಂಡದ ಪರ ರಹೀಮ್ ಸ್ಟರ್ಲಿಂಗ್ 12ನೇ ನಿಮಿಷದಲ್ಲಿ ಗೋಲು ದಾಖಲಿಸಿದರು.

## ಟೆಸ್ಟ್: ಜಡೇಜ ಅಗ್ರ ಆಲ್‌ರೌಂಡರ್

ದುಬೈ (ಪಿಟಿಐ): ಭಾರತ ಕ್ರಿಕೆಟ್ ತಂಡದ ರವೀಂದ್ರ ಜಡೇಜ ಅಂತರ-ರಾಷ್ಟ್ರೀಯ ಕ್ರಿಕೆಟ್ ಸಮಿತಿ (ಐಸಿಸಿ) ಟೆಸ್ಟ್ ಆಲ್‌ರೌಂಡರ್ ರ‍್ಯಾಂಕಿಂಗ್‌ನಲ್ಲಿ ಅಗ್ರಸ್ಥಾನ ಗಳಿಸಿದ್ದಾರೆ.

ಬುಧವಾರ ಪ್ರಕಟವಾದ ಪಟ್ಟಿಯಲ್ಲಿ ಎಡಗೈ ಆಲ್‌ರೌಂಡರ್ ಜಡೇಜ ಅವರು ವೆಸ್ಟ್ ಇಂಡೀಸ್‌ನ ಜೇಸನ್ ಹೋಲ್ಡರ್ (384) ಅವರಿಗಿಂತ ಎರಡು ಅಂಕಗಳನ್ನು ಹೆಚ್ಚು ಗಳಿಸಿ ಮೊದಲ ಸ್ಥಾನವೇರಿದರು. ಇಂಗ್ಲೆಂಡ್‌ನ ಬೆನ್ ಸ್ಟೋಕ್ಸ್ (377) ಮೂರನೇ ಸ್ಥಾನದಲ್ಲಿದ್ದಾರೆ.

ಭಾರತದ ಆರ್. ಅಶ್ವಿನ್ 353 ಅಂಕಗಳೊಂದಿಗೆ ನಾಲ್ಕನೇ ಸ್ಥಾನದಲ್ಲಿದ್ದಾರೆ. ಬಾಂಗ್ಲಾದ ಶಕೀಬ್ ಅಲ್ ಹಸನ್ (338) ನಂತರದ ಸ್ಥಾನದಲ್ಲಿದ್ದಾರೆ.

ರವೀಂದ್ರ ಜಡೇಜ –ಎಎಫ್‌ಪಿ ಚಿತ್ರ

ಅಶ್ವಿನ್ ಬೌಲಿಂಗ್ ವಿಭಾಗದಲ್ಲಿ ಎರಡನೇ ಸ್ಥಾನ ಕಾಯ್ದುಕೊಂಡಿದ್ದಾರೆ. ಅವರ ಖಾತೆಯಲ್ಲಿ ಒಟ್ಟು 850 ಅಂಕಗಳು ಇವೆ. ಆಸ್ಟ್ರೇಲಿಯಾದ ಪ್ಯಾಟ್ ಕಮಿನ್ಸ್ (908) ಮೊದಲ ಹಾಗೂ ನ್ಯೂಜಿಲೆಂಡ್‌ನ ಟಿಮ್ ಸೌಥಿ ಮೂರನೇ ಸ್ಥಾನದಲ್ಲಿದ್ದಾರೆ.

ಬ್ಯಾಟಿಂಗ್ ವಿಭಾಗದಲ್ಲಿ ಭಾರತ ತಂಡದ ನಾಯಕ ವಿರಾಟ್ ಕೊಹ್ಲಿ ನಾಲ್ಕನೇ ಸ್ಥಾನ ಉಳಿಸಿಕೊಂಡಿದ್ದಾರೆ. ಅವರ ಖಾತೆಯಲ್ಲಿ 814 ಅಂಕಗಳು ಇವೆ. ಆಸ್ಟ್ರೇಲಿಯಾದ ಸ್ಟೀವ್ ಸ್ಮಿತ್ (891) ಅಗ್ರಸ್ಥಾನದಲ್ಲಿದ್ದಾರೆ. ಕಿವೀಸ್ ಬಳಗದ ನಾಯಕ ಕೇನ್ ವಿಲಿಯಮ್ಸನ್ (886) ಮತ್ತು ಆಸ್ಟ್ರೇಲಿಯಾದ ಮಾರ್ನಸ್ ಲಾಬುಷೇನ್ (878) ಕ್ರಮವಾಗಿ ಎರಡು ಮತ್ತು ಮೂರನೇ ಸ್ಥಾನದಲ್ಲಿದ್ದಾರೆ.

ಇಂಗ್ಲೆಂಡ್ ತಂಡದ ನಾಯಕ ಜೋ ರೂಟ್ (797) ಐದನೇ ಸ್ಥಾನದಲ್ಲಿದ್ದಾರೆ. ಭಾರತದ ರಿಷಭ್ ಪಂತ್ ಮತ್ತು ರೋಹಿತ್ ಶರ್ಮಾ 747 ಪಾಯಿಂಟ್‌ಗಳೊಂದಿಗೆ ಆರನೇ ಸ್ಥಾನದಲ್ಲಿದ್ದಾರೆ.

## 'ಸರ್' ಪದಬಳಕೆ ಗೌರವಸೂಚಕ: ಮಾರ್ಗನ್

ಲಂಡನ್ (ಪಿಟಿಐ): ಸಾಮಾಜಿಕ ಜಾಲತಾಣಗಳಲ್ಲಿ ಯಾರನ್ನಾದರೂ 'ಸರ್' ಎಂದು ಸಂಬೋಧಿಸಿದರೆ ಅದು ಗೌರವಸೂಚಕವಾಗಿರುತ್ತದೆ. ಆದರೆ ತಮ್ಮ ಹಳೆಯ ಟ್ವೀಟ್ ಸಂದೇಶಗಳನ್ನು ತಪ್ಪಾಗಿ ಅರ್ಥೈಸಲಾಗಿದೆ ಎಂದು ಇಂಗ್ಲೆಂಡ್ ಸೀಮಿತ ಓವರ್‌ಗಳ ಕ್ರಿಕೆಟ್ ತಂಡದ ನಾಯಕ ಏಯಾನ್ ಮಾರ್ಗನ್ ಹೇಳಿದ್ದಾರೆ.

ಮಾರ್ಗನ್ ಮತ್ತು ಜೋಸ್ ಬಟ್ಲರ್ ಅವರು ಈ ಹಿಂದೆ ಟೂರ್ನಿ ಯೊಂದರ ಸಂದರ್ಭದಲ್ಲಿ ಭಾರತದ ಆಟಗಾರರನ್ನು 'ಸರ್' ಎಂದು ಉಲ್ಲೇಖಿಸಿ ಅಪಹಾಸ್ಯ ಮಾಡಿದ್ದ ಟ್ವೀಟ್‌ಗಳನ್ನು ಇಂಗ್ಲೆಂಡ್ ಮತ್ತು ವೇಲ್ಸ್ ಕ್ರಿಕೆಟ್ ಸಂಸ್ಥೆಯು ಪರಿಶೀಲಿಸಿತ್ತು. ಜನಾಂಗೀಯ ನಿಂದನೆ ಮಾಡಿರುವ ಆರೋಪಪಡಿ ಆಟಗಾರರನ್ನು ವಿಚಾರಣೆಗೆ ಒಳಪಡಿಸಿತ್ತು.

ಈ ಕುರಿತು ಬುಧವಾರ ಮಾಧ್ಯಮಗಳಿಗೆ ಪ್ರತಿಕ್ರಿಯಿಸಿರುವ ಮಾರ್ಗನ್, 'ನಮ್ಮ ಹೇಳಿಕೆಗಳನ್ನು ತಪ್ಪಾಗಿ ಗ್ರಹಿಸಲಾಗಿದೆ. ಆ ವಿಷಯದ ಕುರಿತು ಹೆಚ್ಚು ಚರ್ಚೆ ಬೇಡ' ಎಂದರು.

## ಏಕದಿನ ಕ್ರಿಕೆಟ್: ಪದಾರ್ಪಣೆ ನಿರೀಕ್ಷೆಯಲ್ಲಿ ಸೋಫಿಯಾ ಡಂಕ್ಲಿ

ಬ್ರಿಸ್ಟಲ್ (ಪಿಟಿಐ): ಬ್ಯಾಟಿಂಗ್ ಆಲ್‌ರೌಂಡರ್ ಸೋಫಿಯಾ ಡಂಕ್ಲಿ ಅವರು ಭಾರತದ ವಿರುದ್ಧ ನಡೆಯಲಿರುವ ಏಕದಿನ ಸರಣಿಗೆ ಇಂಗ್ಲೆಂಡ್ ಮಹಿಳಾ ತಂಡದಲ್ಲಿ ಸ್ಥಾನ ಗಿಟ್ಟಿಸಿದ್ದಾರೆ. ಏಕೈಕ ಟೆಸ್ಟ್‌ನಲ್ಲಿ ತೋರಿದ ಉತ್ತಮ ಆಟವು ಅವರು ಮೊದಲ ಬಾರಿ ಏಕದಿನ ಕ್ರಿಕೆಟ್‌ನಲ್ಲಿ ಸ್ಥಾನ ಗಳಿಸಲು ನೆರವಾಗಿದೆ.

ಉಭಯ ತಂಡಗಳ ನಡುವಣ ಮೂರು ಪಂದ್ಯಗಳ ಸರಣಿಯ ಮೊದಲ ಪಂದ್ಯವು ಭಾನುವಾರ ನಡೆಯಲಿದೆ.

ಹೋದ ವಾರ, ಏಳು ವರ್ಷಗಳ ಬಳಿಕ ಟೆಸ್ಟ್ ಮಾದರಿಯಲ್ಲಿ ಕಣಕ್ಕಿಳಿದಿದ್ದ ಮಿಥಾಲಿ ರಾಜ್ ನೇತೃತ್ವದ ಭಾರತ ತಂಡ, ಆತಿಥೇಯ ತಂಡದೊಂದಿಗೆ ಡ್ರಾ ಸಾಧಿಸಿತ್ತು. ಪಂದ್ಯದಲ್ಲಿ ಡಂಕ್ಲಿ ಔಟಾಗದೆ 74 ರನ್ ಗಳಿಸಿದ್ದರು. ಅವರು 15 ಟ್ವೆಂಟಿ–20 ಪಂದ್ಯಗಳಲ್ಲೂ ಆಡಿದ್ದಾರೆ.

'ಸೋಫಿಯಾ ಡಂಕ್ಲಿ ಅವರನ್ನು ತಂಡದಲ್ಲಿ ಸೇರಿಸಿಕೊಳ್ಳಲಾಗಿದೆ. ಭಾನುವಾರ ನಡೆಯಲಿರುವ ಮೊದಲ ಪಂದ್ಯದ ಮೂಲಕ ಅವರು ಏಕದಿನ ಕ್ರಿಕೆಟ್‌ಗೆ ಪದಾರ್ಪಣೆ ಮಾಡುವ ಸಾಧ್ಯತೆಯಿದೆ' ಎಂದು ಇಂಗ್ಲೆಂಡ್ ಮತ್ತು ವೇಲ್ಸ್ ಕ್ರಿಕೆಟ್ ಮಂಡಳಿ ಹೇಳಿದೆ.

**ತಂಡ ಇಂತಿದೆ:** ಹೀಥರ್ ನೈಟ್ (ನಾಯಕಿ), ಎಮಿಲಿ ಅರ್ಲಾಟ್, ಟ್ಯಾಮಿ ಬೇಮೊಂಟ್, ಕ್ಯಾಥರಿನ್ ಬ್ರಂಟ್, ಕೇಟ್ ಕ್ರಾಸ್, ಫ್ರೆಯಾ ಡೇವಿಸ್, ಸೋಫಿಯಾ ಡಂಕ್ಲಿ, ತಾಷ್ ಫರಾಂಟ್, ಸಾರಾ ಗ್ಲೆನ್, ಆ್ಯಮಿ ಜೋನ್ಸ್, ನತಾಲಿ ಸ್ಕೀವರ್, ಅನ್ಯಾ ಶ್ರಬ್‌ಸೋಲ್ ಮ್ಯಾಡಿ ವಿಲಿಯರ್ಸ್, ಫ್ರಾನ್ ವಿಲ್ಸನ್, ಲಾರೆನ್ ವಿನ್‌ಫೀಲ್ಡ್–ಹಿಲ್.

## ವಿಂಬಲ್ಡನ್ ಅರ್ಹತಾ ಟೂರ್ನಿ: ಅಂಕಿತಾಗೆ ಸೋಲು

ಅಂಕಿತಾ ರೈನಾ

ಲಂಡನ್ (ಪಿಟಿಐ): ಭಾರತದ ಅಂಕಿತಾ ರೈನಾ ಅವರು ವಿಂಬಲ್ಡನ್ ಟೆನಿಸ್ ಟೂರ್ನಿಯ ಮುಖ್ಯ ಸುತ್ತು ಪ್ರವೇಶಿಸುವಲ್ಲಿ ವಿಫಲರಾಗಿದ್ದಾರೆ. ಮಂಗಳವಾರ ತಡರಾತ್ರಿ ನಡೆದ ಅರ್ಹತಾ ಟೂರ್ನಿಯ ಮಹಿಳಾ ಸಿಂಗಲ್ಸ್ ವಿಭಾಗದ ಮೊದಲ ಸುತ್ತಿನಲ್ಲೇ ಅವರು ಸೋಲು ಅನುಭವಿಸಿದರು.

28 ವರ್ಷದ ಅಂಕಿತಾ 3-6, 6-7ರಿಂದ ಅಮೆರಿಕದ ವಾರ್ಯರಾ ಲೆಪ್‌ಚೆಂಕೊ ಎದುರು ನಿರಾಸೆ ಅನುಭವಿಸಿದರು. ಒಂದು ತಾಸು 22 ನಿಮಿಷಗಳಲ್ಲಿ ಈ ಪಂದ್ಯ ಮುಗಿಯಿತು.

182 ರ‍್ಯಾಂಕಿನ ಅಂಕಿತಾ ಅವರಿಗೆ ಕೇವಲ ಒಂದು ಬ್ರೇಕ್ ಪಾಯಿಂಟ್ ಸಿಕ್ಕಿತು. ಆದರೆ ಅದನ್ನು ಸೂಕ್ತವಾಗಿ ಬಳಸಿಕೊಳ್ಳುವಲ್ಲಿ ಅವರು ವಿಫಲರಾದರು.

ಪುರುಷರ ಸಿಂಗಲ್ಸ್ ವಿಭಾಗದಲ್ಲಿ ರಾಮಕುಮಾರ್ ರಾಮನಾಥನ್ ಎರಡನೇ ಸುತ್ತಿಗೆ ಕಾಲಿಟ್ಟಿದ್ದಾರೆ. ಆದರೆ ಪ್ರಜ್ಞೇಶ್ ಗುಣೇಶ್ವರನ್ ಅವರು ಸೋತು ನಿರ್ಗಮಿಸಿದರು. ಮಂಗಳವಾರ ಇಲ್ಲಿ ನಡೆದ ಮೊದಲ ಸುತ್ತಿನ ಹಣಾಹಣಿಯಲ್ಲಿ ರಾಮಕುಮಾರ್ ಅವರು 6-3, 6-0ಯಿಂದ ಸ್ಲೊವಾಕಿಯಾದ ಜೋಸೆಫ್ ಕೊವಾಲಿಕ್ ಅವರನ್ನು ಮಣಿಸಿದರು. ಪ್ರಜ್ಞೇಶ್ ಅವರು ಬ್ರಿಟನ್ ಆಟಗಾರ ಅರ್ಥರ್ ಫೆರಿ ಎದುರು 1–6, 6–7ರಿಂದ ಸೋಲು ಅನುಭವಿಸಿದ್ದರು.

### ಈಸ್ಟ್‌ಬೌರ್ನ್ ಟೆನಿಸ್: ವಿಂಬಲ್ಡನ್ ಟೂರ್ನಿಗೆ ಅಭ್ಯಾಸ ಪಂದ್ಯಗಳು

## ಇಗಾ ಸ್ವೆಟೆಕ್, ಗಫ್ ಜಯಭೇರಿ

ಈಸ್ಟ್‌ಬೌರ್ನ್, ಇಂಗ್ಲೆಂಡ್ (ಎಪಿ): ನಾಲ್ಕನೇ ಶ್ರೇಯಾಂಕದ ಇಗಾ ಸ್ವೆಟೆಕ್ ಹಾಗೂ ಅಮೆರಿಕದ ಯುವ ಆಟಗಾರ್ತಿ ಕೊಕೊ ಗಫ್ ಅವರು ಇಲ್ಲಿ ನಡೆಯುತ್ತಿರುವ ವಿಕಿಂಗ್ ಅಂತರರಾಷ್ಟ್ರೀಯ ಟೆನಿಸ್ ಟೂರ್ನಿಯಲ್ಲಿ ಜಯಭೇರಿ ಮೊಳಗಿಸಿ ಎರಡನೇ ಸುತ್ತು ತಲುಪಿದರು.

ವಿಂಬಲ್ಡನ್ ಟೂರ್ನಿಯ ಅಭ್ಯಾಸಕ್ಕಾಗಿ ನಡೆಯುತ್ತಿರುವ ಈ ಟೂರ್ನಿಯ ಮೊದಲ ಸುತ್ತಿನ ಪಂದ್ಯಗಳು ಸೋಮವಾರ ಮಳೆಯಿಂದಾಗಿ ರದ್ದುಗೊಂಡಿದ್ದವು.

ಸ್ವೆಟೆಕ್ ಅವರು 6–3, 6–7, 7–5ರಿಂದ ಇಂಗ್ಲೆಂಡ್‌ನ ಹೀಥರ್ ವಾಟ್ಸನ್ ಅವರನ್ನು ಸೋಲಿಸಿದರು, ನಿರ್ಣಾಯಕ ಸೆಟ್‌ನಲ್ಲಿ ಪೋಲೆಂಡ್ ಆಟಗಾರ್ತಿ ಸ್ವೆಟೆಕ್ 1–4ರಿಂದ ಹಿನ್ನಡೆಯಲ್ಲಿದ್ದರು. ಆದರೆ ಪುಟಿದೆದ್ದು ಗೆಲುವಿನ ನಗೆ ಬೀರುವಲ್ಲಿ ಯಶಸ್ವಿಯಾದರು. ಗ್ರಾಸ್‌ಕೋರ್ಟ್‌ನಲ್ಲಿ ಅವರಿಗೆ ಒಲಿದ ಮೊದಲ ಗೆಲುವು ಇದು.

ಇಗಾ ಸ್ವೆಟೆಕ್ ಆಟದ ವೈಖರಿ– ರಾಯಿಟರ್ಸ್ ಚಿತ್ರ

ಮತ್ತೊಂದು ಪಂದ್ಯದಲ್ಲಿ ಕೊಕೊ ಗಫ್ 0–6, 7–6, 7–5ರಿಂದ ಏಳನೇ ಶ್ರೇಯಾಂಕದ ಎಲಿಸ್ ಮರ್ಟೆನ್ಸ್ ಅವರಿಗೆ ಸೋಲುಣಿಸಿದರು. 17 ವರ್ಷದ ಗಫ್ ಫ್ರೆಂಚ್ ಓಪನ್ ಟೂರ್ನಿಯ ಕ್ವಾರ್ಟರ್‌ಫೈನಲ್ ತಲುಪಿದ ಬಳಿಕ ಆಡಿದ ಮೊದಲ ಪಂದ್ಯವಿದು.

ಜೆಕ್ ಗಣರಾಜ್ಯದ ಕರೋಲಿನಾ ಪ್ಲಿಸ್ಕೊವಾ ಕೂಡ ಎರಡನೇ ಸುತ್ತು ತಲುಪಿದರು. ಐದನೇ ಶ್ರೇಯಾಂಕದ ಈ ಆಟಗಾರ್ತಿಯು 2-6, 6-2, 6-2ರಿಂದ ಇಟಲಿಯ ಕ್ಯಾಮಿಲಾ ಜಿಯೊರ್ಗಿ ಎದುರು ಗೆದ್ದು ಬೀಗಿದರು.

ಇಲ್ಲಿ ಅಗ್ರಶ್ರೇಯಾಂಕ ಪಡೆದಿರುವ ಬೆಲಾರಸ್‌ನ ಅರಿನಾ ಸಬಲೆಂಕಾ ಅವರು ಮೊದಲ ಸುತ್ತಿನಲ್ಲಿ ಬರ್ನಾರ್ಡಾ ಪೆರಾ ಅವರನ್ನು 6-3, 6-4ರಿಂದ ಮಣಿಸಿ ಮುನ್ನಡೆದರು.